— ವೆನ್ನಿಸ್‌ನ ವರ್ತಕ —

— Merchant of Venice —

(ಶೇಕ್ಸ್‌ಪಿಯರ್ ಭಾಷಾಂತರ)

ಲ. ಸಾ. ಶಾಸ್ತ್ರೀ,

(ಎಲ್ಲ ಹಕ್ಕುಗಳೂ ಕಾಯ್ದಿರಿಸಲ್ಪಟ್ಟಿವೆ)

1988

— ವೆನ್ನಿಸ್‌ನ ವರ್ತಕ — ಲ. ಸಾ. ಶಾಸ್ತ್ರೀ —

ವೆನ್ನಿಸಿನ ವರ್ತಕ

(MERCHANT OF VENICE.)

ಶೇಕ್ಸ್‌ಪಿಯರ್ ಭಾಷಾಂತರ.

ಎ. ಎಸ್. ವಿಶ್ವನಾಥ್.

1988

(ಎಲ್ಲ ಹಕ್ಕುಗಳೂ ಕಾಯ್ದಿರಿಸಲ್ಪಟ್ಟಿವೆ.)

Donated on
4-11-1988
Bangalore.
[illegible]

ವೆನ್ನಿಸಿನ ವರ್ತಕ!

ನಾಟಕ ಕಥೆ.

ವಿಲ್ಲಿಯಂ ಷೇಕ್ಸ್‌ಪಿಯರ್ ಮಹಾಕವಿಯ ಬಹು ಪ್ರಸಿದ್ಧವಾದ ನಾಟಕಗಳಲ್ಲಿ ಒಂದಾದ ಇದು ಮೊದಲ ಬಾರಿಗೆ ಕ್ರಿ.ಶ. 1596ರಲ್ಲಿ ನಟಿಸಿದರು. 1701 ರಿಂದ ಈ ನಾಟಕವು ಯುರೋಪ್ ಖಂಡದಲ್ಲಿ ಜನಪ್ರಿಯವಾಗತೊಡಗಿತು. ಇದಕ್ಕೆ ಕಾರಣ ಇದರ ಪಾತ್ರವರ್ಗ, - ಯಹೂದಿ ಷೈಲಾಕನು ಒಂದೆಡೆಯಾದರೆ ಬಹು ಮೇಧಾವಿ ಸ್ತ್ರೀ ಪೋರ್ಷ್ಯ ಇನ್ನೊಂದೆಡೆ! ಷೈಲಾಕನ ಪಾತ್ರವು ಕೆಲವೆಡೆ ಹಾಸ್ಯಾಸ್ಪದವೆನಿಸಿದರೂ ಅಂತಿಮವಾಗಿ ಮತ್ತು ನಾಟಕೀಯವಾಗಿ ಯಥಾರ್ಥ್ಯವನ್ನು ಬಿಚ್ಚಿಡುತ್ತದೆ. ಷೈಲಾಕನಂತಹ ಲೋಭಿಗಳು ಇಂದು ಸಹ ಇಲ್ಲದಿಲ್ಲ. ಆದರೆ ಷೈಲಾಕನು ಉದ್ದೇಶಿತ ಕಠೋರ ಹಾಗೂ ನಿರ್ದಯನಾಗಿ ತೋರ್ಪಡಿಸಿದ ಸಂಬಂಧಕ್ಕೆ ಅವನ ಸುತ್ತಮುತ್ತಲಿದ್ದ ಜಾತೀಯವಾದಿ ಕ್ರೈಸ್ತರೇ ಕಾರಣವೆಂದೂ ತಿಳಿಯುತ್ತದೆ. ವ್ಯಾವಹಾರಿಕಲೋಕದಲ್ಲಿ ಅವನೊಬ್ಬನೇ ಅಕ್ಷಮ್ಯ ಕ್ರೂರಿಯಲ್ಲ; ಹಲವರು ಎಲ್ಲೆಲ್ಲೂ ಇದ್ದಾರೆ. ಷೈಲಾಕನ ಪಾತ್ರವನ್ನು ನಟಿಸಿದ್ದ Edmund Kean ಎಂಬುವನ ನಟನಾ ಶಕ್ತಿಯನ್ನು ಕಂಡು ಪ್ರೇಕ್ಷಕರು ಅಗಲೇ ಅತ್ತರಂತೆ!- ಅಷ್ಟೇ ಸ್ವಾತಂತ್ರ್ಯವನ್ನು ಬಿಂಬಿಸುವ ಇನ್ನೊಂದು ಪಾತ್ರ ಬೆಲ್‌ಮಂಟ್‌ನ ಶ್ರೀಮಂತೆ ಕನ್ಯೆ ಪೋರ್ಷ್ಯಳದಾಗಿದೆ.

"ವೆನ್ನಿಸಿನ ವರ್ತಕ" ನಾಟಕಕ್ಕೆ ಮೂಲ ಇಟಾಲಿಯನ್ ಭಾಷೆಯಲ್ಲಿ ಪ್ರಕಟವಾದೊಂದು ಕಥೆ. ನಾಟಕವು ಷೇಕ್ಸ್‌ಪಿಯರನ ರಚನೆಯಲ್ಲಿ ಅಂಕದಿಂದ ಅಂಕಕ್ಕೆ ಸೊಗಸಾಗಿ ಬಂದಿದೆ. ನಾಲ್ಕನೇ ಮತ್ತು ಐದನೇ ಅಂಕಗಳು ನಾಟಕದ ಜೀವಾಳವಾಗಿವೆ. ಪೋರ್ಷ್ಯಳ Quality of Mercy, ಮತ್ತು ಲೊರೆನ್ಸೊ - ಜೆಸ್ಸಿಕಾ ಇವರ ಪ್ರಣಯ ಪ್ರಸಂಗ ಕಡೆಯ ಅಧ್ಯಾಯಗಳಲ್ಲಿ ಜೀವಂತವಾಗಿ ಚಿತ್ರಿತವಾಗಿವೆ. ಆಂಟೋನಿಯೊ ಮತ್ತು ಬಸ್ಸಾನಿಯೋ ಇವರೊಳಗಿನ ಸ್ನೇಹವು ಆದರ್ಶವಾಗಿದೆಯೆಂಬುದಕ್ಕೆ ಮೀರಿದ ಆದರ್ಶದಿಂದ ಕೂಡಿದೆ.

"ವೆನ್ನಿಸಿನ ವರ್ತಕ"ನಾದ ಆಂಟೋನಿಯೋನು ತನ್ನ ಮಿತ್ರ ಬಸ್ಸಾನಿಯೋನಿಗೆ ಹಣವನ್ನು ಸಾಲಕೊಡಲು ಒಪ್ಪುತ್ತಾನೆ. ಬಸ್ಸಾನಿಯೋನು ಬೆಲ್‌ಮಂಟ್ ನಗರದ ಹಾಗೂ ಶ್ರೀಮಂತೆ ತರುಣಿ ಪೋರ್ಷ್ಯಳನ್ನು ವಿವಾಹವಾಗಲಿಕ್ಕೆ ಇಚ್ಛಿಸುತ್ತಾನೆ. ಆದರೆ ತನ್ನ ಹಣವನ್ನೆಲ್ಲ ವಿವಿಧ ವ್ಯಾಪಾರ ವ್ಯವಹಾರಗಳಿಗೆ ವಿನಿಯೋಗಿಸಿ ಅವನು ಆರ್ಥಿಕವಾಗಿ ಬಡವನಾಗಿದ್ದಾನೆ.

ಹಿಡಿಯಲು ಬೆಲ್ಮಾಂಟದಲ್ಲಿ ಪೋರ್ಷಿಯಳು ತನಗೊಪ್ಪುವ ವರನನ್ನು ಕಂಡೊಡನೆ ಹೇಳುತ್ತಾಳೆ, ಆಗಮಿತರೆಲ್ಲರಿಗೆ ಉತ್ತರವನ್ನು ತನ್ನ ಸಖಿ ನೆರಿಸ್ಸಳೊಡನೆ. ವಾಗಿ ಬೇರೊಂದು ರೀತಿಯಲ್ಲಿ ಪೋರ್ಷಿಯಳ ತಂದೆಯಾದವರು ಆ ವಿಷಯವ ಆಲೋಚಿಸುತ್ತಾನೆ, ತನ್ನ ಮಗಳನ್ನು ವರಿಸಲು ಬರುವವರಿಗೆ ಒಂದು ಷರತ್ತನ್ನು ಹಾಕುತ್ತಾನೆ. ಪೋರ್ಷಿಯಳ ಒಂದು ಚಿತ್ರವನ್ನು ಚಿನ್ನ, ಬೆಳ್ಳಿ ಮತ್ತು ಸೀಸದ ಆ ಮೂರು ಡಬ್ಬಿಗಳಲ್ಲೊಂದರಲ್ಲಿ ಇಡುವನು. ಸ್ವಯಂವರಾರ್ಥಿಯು ಯಾವ ಡಬ್ಬದಲ್ಲಿ ಚಿತ್ರವು ಇರಬಹುದೆಂದು ನಿರ್ಣಯಿಸಿ ಆ ಡಬ್ಬವನ್ನು ತೆರೆದಾಗ ಅದರಲ್ಲಿ ಪೋರ್ಷಿಯಳ ಚಿತ್ರವಿದ್ದರೆ ಅವನು ಅವಳ ಕೈ ಹಿಡಿಯುವನೆಂಬ ಷರತ್ತನ್ನು ಒಡ್ಡಿ ಬರೆದಿಟ್ಟಿದ್ದರು. ಆ ಷರತ್ತಿಗೆ ಒಪ್ಪದೆ ಹಲವು ಸ್ವಯಂವರಾರ್ಥಿಗಳು ಹಿಂದಿರುಗಿದರು. ಆದರೆ ಮೊರೊಕ್ಕೊ ಮತ್ತು ಅರಾಗನ್ ರಾಜಕುಮಾರರು ತಮ್ಮ ಅದೃಷ್ಟ ಪರೀಕ್ಷೆಗೆ ಬಂದರು; ಅನಂತರ ಸೋತರು.

ಇತ್ತಲಾಗಿ ಬಸ್ಸಾನಿಯೋನು ಯಹೂದೀ ವ್ಯಾಪಾರಿ ಶೈಲಾಕ್‍ನನ್ನು ಮೂರು ತಿಂಗಳ ಅವಧಿಗೆ 3000 ಡಕಟ್‍ಗಳನ್ನು ಸಾಲವಾಗಿ ಆಂಟೋನಿಯೋನು ಜಾಮೀನು ಆಗಿಯಿರುವಂತೆ ಒಪ್ಪಿಸಿಕೊಂಡು ಕೇಳುವನು. ಆದರೆ ಆಂಟೋನಿಯೋನ ಬಗ್ಗೆ ಶೈಲಾಕನಿಗೆ ಬಹಳ ದ್ವೇಷವಿದೆ. ಮೂರು ತಿಂಗಳೊಳಗೆ ಆಂಟೋನಿಯೋನು ಹಣ ಕೊಡದೆಯಿದ್ದರೆ ತಾನು ಕೊಟ್ಟ ಹಣಕ್ಕೆ ದಂಡವಾಗಿ ಅವನ ಎದೆಗೂಂಡಿಗೆಯಿಂದ ಒಂದು ಪೌಂಡು ಮಾಂಸವನ್ನು ಕತ್ತರಿಸಿಕೊಳ್ಳುವಂತೆ ಕೇಳುತ್ತಾನೆ. ಬಸ್ಸಾನಿಯೋನು ಆ ಷರತ್ತಿಗೆ ಒಪ್ಪದಿದ್ದಾಗ ಆಂಟೋನಿಯೋನು ಅದಕ್ಕೆ ತಾನು ಒಪ್ಪುವೆನೆಂದೂ ತನ್ನ ಹಡಗುಗಳೆಲ್ಲ ವಿವಿಧ ದೇಶಗಳಿಂದ ಒಂದು ತಿಂಗಳೊಳಗೆ ಸರಕುಗಳನ್ನು ತುಂಬಿ ಹಿಂದಿರುಗುವವೆಂದೂ ಹೇಳುವನು. (ಹಳೇ ಕಾಲದ 3000 ಡಕಟ್‍ಗಳು ಇಂದಿನ ಬೆಲೆಯಲ್ಲಿ ಸುಮಾರು ರೂ. 380,000 ಆಗುವುದು.)

ಇದರ ಮಧ್ಯೆ ಶೈಲಾಕನ ಮಗಳು ಜೆಸ್ಸಿಕಾಳು ಲೊರೆನ್ಸೋನೆಂಬ ತರುಣನನ್ನು ಪ್ರೀತಿಸಿ ಅವನೊಡನೆ ತನ್ನ ತಂದೆಗೆ ಹೇಳದೆ ಹೋದಳು. ಈ ಎಲ್ಲ ಘಟನೆಗಳ ಎಡೆಯಲ್ಲಿ ಸಲೇರಿಯೋ, ಸೊಲಾನಿಯೋ, ಗ್ರಾಶಿಯಾನೋ, ಲಾನ್ಸಲಾಟ್ ಗೊಬ್ಬೊ ಈ ಕೆಲವರು ತಮ್ಮ ವಿವಿಧ ಪಾತ್ರಗಳೊಡನೆ ತೋರ್ಪಡಿಸಿಕೊಳ್ಳುವರು. ಬಸ್ಸಾನಿಯೋನು ಶೈಲಾಕ್‍ನಿಂದ ಹಣವನ್ನು ಆಂಟೋನಿಯೋನು ಜಾಮೀನು ನಿಂತು ಹಾಗೆ ಪಡೆದು ಅನಂತರ

ಬೆಲ್‌ಮಂಟ್‌ಗೆ ಕನ್ಯಾರ್ಥಿಯಾಗಿ ಹೋಗಿ ಅಲ್ಲಿ ಪೋರ್ಷಿಯಾಳ ಚಿತ್ರವನ್ನು ಆ ಸೀಸದ ಪೆಟ್ಟಿಗೆಯಿಂದ ಪಡೆದು ಆ ರೀತಿಯಾಗಿ ಬಸ್ಸಾನಿಯೋ ಮತ್ತು ಪೋರ್ಷಿಯಾ ಇವರು ಜತೆಗೂಡುತ್ತಾರೆ. ಬಸ್ಸಾನಿಯೋನ ಮಿತ್ರ ಗ್ರೇಷಿಯಾನೋನು ಅಲ್ಲಿಯೇ ಇದ್ದ ಪೋರ್ಷಿಯಾಳ ಸಖಿ ನೆರಿಸ್ಸ ಇವಳನ್ನು ಮದುವೆಯಾಗುತ್ತಾನೆ.

ಅಷ್ಟರಲ್ಲಿ ವೆನ್ನಿಸಿನ ವ್ಯಾಪಾರ ಮಾರುಕಟ್ಟೆಗಳಲೆಲ್ಲ ದೊಡ್ಡ ಸುದ್ದಿಯೊಂದೆಂದರೆ ಆಂಟೋನಿಯೋನ ವ್ಯಾಪಾರ ಹಡಗುಗಳು, ಒಂದೋ ಎರಡೋ, ದೂರದ ಸಮುದ್ರದಲ್ಲಿ ಅಪಾಯಕ್ಕೀಡಾಗಿ ಮುಳುಗಿಹೋಗಿದೆಯೆಂಬುದಾಗಿ! ಈ ವಾರ್ತೆಯು ಎಲ್ಲೆಲ್ಲೂ ಹಬ್ಬಿತು. ಷೈಲಾಕನಿಗೂ ತಿಳಿಯಿತು. ಅವನು ತನ್ನ ಕರಾರು, ಆಂಟೋನಿಯೋನ ಎದೆಗುಂಡಿಗೆಯಿಂದ ಒಂದು ಸೇರು ಮಾಂಸ, ಇದರ ಬಗ್ಗೆ ಹಠಾತ್ತಾಗಿಯೆಂಬಂತೆ ದ್ವೇಷವನ್ನು ಕಾರುತ್ತಾ ಹೇಳುತ್ತಾನೆ. ಇಲ್ಲಿ ದ್ವೇಷವೆಂದರೆ ಹೆಚ್ಚಾಗಿ ಕ್ರೈಸ್ತರು ಮತ್ತು ಯೆಹೂದಿಯರೊಳಗೆ ಆ ಕಾಲದಲ್ಲಿ ಇದ್ದ ಜಾತೀಯ ದ್ವೇಷವೇ ಮುಖ್ಯ.

ಹೀಗೂ ಆಂಟೋನಿಯೋನು ಕಷ್ಟದಲ್ಲಿ ಬಿದ್ದನು. ಅವನ ಹಡಗುಗಳು ಹಿಂದಿರುಗಲಿಲ್ಲ. ಇನ್ನೇನು, ಈ ಸಂಬಂಧವಾಗಿ ವ್ಯಾಜ್ಯವು ನ್ಯಾಯಾಲಯಕ್ಕೆ ಹೋಗುತ್ತದೆ. ಷೈಲಾಕನು ತನ್ನ ಸೇಡನ್ನು ಸಾಧಿಸಲು ಇದೇ ಸಮಯವೆಂದು ತುಂಬಾ ಉತ್ಸಾಹದಿಂದ ಕಾದಿದನು. ಆದರೆ, ಬಸ್ಸಾನಿಯೋನು ತನ್ನಿಂದಲಾಗಿ ತನ್ನ ಮಿತ್ರ ಆಂಟೋನಿಯೋಗೆ ಈ ಗತಿ ಬಂತಲ್ಲಾ ಎಂದು ಬೇಸರಪಟ್ಟು ಆ ವಿಷಯವನ್ನು ತನ್ನ ಸತಿ ಪೋರ್ಷಿಯಾಳಿಗೆ ಹೇಳಿದನು. ಅವಳಾದರೋ ಆಂಟೋನಿಯೋನಂಥಾ ಆದರ್ಶ ಮಿತ್ರನನ್ನು ಹೇಗಾದರೂ ವ್ಯಾಜ್ಯದಲ್ಲಿ ಜಯಿಸುವಂತೆ ಮಾಡಬೇಕೆಂದು ತನ್ನಲ್ಲೇ ಆಲೋಚಿಸಿಕೊಂಡಳು.

ನಾಟಕದ ಮೊದಲ ಮೂರು ಅಂಕಗಳು ಈ ವಿಷಯಗಳನ್ನು ವಿಶದಪಡಿಸಿದ ಕೂಡಲೆ ನಾಲ್ಕನೇ ಅಂಕವು ಪ್ರೇಕ್ಷಕರನ್ನು ವೆನ್ನಿಸಿನ ನ್ಯಾಯಾಲಯಕ್ಕೆ ಕೊಂಡೊಯ್ಯುತ್ತದೆ. ಅಲ್ಲಿ ವ್ಯಾಜ್ಯವು ಹೇಗೆ ತೀರ್ಮಾನವಾಯಿತು ಎಂಬಿತ್ಯಾದಿ ವಿಶೇಷ ಕುತೂಹಲವನ್ನುಂಟು ಮಾಡುವ ಪ್ರಸಂಗಗಳನ್ನು ನಾಟಕದ ಕಡೆಯ ಎರಡು ಅಂಕಗಳಿಂದ ತಿಳಿಯಬಹುದೆಂದಷ್ಟೇ ಹೇಳಿ, ವಾಚಕರಿಗೆ ಈ ನಾಟಕದಲ್ಲಿರುವ ಶೈಲಿಯ "ಸವಿಮುತ್ತು"ಗಳ ಪರಿಚಯವನ್ನು ಮುಂದಿನ ಪುಟಗಳಲ್ಲಿ ಮಾಡಲು ಪ್ರಯತ್ನಿಸಲಾಗಿದೆ.

"ವೆನಿಸ್‌ನ ವರ್ತಕ" — ನಾಟಕದ
ಕೆಲವು "ನುಡಿ ಮುತ್ತು"ಗಳೊಡನೆಯೇ
ಕಥಾನಿರೂಪಣೆ.

ಈ ನಾಟಕದಲ್ಲಿ ಆಂಟೋನಿಯೋ ಮತ್ತು ಬಸ್ಸಾನಿಯೋ ಇವರಸ್ನೇಹ, ಆಂಟೋನಿಯೋ ಮತ್ತು ಷೈಲಾಕ್ ಇವರೊಳಗಿದ್ದ ಮನಸ್ತಾಪವು, ಬಸ್ಸಾನಿಯೋ ಮತ್ತು ಪೋರ್ಷಿಯ, ಗ್ರ್ಯಾಶಿಯಾನೋ ಮತ್ತು ನೆರಿಸ್ಸ ಮತ್ತು ಲೊರೆಂಜೊ ಮತ್ತು ಜೆಸ್ಸಿಕಾ ಇವರೊಳಗಿನ ಪ್ರಣಯ ಪ್ರಸಂಗಗಳೊಡನೆಯೇ ಹಾಸುಹೊಕ್ಕಾಗಿ ಹರಿಯುವುದು, ಇಲ್ಲಿ ದುರದೃಷ್ಟ ಸನ್ನಿವೇಶವೇ ಮೇಲು ಎಂಬುದನ್ನು ಸೂಚಿಸುತ್ತೋ ಎಂಬಂತೆ ದೊಡ್ಡ ವರ್ತಕನಾದರೂ ಒಬ್ಬ ಆದರ್ಶ ವ್ಯಕ್ತಿ ಮತ್ತು ನಿಷ್ಠೆಯ ಮಿತ್ರನಂತೆ ತೋರ್ಪಡಿಸಿಕೊಂಡ ಆಂಟೋನಿಯೋನೇ ರಂಗಸ್ಥಳದಲ್ಲಿ ಮೊದಲು ಕಾಣಿಸಿಕೊಳ್ಳುವನು, —

"ಇಷ್ಟು ಬೇಸರದಲ್ಲಿ ನಾನೇಕಿರುವೆನೆಂದು
ನಿಜಕ್ಕೂ ತಿಳಿಯೆನು — — —"

ಎಂಬ ಮೊದಲ ಮಾತು ಮುಂದಿನ ಕಥೆಯ ಪ್ರಧಾನ ಅಂಶವೆಂಬುದನ್ನು ಸೂಚಿಸುತ್ತದೆ. ಸಾಗರಾಂತ ದೇಶಗಳಿಗೆ ಆತನ ವ್ಯಾಪಾರ ಹಡಗುಗಳು ಹೋಗುತ್ತವೆ, ತನ್ನ ಮಿತ್ರರೊಡನೆ ಹೀಗನ್ನುತ್ತಾನೆ,

"ಈ ತುಂಬು
ನೌಕೆಯು ಭವಿಷ್ಯದ ಕುರಿತು ನನಗೆ ಬೇಸರವು
ಏನೂ ಇಲ್ಲ."

ಮೇಲಿನ ಈ ಎರಡು ಮಾತುಗಳೂ ಸರಿಯೆಂದೆನಿಸುವ ಘಟನೆಗಳ ಚಿತ್ರಣವೇ ಈ ನಾಟಕ. ಆದರೆ ಪ್ರಾರಂಭದಲ್ಲಿ ಆಂಟೋನಿಯೋನ ಮನಸ್ಸಿಗೆ ಬೇಸರದ ಪರಿಸ್ಥಿತಿಯೊಂದೇ ಕಣ್ಣುಬೀಳುವುದು.

"ನೀನು ಆರೋಗ್ಯದಲ್ಲಿರುವಂತೆ ಕಾಣುವುದಿಲ್ಲ, ಈ ಲೋಕದ ಹಲವು ವಿಚಾರಗಳನ್ನು ಕುರಿತು ಚಿಂತಿಸುತ್ತಿರುವೆ."

ಎಂಬುದಾಗಿ ಗ್ರ್ಯಾಶಿಯಾನೊ ಆತನಿಗೆ ಹೇಳುತ್ತಾನೆ, ಆ ಶ್ರೀಮಂತ ದೊಡ್ಡ ವ್ಯಾಪಾರಿಯಾದರೂ ಆರ್ಥಿಕವಾಗಿ ಸ್ವಲ್ಪ ತೊಂದರೆಗೆ ಸಿಕ್ಕಿದ್ದ ಆತನ ಮಿತ್ರ ಬಸ್ಸಾನಿಯೋನು ಬಂದು ತನ್ನ ಕಷ್ಟವನ್ನು ಹೇಳುವಾಗ ಆಂಟೋನಿಯೋನು ಆತನಿಗೆ ಸಹಕರಿಸಲು ಸಿದ್ಧನಿರುತ್ತಾನೆ! —

"ನನ್ನ ಹಣವನ್ನು ಮತ್ತು ನನ್ನನ್ನು ಮಾತ್ರವಲ್ಲದೆ ಸಾಧ್ಯವಾದುದೆಲ್ಲವನ್ನು ನಿನಗೆ ಬಿಚ್ಚಿಕೊಡಲಿಕ್ಕೆ ನಾನು ಸಿದ್ಧನು,"

ಎಂದೆನ್ನುತ್ತಾನೆ. ಆಗ ಬಸ್ಸಾನಿಯೋನು ತನ್ನ ಗೆಳೆಯನೊಡನೆ ತನ್ನ

ಕಳೆದ ತನ್ನ ಲೀಲಾದಿನಗಳನ್ನು ನೆನಪಿಸುತ್ತಾನೆ. ಬಸ್ಸಾನಿಯೋನಿಗೆ ಸದ್ಯಕ್ಕೆ ಹಣದ ತಾಪತ್ರಯವು ಎರಂಬದಿರು ಸ್ಪಷ್ಟವಿಲ್ಲದಿದ್ದರೂ ಆತನಿಗೆ ತನ್ನ ಪ್ರಣಯದ ವಿಚಾರ ಸಾಧನೆಗೆ ಹಣ ಬೇಕಾಗುತ್ತಿರುವನು. ಹೀಗೂ ಬಸ್ಸಾನಿಯೋನು ಹೇಗನ್ನುವನು!—

"ಬೆಲ್ಮಂಟದಲ್ಲಿ ಒಬ್ಬ ಹೆಣ್ಣುಮಗಳಿರುವವಳು; ಅವಳು ಚೆಲುವೆಯೆಂದೆನುವ ನುಡಿಗಿಂತ ಚೆಲುವೆಯೂ ಸದ್ಗುಣಿಯೂ ಆಗಿರುವವಳಲ್ಲದೆ ಒಮ್ಮೊಮ್ಮೆ ಅವಳ ಕಣ್ಣುಗಳಿಂದ ಮೌನ ಪ್ರೇರಿತ ಮಧುರ ಸಂದೇಶಗಳು ನನಗೆ ತಲುಪಿವೆ. ಅವಳ ಹೆಸರು ಪೋರ್ಶ್ಯ-------."

ಈಗ ಬಸ್ಸಾನಿಯೋಗೆ ಹಣ ಬೇಕಾಗಿದೆ. ಆದರೆ ಸದ್ಯಕ್ಕೆ ಆಂಟೋನಿಯೋನಲ್ಲಿ ಹಣವಿಲ್ಲ.—

"ನಾನು ಆರ್ಜಿಸಿದ್ದೆಲ್ಲವೂ ಸಮುದ್ರದಲ್ಲಿ ಇದೆಯೆಂದು ನಿನಗೆ ಗೊತ್ತಿದೆ — ——."

ಎಂದೆನ್ನುತ್ತಾ ಆತನು ತನ್ನ ಪರಿಸ್ಥಿತಿಯನ್ನು ಕುರಿತಾಗಿ ಹೇಳುತ್ತಾನೆ. ಅಷ್ಟರಲ್ಲಿ ಬೆಲ್ಮಂಟದಲ್ಲಿ ಪೋರ್ಶ್ಯಳು ತನ್ನ ಸಖಿ ನೆರಿಸ್ಸಳೊಡನೆ ತನ್ನ ಪ್ರಣಯದ ಕಾರ್ಯಕ್ರಮದ, ಅವಳ ತಂದೆಯು ಸಲಹೆಯಂತೆ ಆ ಚಿನ್ನ, ಬೆಳ್ಳಿ ಮತ್ತು ಸೀಸದ ಪೆಟ್ಟಿಗೆಗಳಲ್ಲೊಂದರಲ್ಲಿ ಇಟ್ಟ ಅವಳ ನಕ್ಷೆ, ಅವಳನ್ನು ವರಿಸಲೆಂದು ಆಗಮಿಸಿದ್ದ ಕನ್ಯಾರ್ಥಿಗಳು, ಇತ್ಯಾದಿ ವಿಶದವಾಗಿ ಮಾತಾಡುತ್ತಾಳೆ, "ನನ್ನ ಪುಟ್ಟ ದೇಹವು ಈ ಮಹಾ ಜಗತ್ತಿನ ಬಗ್ಗೆ ತುಂಬಾ ಬೇಸತ್ತಿದೆ," ಎಂದೆನ್ನುವಳು. ಕನ್ಯಾರ್ಥಿಯಾಗಿ ಬಂದ ಒಬ್ಬ ತರುಣ ದೊರೆ "ತನ್ನ ಕುದುರೆಯ ವಿಷಯವಲ್ಲದೆ ಬೇರಾವುದನ್ನು ಕುರಿತಾಗಿಯೂ ಮಾತಾಡಲಾರನು," ಎಂದೆನ್ನುತ್ತಾಳೆ. ಮತ್ತೊಬ್ಬನನ್ನು ಕುರಿತಾಗಿ "ಅವನು ನನ್ನನ್ನು ಹೇಗೆ ತಿಳಿಯಲಾರನೋ ಹಾಗೆಯೇ ನಾನು ಅವನನ್ನೂ ತಿಳಿಯೆನು," ಎಂದೆನ್ನುತ್ತಾಳೆ. ಮತ್ತೊಬ್ಬ ಕನ್ಯಾರ್ಥಿಯು ಎಂತವನೆಂಬುದಕ್ಕೆ:—

"ಆತನು ಒಬ್ಬ ಆಂಗ್ಲನಿಂದ ಬಲವಾದ ಏಟನ್ನು ತಿಂದನು. ಆತನು ಹಿಂದಕ್ಕೆ ತಿರುಗಿಕೊಡಲಾರದೆ ತಾನು ಆಮೇಲೆ ಆತನಿಗೆ ಬುದ್ಧಿ ಕಲಿಸುವೆನೆಂದು ಪ್ರಮಾಣಮಾಡಿದನು, ಒಬ್ಬ ಫ್ರೆಂಚನು ಆತನಿಗೆ ಬೇರೊಬ್ಬನ ಸಹಕಾರಿ ಜಾಮಿನು ನಿಂತನೆಂದು ನಾನು ಊಹಿಸುತ್ತೇನೆ."

ಎಂಬುದಾಗಿ ಹೇಳಿದಳು. ಹೀಗೆ ಕೆಲವರ ಬಗ್ಗೆ ಅವಳು ಹಾಸ್ಯಪೂರ್ಣ ಟೀಕೆಯನ್ನು ನಡೆಸುತ್ತಾಳೆ, ಎಷ್ಟು ಜನ ಕನ್ಯಾರ್ಥಿಗಳಾಗಿ ಬಂದರು, ಎಂದು ಕೇಳಿದರೆ, "ಒಬ್ಬನನ್ನು ಕಳುಹಿಸಿ

ಬಾಗಿಲನ್ನು ಮುಚ್ಚಿಡಲು ಮತ್ತು ಯಾರು ಕೂಗಿದರೂ ಬಾಗಿಲನ್ನು ತೆರೆಯಬಾರದೆಂದು ಎಂಬುದಾಗಿ ಹೇಳುವನು,

ವೆನ್ನಿಸ್‌ನ ಬೀದಿಯಲ್ಲಿ ಬಸ್ಸಾನಿಯೊ ಮತ್ತು ಯಹೂದಿ ವ್ಯಾಪಾರ ಶೈಲಾಕ್, ಇವರು ಮಾತಾಡುವರು. ಯಹೂದಿಯು ನನ್ನ ಮೂರು ಸಾವಿರ ವರಹ ಸಾಲ ಕೇಳುತ್ತಾನೆ; ಹಾಗೆ ಹಣಕ್ಕೆ ಜಾಮೀನು ಬೇಕಾದರೆ ಆಂಟೋನಿಯೋನು ಇದ್ದಾನೆಂದು ಹೇಳುವನು. ಆದರೆ ಯಹೂದಿ ಶೈಲಾಕನಿಗೆ ಆಂಟೋನಿಯೋನಲ್ಲಿ ಏನೋ ಸ್ನೇಹ. ಆಂಟೋನಿಯೋನು ದೊಡ್ಡ ವರ್ತಕ; ಅವನ ವ್ಯಾಪಾರ ಹಡಗುಗಳು ದೂರದೇಶಗಳಿಗೂ ಹೋಗುತ್ತವೆ. ಅಂಥವನು ಜಾಮೀನು ನಿಲ್ಲುವಾಗ ಬೇರೇನು ತೊಂದರೆ? ಆದರೆ, ಏನೂ ಇಲ್ಲವೆಂದು ಶೈಲಾಕನಿಗೆ ಅನ್ನಿಸುವುದಿಲ್ಲ. ವ್ಯಾಪಾರ ಮಾಡುತ್ತಿರಬಹುದು, ಹಡಗುಗಳಿರಬಹುದು; ಅವೇನು ಭದ್ರತೆ?

"ಹಡಗುಗಳು ಬರಿ ಹಲಗೆಗಳು. ನಾವಿಕರು ಬರಿ ಮನುಷ್ಯರು. ನೆಲದಲ್ಲಿ ಇಲಿಗಳಿರುವಂತೆ ನೀರಿನಲ್ಲೂ ಇವೆ. ನೆಲದ ಕಳ್ಳರು ಮತ್ತು ನೀರುಗಳ್ಳರು, ಎಂದರೆ ನಾನೆನ್ನುವುದು ಸಮುದ್ರಗಳ್ಳರು ಎಂದು."

ಶೈಲಾಕನು ಹೀಗನ್ನುತ್ತಾ ತನ್ನ ಹಣಕ್ಕೆ ಆಂಟೋನಿಯೋನು ಜಾಮೀನು ನಿಂತರೆ ಅವನಿಂದ ಆ ಹಣಕ್ಕೆ ಕರಾರು ಬರೆಸಿಕೊಳ್ಳಬೇಕು, ಎಂದು ಬಸ್ಸಾನಿಯೋಗೆ ಸೂಚಿಸುತ್ತಾನೆ. ಯಹೂದಿಯರಿಗೂ ಕ್ರೈಸ್ತರಿಗೂ ಆ ಕಾಲದಲ್ಲಿ ಇದ್ದ ಜಾತಿ ವೈಷಮ್ಯವನ್ನು ಕುರಿತಾಗಿ ಹೀಗೆ ಸ್ಪಷ್ಟಪಡಿಸುತ್ತಾನೆ, —

"ನಾನು ನಿಮ್ಮೊಡನೆ ವ್ಯವಹರಿಸುವೆನು, ವ್ಯಾಪಾರ ಮಾಡುವೆನು, ಮಾತಾಡುವೆನು, ನಡೆಯುವೆನು, ಆದರೆ ನಿಮ್ಮೊಡನೆ ಊಟಮಾಡಲಾರೆನು, ಕುಡಿಯಲಾರೆನು, ಒಟ್ಟಿಗೆ ನಿಂತು ಪ್ರಾರ್ಥಿಸಲಾರೆನು."

ಹೀಗೆ ಮಾತಾಡುತ್ತಾ, ಮುಂದಕ್ಕೆ ಜಾಮೀನು ನಿಲ್ಲಬಹುದಾದ ಆಂಟೋನಿಯೋನಿಂದ ಮೂರು ಸಾವಿರ ವರಹಗಳಿಗೆ ಕರಾರು ಪತ್ರ ಬರೆಸಬೇಕು. ಅದನ್ನು ಆ ಕಾಲದಲ್ಲಿ ಕೊಡದಿದ್ದರೆ ದಂಡ ಕೊಡಬೇಕು. ಇಷ್ಟೆಲ್ಲ ಏಕೆ? ಏಕೆಂದರೆ ಶೈಲಾಕ್ ಹೀಗನ್ನುವನು! —

"ನೀನನ್ನನ್ನು ಅವಿಶ್ವಾಸಿ, ದ್ರೋಹಿ, ನಾಯಿ ಎಂದೆಲ್ಲ ಹೇಳಿದೆ. ನನ್ನ ಯಹೂದಿ ನಿಲುವಂಗಿಗೆ ಉಗುಳಿದೆ ----."

ಇಂದಿದ್ದನ್ನೆಲ್ಲ ಮರೆಯುವುದಕ್ಕೆ ಸಾಧ್ಯವಿದೆಯೇ? ಹೀಗೂ ಆಂಟೋನಿಯೋನು ಅದಕ್ಕೆಲ್ಲ ಜಗ್ಗಲಾರನು, ಅವನು ಹೀಗನ್ನುತ್ತಾನೆ: —

"ನಾನು ನಿನ್ನನ್ನು ಅದೇ ರೀತಿಯಲ್ಲಿ ಪುನಃ ಕರೆಯಬಹುದು; ಪುನಃ ನಿನಗೆ ಉಗಿಯಬಹುದು."

ಮುಂದುವರಿಯುತ್ತಾ ಅವನು, "ಈಗ ಹಣದ ವಿಚಾರ ಮಾತಾಡು. ನಿನಗೆ ಕರಾರು ಬರೆದುಕೊಡಲು ನಾನಿದ್ದೇನೆ," ಇತ್ಯಾದಿಯಾಗಿ ಹೇಳುವನು, ಹಣವನ್ನು ಸಕಾಲದಲ್ಲಿ ಹಿಂದಿರುಗಿಸಲು ತಪ್ಪಿದರೆ ಏನು ದಂಡವನ್ನು ಕೊಡಬೇಕೆಂಬುದಕ್ಕೆ ಶೈಲಾಕನು ಇಂತೆನ್ನುತ್ತಾನೆ!—

"---- ಹಣವನ್ನು
ಶರತ್ತಿಗನುವಾಗಿ ಕೊಡಲು ತಪ್ಪಿದರೆ ದಂಡಕೆ
ಜಾಮೀನಿಯಾಗಿ ನೀನೆನಗೆ ನಿನ್ನ ದೇಹದ
ನನಗೊಪ್ಪಿದ ಕಡೆಯಿಂದಲೊ ಒಂದು ಸೇರು ತೂಕ
ಮಾಂಸವನು ಚೂರಿಯಿಂದ ಕೊಯ್ದು ---- ಸಲ್ಲಿಸುವುದು."

ಆಂಟೋನಿಯೋನಾದರೋ ತನ್ನ ಹಡಗುಗಳು ಸರಕುಗಳನ್ನು ತುಂಬಿಸಿಕೊಂಡು ಬೇಗನೆ ಹಿಂದಿರುಗುತ್ತವೆ, ಎನಗೆ ತೊಂದರೆಯಾಗದೆಂದು ಭಾವಿಸಿ ಮೇಲಿನ ಶರತ್ತಿಗೆ ಒಪ್ಪುವನು. ಹಣವನ್ನು ಮೂರು ತಿಂಗಳಲ್ಲಿ ಅಲ್ಲ, ಎರಡು ತಿಂಗಳುಗಳೊಳಗಾಗಿಯೇ ಹಿಂದಿರುಗಿಸುವೆನೆಂದು ಹೇಳುತ್ತಾನೆ. ಹೀಗೂ ಕರಾರು ಸಿದ್ಧವಾಯಿತು.

ಬೆಲ್ಮಂಟದಲ್ಲಿ ಪೋರ್ಷಿಯಳ ಮನೆಗೆ ಬಂದಿದ್ದ ಕನ್ಯಾರ್ಥಿಗಳಲ್ಲಿ ಮೊರೊಕ್ಕೋದ ರಾಜಕುಮಾರನೊಬ್ಬನು. ಅಲ್ಲಿರಿಸಿದ ಆ ಚಿನ್ನ, ಬೆಳ್ಳಿ ಮತ್ತು ಸೀಸದ ಮೂರು ಡಬ್ಬಿಗಳಲ್ಲೊಂದರಲ್ಲಿ ಕನ್ಯೆ ಪೋರ್ಷಿಯಳ ಚಿತ್ರವನ್ನು ಇರಿಸಲಾಗಿದೆ. ಕನ್ಯಾರ್ಥಿಯು ಆ ಚಿತ್ರವಿರುವ ಡಬ್ಬದ ಬೀಗವನ್ನು ತೆರೆದು ನೋಡಿದರೆ ಅವನು ತನ್ನ ವಿಧಿ ಪರೀಕ್ಷೆಯಲ್ಲಿ, ಪೋರ್ಷಿಯಳನ್ನು ಸತಿಯಾಗಿ ಪಡೆಯಲು ಪಾತ್ರನಾಗಿ ಜಯಶೀಲನೆಂದಾಯಿತು. ಅವನು ಅದರಲ್ಲಿ ಸೋತರೆ ಅದಕ್ಕೆ ಬೇರೆ [illegible] ಶರತ್ತುಗಳೂ ಇವೆ.

"------- ನನ್ನನ್ನಾರಿಸುವ
ವನು ತನ್ನಲ್ಲಿರುವುದನು ಪೂರ್ತಿ ನೀಡುವ ಅಪಾ
ಯಕ್ಕೊಳಗಾಗುವನು ---."

ಇದು ಒಂದು ಶರತ್ತು! ಒಬ್ಬ ಕನ್ಯಾರ್ಥಿ ಮಿನುಗುತ್ತಿದ್ದ ಆ ಚಿನ್ನದ ಡಬ್ಬವನ್ನು ತೆರೆದಾಗ ಅವನಿಗೆ ಸಿಕ್ಕಿದ್ದೇನು? ತೀರಾ ಅಸಹ್ಯ ವಸ್ತು. ಅದರೊಳಗಿನ ಕಾಗದದ ಸುರುಳಿಯಲ್ಲಿ ಹೀಗೆ ಬರೆದಿತ್ತು!—

"ಮಿನುಗುವುದೆಲ್ಲ ಚಿನ್ನವದಲ್ಲ
ಎಂದೆನುತಿರುವುದು ಕೇಳಿಹೆಯಲ್ಲ!"

ಹಾಗಾಗುವಾಗ ಆ ಕನ್ಯಾರ್ಥಿಯು ತನ್ನ "ವೈವಾಹಿಕ ಜೀವನಕ್ಕೆ ಇದೋ ನಮಸ್ಕಾರ," ಎಂದೆನ್ನುತ್ತ ಹೋಗುವನು. ಸರಿಯಾದ ಡಬ್ಬವನ್ನು ತೆರೆಯದಿದ್ದವನು, "ವಿವಾಹದ ಉದ್ದೇಶದಿಂದ ಮತ್ತೊಮ್ಮೆ ಕನ್ಯೆಯನ್ನು ತನ್ನ ಜೀವಮಾನದ ವರೆಗೂ ಮೋಹಿಸ

"ಬಾರದು," ಎಂಬುದಾಗಿ ಮತ್ತೊಂದು ಬರೆದಿತ್ತು. ಆ ಕಡೆಗೆ ತರುವಾಯ ಅರಗಾನ್ ರಾಜಕುಮಾರನು ಬಂದು ಅವನು ತನ್ನ ವಿಧಿ ಪರೀಕ್ಷಿಸಿದನು. ಅವನು ಬೆಳ್ಳಿಯ ಡಬ್ಬವನ್ನು ತೆರೆಯುವನು. ಅದರಲ್ಲಿ:— "ಮಿಣುಗೊಂಡು ನೋಡುತ್ತಿರುವ ಒಬ್ಬ ಹೆಡ್ಡನ ಚಿತ್ರವಿತ್ತು". ಇದೇ ಅವನ ಅರ್ಹತೆ. ಅವನಿಗಷ್ಟೇ ಲಭಿಸುವುದು. ಪ್ರಾರ್ಥನೆಗಳು ಎಂಥಾ ಹೆಡ್ಡು ಎಂಬುದಕ್ಕೆ ಅದರೊಳಗಿದ್ದ ಚೀಟಿಯಲ್ಲಿ ಹೀಗೂ ಹೇಳಿತ್ತು:—

"ಆಸಿಹೆಸ ನಿತ್ಯವೂ ನಿನ್ನ ಗೆಳೆಯ ಬಾರ,
ತೊಲಗು ಇದರಿಂದ ನಿನ್ ಕ್ಷಣದಲ್ಲಿ ಹಾರಿ!

ಮತ್ತೊಂದೆಡೆ, ಆ ಸುರುಳಿಯಲ್ಲಿ ಹೀಗೂ ಹೇಳಿತ್ತು:—

"ಮಂಕುತಲೆಯೊಡನೆ ಬಂದೆ ಓಲೈಸಲೆಂದೆನು,
ಹೋಗುವೆನು ಎರಡು ತಲೆಬುರುಡೆಗಳ ಹೊರುತ!"

ಈ ಎಲ್ಲ ತಮಾಷೆ ನಡೆಯುತಿದ್ದಾಗ ಬೇರೆಡೆ ಲಾನ್ಸಲಟ್ ಗೊಬ್ಬೊ ಎಂಬ ತರುಣ ವಿಟನು ತನ್ನ ಒಂದಿಷ್ಟು ಹಾಸ್ಯದಿಂದಲೇ ತನ್ನ ತೋರ್ಪಡಿಸಿಕೊಳ್ಳುವನು. ಅವನ ಸಮರ್ಥನೆ ಇದು:—

"ನನಗೊಂದು ಹುದ್ದೆ ದೊರಕದು; ಇಲ್ಲ! ನನ್ನ ತಲೆಯಲ್ಲೊಂದು ನಾಲಗೆಯೇ ಇಲ್ಲ."

ಇಷ್ಟರಲ್ಲಿ ಲೊರೆನ್ಸೊ ಎಂಬುವನು ಯೆಹೂದಿ ಷೈಲಾಕನ ಮಗಳು ಜೆಸ್ಸಿಕಾಳನ್ನು, ಅವಳ ತಂದೆಗರಿಯದಂತೆ, ಮತ್ತು ಅವಳ ಇಚ್ಛೆಗನುವಾಗಿ, ಓಡಿಸಿಕೊಂಡು ಹೋಗಿಯೇ ಬಿಟ್ಟನೆಂಬ ವಾರ್ತೆಯು ಎಲ್ಲೆಲ್ಲೂ ಹಬ್ಬಿತು. ಷೈಲಾಕನಂತೂ ತನ್ನ ಮಗಳನ್ನು ಅವಳನ್ನೊ ಕ್ರೈಸ್ತನನು ಹಾರಿಸಿಕೊಂಡು ಹೋಗಿಬಿಟ್ಟನೆಂದು ವೆನ್ನಿಸ್‌ನ ಬೀದಿಗಳಲ್ಲೆಲ್ಲ ತಲೆಚಚ್ಚಿಕೊಂಡು ಓಡಾಡಿದ ದೃಶ್ಯವಂತೂ ಚೆನ್ನಾಗಿ ವರ್ಣಿತವಾಗಿದೆ. ಹೀಗಿರಲು ವೆನ್ನಿಸ್‌ನ ವ್ಯಾಪಾರ ಮಾರುಕಟ್ಟೆಯಲ್ಲಿ ವ್ಯಾಪಾರಿಗಳೊಳಗೆ ಬೇರೆ ಸುದ್ದಿ ಪ್ರಚಾರವಾಯಿತು. ಅದೇನೆಂದರೆ ಆಂಟೋನಿಯೊನ ಸರಕು ತುಂಬಿದ ಹಡಗೊಂದು ಆಂಗ್ಲ ಜಲಸಂಧಿ ಇಕ್ಕಟ್ಟಿನಲ್ಲಿ ಅಪಘಾತಕ್ಕೀಡಾಗಿ ಮುಳುಗಿತೆಂದೇ ಆಗಿತ್ತು. ಅದು ಬರೀ ಸುದ್ದಿ ಮಾತ್ರವಾದರೂ ಅದನ್ನು ಷೈಲಾಕನೂ ತಿಳಿದನು. ತನ್ನ ಮಗಳು ಓಡಿಹೋದುದರ ಬಗ್ಗೆ ಇದ್ದ ಅವನ ಚಿಂತೆಯನ್ನು ಈ ವಾರ್ತೆಯು ಶಮನಗೊಳಿಸಿತು. ಆಂಟೋನಿಯೊನು ತೊಂದರೆಗೊಳಗಾದುದನ್ನು ತಿಳಿದು ಅವನು ಸಂತೋಷಿಸಿದನು; ಅವನನ್ನು ಬಹಿರಂಗವಾಗಿ ಬೈಯ್ಯಲಿಕ್ಕೆ ತೊಡಗಿದನು. ಒಮ್ಮೆ ಅವನು ಬೀದಿಯಲ್ಲಿ ಒಬ್ಬ ಕ್ರೈಸ್ತ ಮಿತ್ರ ಸಲರಿನೊನೊಡನೆ ಹೇಳಿದ ಈ ಮಾತುಗಳು ಪ್ರಸಿದ್ಧವಾಗಿವೆ. ಅರ್ಥಗರ್ಭಿತವಾಗಿಯೂ ಇವೆ. ಯೆಹೂದಿಯರನ್ನು ಆ ಕಾಲದಲ್ಲಿ ಕ್ರೈಸ್ತರು ಬಹಳ ಹೀನಾಯವಾಗಿ ಕಾಣುತಿದ್ದ

ರೆಂಬುದು ನಿಜ. ಆ ವಿಚಾರವಾಗಿ ಈ ವಿಶ್ವಕವಿಯು ಷೈಲಾಕನಿಂದ ಈ ರೀತಿ ಹೇಳಿಸುತ್ತಾನೆ!—

"ನಾನೊಬ್ಬ ಯೆಹೂದಿಯನು; ಆದರೇನು? ಒಬ್ಬ ಯೆಹೂದಿಗೆ ಕಣ್ಣುಗಳಿಲ್ಲವೆ? ಯೆಹೂದಿಗೆ ಕೈಗಳಿಲ್ಲವೆ? ಅಂಗಾಂಗಳು, ಉದ್ದಗಲ ಪ್ರಮಾಣಗಳು, ಇಂದ್ರಿಯಗಳು, ಒಲವು ನಲವುಗಳು, ಮನೋರಾಗಗಳು ಇಲ್ಲವೆ? ಅದೇ ಆಹಾರದಿಂದ ಪೋಷಿಸಲ್ಪಡುವ, ಅದೇ ಅಸ್ತ್ರದಿಂದ ಇರಿಯಲ್ಪಡುವ, ಅದೇ ವ್ಯಾಧಿಗೆ ಒಳಗಾಗುವ, ಅದೇ ಶುಶ್ರೂಷೆಯನ್ನು ಪಡೆಯುವ, ಮತ್ತು ಒಬ್ಬ ಕ್ರೈಸ್ತನಂತೆಯೇ ಅವನು ಹೇಮಂತದ ಚಳಿಯನ್ನು, ಗ್ರೀಷ್ಮದ ಬಿಸಿಲನ್ನು ಅನುಭವಿಸುತ್ತಾನೆ!

ಮುಂದುವರಿಯುತ್ತಾ ಷೈಲಾಕನು ಹೀಗೂ ಹೇಳುವನು:-

"ನೀವು ನಮಗೆ ಚುಚ್ಚಿದರೆ ನಮ್ಮ ರಕ್ತ ಉಕ್ಕಿ ಹರಿಯದೆ? ನೀವು ನಮಗೆ ಕಚ್ಚುಲಗುಳಿ ಮಾಡಿದರೆ ನಾವು ನಗುವುದಿಲ್ಲವೆ? ನೀವು ನಮಗೆ ವಿಷ ತಿನ್ನಿಸಿದರೆ ನಾವು ಸಾಯುವುದಿಲ್ಲವೆ? ಮತ್ತು, ನೀವು ನಮಗೆ ಅನ್ಯಾಯವನ್ನೆಸಗಿದರೆ ನಾವು ಸೇಡು ತೀರಿಸುವುದಿಲ್ಲವೆ?"

ಇದು ಲೋಕದ ಎಲ್ಲಾ ಜಾತೀಯವಾದಿಗಳೂ ಓದಿ ಅರಗಿಸಿಕೊಳ್ಳಬೇಕಾದ ದಿವ್ಯವಾಣಿಯೆಂದರೂ ಸರಿ. ಅದೇನೇ ಇರಲಿ, ಈಗ ಷೈಲಾಕನು ಕ್ರೈಸ್ತ ಆಂಟೋನಿಯೋನ ಮೇಲೆ ತನ್ನ ಸೇಡನ್ನು ತೀರಿಸಲು ಕಾದಿದ್ದಾನೆ. ತ್ರಿಪೋಲಿಯಿಂದ ಬರುತ್ತಿದ್ದ ಆಂಟೋನಿಯೋನ ವ್ಯಾಪಾರದ ಹಡಗೊಂದು ಮುಳುಗಿದೆಯೆಂದು ಅವನು ಅಧಿಕೃತವಾಗಿ ತಿಳಿಯುತ್ತಾನೆ, ಹಾಗಾದುದಕ್ಕೆ ಅವನು ದೇವರಿಗೆ ವಂದಿಸುತ್ತಾನೆ. ತಾನು "ದೇವರಿಗೆ ಆಭಾರಿಯಾಗಿದ್ದೇನೆ," ಎಂದು ಹೇಳುತ್ತಾ ಷೈಲಾಕನು ಅತ್ತಿತ್ತ ಹೋಗುತ್ತಾನೆ.

ವೆನಿಸ್‌ನಲ್ಲಿ ಈ ಎಲ್ಲ ವಾರ್ತೆಗಳು ನಡೆದಿದ್ದಾಗ ಅತ್ತ ಬೆಲ್ಮಂಟ್‌ನಲ್ಲಿ ಕನ್ಯಾರ್ಥಿಯಾಗಿ ಹೋದ ಬಸ್ಸಾನಿಯೋನು ಪೋರ್ಷಿಯಳ ಮನೆಯಲ್ಲಿಟ್ಟಿದ್ದ ಮೂರು ಡಬ್ಬಿಗಳಲ್ಲಿ ಸೀಸದ ಡಬ್ಬವನ್ನು ತುಂಬಾ ಆಮೋಟಿನ ತೆರೆಯುವಾಗ ಅದರೊಳಗೆ ಪೋರ್ಷಿಯಳ ಚಿತ್ರವನ್ನು ಕಂಡು ಅವನು ತುಂಬಾ ಸಂತೋಷಪಟ್ಟನು ಎಂದು ಬೇರೆ ಹೇಳಬೇಕಾಗಿಲ್ಲ!—

"ತೊಳಿಯುವ ಆರಿಸದಿಲ್ಲವೋ ನೀನು
ವಿಧಿ ಅದು ವಿಧಿಸುವ ಹೆಚ್ಚಿನ ನಿಜವು!"

ಈ ಘಟನೆಯಿಂದ ತಕ್ಷಣ ಪೋರ್ಷಿಯಳ ಅಂತರಂಗದ ಕನಸು ನನಸಾಯಿತು, ಬಸ್ಸಾನಿಯೋ ಮತ್ತು ಪೋರ್ಷಿಯಾ ಇವರು ಉತ್ತಿತ್ತ

ಇಷ್ಟು ಮಾತ್ರವಲ್ಲದೆ, ಅವಳು ತನ್ನ ಉಂಗುರವನ್ನು ತೆಗೆದು ಮೆಲ್ಲನೆ ಅವನ ಕೈಬೆರಳಿಗೆ ಜಾರಿಸಿದಳು, ತನ್ನ ಮನೆಯ ಸರ್ವ ಅಧಿಕಾರವನ್ನು ಅವನಿಗೆ ವಹಿಸಿದಳು, ಅದರನಂತರ ಪೋರ್ಷ್ಯಳು ಹೀಗೆಂದು ಎಚ್ಚರಿಕೆಯನ್ನು ಬಸ್ಸಾನಿಯೋಗೆ ಕೊಡುವಳು :—

"--- ಪ್ರಿಯನೆ, ಅಮೂಲ್ಯವ
ನ ಈ ಉಂಗುರದೊಡನೆಯೇ ಕೊಡುತ್ತೇನೆ. ಇದರಿಂದ
ನೀನು ಬೇರ್ಪಟ್ಟರೆ, ಕಳೆದುಕೊಂಡರೆ ಅಥವಾ
ಇತರರಿಗೆ ಕೊಟ್ಟರೆ ಅದು ಅನರ್ಥಕಾರಿಯಾಗುವುದು;
ಭವಿಷ್ಯವನ್ನು ಕೆಡಿಸುವುದು; ನಿನ್ನ ಪ್ರೀತಿಯನ್ನು
ಕೊನೆಗಾಣಿಸುವುದು ---."

ಆ ಸಂತೋಷದ ವೇಳೆಯಲ್ಲಿ ಬಸ್ಸಾನಿಯೋನ ಮಿತ್ರ ಗ್ರಾಷ್ಯಾನೋನು ಪೋರ್ಷ್ಯಳ ಸಖಿ ನೆರಿಸ್ಸಾಳನ್ನು ಪ್ರೀತಿಸಿದಾಗ ಅವರಿಬ್ಬರೂ ಇದೇ ರೀತಿ ಉಂಗುರವನ್ನು ಬದಲಿಸುವರು :—

"ನನ್ನ ಕಣ್ಣುಗಳು ನಿನ್ನವುಗಳಷ್ಟೇ ಚುರುಕಾ
ಗಿ ನೋಡಬಲ್ಲವು. ನೀನು ಯಜಮಾನಿಯನ್ನು ನೋಡಿರ
ಲು ನಾನವಳ ಸಖಿಯನ್ನು ನೋಡಿದೆನು ---."

ಎಂಬುದಾಗಿ ಗ್ರಾಷ್ಯಾನೋನು ತನ್ನ ಮಿತ್ರ ಬಸ್ಸಾನಿಯೋಗೆ ಹೇಳುತ್ತಾನೆ. ಹೀಗೆ ಆಂಟೋನಿಯೋ ಮತ್ತು ಷೈಲಾಕ್ ಇವರ ಅನಿಷ್ಟ ಸಮಸ್ಯೆಯೊಡನೆ ಹಾಸುಹೊಕ್ಕಾಗಿ ಹರಿಯುತ್ತಿದೆ ಬಸ್ಸಾನಿಯೋ ಮತ್ತು ಗ್ರಾಷ್ಯಾನೋ ಇವರ ಪ್ರಣಯ ಪ್ರಸಂಗ! ಅದರೊಡನೆಯೇ ಇದಕ್ಕೆ ಸಂಬಂಧಿಸಿದ ಒಂದು ಅಂತರ್ಜಾತೀಯ ಜೋಡಿ— ಲೊರೆಂಜೊ ಮತ್ತು ಜೆಸ್ಸಿಕಾ ಇವರು. ಈ ಜೆಸ್ಸಿಕಾಳು ಷೈಲಾಕನ ಮಗಳು ಎಂದು ಹಿಂದೆಯೇ ತಿಳಿಸಿದೆವಷ್ಟೆ!

ಹೀಗಿದ್ದ ಸಂದರ್ಭದಲ್ಲಿ ಒಂದು ದಿನ ಬಸ್ಸಾನಿಯೋಗೆ ಅಕಸ್ಮಾತ್ತಾಗಿ ಒಂದು ಪತ್ರವು ಆಂಟೋನಿಯೋನಿಂದ ಬಂತು, ಆ ಪತ್ರವನ್ನು ಓದಿ ಬಸ್ಸಾನಿಯೋನ ಮುಖ ಇಳಿಯಿತು. ಅದು ಸಂತೋಷದ ವಿಷಯವೇನೂ ಅಲ್ಲ,

"---ನನ್ನ ಪ್ರಿಯ ಪೋರ್ಷ್ಯ,—
ಓಲೆಯನ್ನು ಎಲ್ಲಿ ಈ ವರೆಗೆ ಬರೆಯಲಾಗಿರದ
ಬಹಳ ವ್ಯಸನಕರವಾದ ವಿಷಯಗಳು ಇದರಲ್ಲಿವೆ---."

ಸ್ವಲ್ಪ ತಡೆದು ಪುನಃ ಹೀಗೂ ಹೇಳುವನು:—

"--- ಈ ಒಂದು ಪತ್ರವಿದೆ,
ಇದು ನನ್ನ ಆ ಮಿತ್ರನ ದೇಹವೆನಿಸಿದರೆ ಅ
ದರಲ್ಲಿ ವ್ಯಕ್ತವಾದ ಪ್ರತಿಯೊಂದು ಪದವೂ ಅವ
ನ ನೆತ್ತರು ಎಂದೆನ್ನಬೇಕು."

ಒಟ್ಟಾಗಿ ಆದುದೇನೆಂದರೆ, ಆಂಟೋನಿಯೋನ ವ್ಯಾಪಾರವೆಲ್ಲ ನೀರುಪಾಲಾಯಿತು. ಟ್ರಿಪೋಲಿ, ಮೆಕ್ಸಿಕೋ, ಇಂಗ್ಲೆಂಡ್, ಲಿಸ್ಬನ್ ಮೊದಲಾದೆಡೆಯಿಂದ ಬರಬೇಕಾಗಿದ್ದ ಹಡಗುಗಳ ವಾರ್ತೆಯೂ ಇಲ್ಲ. ಆಂಟೋನಿಯೋನು ಬಸ್ಸಾನಿಯೋನಿಗೆ ಜಾಮೀನು ನಿಂತು ಕಷ್ಟಕ್ಕೆ ಸಿಕ್ಕಿದ್ದಾನೆ. ಷೈಲಾಕನ ಹಣ ಕೊಡದಿದ್ದರೆ ಅವನು ಕರಾರಿನಲ್ಲಿ ಒಪ್ಪಿದಂತೆ ತನ್ನ ಮಾಂಸವನ್ನೇ ಕೊಯ್ದು ಕೊಡಬೇಕು. ಬಸ್ಸಾನಿಯೋನು ಈ ಪರಿಸ್ಥಿತಿಗೆ ಬೇಸರಿಸುತ್ತಾ ಪೋರ್ಷಳಿಗೆ ತನ್ನ ಮಿತ್ರನ ವಿಷಯವಾಗಿ ಎಲ್ಲವನ್ನೂ ಹೇಳುತ್ತಾನೆ. ಆಗ ಆ ಮೇಧಾವಿ ತರುಣಿ ಪೋರ್ಷಳಿಗೆ ಒಂದು ವಿಷಯ ಹೊಳೆಯುತ್ತದೆ. ಆದರೆ ಅದೇನೆಂದು ಅವಳು ಹೇಳಲಿಲ್ಲ. ತನ್ನ ಪತಿ ಬಸ್ಸಾನಿಯೋನ ನಿಷ್ಠೆಯ ಗೆಳೆಯನನ್ನು ಆ ಆಪತ್ತಿನಿಂದ ಪಾರಾಗಿಸಬೇಕೆಂದು ಸಂಕಲ್ಪಿಸಿಕೊಂಡಳು. ಅಂತೆಯೇ ಮನದಲ್ಲಿ ಕಾರ್ಯೋನ್ಮುಖಳಾದಳು. ಬಸ್ಸಾನಿಯೋನು ಆಂಟೋನಿಯೋನನ್ನು ಮಾತಾಡಿಸಲೆಂದು ಹೋದ ನಂತರ ಪೋರ್ಷಳು ತನ್ನ ಮನೆಯನ್ನು ಲೊರೆಂಜೋ ಮತ್ತು ಜೆಸ್ಸಿಕಾ ಇವರ ವಶಕ್ಕೆ ಬಿಟ್ಟು, ಅವರಿಗೆ, "ಶುಭ! ನಾವು ಕಾಣುವವರೆಗೆ ನಮಸ್ಕಾರ," ಎಂದು ಹೇಳಿ ತನ್ನ ಸಖಿ ನೆರಿಸ್ಸಾಳೊಡನೆ ಯಾವುದೆಡೆಗೋ ಹೊರಟಳು.

"--- ಆ ಕಾರ್ಯದತ್ತ ನೋಡು
ತ್ತ ಸ್ಥಾನದಲ್ಲಿ ಆಸಕ್ತಳಾಗಿ ಕೆಲಕಾ
ಲ ಕಳೆಯಲು ಸಂಕಲ್ಪಿಸಿದ್ದೇನೆ."

ಎಂಬುದಾಗಿ ಪೋರ್ಷ ಇತರರೊಡನೆ ಹೇಳುತ್ತಾಳೆ. ಅವಳು ಮತ್ತು ನೆರಿಸ್ಸಾಳು ಹೋದ ನಂತರ ಲೊರೆಂಜೊ, ಜೆಸ್ಸಿಕಾ, ಲಾನ್ಸ್‌ಲಾಟ್ ಗೊಬ್ಬೊ ಇವರೆಲ್ಲ ಪೋರ್ಷಳ ಮನೆಯಲ್ಲಿ ಸರಸಪ್ರಸಂಗಕ್ಕೆ ತೊಡಗಿದರು. ಲಾನ್ಸ್‌ಲಟನು ಲೊರೆಂಜೋನಿಗೆ ಹೀಗನ್ನುವನು."

"ಯೆಹೂದಿಯರನ್ನು ಕ್ರೈಸ್ತರನ್ನಾಗಿ ಮಾಡಿ ಹಂದಿಮಾಂಸದ ಬೆಲೆಯನ್ನು ಏರಿಸಲು ಕಾರಣನಾಗಿದ್ದಾನೆ," ಎಂದು ಹೇಳಿದಾಗ ಲೊರೆಂಜೋನು, "ಆ ನೀಗ್ರೋ ಹೆಂಗಸನ್ನು ಗರ್ಭಿಣಿ ಮಾಡಿದ" ಅವನೊಡನೆ ಹೆಚ್ಚಿನ ಪ್ರಸಂಗಕ್ಕಿಳಿಯಲಾರೆನೆಂದು ಲಾನ್ಸ್‌ಲಟ್‌ಗೆ ಹೇಳುತ್ತಾನೆ.

ನಾಟಕದ ನಾಲ್ಕನೇ ಅಂಕದಲ್ಲಿ ಯೆಹೂದಿ ಷೈಲಾಕನು ತನಗೆ ಆಂಟೋನಿಯೋನಿಂದ ಬರಬೇಕಾದ ದಂಡಕ್ಕೆ ವೆನ್ನಿಸ್ಸಿನ ನ್ಯಾಯಾಲಯದಲ್ಲಿ ವ್ಯಾಜ್ಯ ಹೂಡಿದ್ದನ್ನು ಕುರಿತಾಗಿ ಹೇಳುತ್ತದೆ. ವೆನ್ನಿಸ್ಸಿನ ಪ್ರಭು ಆ ಯೆಹೂದಿ ಷೈಲಾಕನಿಗೆ ವಿಪನ್ನನಾದ ಆಂಟೋನಿಯೋನತ್ತ ದಯೆತೋರು; ಅವನ ಬಗೆ ಮರುಕ, ವಿನಯ ಮತ್ತು ಅವನ ದಾರಿದ್ರ್ಯಕ್ಕೆ ಸಮವಾದ ಅನುತಾಪ

ವನನ್ನು ತೋರಿಸುತ್ತಿಂದು ನ್ಯಾಯಾಲಯದಲ್ಲಿ ಹೇಳುತ್ತಾನೆ:—

"ಮತ ಧರ್ಮವನ್ನೂ, ನಮ್ಮ ಪವಿತ್ರ ದೈವವನ್ನೂ
ನೋಯಿಸಿದ ನನಗಾ ಕರಾರಿನಂತೆ ಹೇಳಿದ ದಂಡ
ವನ್ನೇ ಅವನಿಂದ ಬೇಕೆಂದು ಅರಿಕೆಮಾಡಿರುವೆನು."

ಎಂದು ಶೈಲಾಕನು ಹೇಳುವನು. ನ್ಯಾಯಾಲಯದಲ್ಲಿ ಯೆಹೂದಿಯು ನು ಇದೇ ವಾದವನ್ನು ಮುಂದುವರಿಸಿದ್ದನ್ನು ಕಂಡು, ತನ್ನ ಮಿತ್ರ ನಾದ ಆಂಟೋನಿಯೋನಿಗೆ ಈ ಗತಿ ಬಂತಲ್ಲಾ ಎಂದು ಬಸ್ಸಾನಿಯೋನು!—

"ನೋಡಿರಣ್ಣಾ, ಎದೆಗುಂದ
ದಿರು. ನೀನು ನನಗಾಗಿ ಒಂದು ಹನಿ ರಕ್ತವನ್ನು
ಸುರಿಸುವುದಕ್ಕೆ ಮುನ್ನವೇ ಅವನಿಗೆ ನನ್ನ ಮಾಂ
ಸ, ನೆತ್ತರು, ಮೂಳೆಯನ್ನೆಲ್ಲವನ್ನು ಕೊಡುವೆ---."

ಎಂದು ಹೇಳುವಾಗ, "ನಾನು ಹಿಂಡಿನಲ್ಲಿ ಉಣ್ಣೆಯಿಲ್ಲದ ಬರಡಾಗಲ ಟಗರಿನಂತೆ," ಇರುವೆನೆಂದು ಆಂಟೋನಿಯೋನು ಹೇಳುವನು. ಇಷ್ಟರಲ್ಲಿ ಪ್ಯಾಡುವಾದಿಂದ ಡಾ. ಬೆಲ್ಲಾರಿಯೋ ಮೂಲಕ ಕಳುಹಿಸಲ್ಪಟ್ಟ ತರುಣ ವಕೀಲನೊಬ್ಬನು ತನ್ನ ಕರಣಿಕನೊಡಗೂಡಿ ನ್ಯಾಯಾಲಯಕ್ಕೆ ಬರುತ್ತಿರುವನೆಂಬ ವಾರ್ತೆಯು ಬಂತು.

ಆದಾರು! ಓದುಗರಿಗೆ ಪ್ರತ್ಯೇಕವಾಗಿ ಹೇಳಬೇಕೇ? ಗಂಡು ಉಡಿಗೆಯಲ್ಲಿ ಬಿಟ್ಟನೆ ಒಬ್ಬ ವಕೀಲ ಅಥವಾ ಪ್ರೌಢ ನ್ಯಾಯವಾದಿಯಂತೆ ಬಂದಿರುವ ಆ "ತರುಣ ವಿದ್ವಾಂಸ"ನು ಪೋರ್ಷಿಯಳು. ಆವಳ ಸಖಿ ನೆರಿಸ್ಸಳು ಕರಣಿಕ ವೇಷದಲ್ಲಿ ಕೆಲವು ಕಾನೂನು ಗ್ರಂಥಕೋಶಗಳನ್ನು ಹಿಡಿದು ಬಂದಿದ್ದಳು. ಆದರೆ ಅವರಾರೆಂಬುದು ಆ ನ್ಯಾಯಾಲಯದಲ್ಲಿ ತುಂಬಿದ್ದ ಜನರಾರಿಗೂ ಗೊತ್ತೇ ಇರಲಿಲ್ಲ. ಅವರ ಗಂಡಂದಿರಾದ ಆ ಬಸ್ಸಾನಿಯೊ ಮತ್ತು ಗ್ರಾಷ್ಯಾನೋ ಇವರಿಗೂ ಅವರ ಈ ವೇಷಪಲ್ಲಟತನದ ಗುಟ್ಟನ್ನು ಕಡೆವರೆಗೂ ತಿಳಿಯಲಾಗಲಿಲ್ಲ. ಹೀಗೂ ತರುಣ ವಕೀಲ ಪೋರ್ಷಿಯ ಮತ್ತು ಆವಳ ಕರಣಿಕ ನೆರಿಸ್ಸ, ಇವರು ನ್ಯಾಯಾಲಯದ ಪರಿಗಳಿಗೆ ಹೊಕ್ಕಾಗ ಯೆಹೂದಿ ಶೈಲಾಕನಾದರೋ ಆಂಟೋನಿಯೋನ ಮಾಂಸವನ್ನು ಕೊಯ್ದು ತೆಗೆಯಲು ತನ್ನ ಚೂರಿಯನ್ನು ಮಸೆಯುತ್ತಿದ್ದನು. ಅದೇಕೆ ಹಾಗೆ ಮಸೆಯುವೆ ಎಂದು ಕೇಳಿದಾಗ:—

"ಆ ಭಿಕಾರಿ, ಅವನಿಂದ ಆ ದಂಡವನು ಕೊ
ಯ್ದು ತೆಗೆಯಲಿಕ್ಕಾಗಿ!

ಎಂದನಾತನು. ನ್ಯಾಯಾಲಯದ ಜನರ ಕಣ್ಣೆಲ್ಲ ಆಗ ತಾನೇ ಬಂದ ಆ ತರುಣ ವಕೀಲನತ್ತ ಹರಿದಿದೆ, ಅವನ ಬರುವಿಕೆಯನ್ನು ಕುರಿತಾಗಿ ಡಾ. ಬೆಲ್ಲಾರಿಯೋ ಇವನು ಹಿಂದೆಯೇ ಬರೆದಿದ್ದ ಶಿಫಾರಸು ಪತ್ರದಲ್ಲಿ ಹೀಗೆ ಹೇಳಿದ್ದನು!—

"ರೋಮ್‌ನಿಂದ ಈ ತರುಣ ವಿದ್ವಾಂಸನು ನನ್ನನ್ನು ಕಾಣಲೆಂದು ಬಂದಿದ್ದಾನೆ. ಅವನ ಹೆಸರು ಬಾಲ್ತಜಾರ್ ---- ಅವನ ಜ್ಞಾನ ವೈಖರಿಯನ್ನು ಎಷ್ಟು ಹೇಳಿದರೂ ಸಾಲದು. ಅವನು ಬರೀ ಯುವಕನೆಂಬ ಕಾರಣದಿಂದ ಅವನಿಗೆ ಗೌರವ ಆದರಗಳನ್ನು ತೋರುವುದು ಕಡಿಮೆಯಾಗದಿರಲಿ."

ಹೀಗೆ ಆ ನ್ಯಾಯಾಲಯದಲ್ಲಿ ಪರಿಚಿತನಾದ ತರುಣನು ತನ್ನ ವಕಾಲತ್ತನ್ನು ನಿಷ್ಠೆಯಿಂದ ಕೈಗೊಳ್ಳುವನು. "ಇಲ್ಲಿ ವ್ಯಾಪಾರಿ ಯಾರು, ಯೆಹೂದಿಯು ಯಾರು?" ಎಂದು ಕೇಳುತ್ತಾನೆ. ಈ ವಿಚಿತ್ರ ವ್ಯಾಜ್ಯವನ್ನು ನ್ಯಾಯಾಲಯಕ್ಕೆ ತಂದ ಆ ಯೆಹೂದಿಯನಿಗೆ, "ಅಂಟೋನಿಯೊನಲ್ಲಿ ದಯೆ ತೋರಿಸು; ಕರುಣೆಯನ್ನಿಡು," ಎಂದು ಹೇಳುವನು. ಅನಂತರ "ಅವನು" (ಪ್ರಬುದ್ಧ ವಕೀಲ ಉಡುಪಿನಲ್ಲಿದ್ದ ಪೋರ್ಷ್ಯಳು) ಹೇಳಿದ ಈ ಮಾತುಗಳು ವಿಶ್ವಪ್ರಸಿದ್ಧವಾದವು:—

"ಕರುಣೆ— ಅದರ ಗುಣವು ಬಲವಂತವಲ್ಲ. ಕೆಳಗಿರುವ ನೆಲಕ್ಕೆ ತನಿಮಳೆಯೊಲದು ಜಿನುಗುವುದು ಬಾನಿಂದ! ಅದು ಎರಡು ಬಗೆಯಲ್ಲಿ ಧನ್ಯ. ಕೊಡುವವನಿಗು ಹಿತವೆಂತೋ ಅಂತೆಯೇ ಕೊಂಬುವನಿಗೂ ಹಿತವು. ಶೂರತನಕೂ ಮೀರಿದ ಶೂರತನವು ಅದು. ಸಿಂಹಾಸನದಲ್ಲಿರುವ ಅಧಿಪತಿಗಳಿಗೆ ಮಕುಟವನೂ ಅದು ಮೀರಿಹುದು. ರಾಜದಂಡಗಳು ಬರಿ ಕ್ಷಣಿಕವಹ ಅಧಿಕಾರ ಸಂಕೇತ; ---- ನಿನ್ನ ವಾದವನು ಮೆದುವಾಗಿಸಲೆಂದು ಇಷ್ಟು ಹೇಳಿದೆನಾದರೂ ನೀನದೇ ವಾದವನ್ನು ಮುಂದೊತ್ತಿದರೆ ಈಗಲೇ ಇಲ್ಲಿ ನಿಂತಿರುವ ವರ್ತಕನಿಗೆ ವಿರುದ್ಧ ತೀರ್ಪನ್ನು ಕೊಡಬೇಕಾಗುವುದು."

"ಕಾನೂನನೆ ನಿತ್ಯವೂ ನೀಡಿದರೆ ನಾವು ಯಾರೂ ಸದ್ಗತಿಯನ್ನು ಪಡೆಯೆವು. ದಯಾಗುಣವೇ ಮೇಲು, ಅದನೆ ಬೇಡುವೆವು," ಎಂದು ಆ ತರುಣ ವಕೀಲನು ಯೆಹೂದಿಯನಿಗೆ ಹೇಳುವಾಗ, ಅವನು:

"ನಾನು ಮಾಡಿದ ಪಾಪ ನನ್ನ ತಲೆ ಮೇಲಿರಲಿ.
ನಾನೀಗ ಬೇಡುವುದು ಆ ನ್ಯಾಯವನ್ನು!"

ಎಂದನ್ನುವನು. ಬಸ್ಸಾನಿಯೊನಾದರೋ ತಾನು ಕೊಡಲಿಕ್ಕಿರುವ ಹಣದ ಮೂರರಷ್ಟು, ಹತ್ತರಷ್ಟು ಕೊಡಲು ಮುಂದೆ ಬರುತ್ತಾನೆ. ಯೆಹೂದಿಯನು ಅದನ್ನೆಲ್ಲ ತಿರಸ್ಕರಿಸುವನು. ವಾಗ್ವಾದ ಮುಂದುವರಿಯುತ್ತದೆ. ವೆನಿಸ್‌ನ ಕಾನೂನು ಪ್ರಕಾರ ಶೈಲಾಕನಿಗೆ ನ್ಯಾಯ ಸಲ್ಲಬೇಕು; ಅಂಟೋನಿಯೊನು ತನ್ನ ದೇಹದ

ಸೇರು ಮಾಂಸವನ್ನು ಕತ್ತರಿಸಿಕೊಡಬೇಕು, ಎಂದೆಲ್ಲ ಹೇಳುವಾಗ ಶೈಲಾಕನು ಅವನನ್ನು, "ಶ್ರೇಷ್ಠ ನ್ಯಾಯಾಧೀಶ; ಅತಿಜ್ಞಾನಿ ತರುಣ, ನಿಷ್ಪಕ್ಷಪಾತಿ ಡ್ಯಾನಿಯಲ್" ಎಂದು ನ್ಯಾಯಾಲಯದ ಹೊರಗೆಲ್ಲಾ ಉಬ್ಬರಿಸುವನು. ಅಂತೋನಿಯೋನ ಮಾಂಸವನ್ನು ಸರಿ ಒಂದು ಸೇರಿನಷ್ಟು ತೂಗಲು ತಾನೊಂದು ತ್ರಾಸನ್ನು ತಂದಿದ್ದಾನೆ, ಇನ್ನೇನು, ಮಾಂಸವನ್ನಿರಿದು ತೂಗುವುದೊಂದೇ ಉಳಿದಿರುವುದು ಎಂದಾಗ ಶೈಲಾಕನ ನಿಷ್ಪಕ್ಷಪಾತಿ ಡ್ಯಾನಿಯಲನು, ಆ ತರುಣ ವಕೀಲ-ನ್ಯಾಯಾಧೀಶನು (ಪೋರ್ಷಿಯಳು.) ಅವನಿಗೆ ಮಾರಕನಾಗಿ ತೋರಿಬರುತ್ತಾನೆ. ಅವನು ಹೀಗನ್ನುವನು!—

"-----ನಿನಗಿಂದೇ ಒಂದು ಹನಿ ನೆತ್ತರನ್ನು ಕೊ
ಟ್ಟಿಲ್ಲ. ಇದರಲ್ಲಿ 'ಒಂದು ಸೇರು ಅಡಗು' ಎಂದು
ಮಾತ್ರ ವ್ಯಕ್ತಗೊಳಿಸಿದೆ, ಹಾಗಿರಲು ಅದರಂತೆ ತ
ಕ್ಕಂತೆ ತೆಕೊ. ನಿನ್ನ ಆ ಒಂದು ಸೇರು ಅಡಗ
ನ್ನು ಕತ್ತರಿಸಿ ತೆಗೆಯುವಾಗ ನೀನು ಆ ಕ್ರೈಸ್ತನ ರ
ಕ್ತದ ಒಂದೇ ಒಂದು ಹನಿಯನ್ನು ಸುರಿಸಿದರೆ ನಿ
ನ್ನ ಭೂಮಿಯು ಸರ್ವ ಸಂಪತ್ತು ಆಸ್ತಿಗಳು ವೆನ್ನಿಸ್
ನ ಶಾಸನದ ಪ್ರಕಾರ ರಾಜ್ಯವಶವಾಗುವುವು---."

ಈ "ನ್ಯಾಯ"ವನ್ನು ಪೋರ್ಷಿಯಳು ಸಾರಿದಾಗ ಇಡೀ ನ್ಯಾಯಾಲಯವೇ ಚಕಿತಗೊಂಡಿತು. ಹರ್ಷೋದ್ಗಾರವನ್ನು ಕರೆಯುತ್ತ. ಶೈಲಾಕನ ಮುಖ ಇಳಿಯುತ್ತ. ಇನ್ನೀಗ ಅವನಿಂದ ನಿಷ್ಪಕ್ಷಪಾತಿ ಡ್ಯಾನಿಯಲ್, ತರುಣ ವಿದ್ವಾಂಸ, ನ್ಯಾಯತಜ್ಞ ಎಂದೆಲ್ಲ ಹೇಳಿದ್ದನ್ನೇ ಈಗ ಗ್ರಾಷಿಯಾನೊ ನ್ಯಾಯಾಲಯದಲ್ಲಿ ಬಲ್ಲ ವಿಜಯದಿ ಸಾರಿದನು. ಆ "ಪ್ರಾಜ್ಞ ನ್ಯಾಯಾಧೀಶನು" ಮುಂದುವರಿದು ವೆನ್ನಿಸಿನ ಕಾನೂನು ಎಂತೆಂದು ಹೇಳುತ್ತಾ;—

" ಕಾನೂನು ಅಂತಿರಲು ಅಡಗುವನು ಕತ್ತರಿಸಲಿಂ
ದಕೊ ಸಿದ್ಧನಾಗು. ರಕ್ತವನು ಸುರಿಸದಿರು. ಸರಿ,
ಒಂದು ಸೇರು ಮಾಂಸವನೆ ತೆಕೊ."

ಈ ರೀತಿ ಹೇಳುತ್ತಾ ಮುಂದುವರಿದ, ಹಾಗೆ ತೆಗೆಯುವ ಮಾಂಸ:—

"----ಒಂದಿಷ್ಟು ಕಡಿ
ಮೆ ಅಥವಾ ಒಂದು ಕಣದಷ್ಟು ಹೆಚ್ಚಾಗಿ ಬಾ
ರದು. ಒಂದು ಸೇರು ಮಾಂಸವದು ಮಾತ್ರವೆ!
ತೂಕದಲಿ ಕಿರಿತೊಲದ ಒಂದಿಪ್ಪತ್ತರಲಿ
ಒಂದು ಪಾಲು ಹೆಚ್ಚು ಅಥವಾ ಹಗುರವಾದರೆ
ತ್ರಾಸುವದು ಕೂದಲಿನ ಒಂದು ಎಳೆಯಷ್ಟು ತ
ಪ್ಪಿದರೆ ನೀನ್ ಸಾಯುವುದಲದೆ ನಿನ್ನ ಆಸ್ತಿ ಸ
ರ್ವವೂ ರಾಜವಶವಾಗುವುದು.

ನಿಜಕ್ಕೂ ಈ ತರುಣ ನ್ಯಾಯ ತಜ್ಞನು ಎರಡನೇ ಡ್ಯಾನಿಯಲ್‌ನಂತೆ ಗ್ರ್ಯಾಷಿಯಾನೋನು ಜಯಘೋಷ ಮೊಳಗಿಸಿದನು, ಆ ತರುಣ ವಕೀಲನಾದ ರೋಮ ಹೀಗೆ ಕಾನೂನನ್ನು ಹೇಳುತ್ತಾ ಕಡೆಗೆ ಆ ಯಹೂದಿ ಷೈಲಾಕನು ಆಂಟೋನಿಯೋನನ್ನು ಕೊಲ್ಲಲಿಕ್ಕೆ ಈ ಹಂಚಿಕೆಯನ್ನು ಹೂಡಿದನೆಂಬ ಪ್ರತಿಯೊಬ್ಬರಿಗೂ ಹೇಳುತ್ತಾ ಹೋದನು, "ನೀನು ಪ್ರತಿವಾದಿಯ ಪ್ರಾಣ ಹಾನಿ ತೆಗೆದೆ," ಹೀಗೆ ನಿನ್ನ ಕರಾರನ್ನು ತಿದ್ದಿದರು ಕೊಂಡು ಶಿಕ್ಷೆ ದೊರೆತಿದ್ದೀಯೆಂದು ಷೈಲಾಕನಿಗೆ ಹೇಳಲಾಯಿತು.

ಯಹೂದಿಯನಿಗೆ ಬೇರೆ ಉಪಾಯವಿಲ್ಲದಾಯಿತು, "ನನ್ನ ಮೂಲಧನವನ್ನು ಕೊಟ್ಟುಬಿಡಿ, ನನ್ನನ್ನು ಕಳುಹಿಸಿಬಿಡಿ," ಎಂದು ಕೇಳಿಕೊಂಡನು. ಆಗ ಆ ನ್ಯಾಯತಜ್ಞನು, "ಇಲ್ಲ, ನೀನು ಆ ಧನವನ್ನು ಇಡೀ ನ್ಯಾಯಾಸ್ಥಾನದ ಎದುರಿಗೇನೇ ತಿರಸ್ಕರಿಸಿರುವೆ, ನಿನಗೀಗ ಏನೂ ಇಲ್ಲದು, ನಿನ್ನ ಆಸ್ತಿಯು ಅರ್ಧ ವೆನ್ನಿಸ್‌ನ ಕಾನೂನಿನಂತೆ ರಾಜ್ಯಕ್ಕೆ ಉಳಿದ ಅರ್ಧ ಆಂಟೋನಿಯೋನಿಗೂ ಹೋಗುವುದು, ಎಂದೆಲ್ಲ ಹೇಳಿ ಆ ಯಹೂದಿ ಷೈಲಾಕನನ್ನು ಅರ್ಧಜೀವ ತೆಗೆದಂತಾಗಿಸಿ ಉಳಿಸಿದ ಆ ತರುಣ ವಕೀಲನು ಯಾರು? ಆಂಟೋನಿಯೋನ ಮಿತ್ರ ಬಸ್ಸಾನಿಯೋನ ಹೆಂಡತಿ, ಆಗ ತಾನೇ ಮದುವೆಯಾದ ಆ ಎಳೆಗನ್ನೆ, ಶ್ರೀಮಂತೆ ಮೇಧಾವಿ ಹೆಣ್ಣು, ಪೋರ್ಷ್ಯ!

ಕಡೆಗಂತೂ ಆ ಷೈಲಾಕನು ತೋರಿಸದ ಕರುಣೆಯನ್ನು ಆ ಪ್ರತಿವಾದಿ ವರ್ತಕ ಆಂಟೋನಿಯೋನು ಅವನಿಗೆ ತೋರಿಸಿದನಂತರ ಅವನನ್ನು ನ್ಯಾಯಾಲಯದಿಂದ ಹೊರಕಳುಹಿಸಿದರು. ಅವನಿಗೆ ಸೇರುವ ಅವನ ಹಣದ ಸಂಪತ್ತು ಪಾಲು ಅವನ ಮಗಳು ಜೆಸ್ಸಿಕಾಳಿಗೆ ಮತ್ತು ಅವನ ಪತಿ ಲೊರೆನ್ಜೋಗೆ, ಆ ಯಹೂದಿಯನ ಮರಣಾನಂತರ ಹೋಗುವಂತೆ ನಿರ್ಧರಿಸಿದರು, ಅದಕ್ಕೆಲ್ಲ ಷೈಲಾಕ್‌ನಿಂದ ಆಗಲೇ ಕರಾರು ಬರೆಸಿಕೊಳ್ಳುವಂತೆ ಹೇಳಲಾಯಿತು, ನ್ಯಾಯಾಸ್ಥಾನದ ಆ ದಿನದ ಕಾರ್ಯಕ್ರಮವಂತೂ ಮುಗಿಯಿತು, ಎಲ್ಲರೂ ಅವರವರ ಮನೆಗಳಿಗೆ ತೆರಳುವ ಮುನ್ನ ಬಸ್ಸಾನಿಯೋ ಮತ್ತು ಗ್ರ್ಯಾಷಿಯಾನೋ ಇವರು ಆ ತರುಣ ವಕೀಲ ಮತ್ತು ಅವನ ಕಾರಕೂನನನ್ನು ಮಾತಾಡಿಸಿದರು, ತಾವು ಮಾಡಿದ ಸೇವೆಗೆ ಬೇರೇನು ಬಹುಮಾನ ಬೇಡವೆಂದೂ ತಮ್ಮ ಕೈಯಲ್ಲಿರುವ ಆ ಉಂಗುರಗಳೇ ಸಾಕೆಂದೂ ಬಹು ನಿರ್ಲಕ್ಷ್ಯ ಧ್ವನಿಯಲ್ಲಿ ಆ ಇಬ್ಬರು "ತರುಣರು" ಹೇಳಿಕೊಂಡರು, ಬಸ್ಸಾನಿಯೋ ಮತ್ತು ಗ್ರ್ಯಾಷಿಯಾನೋ ಇವರು ನಿರ್ವಾಹವಿಲ್ಲದೆ ಆ ಉಂಗುರಗಳನ್ನು ತಮ್ಮ ಕೈಯಿಂದ ಬಿಚ್ಚಿಕೊಟ್ಟರು, ಕಡೆಗಂತೂ ಪೋರ್ಷ್ಯಳು ನೆರಿಸ್ಸಳೊಡನೆ ತಮ್ಮ ಬೆಲ್ಮಾಂಟ್ ಮನೆಗೆ ಹಿಂದಿರುಗಿದನಂತರ ಅಲ್ಲಿಗೆ ಅನಂತರ ಬಂದ ಬಸ್ಸಾನಿಯೋ

ಮತ್ತು ಗ್ರಾಷ್ಯಾನೋ ಇವರನ್ನು ತಮ್ಮ ಉಂಗುರಗಳೆಲ್ಲಿ ಎಂದು ಕೇಳುತ್ತಾರೆ. ತಾವು ಅವರಿಗೆ ವಿವಾಹದ ವೇಳೆಗೆ ಕೊಟ್ಟಿದ್ದ ಆ ಉಂಗುರಗಳನ್ನು ಅಲ್ಲಿ ಇತರ ಹೆಂಗಸರಿಗೆ ಕೊಟ್ಟು ತಮ್ಮ ವೈವಾಹಿಕ ವಿಧಿಯನ್ನೇ ಪೋಲುಗೆಡಿಸಿದರೆಂದೆಲ್ಲ ಆ ತರುಣಿಯರು ಹುಸಿ; ಹಂದಿಸ ತಮ್ಮ ನಟನೆಯನ್ನು ಬೇರೊಂದು ರೀತಿಯಲ್ಲಿ ಪ್ರದರ್ಶಿಸುತ್ತಾರೆ. ಆಗ ಬಸ್ಸಾನಿಯೋನೊಡನೆಯೇ ಬಂದಿದ್ದ ಆಂಟೋನಿಯೋನು ಎದ್ದು ಹಾದು ಹೀಗೆನ್ನುತ್ತಾನೆ!—

"ನಿನ್ನ ಪತಿಯು ಉಂಗುರವನ್ನು ತೆಗೆದುಕೊಂಡವ
ನಲ್ಲದೆಯೆ ಹೋಗಿದ್ದರೆ ಆ ವ್ಯವಹಾರವು ಬ
ಹು ದುರಂತಕರವಾಗಿ ಪರಿಣಮಿಸುತ್ತಿತ್ತು. ಇ
ನ್ನೊಮ್ಮೆ ನಿನ್ನ ಆತ್ಮವನ್ನೆ ಪಂಥಕೊಡಬೇಕಾ
ದರೂ ನಾನು ಅದಕ್ಕೆ ಸಿದ್ಧನಿರುವೆ---."

ಆಂಟೋನಿಯೋನು ಹೀಗೆ ಎಲ್ಲ ವಿಷಯಗಳನ್ನು ಹೇಳಿದನಂತರ ನಡೆದ ವಿಷಯವೇನೆಂಬುದಾಗಿ ಬಸ್ಸಾನಿಯೊ ಮತ್ತು ಗ್ರಾಷ್ಯಾನೋ ಇವರಿಗೆ ತಿಳಿಯುತ್ತದೆ. ಪೋರ್ಷ್ಯ ಮತ್ತು ನೆರಿಸ್ಸ ಇವರು ಆ ವೇಳೆ ಸ್ವಲ್ಪ ತಮ್ಮ ನಟನಾ ಸಾಮರ್ಥ್ಯವನ್ನು ತೋರಿಸಿ ಆ ಉಂಗುರಗಳನ್ನು ತಮ್ಮ ಗಂಡಂದಿರಿಗೆ ಕೊಟ್ಟರು:—

"ಇದನ್ನವನಿಗೆ ಕೊಡು. ಕಳೆದುಕೊಂಡುದನ್ನಿಟ್ಟು
ಕೊಂಡಿದ್ದಕ್ಕಿಂತಲೂ ಎಚ್ಚರದಲ್ಲಿ ಇದನ್ನು
ಇಟ್ಟುಕೊಳ್ಳುವಂತೆ ಅವನಿಗೆ ಹೇಳು!

ಎಂದೆನ್ನುತ್ತಾ ಪೋರ್ಷ್ಯಳು ಆಂಟೋನಿಯೋನಿಗೆ ಹೇಳಿ ಆ ಉಂಗುರವನ್ನು ತನ್ನ ಪತಿಗೆ ಕೊಡುತ್ತಾಳೆ. ಇವೆಲ್ಲ ನಿಜಕ್ಕೂ ಆಶ್ಚರ್ಯವನ್ನುಂಟುಮಾಡುವ ಘಟನೆಗಳಂತೆ ನಡೆದುವು:—

""ಏನಿದು ? ಇಂಥ ದಸ್ತಿವೇಗಕ್ಕೆ ದಾ
ತ್ರಾಣಗಳ ಪೇಳದೆ ನಾವೇನು ಜಾರೆಯರ ಗಂ
ಡಂದಿರಾದೆವೆ ?

ಎಂಬುದಾಗಿ ಗ್ರಾಷ್ಯಾನೋನು ಹಿಂದಕ್ಕಿಟ್ಟು ಸಿಟ್ಟಿನಿಂದ ಹೇಳುತ್ತಾನೆ, ಹೀಗೂ ಪೋರ್ಷ್ಯಳು ಡಾ. ಬೆಲ್ಲಾರಿಯೋನು ಪ್ಯಾಡುವಾದಿಂದ ಬರೆದ ಹಿಂದು ಪತ್ರವನ್ನು ಅವರೆಲ್ಲರ ಮುಂದಿರುತ್ತಾಳೆ:—

"ಆ ಪತ್ರ ಕಡೆಗಾಗಿ ಓದಬೇಕು. ನೀವೆಲ್ಲ
ಆಶ್ಚರ್ಯಕಕ್ಕೊಳಗಾಗಿರುವಿರಿ ---ಪೋರ್ಷ್ಯಳೇ ಆ ವಿದ್ವಾಂ
ಸ ನ್ಯಾಯಮೂರ್ತಿಯೆಂಬುದನ್ನು ನೀವು ತಿಳಿಯುವಿರಿ,
ನೆರಿಸ್ಸಳೇ ಅವಳ ಗುಮಾಸ್ತೆ----ಆಂಟೋನಿಯೊ
ನೆ, ನಿನಗೆ ಸ್ವಾಗತವಿದೆ. ಅಲ್ಲದೆ ನಿನಗೊಂದು
ಸಮಾಚಾರವು ನನ್ನಲ್ಲಿ ಕಾದಿರುತ್ತಿದೆ. ಬೇಗನೆ

ಈ ಲಕೋಟೆಯನ್ನು ತೆರೆದು ನೋಡು. ಬಾರೀ ಸ
ರಕುಗಳನ್ನು ತುಂಬಿದ ನಿನ್ನ ಹಡಗುಗಳಲ್ಲಿ
ಮೂರು ಬಂದರಿನಲ್ಲಿ ಬಂದಿಳಿದಿವೆಯೆಂದು ಅ
ದರಿಂದ ತಿಳಿಯುವುದು -----."

ಇವೆಲ್ಲವನ್ನೂ ನೋಡಿ ಆಶ್ಚರ್ಯಚಕಿತನಾದ ಆಂಟೋನಿಯೋನು, "ನಾನು ಮೂಕನಾಗಿರುವೆನು," ಎಂದೆನ್ನುತ್ತಾನೆ. ಅಲ್ಲಿಯೇ ಇದ್ದ ಬಸಾನಿಯೊ ಮತ್ತು ಗ್ರಾಷ್ಯಾನೊ ಇವರಂತೂ ಸ್ತಬ್ಧರಾಗಿ ನಿಂತರು. ಬಸಾನಿಯೋನು,

"ನನಗೆ ತಿಳಿಯದೆಯೇ ಇದ್ದ ಆ ವಿದ್ವಾಂಸ ನ್ಯಾ
ಯಶಾಸ್ತ್ರಜ್ಞನು ನೀನೇಯೇ?"

ಎಂದು ಪೋರ್ಷಿಯಳನ್ನು ಕೇಳಲು, ಗ್ರಾಷ್ಯಾನೋನು! —

"ನನ್ನನ್ನು ಒಬ್ಬ ಜಾರಿಯ ಗಂಡನೆಂದು ಕರೆ
ಯುತ್ತಿದ್ದ ಆ ಕರ್ಣಿಕ ನೀನೇಯೇ?

ಎಂದು ನೆರಿಸ್ಸಳನ್ನು ಪ್ರಶ್ನಿಸುತ್ತಾನೆ, ಆ ರೀತಿಯಾಗಿ ಎಲ್ಲ ಸರಿಹೋದಂತಾಯಿತು. ಆಂಟೋನಿಯೋನಂತು ತನ್ನ ಹಡಗುಗಳು ಸುರಕ್ಷಿತವಾಗಿ ಬಂದರಿಗೆ ತಲುಪಿವೆಯೆಂದು ಹಿಗ್ಗಿದನು. ಲೋರೆನ್ಸೋ ಮತ್ತು ಜೆಸ್ಸಿಕಾ ಇವರೂ ಆ ಪ್ರಸಂಗದ ಕೊನೆಯ ಪ್ರಕರಣವನ್ನು ನೋಡುತ್ತಾ ನಿಂತಿದ್ದು ತಮಗೂ ಯಹೂದಿಯನ ಪಾಲಿಗೆ ಹೋದ ಆ ಆಸ್ತಿಯಲ್ಲಿ ಬಂದ ಪಾಲು ದೊರೆಯುವುದೆಂದು ಸಂತೋಷಿಸಿದರು. ಷೈಲಾಕನೊಬ್ಬನನ್ನು ಬಿಟ್ಟು ಇವರೆಲ್ಲರೂ ಹರ್ಷೋದ್ಗಾರಗಳಿಂದಲೇ ಆ ರಾತ್ರಿಯನ್ನು ಕಳೆದರು, ಜಗತ್ತಿನ ಪ್ರಸಿದ್ಧ ನಾಟಕಗಳಲ್ಲೊಂದು ಈ ರೀತಿಯಾಗಿ ಕೊನೆಗೊಂಡಿತು. ಹಿಂದಿನ ಯುರೋಪಿಯನ್ ಕವಿಗಳು, ಅದರಲ್ಲೂ ನಾಟಕಗಾರ ವಿಲ್ಲಿಯಮ್ ಷೇಕ್ಸ್‌ಪಿಯರನ ನಾಟ್ಯಕಲಾ ಸಾಮರ್ಥ್ಯಕ್ಕೆ ಈ "ವೆನ್ನಿಸ್‌ನ ವರ್ತಕ" ನಾಟಕವು ಕಳಶವಿಟ್ಟಂತಾಗಿದೆಯೆನ್ನದೆ ಸಾಧ್ಯವಿಲ್ಲ!

"--- ಆದರೆ ಕರುಣೆಯು ರಾಜದಂ
ಡದ ಪ್ರಾಬಲ್ಯವನೆ ಮೀರಿಹುದು. ರಾಜವರ
ರ ಹೃತ್ಸಿಂಹಾಸನಗಳಲಿ ಮಿಡಿಯುವುದಾ ಕರುಣೆಯು!
ದೈವವೆಂದೆನಿಸಿದೆ ಕರುಣೆ, ದಯೆ; ಯಾವ ರಾ
ಜನೀತಿಯಲಿ ಕೃಪೆಯು ಬೆರೆತಿರ್ಪುದು, ಇಹದೆ
ಅದು ತಾಂಡವವಾಡುವ ಅದೃಶ್ಯ ಶಕ್ತಿಯೊಲು
ತೋರುವುದು ----!"

ಟಿಪ್ಪಣಿಗಳು.

Argosies — ಕ್ರಿ.ಶ. 16ನೇ ಶತಮಾನದಲ್ಲಿ ಯೂರೋಪಿನ ವ್ಯಾಪಾರೀ ಜಹಜುಗಳನ್ನು ಹೀಗೆ ಕರೆಯುತ್ತಿದ್ದರು, ಏಡ್ರಿಯಾಟಿಕ್ ಸಮುದ್ರ ಕರಾವಳಿ ಬಂದರುಗಳಲ್ಲಿ ತಂಗುತ್ತಿದ್ದ ಹಡಗುಗಳನ್ನು ships of Regusa ಎಂದನ್ನುತ್ತಿದ್ದರು,

"Andrew" — ಒಂದು ಹಡಗಿನ ಹೆಸರು. ಕ್ರಿ.ಶ. 1590ರಲ್ಲಿ ಸ್ಪೇಯಿನ್‌ಗೆ ದಂಡೆತ್ತಿ ಹೋದ ಹಡಗುಗಳಲ್ಲಿ ಇದೊಂದು,

Janus the two-headed — ರೋಮನ್ ಪುರಾಣಗಳಲ್ಲಿ ಹೇಳಲಾದ ಎರಡು ತಲೆಗಳಿರುವ ದೇವತೆ.

Nestor — ಗ್ರೀಕ್‌ನ ಟ್ರಾಯ್ ಯುದ್ಧದಲ್ಲಿ ಭಾಗವಹಿಸಿದ ಮಹಾ ಬುದ್ಧಿವಂತ ಹಾಗೂ ವೀರಯೋಧ.

Alabaster — ಸತ್ತವರ ಹೆಸರು ಇತ್ಯಾದಿ ಬರೆಯಲು ಉಪಯೋಗಿಸುವ ಸ್ಫಟಿಕ ಶಿಲೆ.

Sir Oracle — ಮಹಾಸಂತರ, ಸಮಾಧಿ ಪುರುಷರ ಪರಿಪಕ್ವವಾದ ಭವಿಷ್ಯನುಡಿಗಳು, ಹಿತವಾಣಿಗಳು.

Colchos Strond — ಗ್ರೀಕ್ ಪುರಾಣದ ಪ್ರಕಾರ ಕೋಲ್ಕಾಸ್ ತೀರದಲ್ಲಿ ಜೇಸನ್‌ಗೆ ಚಿನ್ನದ ಉಣ್ಣೆಯು ದೊರೆಯುತ್ತದೆ,

Weeping Philosopher — ಎಫೆಸ್ಸಸ್‌ನ (Ephesus) ಹಿರಾಕ್ಲಿಟಸ್ ಇವನು ಮಾನವ ಸಮಾಜದ ದುರ್ದೈವ ಪರಿಸ್ಥಿತಿಯನ್ನು ನೋಡಿ ಅತ್ತನೆಂಬುದಾಗಿ ಕಥೆ.

Sibylla — ಅಪೊಲ್ಲೋದ ಭವಿಷ್ಯವಾದಿ Sibyl ಇವಳಿಗೆ ಎಷ್ಟು ಮರಳು ಕಣಗಳು ಭೂಮಿಯಲ್ಲಿವೆಯೋ ಅಷ್ಟು ವರ್ಷಗಳ ಆಯುಷ್ಯವನ್ನು ದೇವತೆಗಳು ಇತ್ತರಂತೆ.

Diana — ಗ್ರೀಕ್ ಪುರಾಣಗಳಲ್ಲಿ ಹೇಳಲಾದ ಆಜೀವಕಳಾದ ದೇವತಾ ಕನ್ನಿಕೆ; (Moon-goddess.)

Ducats — ಒಂದು ಡುಕೆಟ್‌ಗೆ ಇಂದಿನ ರೂ. 120 ಬೆಲೆ ಆಗಬಹುದು. ಇಲ್ಲಿ ಡುಕೆಟನ್ನು ವರಹ ಎಂದು ಹೇಳಲಾಗಿದೆ,

Rialto — ವೆನ್ನಿಸ್ ನಗರದ ವ್ಯಾಪಾರ ಬೀದಿಯ ಮಾರುಕಟ್ಟೆ.

Jacob — ಯೆಹೂದೀ ಪ್ರವರ್ತಕರಲ್ಲೊಬ್ಬ.

Laban — ಇವನ ಚಿಕ್ಕಪ್ಪನೆಂದೆನ್ನಲಾದ ಕುರಿ ಮೇಯಿಸುತ್ತಿದ್ದವನು.

Phoebus — ಗ್ರೀಕ್ ದೇವತೆ ಸೂರ್ಯ.

Sophy — ಪರ್ಷಿಯಾದ ಒಬ್ಬ ರಾಜ.

Sulyman — ಅಂದಿನ ಟರ್ಕಿಯ ಒಬ್ಬ ಸುಲ್ತಾನ.

Hercules — ಯುರೋಪಿನ ಪುರಾಣಗಳಲ್ಲಿ ಇವನು ನಮ್ಮ ಭೀಮಸೇನನು ಇದ್ದಂತೆ; ಒಬ್ಬ ವೀರ.

Lichas — ಹರ್ಕ್ಯುಲೀಸನ ಸೇವಕ.
Alcides — ಹರ್ಕ್ಯುಲೀಸನ ಇನ್ನೊಂದು ಹೆಸರು.
Hagar — ಜಾತಿಯಿಂದ ಓಡಿಸಲ್ಪಟ್ಟವನೆಂಬ ಅರ್ಥದಲ್ಲಿ ಹೇಳುವ ಶಬ್ದ.
Venus' pigeons — ಶುಕ್ರಗ್ರಹ ರಥವನ್ನು ಎಳೆಯುವ ಎಂದೆನ್ನಲಾದ ಪಾರಿವಾಳಗಳು.
Hyrcanian deserts — ಕ್ಯಾಸ್ಪಿಯನ್ ಸಮುದ್ರದ ದಕ್ಷಿಣಕ್ಕಿರುವ ಮರಳುಭೂಮಿ.
Rhenish — ಫ್ರಾನ್ಸಿನ ರೈನ್ ನದಿ ಪ್ರದೇಶದಲ್ಲಿ ಉತ್ಪಾದಿತವಾಗುವ ಬಿಳಿ ದ್ರಾಕ್ಷಾರಸ.
Dardanian — ಟ್ರಾಯ್ ಅಥವಾ ಟ್ರೋಜನ್ — ಎಂದರ್ಥ;
Scylla — ನಾವಿಕರಿಗೆ ಭಯವನ್ನುಂಟು ಮಾಡುವ ಸಾಗರದ ಬಂಡೆಕಲ್ಲು.
Charybdis — ಅದೇ ರೀತಿ ಅಪಾಯಕಾರಕ ನೀರುಸುಳಿ — ಮೆಸ್ಸಿನಾ ಜಲಸಂಧಿಯಲ್ಲಿ.
Daniel — ಕ್ರೈಸ್ತ ಕಥೆಯ ಪ್ರಕಾರ ಗಡೀಪಾರಿಗಳಾಗಿದ್ದ ಹೀಬ್ರಿಯರನ್ನು ವಿಚಾರಿಸಿ ತೀರ್ಪನ್ನೀಯುವ ನ್ಯಾಯಪತಿ!
Barabbas — ಪಿಲಾತನ ಮುಂದೆ ಶಿಕ್ಷೆಗೊಳಗಾದ ಒಬ್ಬ ಚೋರ.
Troilus — ಟ್ರಾಯ್‌ನ ರಾಜ ಪ್ರಿಯಾಮ್ ಇವನ ಒಬ್ಬ ಮಗ.
Thisbe — ಓವಿಡ್‌ಗೆ ಸಂಬಂಧಿಸಿದ ದುರಂತ ಕಥೆಯಲ್ಲಿ ನಾಯಕಿ ಪಾತ್ರವನ್ನು ವಹಿಸಿದ್ದ ಓರ್ವ ಯುವತಿ.
Dido — ಗ್ರೀಕ್ ಪುರಾಣದಂತೆ ಕಾರ್ಥೇಜಿನ ರಾಣಿ; ಏನಿಯಸ್ ಇವನನ್ನು ಮೋಹಿಸಿ ಅನಂತರ ಅವನಿಂದ ಬೀಳ್ಕೊಡಲ್ಪಟ್ಟಳು.
Medea — ಬಹು ಸತ್ವವುಳ್ಳ ಮೂಲಿಕೆಗಳನ್ನು ಹುಡುಕಿ ತಂದು ವೃದ್ಧ ಈಸನ್ ಇವನನ್ನು ಬದುಕಿಸಿದವಳು.
Orpheus — ಪ್ರಕೃತಿಯನ್ನೇ ಒಲಿಸಬಲ್ಲ ಅದ್ಭುತ ಶಕ್ತಿ, ಧ್ವನಿ, ರಾಗದಿಂದ ಕೂಡಿದ್ದ ಶ್ರೇಷ್ಠ ಹಾಡುಗಾರ.
Erebus — ಗ್ರೀಕ್ ಪುರಾಣದ ಪ್ರಕಾರ ಪಾತಾಳ ಪ್ರದೇಶ.
Endymion — ಚಂದ್ರ, ಅಥವಾ ಸೆಲಿನ್ ದೇವತೆಯ ಇನ್ನೊಂದು ಹೆಸರು.
Argus — ಗ್ರೀಕ್ ಪುರಾಣದ ಪ್ರಕಾರ ನೂರು ಕಣ್ಣುಗಳಿಂದ ಕೂಡಿದ ಒಬ್ಬ ರಾಕ್ಷಸ.

ವೆನ್ನಿಸಿನ ವರ್ತಕ.

ಪಾತ್ರವರ್ಗ.

ಮಹಾಪ್ರಭು:- ವೆನ್ನಿಸಿನ ಅಧಿಕಾರಿ. (ಡ್ಯೂಕ್)
ಮೊರೊಕ್ಕೋದ ರಾಜಕುಮಾರ— }
ಆರಾಗನ್‌ನ ರಾಜಕುಮಾರ— } ಕನ್ಯಾರ್ಥಿಗಳು.
ಅಂಟೋನಿಯೋ — ವೆನ್ನಿಸಿನ ಒಬ್ಬ ವರ್ತಕನು.
ಬಸ್ಸಾನಿಯೋ — ಅವನ ಮಿತ್ರ -
ಸೊಲಾನಿಯೋ — }
ಸಲೆರಿನೋ — }
ಗ್ರ್ಯಾಷಿಯಾನೋ — } ಅಂಟೋನಿಯೋ ಮತ್ತು ಬಸ್ಸಾನಿಯೋ - ಇವರ ಮಿತ್ರರು.
ಲೊರೆನ್ಸೋ — ಜೆಸ್ಸಿಕಾಳನ್ನು ಮದುವೆಯಾಗುವವನು.
ಶೈಲಾಕ್ — ಯಹೂದಿ ವ್ಯಾಪಾರಿ
ಟ್ಯೂಬಲ್ — ಶೈಲಾಕನ ಮಿತ್ರ, ಯಹೂದಿ.
ಲಾನ್ಸಲಟ್ ಗೊಬೊ — ಶೈಲಾಕನ ಸೇವೆಯಲ್ಲಿ (ಒಬ್ಬ ಹಾಸ್ಯಗಾರ)
ಹಿರಿಯ ಗೊಬೊ — ಲಾನ್ಸಲಟನ ತಂದೆ.
ಲಿಯನಾರ್ಡೊ — ಬಸ್ಸಾನಿಯೋನ ಸೇವಕ.
ಬಾಲ್ತಸ್ಸರ್ — }
ಸ್ಟೆಫಾನೊ — } ಪೋರ್ಷಿಯಳಲ್ಲಿ ಕೆಲಸಗಾರರು.
ಪೋರ್ಷಿಯ — ಶ್ರೀಮಂತೆ ಕನ್ನಿಕೆ, [illegible].
ನೆರಿಸ್ಸಾ — ಪೋರ್ಷಿಯಳ ಸಖಿ.
ಜೆಸ್ಸಿಕಾ — ಶೈಲಾಕನ ಮಗಳು.

ಇವರಲ್ಲದೆ ಹಿರಿಯರು, ನೌಕರರು,
ಸೆರೆಮನೆ ಅಧಿಕಾರಿ, ಕಾವಲುಗಾರರೂ ಮತ್ತಿತರರು.

ರಂಗಸ್ಥಳ:- ವೆನ್ನಿಸ್ ಮತ್ತು ಬೆಲ್ಮಂಟ್,

ವೆನ್ನಿಸ್‌ನ ವರ್ತಕ.

ಅಂಕ ೧

ದೃಶ್ಯ ೧ – ವೆನ್ನಿಸ್‌ನ ಒಂದು ಬೀದಿ.

ಪ್ರವೇಶ – ಆಂಟೋನಿಯೊ, ಸಲೇರಿಯೊ ಮತ್ತು ಸೊಲೇನಿಯೊ.

ಆಂಟೋನಿಯೊ:— ಇಷ್ಟು ಬೇಸರದಲ್ಲಿ ನಾನೇಕಿರುವೆನೆಂದು ನಿಜಕ್ಕೂ ತಿಳಿಯೆನು. ನನಗಿದು ಕಳವಳವನ್ನುಂಟು ಮಾಡಿದೆ. ನಿಮಗೂ ಇದು ಬೇಸರವನ್ನಿತ್ತಿದೆಯೆಂದೆನ್ನುವೆ. ನನಗೆಂತಹುದು ತಾಗಿತು? ಇದನೆಲ್ಲಿ ಕಂಡಿಹೆ? ಇದಕೆಂತು ಸಿಲುಗಾದೆ? ಇದ್ಯಾತರದ ಬೇನೆ? ಇದರ ಮೂಲವು ಏನು ಎಂಬುದನು ನಾನು ತಿಳಿಯುವುದವಶ್ಯವಿದೆ. ಈ ಬೇಸರ ಬೇಡದ ವ್ಯಾಕುಲತೆಯಿಂದ ನಾನು ನನ್ನನೆ ತಿಳಿಯಲಿಕೆ ಕಷ್ಟವಾಗಿದೆ.

ಸಲೇರಿಯೊ:— ನಿನ್ನ ಮನವು ಸಾಗರದಲ್ಲಿ ಬಹು ಬಿರುಸಾಗಿ ತೂಗುತಿದೆ. ಠೀವಿಯಿಂದೆಸೆವ ಹಾಯಿಯೊಡೆ ನಿನ್ನ ವಾಣಿಜ್ಯ ನೌಕೆಗಳಟ್ಟಹಾಸದಲಿ ತೇಲ್ಗಡಲಲ್ಲಿ ವೈಭವದ ತೇರಿನೊಲು ಎಸೆಯುತಿರಲವು ಅಲ್ಲಿ ಜಿನುಗಿದ ಕಿಕ್ಕಿರಿಯೊಲಿಹ ಹಾಯಿಗಳೊ ಸಿಡಿಯುತ ತೇಲುತಿರೆ ಮಣಿದು ಗೌರವವ ಸಲ್ಲಿಸುತ ಹಾಯುತಿಹ ಆ ಚಿಕ್ಕ ದೋಣಿಗಳನವು ಲಕ್ಷಿಸದೆಯೆ ಹಾಯುತಿವೆ.

ಸೊಲೇನಿಯೊ:— ಆಯ್ಯ, ನಾನನ್ನುವುದನ್ನು ನಂಬು. ನಾನು ಅಂತಹ ವ್ಯವಹಾರಕ್ಕಿಳಿದಿದ್ದರೆ ನನ್ನ ಅಭಿಮಾನದ ಬಹುಪಾಲು ಆ ಸಾಗರಾಂತ ವ್ಯಾಪಾರದಲಿ ಊರಿರಿಸಿದ ನಂಬಿಕೆಯನವಲಂಬಿಸಿರುತಿತ್ತು; ಗಾಳಿ ಯಾವೆಡೆ ಬೀಸುವುದು ಎಂದರಿಯಲು ಹುಲ್ಲುಕಡ್ಡಿಯನು ಕಿತ್ತು ಹಾರಿಸುತಲಿ ಅರಿಯುತಿದ್ದೆನು; ಬಂದರುಗಳು ಸೇತುವೆ ಕಂಬಗಳು ರಸ್ತೆಗಳು ಎಲ್ಲೆಲ್ಲಿವೆಯೆಂದಾ ಭೂಪಟದಲಿ ನಾನು ಹುಡುಕುತಿದ್ದೆನು; ಅಪಾಯವೊಂದು ವ್ಯಾಪಾರಕ್ಕೆ ಹಾನಿಯನ್ನುಂಟುಮಾಡೀತೊ ಎಂಬ ಭಯವು ಬೇಸರದಿಂದ ಕೂಡುವಂತಾಗಿಸುತಿತ್ತು.

ಸಲೇರಿಯೋ:— ಮಾಂಸದಾ ನನ್ನ ಸಾರುವನು ತಣ್ಣಗಾಗಿಸು
ತಿರುವಾ ಉಸಿರ್ಗಾಳಿಯು ಸಾಗರದಲಿ ಹೆಚ್ಚು
ಹಾನಿಯನು ಉಂಟುಮಾಡಬಹುದೆಂದಾಲೋಚಿ
ಸಿದರೆ ನನ್ನನು ಚಳಿಜ್ವರಕ್ಕೆ ಈಡಾಗಿಸುವು
ದು. ಮರಳಿನ ಗಾಜುಗಂಟೆ ಓಡುವುದನು ನಾನು
ನೋಡಬಾರದೆಂದೆನಿಸಿಯೂ ನಾನು ಸೀತಳ
ತಿಟ್ಟುಗಳನೆ ನೆನೆಯುವೆ. ನನ್ನ ಸಂಪದ್ಭರಿತ
ವಾ ಹಡಗು 'ಆಂಡ್ರ್ಯೂ'ವು ಮರಳುದಂಡೆಯಲದರ
ಶಿಖಸ್ತಂಭದಿಕ್ಕಡೆಯು ಪಕ್ಕೆಲುಬುಗಳಿಗಿಂತ
ಆಳಕ್ಕೆ ವಿನೀತದಂತೆ ಬಾಗಿ ಅದು ಹುಗಿದ ಆ
ಮರಳ್ನೆಲವ ಮುದ್ದಿಸುವುದ ನಾನು ನೋಡಬೇ
ಕೆ. ಕ್ರೈಸ್ತಗುಡಿಗೆ ಹೋಗಿ ಪವಿತ್ರ ಕಲ್ಲುಮಂ
ಟಪವ ನೋಡಬೇಕೆ ಅಷ್ಟೆ ಮೆತ್ತನೆ ತಾಗು
ತಿಹ ನನ್ನ ನಾವೆಯುದರಿಂದು ಬದಿ ಅಪಾಯಕ
ರದಾ ಬಂಡೆಗಳಿಗೆಡಿಕ್ಕಿ ಒಡೆದು ಶ್ರೀಗಂಧ
ಮಸಾಲೆಗಳನಾ ಸಾಗರದೆ ಚೆಲ್ಲಾಡುತ್ತಲಿ
ಭೋರ್ಗರೆಯುವಾ ಪ್ರವಾಹವನು ರೇಷ್ಮೆಬಟ್ಟೆಯು
ರಾಶಿ ಅವು ಹಾಸಿ ತೊಡಿಸಲಾ ಬೆಲೆಬಾಳ್ವ ಆ
ವಸ್ತ್ರಗಳು ನಿಮಿಷದಲಿ ನಿಷ್ಪ್ರಯೋಜಕವಾಗು
ವುದನು ಗಮನಿಸಬೇಕೆ? ಇದನ್ನು ನಾನು ಯೋಚಿಸ
ಬೇಕೆನುವುದನು ಅನ್ನಿಸಬೇಡವೆ? ಅಪಾಯ
ಸಂಭವಿಸಬಹುದೆಂದು ಯೋಚಿಸುವ ಸಾಧ್ಯತೆಯು
ಇಲ್ಲವಾದರೆ ನನ್ನನದು ದು:ಖಿತಾಗಿ
ಸದೆ? ಅದೇನಿದ್ದರೂ ನನಗೆ ಹೇಳದಿರು; ಹಡ
ಗಿನಲ್ಲಿರುವ ತನ್ನ ಸರಕುಗಳನು ಕುರಿತು ಯೋ
ಚಿಸುತ್ತ ಆಂಟೋನಿಯೋ ಬೇಸರಿಸುವನು ಎಂದು ನನ
ಗಂತೂ ಗೊತ್ತಿದೆ!

ಆಂಟೋನಿಯೋ:— ನಾನನ್ನುವುದನ್ನು ನಂಬಿರಿ;
ಇಲ್ಲ, ನಾನು ಅದಕಾಗಿ ನನ್ನ ವಿಧಿಗೆ ಕೃತ
ಜ್ಞನಿರುವೆನು; ನನ್ನ ವ್ಯಾಪಾರ ಸರಕುಗಳೆಲ್ಲ
ಒಂದೇ ಹಡಗನು ಆಧರಿಸಿಲ್ಲ; ಒಂದೇ ಸ್ಥ
ಳದಲ್ಲು ಅವಿಲ್ಲ; ಅಷ್ಟೇ ಅಲ್ಲ, ನನ್ನ ಆ
ಸ್ತಿಯೆಲ್ಲಾ ಈ ಒಂದು ವರ್ಷದ ಉತ್ಪತ್ತಿಯನ್ನು
ಹೊಂದಿಕೊಂಡಿಲ್ಲ; ಆದುದರಿಂದ ಈ ತುಂಬು
ನೌಕೆಯು ಭವಿಷ್ಯದ ಕುರಿತು ನನಗೆ ಬೇಸರವ
ದೇನೂ ಇಲ್ಲ.

ಸಲೆರಿನ್ಯೊ:— ಏಕೆ? ಹಾಗಲ್ಲದಿ
ದ್ದರೆ ನೀನು ಯಾರೊಬ್ಬಳಿಯೋ ಪ್ರೇಮದಲ್ಲಿರುವೆ!
ಅಂಟೋನ್ಯೊ:— ಛೇ, ಹಾಗೇನಿಲ್ಲ.
ಸೊಲೆನ್ಯೊ:— ಯಾರನ್ನೂ ಪ್ರೀತಿಸುವುದಿಲ್ಲ?
ಹಾಗಾದರೆ ಸಂತೋಷವು ನಿನಗೆ ಇಲ್ಲದ
ರಿಂದ ದುಃಖದಲ್ಲಿ ಇರುವಿಯೆಂದೇ ನಾವು ಹೇ
ಳುವ. ನಿನಗೆ ದುಃಖವು ಇಲ್ಲವಾದುದರಿಂದ
ನಗುತ್ತ ನೆಗೆಯುತ್ತ ಮೋದಗೊಂಡಿರುವೆಯೆಂದು
ಸ್ಪಷ್ಟವಾದ ಹೇಳಬಹು. ಎರಡು ತಲೆಯು ಜೇನಸನಂಥಾ
ದೇವತೆಯುನು ನಿರ್ಮಿಸಿದ ಈ ಕಾಲದಲ್ಲಿ ಪ್ರಕೃ
ತಿಯು ಅವಳ ಶಕ್ತಿಯಿಂದ ವಿಚಿತ್ರ ಜೀವಿಗಳ
ನು ಸೃಷ್ಟಿಸಿದ್ದಳು. ಕೆಲವರು ತಮ್ಮ ಕಣ್ಣುಗಳ
ಳಿಗಿಂದ ಇಣುಕುತ್ತಾ ಮತ್ತು ಕಿವಿಗೊಳಲುಗಳ
ನೂದು ಮವನಿಡಿ ನೋಡುತ್ತಲಿ ಗಿಳಿಗಳಂತೆ ನಿ
ಲಕ್ಷ್ಯವಿಡುವದನು ಕಂಡರೂ ಕಿರಿಚಿ ನಗುವರು. ನಿಷ್ಠು
ರ ದೇವತೆಯು ಆಣೆಗು ಅವರು ಇತರರ ಹಾಸ್ಯ
ಕೆ ಪಾತ್ರರೆನಿಸದರೂ ಮೌನದಲಿ ಕೂಡಿ ನಗು
ವುದಕು ನಿಹ ದಕ್ಷಿರಿಚಲಾರರು,

<u>ಪ್ರವೇಶ — ಬಸ್ಸಾನಿಯೊ, ಲೊರೆನ್ಜೊ
ಮತ್ತು ಗ್ರಾಶ್ಯಾನೊ.</u>

ಇದೋ ಬಸ್ಸಾನ್ಯೊ ಇತ್ತ ಬರುತ್ತಿರುವನು, ಸ
ನ್ಮಾನ್ಯ ಬಂಧುವೇ, ಗ್ರಾಶ್ಯಾನೊ ಮತ್ತು ಲೊರೆನ್ಜೊ,
ನಿಮಗೆ ಶುಭಕೋರುವೆವು; ನಾವು ನಿಮ್ಮನ್ನು ಹೆಚ್ಚು
ಸಹವಾಸದಲಿ ಬಿಟ್ಟು ಹೋಗುವೆವು,
ಸಲೆರಿನ್ಯೊ:— ಯೋಗ್ಯ ಮಿತ್ರರು ನನ್ನನು ಬಿಡದೆಯೆ ಹೋಗಿದ್ದ
ರೆ ನಿಮ್ಮನ್ನು ಸಂತೋಷಪಡಿಸುವ ವರೆಗೆ ನಾ
ನು ಇಲ್ಲಿ ಇರುತ್ತಿದ್ದೆನು.
ಅಂಟೋನ್ಯೊ:— ನಿಮ್ಮ ಘನತೆಯು ನನ್ನ ಅಭಿಮಾನಕ್ಕೆ ತುಂಬಾ
ಪಾತ್ರವಾಗಿದೆ, ನಿಮ್ಮ ಸ್ವಂತ ವ್ಯವಹಾರವು
ನಿಮ್ಮನ್ನು ಕರೆಯುತ್ತಿರಬಹುದು ದಾದುದರಿಂದಾ
ಸಂದರ್ಭವನು ನೀವು ಇಲ್ಲಿಂದ ತೆರಳಲು
ಯೋಗಿಸಿರುವಿರಿಯೆಂದು ನಾನು ಊಹಿಸುವೆನು,
ಸಲೆರಿನ್ಯೊ:— ನನ್ನ ಸನ್ಮಿತ್ರರೆ, ನಿಮಗೆ ಶುಭವಾಗಲಿ
ಬಸ್ಸಾನ್ಯೊ:— ಇಬ್ಬರೂ ಸನ್ಮಿತ್ರರು,
ಇನ್ನು ಯಾವಾಗ ನಾವು ಒಟ್ಟಗೂಡುತ್ತ ನಗುವ?

ಯಾವಾಗ? ಹೇಳಿ. ನೀವು ತುಂಬಾ ವಿಚಿತ್ರವೆ
ನಿಸಿ ವರ್ತಿಸುತ್ತಿರುವಿರಿ. ಅಂತಾಗಬೇಕೇನು?

ಸಲೆರಿಯೋ:— ನಿಮಗೆ ಅನುಕೂಲವಾದಾಗ ನಮ್ಮ ಬಿಡುಸಮ
ಯವನ್ನು ನಿಮ್ಮೊಡನೆ ಕಳೆಯಲು ಸಿದ್ಧರಿದ್ದೇವೆ.

(ಸಲೆರಿಯೋ ಮತ್ತು ಸೊಲನಿಯೋ ಹೋಗುವರು.)

ಲೊರೆನ್ಜೋ:— ನನ್ನ ಮಾನ್ಯ ಬಸ್ಸಾನಿಯೋ,
ನಿನಗೆ ಅಂಟೋನಿಯೋನು ದೊರಕಿದುದರಿಂದ ನಾ
ವೀಗ ಹೋಗುವೆವು; ಎನಿದ್ದರೂ ಊಟ
ದ ಹೊತ್ತಿಗೆ ನಾವೆಲ್ಲ ಒಟ್ಟುಗೂಡಬೇಕೆಂಬು
ದನ್ನು ನೆನಪಿಡುವಿರೆಂದು ಕೋರುವೆನು,

ಬಸ್ಸಾನಿಯೋ:— ನೀನಂದುದಕ್ಕೆ ನಾನು ತಪ್ಪಲಾರೆ.

ಗ್ರಾಶ್ಯಾನೋ:— ಮಾನ್ಯ ಅಂಟೋನಿಯೋ,
ನೀನು ಆರೋಗ್ಯದಲ್ಲಿರುವಂತೆ ಕಾಣುವುದಿ
ಇಲ್ಲ. ಈ ಲೋಕದ ಹಲವು ವಿಚಾರಗಳನ್ನು ಕು
ರಿತು ಚಿಂತಿಸುತ್ತಿರುವೆ; ಕಷ್ಟದಿಂದ ಸಂಪಾದಿ
ಸುವವರು ಕಳೆದುಕೊಳ್ಳುವುದೂ ಇದೆ. ನಾನನ್ನು
ವುದನು ಕೇಳು. ನೀನಂತೂ ತುಂಬಾ ಸೊರಗಿರುವೆ.

ಅಂಟೋನಿಯೋ:— ನಾನೀ ಲೋಕವನ್ನು ಅದರಷ್ಟೇಯು
ವಾದ ಮಾನವ ಲೋಕವೆಂದು ಪರಿಗಣಿಸಿರುವೆ,
ಗ್ರಾಶ್ಯಾನೋ! ಇಲ್ಲಿ ಪ್ರತಿಯೊಬ್ಬನು ತನ್ನ ಪಾ
ಲಿನ ಕೆಲಸವನ್ನೆಸಗಬೇಕಾದ ರಂಗಸ್ಥ
ಳವಾಗಿರಲು ನನ್ನ ಪಾತ್ರವದರಲ್ಲಿ ಬರಿ
ದುಃಖಿಸಬೇಕಾದುದು!

ಗ್ರಾಶ್ಯಾನೋ:— ಇರಲಿ, ನಾನು ವಿದೂಷಕ ಪಾತ್ರವನ್ನು ಆಡುವೆ!
ವಿನೋದದಲಿ ನಗುವಿನಲಿ ಮೊಗದ ಹಳೆ ಸುಕ್ಕುಗ
ಳು ತೋರಲಿ; ನನ್ನ ಎದೆಯನ್ನು ಕುಗ್ಗಿಸಿ ತಣ್ಣ
ಗಾಗಿಸುವ ನರಳುವಿಕೆಗಿಂತಲೂ ದ್ರಾಕ್ಷಾರ
ಸ ಮದಿರೆಯಿಂ ನನ್ನ ಪಿತ್ತಾಶಯವನ್ನು ಬೆಚ್ಚನಿ
ರಿಸಲಿ. ಬಿಸಿರಕ್ತದಿಂದೊಡಗೂಡಿದಾ ವ್ಯಕ್ತಿ
ಒಂದು ರೀತಿಯಿಂದ ಕೆತ್ತಿದ ವಿಗ್ರಹದಂತೇ
ಕೆ ಕುಳಿತಿರಬೇಕು? ಅವನು ಎಚ್ಚತ್ತಾಗ ನಿ
ದ್ರಿಸುವುದೆ? ಅನಂತರ ಸಿಡುಕಿನಿಂದ ವರ್ತಿಸುತ್ತ
ಕಾಮಾಲೆ ರೋಗಕ್ಕೊಳಗಾಗುವುದೆ? ಅಂಟೋನಿಯೋ,
ನಾನು ನಿನಗೇನನ್ನುವೆನೆಂದರೆ ನಾನು ನಿ
ನ್ನನು ಮೆಚ್ಚುವೆನು. ನನ್ನ ಆ ಮೆಚ್ಚುಗೆಯೇ ಈಗ

ಮಾತಾಡುತ್ತದೆ. ನೊರೆಯು ಹೆಪ್ಪುಗಟ್ಟಿರುವ ನೀ
ರು ಮಡುವಿನಂತೆ ಮುಖವೆಲ್ಲ ಸುಕ್ಕಾಗಿ ಕಳೆಗೆ
ಟ್ಟ ಜನವಿರುವರು; ಅಂತವರು ಚಪಲತೆ, ಗಹನತೆ
ನ, ಸ್ವಕಲ್ಪಿತ ವಿಚಾರಗಳಿಂದ ಉಬ್ಬುತ್ತಾರೆ—
"ನಾನೆ ಮಾನ್ಯನು, ಭವಿಷ್ಯವಾದಿ ಪ್ರವಾದಿಯು,
ನಾನು ಬಾಯ್ತೆರೆದಾಗ ಯಾವೊಂದು ನಾಯಿಯೂ
ಬೊಗಳಕೂಡದು," ಎಂಬಂತಿರುವರು; ಆಹಾ ನನ್ನ
ಅಂಟೋನಿಯೊ, ಬರೀ ಬುದ್ಧಿವಂತರೆಂದು ಪ್ರಸಿ
ದ್ಧರಾದವರನೇಕರನ್ನು ಹೇಳಲಾರರೆಂಬುದ
ನ್ನು ನಾನು ತಿಳಿದಿರುವೆನು. ಈ ವಿಷಯಗಳನು ಕುರಿ
ತಾಗಿ ಇನ್ನೂ ಹೆಚ್ಚು ಮತ್ತೊಮ್ಮೆ ನಿನಗನ್ನು
ವೆನು. ಆದರೆ ಯಶಸ್ಸನ್ನು ಗಾಳಕ್ಕೆ ಕೊಂಡಲಿಸಿ
ಲುಕಿ ಸಾಯುವ ಮೀನಿನ ರೀತಿಯೆಂಬುದನು ತಿಳಿ.
ಬಾ, ಮಾನ್ಯ ಲೊರೆನ್ಸೊನೆ, ಸಧ್ಯಕ್ಕೆ ನಿನಗೆ ಶುಭವ
ನಿದೊ ಕೋರುವೆನು. ನನ್ನ ಉದ್ಬೋಧನೆಯದನ್ನು
ಊಟದನಂತರ ಮುಗಿಸುವೆನು.

ಲೊರೆನ್ಸೊ:— ಅಂತೆಯೇ ಆಗಲಿ.
ನಮಗೆ ಊಟವು ಮುಗಿಯುವ ವರೆಗೂ ಅಂತೆಯೇ
ನಿನ್ನನು ಬಿಡುವೆವು. ಮಾತಾಡದೆಯೆ ಇರುವ ಆ
ಬುದ್ಧಿವಂತರಲ್ಲೊಬ್ಬ ನಾನೆ ಆಗಿರಬಹುದು,
ಏಕೆಂದರೆ ಗ್ರಾಷ್ಯಾನೊನು ನನ್ನನು ಮಾತಾ
ಡಲಿಕ್ಕೆ ಬಿಟ್ಟದ್ದೇ ಇಲ್ಲ.

ಗ್ರಾಷ್ಯಾನೊ:— ಸರಿ, ನನ್ನ ಸಹವಾಸವನ್ನಿಟ್ಟುಕೊ; ಆದರೆ
ಇನ್ನೆರಡು ವರ್ಷಗಳಲಾ ನಿನ್ನ ನಾಲಗೆಯ
ನಾದವನು ನೀನೆ ತಿಳಿಯದಾಗುವಿ.

ಅಂಟೋನಿಯೊ:— ನಿನಗೆ ಶುಭವಾಗಲಿ!
ಹರಟೆ ಇದ ಮೆಚ್ಚಿ ಆನೊರ್ವ ಮಾತುಗಾರನು
ಎಂದೆನಿಸುವೆನು.

ಗ್ರಾಷ್ಯಾನೊ:— ವಂದನೆಗಳು; ಇದನ್ನು ನಂಬು.—
ಎಳೆಗರುವಿನ ಒಣಗಿದ ನಾಲಗೆಗೆ ಮತ್ತು ಯಾ
ರೊಬ್ಬನಿಗು ಒಪ್ಪದಿಹ ಹೆಂಗಸಗೆ ಮಾತ್ರ ಮೌ
ನವು ಶಿಫಾರಸ್ಸಿಗರ್ಹವಾದುದು.
(ಗ್ರಾಷ್ಯಾನೊ ಮತ್ತು ಲೊರೆನ್ಸೊ ಹೋಗುವರು.)

ಅಂಟೋನಿಯೊ:— ಅದರ ಮೇಲನ್ನಲೇನಾದರೂ ಇದೆಯೆ?

ಬಸ್ಸಾನಿಯೊ:— ಇಡೀ ವೆನ್ನಿಸ್ಸಿನಲ್ಲಿರುವ ಯಾವನೊಬ್ಬನನ್ನು ಮೀರಿಸಿ ಗ್ರ್ಯಾಶ್ಯನೊನು ಹರಟೆಯನ್ನು ಹೊಡೆಯುವನು. ಬರೀ ಹೊಟ್ಟು ತುಂಬಿದ ಎರಡು ಚೀಲಗಳಲ್ಲಿ ಎರಡು ಗೋದಿಕಾಳುಗಳು ಸೇರಿವೆಯೆಂದರೇ ಅವನ ಮಾತಿನ ಸಾರ. ದಿನವೆಲ್ಲ ಆ ಎರಡು ಕಾಳುಗಳನ್ನು ಹುಡುಕಿ ಅನಂತರ ಅವು ದೊರಕಿದಾಗ ಅದಕಾಗಿ ತೆಗೆದುಕೊಂಡ ಪ್ರಯತ್ನಕ್ಕೆ ತಕ್ಕಂತದು ಅವು ಅಲ್ಲವೆಂಬ ಹಾಗೆ.

ಅಂಟೊನ್ಯೊ:— ಆದಿರಲಿ, ಈಗ ನನಗೆ ಹೇಳು — ಗುಟ್ಟಾಗಿ ತೀರ್ಥಯಾತ್ರೆಯನ್ನು ಕೈಕೊಳ್ಳುತ್ತಿರುವೆಯೆಂದು ಬಹು ಪ್ರಮಾಣಪೂರ್ವಕವಾಗಿ ನೀನೊರ್ವ ಹೆಂಗಸಿಗೆ ಹೇಳಿದ್ದೆಯಷ್ಟೆ! ಅವಳಾರೆಂಬುದನ್ನು ನೀನು ನನಗೆ ಈ ದಿನ ಹೇಳುವೆನು ಎಂದು ಮಾತುಕೊಟ್ಟಿದ್ದಿ; ಅದಾರು?

ಬಸ್ಸಾನ್ಯೊ:— ಅಂಟೊನ್ಯೊ, ಅದು ನಿನಗೆ ಗೊತ್ತಿಲ್ಲದೆಯೆ ಇಲ್ಲ; ನನ್ನ ಶಕ್ತಿಗೆ ಮೀರಿ ವೆಚ್ಚಮಾಡುತ್ತ ಬಹು ದುಂದುಗಾರಿಕೆಯ ಜೀವನವನ್ನು ನಡೆಸಿ ನನ್ನ ಆಸ್ತಿಯು ಆದಷ್ಟು ಚಿಕ್ಕದಾಗುತ್ತ ಬಂದಿದೆ! ಸಿರಿವಂತಿಕೆಯ ಜೀವನವನ್ನು ನಡೆಸಿ ಇನ್ನೀಗ ಸಾಮಾನ್ಯನೆಂದೆನಿಸಲಿಂತೆಂದು ನನಗರಿಯುದಾಗಿದೆ. ನನ್ನ ಸಾಲದ ಹೊರೆಯನಿಳಿಸುವುದೆ ನನ್ನ ಮುಖ್ಯ ಧ್ಯೇಯವಾಗಬೇಕಿದೆ. ನನ್ನ ದುಂದುಗಾರಿಕೆಯಿಂದ ಹಲವು ವಸ್ತುಗಳಂತು ಒತ್ತೆಯಿಟ್ಟು ಹೋಗಿವೆ. ಅಂಟೊನ್ಯೊ, ನಿನಗೆ ಹಣ ಮತ್ತು ಅಭಿಮಾನ ವಿಶ್ವಾಸ ರೂಪದಲ್ಲಿ ನಾನು ತುಂಬಾ ಸಲ್ಲಿಸಬೇಕಿದೆ. ನೀನು ನನ್ನಲ್ಲಿ ಇಟ್ಟ ಆ ಪ್ರೀತಿಯಿಂದ ನನ್ನ ವ್ಯಾಪಾರಗಳಲಾದ ಕಷ್ಟವನ್ನು ನಷ್ಟವನ್ನು ಅಂತೆಯೇ ಸಾಲದ ಹೊರೆಯನೆಲ್ಲ ಇಳಿಸುವ ವಿಷಯವಾಗಿ ಆಲೋಚಿಸುವ ಸಾಧ್ಯತೆಯಿದೆ.

ಅಂಟೊನ್ಯೊ:— ಮಿತ್ರ ಬಸ್ಸಾನ್ಯೊ, ಇದೊ ಬೇಡುವೆನು; ನನಗದನ್ನು ಹೇಳು, ತಿಳಿಯಬಿಚ್ಛಿಸುವೆ. ಇಂದಿಗೂ ಇರುವ ನಿನ್ನ ಈ ಸಮ್ಮತಿಯನ್ನು ಗೌರವದಿಂದ ಪರಿಗಣಿಸಬಹುದೆಂದಾದರೆ ನನ್ನ ಹಣವನ್ನು ಮತ್ತು ನನ್ನನು ಮಾತ್ರವಲ್ಲದೆ ಸಾಧ್ಯವಹುದೆಲ್ಲವನ್ನು ನಿನಗೆ ಬಿಟ್ಟುಕೊಡಲಿಕ್ಕೆ ನಾನು ಸಿದ್ಧನಿರು

ಮೆಯ್ತುಂಬುವುದು ನಿಶ್ಚಯವು ಎಂದು ತಿಳಿ!

ಬಸ್ಸಾನಿಯೋ:— ನನ್ನ ಶಾಲಾದಿನಗಳಲಿ ನಾನು ಒಂದು ಬಾ
ಣವನು ತಪ್ಪಿಹೋದಾಗ ಅದನ: ಅದಕ್ಕೇನೆ
ಗುರಿಯಿಟ್ಟು ಹೊಡೆದು ಆ ಎರಡನ್ನೂ ನಾನು ದೊರ
ಕಿಸಿಕೊಳ್ಳುತ್ತಿದ್ದುದು ಅಂದಿನ ಕಥೆ. ಈಗ ಅದೇ ರೀತಿ!
ತಿಳುವಳಿಕೆ ಸಾಲದೆಯೆ ವರ್ತಕನ ಹಣವನ್ನು
ಪಡೆದು ಅವನಿಂದ ಸಾಲವನೆ ಆ ಮೇಲೆ ತೆಗೆ
ದುಕೊಂಡಂತಾಯಿತಾ ಬಾಲ್ಯದ ವಿಚಾರ. ನಿನ
ಗೆ ನಾನು ಋಣಿಯಾಗಿಹೆನು. ಹುರುಳನ ತರುಣನೆಂ
ದೆನಿಸಿದ್ದ ನಾನು ನಿನಗೆ ಕೊಡತಕ್ಕದ್ದದನು ಕಳೆ
ದುಕೊಂಡೆನು. ಆದರೆ ಮೊದಲು ಹೊಡೆದ ರೀತಿಯಲಿ
ಇನ್ನೊಂದು ಬಾಣವನು ಎಸೆ; ನಿನ್ನ ಗುರಿಯಲ್ಲಿ
ಸಂದೇಹ ನನಗಿಲ, ಆದರೆ ಎರಡನ್ನೂ ಪ
ಡೆಯುವೆನು; ಆ ಕ್ಷೇಮ ಎರಡನೇ ಹೊಡೆತವು ವಿಫಲ
ಕಾರಿಯಾದರೆ ಮೊದಲು ಸಾಲಗಾರನಿಗೆ ಕೊ
ಟ್ಟುದು ಉಪಕಾರಾರ್ಹವಾಗಿರಲಿ,

ಅಂತೋನಿಯೋ:—ನಿನಗೆ ನನ್ನನ್ನು ಚೆನ್ನಾಗಿ ಗೊತ್ತಿದೆ; ನಮ್ಮ
ಗೆಳೆತನದ ಬಗೆ ದೀರ್ಘ ಪ್ರಸ್ತಾಪಿಸುವುದ
ಕ್ಕಿಂತ ನೀನು ನಿನ್ನ ಆವಶ್ಯಕತೆಗೆ ಸಂಬಂ
ಧಿಸಿ ಸಹಾಯವನು ನೇರವಾಗಿಯೆ ಬೇಡು. ಇದ
ರ ಬಗ್ಗೆ ಅನುಮಾನವನು ನನ್ನಲ್ಲಿ ನೀನಿರಿ
ಸಿದರೆ ಅದು ನನ್ನ ಸರ್ವಸ್ವವನು ನೀನು ಹೊಂ
ದಿ ನಷ್ಟಗೊಳಿಸಿದುದಕ್ಕಿಂತ ಅನ್ಯಾಯ
ವನ್ನೆಸಗಿದಂತಾಗುವುದು. ಅದಿರಲಿ. ನಾನೇ
ನೆಸಗಬೇಕೆಂದು ನೀನು ಯೋಚಿಸಿರುವಿಯೋ ಅ
ದನ್ನು ಹೇಳು. ನನ್ನನು ಈ ಸಮಸ್ಯೆಯೊಳಗಿ
ದ್ದಿದೆ; ಆದುದರಿಂದ ಹೇಳು.

ಬಸ್ಸಾನಿಯೋ:— ಬೆಲ್ಮಂಟಿನಲಿ ಓರ್ವ ಹೆಗ್ಗಾರ್ತಿ ಮಡದಿಯಿರು
ವಳು; ಅವಳು ಚೆಲುವೆಯೆಂದೆನುವ ನುಡಿಗಿಂತ
ಚೆಲುವೆಯೂ ಸೌಶೀಲ್ಯೆಯೂ ಆಗಿರುವಳಲ್ಲ
ದೆ ಹಿಂದೊಮ್ಮೆ ಅವಳ ಕಣ್ಣುಗಳಿಂದ ಮೋ
ಹ ಪ್ರೇರಿತ ಮೌನಸಂದೇಶಗಳು ನನಗೆ ಬಂ
ದಿವೆ. ಅವಳ ಹೆಸರು ಪೋರ್ಶಿಯ, ಕ್ಯಾಟೊನ ಮಗಳೂ
ಬ್ರೂಟಸನ ಪತ್ನಿಯೂ ಆದ ಪೋರ್ಶಿಯಳಿಗೇ
ನೂ ಕಡಿಮೆಯಿಲ್ಲ. ಈ ವಿಶಾಲ ಜಗತ್ತು ಅವ

ಳ ಗುಣಾವಗುಣಗಳನ್ನು ತಿಳಿಯದೆ ಇಲ್ಲ. ನಾಲ್ಕೆದಿಸೆಗ
ಳಿಂದ ಎಲ್ಲಾ ಕಡೆಯಿಂದ ಕನ್ಯಾ
ರ್ಥಿಗಳು ಚಿನ್ನದ ಉಣ್ಣೆಯಂತೆ ಮುಂಗುರುಳುಳ್ಳ ಅವ
ಳ ಕಾಂತಿಯನ್ನು ಮೋಹಕವಾಗಿಸಲು ಬೆ
ಲ್ಮಂಟು ಮತ್ತೊಂದು 'ಕೊಲ್ಚಿಸ್' ಎಂದೆನಿಸಿ ಹಲವು
ಜೇಸನರು ಅವಳನ್ನು ಅರಸುತ್ತ ಬರುತ್ತಿರುವರು.
ನನ್ನ ಪ್ರಿಯ ಅಂಟೋನ್ಯೋ ಅವರಲ್ಲಿ ಒಬ್ಬನ
ಪ್ರತಿಸ್ಪರ್ಧಿಯೆನಿಸಲು ನನ್ನಲ್ಲಿ ಸಂಪತ್ತು
ಇದ್ದಿದ್ದರೆ ಸರಿ; ಆದರೆ ನನಗೆ ತೋರುವುದು
ವನೆಂದರೆ ನಾನು ಹಣಗಾರನೆನಿಸಲು ಆ
ದೈವವು ನನಗೆ ನಿಶ್ಚಯವಾಗಿಯೂ ಸಹಾಯಕ
ವಾಗುವುದೆಂದೇ ಆಗಿದೆ.

ಅಂಟೋನ್ಯೋ:— ನಾನು ಅರ್ಜಿಸಿದೆಲ್ಲವೂ ಸಮುದ್ರದಲ್ಲಿ ಇದೆ
ಯೆಂದು ನಿನಗೆ ಗೊತ್ತಿದೆ. ಈಗ ಬೇಕಾದಷ್ಟು
ಹಣವಾಗಲೀ ಆಸ್ತಿಯಾಗಲೀ ನನ್ನಲ್ಲಿ
ಇಲ್ಲ. ಆದುದರಿಂದ ನೀನು ಬೇಗನೆ ಹೋಗು.
ವೆನ್ನಿಸಿನಲ್ಲಿ ನನ್ನ ಹೆಸರಿನಲ್ಲಿರುವ ಹಣವು
ಸಹಾಯಕವಾಗುವುದೋ ನೋಡು. ಅಲ್ಲಿ ಎಷ್ಟಿದೆ
ಯೋ ಅದನ್ನು ಚೆಲುವೆ ಪೋರ್ಶ್ಯಳಿಗೆಯೆನುತಲೆ ಬೆ
ಲ್ಮಂಟಿಗೆ ತೆಗೆದುಕೊಂಡು ಹೋಗು; ಅಲ್ಲಿ ವಿಚಾರಿ
ಸು; ಹಣವೆಲ್ಲಿದೆಯೆಂದು ನಾನು ಅಲ್ಲಲ್ಲಿ ನೋ
ಡುವೆನು, ವತ್ತು ನನಗಾಗಿಯೆಂದೇ ಬಾವಿಸ ಅ
ದನ್ನು ನನ್ನ ಹೆಸರಿನಲ್ಲಿ ಪಡೆಯದಿರಲಾರೆನು.
(ಹೋಗುವರು)

—×—

(ದೃಶ್ಯ — ೨ — ಬೆಲ್ಮಂಟ್, ಪೋರ್ಶ್ಯಳ ಮನೆಯಲ್ಲಿ)

ಪೋರ್ಶ್ಯ ಮತ್ತು ಸಖಿ ನೆರಿಸ್ಸ.

ಪೋರ್ಶ್ಯ:— ನೆರಿಸ್ಸ, ವಿಶ್ವಾಸಪೂರ್ವಕವಾಗಿ ಹೇಳುವುದಾದರೆ
ನನ್ನ ಈ ಪುಟ್ಟ ದೇಹವು ಈ ಮಹಾ ಜಗತ್ತಿನ ಬಗ್ಗೆ
ತುಂಬಾ ಬೇಸತ್ತಿದೆ,

ನೆರಿಸ್ಸ:— ಪ್ರಿಯ ಅಮ್ಮಾ! ನಿನ್ನ ಒಳ್ಳೆಯ ಸಂಪದ್ವೈಭವ
ಕ್ಕೆ ಸಮವಾಗಿ ನಿನ್ನ ಮನೋಕ್ಲೇಶವೂ ಇದ್ದರೆ ನಿನಗೆ
ಹಾಗೆ ತೋರಬಹುದು, ಆದರೆ ತಿನ್ನಲಿಕ್ಕಿಲ್ಲದೆ ಸಾಯುವ

ಅವರಷ್ಟೇ ದುಃಖ ದುಗುಡಗಳನ್ನು ಅತ್ಯಲ್ಪ ಆಹಾರ ದಿಂದ ಕೊರಗುತ್ತಿರುವವರೂ ಅನುಭವಿಸುವರು, ಆದು ದರಿಂದ ಕೆಳದರ್ಜೆಯಲ್ಲಿರುತ್ತ ಪಡೆಯುವ ಸುಖಸಂ ತೋಷವು ಅಲ್ಪವಾದುದೇನೂ ಅಲ್ಲ, ಅತಿ ಐಶ್ವರ್ಯವು ಬೇಗನೆ ತಲೆಗೂದಲನ್ನು ಬಿಳಿದಾಗಿಸುವುದು; ಆದರೆ ಅವ ರವರ ಅರ್ಹತೆಯು ಬಹುಕಾಲವಿರುವುದು.

ಪೋರ್ಷ್ಯ:— ಒಳ್ಳೆಯ ಮಾತುಗಳು; ಸ್ಪಷ್ಟವಾಗಿ ಉಚ್ಚರಿಸಿದೆ.

ನೆರಿಸ್ಸಾ:— ಅವುಗಳನ್ನು ಅನುಸರಿಸಿದರೆ ಇನ್ನೂ ಹಿತ.

ಪೋರ್ಷ್ಯ:— ಮಾಡಲು ಹಿತಕರವಾದ ಕೆಲಸ ಯಾವುದೆಂದು ತಿಳಿ ಯುವುದಕ್ಕಿಂತ ಅದೇ ಮಾಡುವುದೇ ಸುಲಭವಾಗಿದ್ದರೆ ಸಣ್ಣ ಗುಡಿಗಳು ಭವ್ಯ ಇಗರ್ಜಿಗಳಾಗಿರುತ್ತಿದ್ದುವು; ಬಡ ವರ ಗುಡಿಸಲುಗಳು ರಾಜಕುಮಾರರ ಅರಮನೆಗಳಾ ಗಿರುತ್ತಿದ್ದುವು. ಸೂಕ್ತಿಗಳನ್ನು ಬಾಯಿ ಹೇಳುವುದರೊ ಡನೆ ಅವನ್ನು ಅನುಸರಿಸಿದರೆ ನಿಜಕ್ಕೂ ದೈವಿಕ. ಮಾಡಲಿಕ್ಕಿ ರುವ ಇಪ್ಪತ್ತು ಒಳ್ಳೆಯ ಕೆಲಸಗಳನ್ನು ಸುಲಭದಲ್ಲಿ ಬೋಧಿಸಬಲ್ಲೆನು, ಆದರೆ ಅದರಲ್ಲಿ ಒಂದನ್ನಾದರೂ ನಾನು ಬೋಧಿಸಿದಂತೆ ಅನುಸರಿಸೆನು, ಉದ್ರೇಕ ಉ ದ್ಧಟತನಗಳಿಗೆ ಮೆದುಳು ತಕ್ಕ ಶಾಸನವನ್ನು ವಿಧಿಸ ಬಹುದು, ಆದರೆ ಬಿಸಿ ಮುಂಗೋಪವು ಹಸಿ ಬುದ್ಧಿ ವಂತಿಕೆಯ ಮೇಲೆ ಜಿಗಿದು ಹಾರುವುದು, ಯೌವನ ವೆಂಬ ಹುಚ್ಚು ಮೊಲವು ಹಿತೋಕ್ತಿಗಳೆಂಬ ಬಲೆಗ ಳಿಂದ ಹಾರಿ ಕುಂಟಾಗುತ್ತದೆ, ನನಗೊರ್ವ ಗಂಡನನ್ನು ಆರಿಸಿಕೊಳ್ಳಲಿಕ್ಕೆಂದು ನಾನು ಈ ರೀತಿ ನನ್ನ ಭಾವನೆ ಯನ್ನು ಹರಿಸುತ್ತಿಲ್ಲ. ಆಹಾ, ನಾನು 'ಆರಿಸುವುದು' ಎಂಬ ಪದವನ್ನು ಉಪಯೋಗಿಸಿದೆ, ನನಗೆ ಬೇ ಕಾದವನನ್ನು ಆರಿಸಿಕೊಳ್ಳಲಾರೆ, ನಾನು ಒಪ್ಪದವನನ್ನು ತಿರಸ್ಕರಿಸಲಾರೆ! ಹಾಗೆಂದೇ ಮೃತನಾದ ತಂದೆಯ ಮರಣಪತ್ರವು ಬದುಕಿರುವ ತನ್ನ ಮಗಳ ಸ್ವಾ ತಂತ್ರ್ಯವನ್ನು ಹಿಸುಕಿದೆ, ನೆರಿಸ್ಸಾ, ನನಗೆ ಬೇಕಾ ದವನನ್ನು ನಾನು ಆರಿಸಿಕೊಳ್ಳಲಾಗುವುದಿಲ್ಲ; ಅಂತೆ ಯೇ ಯಾರನ್ನೂ ತಿರಸ್ಕರಿಸಲಾಗುವುದಿಲ್ಲವೆಂದ ರೆ, ನೆರಿಸ್ಸಾ, ಅದು ಬಹು ಕಠಿಣ ಶಾಸನವಾಗಿಲ್ಲವೇ?

ನೆರಿಸ್ಸಾ:— ನಿನ್ನ ತಂದೆಯು ಎಲ್ಲ ಕಾಲಕ್ಕೂ ಬುದ್ಧಿವಂತ ನಾಗಿದ್ದನು, ಅಂಥ ಪುಣ್ಯ ಜೀವಿಗಳು ಸಾಯುವಾಗ ತುಂಬಾ ಸ್ಫೂರ್ತಿಯನ್ನು ಹೊಂದಿರುತ್ತಾರೆ; ಆದು ದರಿಂದ ಅವನಿರಿಸಿದ ಆ ಚಿನ್ನದ, ಬೆಳ್ಳಿಯ ಮತ್ತು

ಸೀಲಿನ ಡಬ್ಬಿಗಳೊಳಗೆ ಇರುವ ಹೊಳೆಯುವ ಚಿಟ್ಟೆಗಳಲ್ಲಿ ಒಂದು ನಿನಗೆ ಬೇಕಾದ ಗಂಡನ್ನು ಆಯುವುದು, ನಿನ್ನ ತಂದೆಯು ನಿನಗೆ ಎಂತಾಗಬೇಕೆಂದು ಇಚ್ಛಿಸಿದ್ದನೋ ಅಂತಾದರೆ ಆ ಗಂಡು ನಿನ್ನನ್ನು ನ್ಯಾಯವಾಗಿ ಪ್ರೀತಿಸುವವನೇ ಆಗುತ್ತಾನೆ, ಆದರೆ ಕನ್ಯಾರ್ಥಿಗಳಾಗಿ ಇದಾಗಲೇ ಬಂದಿರುವ ರಾಜಕುಮಾರರಲ್ಲಿ ನಿನಗೆ ಆಸಕ್ತಿಯು ರಲು ಏನಿದೆ?

ಪೋರ್ಶ್ಯ:— ನಾನು ನಿನ್ನನ್ನು ಕೇಳಿಕೊಳ್ಳುವುದೇನೆಂದರೆ ಅವರ ಹೆಸರುಗಳನ್ನೇನು ಹೇಳು, ನೀನೇ ಹೆಸರಿಸು ಪುನ: ಪುನ: ಹೇಳು, ನಾನು ಆ ಹೆಸರುಗಳಿಗನುವಾಗಿ ಅವರನ್ನು ತವರಿಂದು ವರ್ಣಿಸುತ್ತೇನೆ, ಆ ನನ್ನ ವರ್ಣನೆಯು ಪ್ರಮಾಣ, ವಿಗಕ್ಷನುವಾಗಿ ಅವರಲ್ಲಿ ನನಗಿರುವ ಪ್ರೀತಿ ಮೇಲ್ಪಟ್ಟಿಂದು ಸೂಚಿತವಾಗುವುದು.

ನೆರಿಸ್ಸ:— ಮೊದಲನೆಯದಾಗಿ ನೇಪೆಲ್ಸ್‌ನ ರಾಜಕುಮಾರ.

ಪೋರ್ಶ್ಯ:— ಅಹಾ, ಅದೊಂದು ಕೋಲ್ಟ್ ಕುದುರೆಯೇ ಸರಿ. ಅವನು ತನ್ನ ಕುದುರೆಯ ವಿಷಯವಲ್ಲದೆ ಬೇರಾವುದನ್ನು ಕುರಿತಾಗಿಯೂ ಮಾತಾಡಲಾರನು, ಅವನು ಅದರ ಮೇಲೆ ಕುಳಿತಾಗ ತನ್ನ ಕಾಲುಗಳಿಂದ ಇರುವ ಅಂಗಗಳ ಸುಖದ ಅವನ್ನು ಉಪಯೋಗಿಸುತ್ತಾ, ತನ್ನ ಪಾದರಕ್ಷೆ ಮೊಳೆಯಿಂದ ಅದನ್ನು ಚುಚ್ಚಿ ಓಡಿಸುವನು, ನನ್ನ ಭಗಿನಿ, ಅವನ ತಾಯಿ, ಅದೇಕೋ ಆ ಉಕ್ಕಿನ ಮೊಳೆಯನ್ನು ನಿರ್ಮಿಸುವ ಕಮ್ಮಾರನೊಡನೆ ಹೊಸಯೋಗವ ನಾಟಿದಳೋ ಏನೋ!

ನೆರಿಸ್ಸ:— ಅದೋ ಅಲ್ಲಿ ಜಮೀನ್ದಾರ್ ಜಿಲ್ಲೆ ಸಂದರ್ಶ ಪ್ರಭು ಇದ್ದಾನೆ,

ಪೋರ್ಶ್ಯ:— "ನೀನು ನನ್ನನ್ನು ಒಪ್ಪದಿದ್ದರೆ ಆರಿಸಿಕೋ," ಎಂಬಂತೆ ಅವನು ಹುಬ್ಬು ಗಂಟಿಕ್ಕಿ ನೋಡುತ್ತಾನಲ್ಲದೆ ಬೇರೇನೂ ಮಾಡಲಾರನು. ಅವನು ಹಾಸ್ಯಕರ ಕತೆಗಳನ್ನು ಕೇಳುತ್ತಿರುವನಲ್ಲದೆ ನಗುವುದೇ ಇಲ್ಲ, ಅವನು ಬಾಲ್ಯದಲ್ಲಿ ಸಾಕಷ್ಟು ಅಸಹನೀಯ ದು:ಖವನ್ನು ಅನುಭವಿಸಿದ್ದರಿಂದ ಅವನು ಪ್ರಾಯವೇರುತ್ತಾ ಬಂದಂತೆ ಹಾಸ್ಯವನ್ನು ಕೂಡಿಡುವ ಜನದ ಬಂಡಾಟದ ಬಾಳನ್ನು ಕಂಡು ಅಳುವ ಹೆರಾಕ್ಲೈಟಸ್ ಇವನಂತೆ ಆಗುವನೆಂದು ನಾನು ಹೆದರುತ್ತೇನೆ. ಇವರಲ್ಲೊಬ್ಬನನ್ನು ನಾನು ಮದುವೆ

ದಾಸಿಯಾಗಿರುವುದಕ್ಕಿಂತ ಹಿಂದಿನ ಶವಪೇಟಿಕೆ ಎಂದನ್ನು
ಮತ್ತೆ ನಿಶ್ಚಿತವಾದ ಜನ ಅವರು, ಅವರಿಬ್ಬರಿಂದ ದೇವ
ರೇ ನನ್ನನ್ನು ರಕ್ಷಿಸಲಿ,

ನೆರಿಸ್ಸ:— ಫ್ರಾನ್ಸಿನ ಪ್ರಭುಗಳಲ್ಲೊಬ್ಬ ಮಾನ್ಯ ಲೀಬಾನ್ ಇವನ
ವಿಷಯವಾಗಿ ಏನು ಹೇಳುತ್ತೀ?

ಪೋರ್ಶ್ಯ:— ದೇವರು ಅವನನ್ನು ಸೃಷ್ಟಿಸಿದುದರಿಂದ ಅವನೊಬ್ಬ
ಮಾನವನೆಂದು ಒಪ್ಪಿಕೊಳ್ಳಲಿ. ನಿಜವಾಗಿ ಹೇಳುವುದಾ
ದರೆ ಹಾಸ್ಯಗಾರನಾಗಿರುವುದು ಹಿಂದು ಪಾಪವೆಂದು
ನನಗೆ ಗೊತ್ತಿದೆ; ಆದರೆ ಅವನಿಗೆ, ಏಕೆ ನೇಪಲ್ಸ್‌ನ
ಪ್ರಭುಗಳ ಕುದುರೆಗಿಂತ ಉತ್ತಮವಾದುದು ಇದೆ.
ಆ ಜರ್ಮನ್ ಸಾಮಂತನಿಗಿಂತ ಇವನು ಹುಬ್ಬುಗಂಟಿಕ್ಕಿ
ನೋಡುವ ದುರಭ್ಯಾಸದಿಂದ ಕೂಡಿದ್ದಾನೆ, ಮಾನವ
ನೆಂದೆನಿಸಲಾರನಾದರೂ ಅವನು ಪ್ರತಿಯೊಬ್ಬ ಮಾನವ
ನಂತೆ ತೋರಿಸಿಕೊಳ್ಳುವನು, ಒಂದು ಹಾಡುಹಕ್ಕಿಯು
ಧ್ವನಿಯೆತ್ತಿದಾಗ ಅವನು ತಕ್ಷಣ ನಾಟಕೀಯವಾಗಿ
ಕುಣಿಯುವವನು, ತನ್ನ ನೆರಳನ್ನೇ ತನಗೆ ಬೇಲಿಯಾಗಿ
ಉಪಯೋಗಿಸುವನು, ಅವನ ಗಡ್ಡವನ್ನು ಈಗಿಂದಾ
ಗ್ಗೆ ಬದಲಿಸುತ್ತಿರುವುದರಿಂದ ಅವನನ್ನು ಮದುವೆಯಾ
ಗುವುದೆಂದರೆ ನಾನು ಇಪ್ಪತ್ತು ಗಂಡುಗಳನ್ನು ಮದುವೆ
ಮಾಡಿದಂತೆ! ನನ್ನನ್ನು ಅವನು ತಾತ್ಸಾರದಿಂದ ಕಂಡ
ರೆ ನಾನು ಅವನನ್ನು ಕ್ಷಮಿಸುವೆನು, ಏಕೆಂದರೆ ಅವನು
ನನ್ನಲ್ಲಿ ಬಹು ಪ್ರೀತಿಯಿಂದ ಹುಚ್ಚಾದರೆ ನಾನು ಅದೇ ರೀ
ತಿ ಅವನಲ್ಲಿ ಹುಚ್ಚಾಗಲಾರೆನು,

ನೆರಿಸ್ಸ:— ಹಾಗಾದರೆ ಇಂಗ್ಲೆಂಡಿನ ಯುವಕ ಫಾಲ್ಕನ್‌ಬ್ರಿಡ್ಜ್
ಇವನ ಬಗ್ಗೆ ಏನು ಹೇಳುತ್ತೀ?

ಪೋರ್ಶ್ಯ:— ಅವನಿಗೆ ನಾನು ಏನೂ ಹೇಳಲಾರೆನೆಂದು ನಿನಗೆ
ಗೊತ್ತಿದೆ, ಅವನು ನನ್ನನ್ನು ಹೇಗೆ ತಿಳಿಯಲಾರನೋ
ಹಾಗೆಯೇ ನಾನು ಅವನನ್ನು ತಿಳಿಯೆನು, ಅವನು ಲ್ಯಾ
ಟಿನ್, ಫ್ರೆಂಚ್, ಅಥವಾ ಇಟಾಲಿಯನ್ ಭಾಷೆಯನ್ನು
ತಿಳಿಯನಾದರೂ ನಾನೇನೋ ನನ್ನ ಆಂಗ್ಲಭಾಷಾ ಜ್ಞಾನ
ವು ಅತ್ಯಲ್ಪವೆಂದು ಪ್ರಮಾಣ ಮಾಡುವೆನು, ಅವನು
ಸಹಜ ಮಾನವನ ಚಿತ್ರವಾದರೂ, ಅಯ್ಯೋ,
ಒಬ್ಬ ಮೂಕನೊಡನೆ ಯಾರು ಮಾತಾಡುವರು?
ಅವನು ತನ್ನ ಉಡುಗೆಯಲ್ಲಿ ವಿಲಕ್ಷಣನಾಗಿ ತೋ
ರುವನು; ತನ್ನ ಒಳಅಂಗಿಯನ್ನು ಇಟಲಿಯಿಂದ

ಲೂ ದುಂಡು ಕಾಲುಚೀಲವನ್ನು ಫ್ರಾನ್ಸಿನಿಂದಲೂ, ಟೋಪಿಯನ್ನು ಜರ್ಮನಿಯಿಂದಲೂ, ತನ್ನ ನಡೆನುಡಿಗಳನ್ನು ಎಲ್ಲಾ ಕಡೆಯಿಂದಲೂ ಖರೀದಿಸಿಕೊಂಡಿರುವಂತೆ ನನಗೆ ತೋರುತ್ತದೆ.

ನೆರಿಸ್ಸ:— ಆವನ ನೆರೆಊರಿನ ಸ್ಕಾಟ್ಲೆಂಡಿನ ಪ್ರಭುವನ್ನು ಕುರಿತಾಗಿ ಏನು ಹೇಳುತ್ತೀ?

ಪೋರ್ಷ್ಯ:— ನೆರೆಕೆರೆಯು ಜನಕ್ಕೆ ತೋರಿಸುವ ಉದಾರಗುಣ ಆವನಲ್ಲಿದೆ. ಸುಮ್ಮನೆ ಆವನು ಒಬ್ಬ ಇಂಗ್ಲೀಷನಿಂದ ಬಲವಾದ ಏಟನ್ನು ತಿಂದನು, ಆವನು ಹಿಂದಕ್ಕೆ ತಿರುಗಿಕೊಡಲಾರದೆ ತಾನು ಆ ಮೇಲೆ ಆವನಿಗೆ ಹಿಂದಿರುಗಿಸುವೆನೆಂದು ಪ್ರಮಾಣ ಮಾಡಿದನು, ಒಬ್ಬ ಫ್ರೆಂಚನು ಆವನಿಗೆ ಬೇರೊಬ್ಬನ ಸಹಿ ಹಾಕಿ ಜಾಮೀನನು ನಿಂತನೆಂದು ನಾನು ಊಹಿಸುತ್ತೇನೆ.

ನೆರಿಸ್ಸ:— ಸ್ಯಾಕ್ಸನಿಯ ಪ್ರಭುವಿನ ಸೋದರಿಯ ಮಗ, ಆ ಜರ್ಮನ್ ತರುಣನು ಹೇಗೆ?

ಪೋರ್ಷ್ಯ!— ಆವನು ಪ್ರಾತಃಕಾಲದಲ್ಲಿ ಸ್ವಸ್ಥಚಿತ್ತನಾಗಿರುವಾಗ ತೋರಿಸುವ ನೀಚತನ ದುರ್ಗುಣಗಳನ್ನು ಇನ್ನೂ ಅತಿರೇಕವಾಗಿ ಮಧ್ಯಾಹ್ನದನಂತರ ಮದ್ಯ ಪಾನೀಯವನ್ನು ಸೇವಿಸಿ ತೋರಿಸುವನು, ಸಮಚಿತ್ತನಾಗಿ ಆವನು ಕಂಡುಬಂದರೆ ಆವನು ಮತಿಗೆಟ್ಟವನೆಂದು ಹೇಳಬಹುದು; ಅಂತಾದಾಗ ಆವನೊಬ್ಬ ಪ್ರಾಣಿಯಂತೆ ಸರಿ; ಅಂತಾಗಲೇ ಬೇಕಾದವನು. ಆವನ ಬಗ್ಗೆ ಲಕ್ಷ್ಯವಿಡದೆ ನಾನು ನನ್ನಿಷ್ಟಕ್ಕೆ ನಿವಾರಿಸಿಕೊಳ್ಳಬಹುದೆಂದು ನಂಬಿರುವೆನು.

ನೆರಿಸ್ಸ!— ಬಹುಶಃ ಆವನು ನಿನ್ನನ್ನು ವರಿಸಲು ಇಚ್ಛಿಸಿ, ನಿನ್ನ ಚಿತ್ರವಿರುವ ಡಬ್ಬ ಯಾವುದೋ ಅದನ್ನು ತೆರೆದರೆ, ನಿನ್ನ ತಂದೆಯ ಮರಣಶಾಸನವನ್ನು ಮೀರಿ ನೀನು ಆವನನ್ನು ಮದುವೆಯಾಗಲು ತಿರಸ್ಕರಿಸುವೆಯಾ?

ಪೋರ್ಷ್ಯ!— ಅದಕ್ಕಾಗಿಯೇ ಆಗಬಾರದೇನಾದರೂ ಆಗಿಹೋದೀತು ಎಂಬ ಭಯದಿಂದ ಬೇರೊಂದು ಡಬ್ಬದತ್ತ ರೈನ್ ದ್ರಾಕ್ಷಾರಸ ತುಂಬಿಸಿದ ಒಂದು ಬಟ್ಟಲನ್ನು ತಂದಿಡುವಿಯೆಂದು ನಿನ್ನನ್ನು ಬೇಡುತ್ತೇನೆ, ಏಕೆಂದರೆ ಮದ್ಯ ಪಿಶಾಚಿಯೊಂದು ಡಬ್ಬದ ಒಳಗೆ ಇದ್ದರೂ, ಆವನಿಗೆ ಕುಡಿಯಲೇ ಬೇಕೆಂಬ ಚಪಲತೆಯು ಆ ಡಬ್ಬದ ಹೊರಗೆ ಇದ್ದಾಗ ಆವನು ಅದನ್ನೇ ತೆರೆದು ನೋಡುವನೆಂದು ನನಗೆ ಗೊತ್ತು. ನೆರಿಸ್ಸ, ಒಂದು ಹೊಂಡದ ಡಾಬಿಗೆ ವಿವಾಹವಾಗುವ ಮೊ

ದಲು ಉಂಟಾಗದಂತೆ ನೋಡಿಕೊಳ್ಳಲು ನಾನು ಮನಸ್ಸು ಮಾಡಿರುವೆನು!

ನೆರಿಸ್ಸ!— ಮಾನ್ಯೆಯರೆ, ನೀನು ಅವರಾರನ್ನೂ ಗಣಿಸುವ ಅಗತ್ಯವಿಲ್ಲ, ನಿನ್ನ ತಂದೆಯು ಇಚ್ಛೆಯಂತೆ ಆ ಪೆಟ್ಟಿಗೆಗಳಲ್ಲಿ ಸರಿಯಾದ ಒಂದನ್ನು ತೆರೆದವನು ಮಾತ್ರ ನಿನ್ನನ್ನು ವರಿಸುವನಲ್ಲದೆ ಈ ಹಲವು ಶ್ರೀಮಂತ ಪ್ರಭುಗಳು ನಿನ್ನನ್ನು ವಿವಾಹವಾಗುವ ಅಭಿಲಾಷೆಯನ್ನು ಬಿಟ್ಟು ಅವರೆಲ್ಲ ತಾವು ಹಿಂದಿರುಗಲಿದ್ದೇವೆಯೆಂಬ ತಮ್ಮ ನಿರ್ಧಾರವನ್ನು ನನಗೆ ಅದಾಗಲೇ ತಿಳಿಸಿರುವರು,

ಪೋರ್ಶಿಯ!— ಹೌದು, ನನ್ನ ತಂದೆಯು ಅಂತ್ಯ ನಿರ್ಧಾರದಂತೆ ನನಗೆ ತಕ್ಕ ವರನು ಲಭಿಸದಿದ್ದರೆ, ಮತ್ತು ನಾನು ಅಪ್ಪೋಲೋದ ಭವಿಷ್ಯವಾದಿ ಸಿಬಿಲ್ಲಾಳಷ್ಟು ದೀರ್ಘಕಾಲ ಬದುಕಿದರೆ, ಆ ಕನ್ಯಾದೇವತೆ ಡಯಾನಾಳಂತೆ ನಾನು ಜೀವನ ನಿಷ್ಕಳಂಕ ಕನ್ನಿಕೆಯಾಗಿಯೇ ಸಾಯುವೆನು, ಹೀಗೂ ಕನ್ಯಾರ್ಥಿಗಳಾಗಿ ಬಂದ ಅವರು ತಾವಾಗಿಯೇ ಪರಿಸ್ಥಿತಿಯನ್ನರಿತುಕೊಂಡು ಹಿಂದಿರುಗಿದುದು ತುಂಬಾ ಸಂತೋಷ. ಹಾಗೆ ಹೋದ ಯಾರೊಬ್ಬನಲ್ಲೂ ನಾನು ಅತಿಯಾದ ಪ್ರೀತಿಯಿಡುವಂತಿರಲಿಲ್ಲ, ಅವರು ಹಿಂದಿರುಗಿ ಬೆಳೆಸುವ ಪ್ರಯಾಣವು ಸುಖಕರವಾಗಲಿ ಎಂದು ನಾನು ದೇವರನ್ನು ಪ್ರಾರ್ಥಿಸುವೆನು,

ನೆರಿಸ್ಸ!— ಮಾನ್ಯ ಕನ್ನಿಕೆಯೇ, ನಿನ್ನ ತಂದೆಯು ಇದ್ದಾಗ ಪ್ರಭು ಮಾಂಟ್‌ಫೆರಾಟ್ ಇವನ ಜತೆಯಲ್ಲಿ ಬರುತ್ತಿದ್ದ ವೆನ್ನೀಸಿನ ವಿದ್ವಾಂಸ ಮತ್ತು ಯೋಧ, ಇವನನ್ನು ನಿನಗೆ ಜ್ಞಾಪಕವಿದೆಯೇ?

ಪೋರ್ಶಿಯ:— ಹೌದು, ಹೌದು, ಇದೆ. ಅವನು ಬಸ್ಸಾನ್ಯೋ; ಹಾಗೆಂದೇ ಅವನನ್ನು ಕರೆಯುತಿದ್ದರೆಂದು ಭಾವಿಸುತ್ತೇನೆ,

ನೆರಿಸ್ಸ:— ಅಮ್ಮಾ, ನೀನೆಂದುದು ನಿಜ, ನನ್ನ ಬುದ್ಧಿಹೀನ ಕಣ್ಣುಗಳು ನೋಡಿದ ಹಲವು ಜನಗಳಲ್ಲಿ ಅವನು ಓರ್ವ ಚೆಲುವೆಯನ್ನು ವಿವಾಹವಾಗಲು ಅರ್ಹನು,

ಪೋರ್ಶಿಯ!— ನನಗೆ ಅವನ ನೆನಪು ಚೆನ್ನಾಗಿ ಇದೆ, ನಿನ್ನ ಪ್ರಶಂಸಾವಾಕ್ಯಕ್ಕೆ ತಕ್ಕಂತೆಯೇ ಅವನಿರುವನೆಂಬುದರ ನೆನಪೂ ನನಗೆ ಇದೆ,

(ಸೇವಕನೊಬ್ಬನ ಪ್ರವೇಶ)

ಈಗ ಹೇಗಿದೆ? ಏನು ಸಮಾಚಾರ?

ಸೇವಕ:— ನಾಲ್ಕು ಜನ ಅಪರಿಚಿತರು ತಾವು ಇನ್ನು ಹಿಂದಿರುಗಲು

ತ್ತೇವೆ ಎಂದೆನ್ನಲು ನಿಮಗಾಗಿ ಕಾಯುತ್ತಿದ್ದಾರೆ, ಅವರಲ್ಲ
ದೆ ಐದನೆಯವನಿಂದ, ಮೊರಾಕ್ಕೋದ ರಾಜಕುಮಾರನಿಂ
ದ, ಕಳುಹಿಸಲ್ಪಟ್ಟ ಒಬ್ಬನು ಅವನ ಪ್ರಭುವು ಈ ದಿನ
ಸಾಯಂಕಾಲ ಇಲ್ಲಿರುವನೆಂಬುದಾಗಿ ವಾರ್ತೆಯೊಂದನ್ನು ತಂದಿ
ರುವನು.

ಪೋರ್ಷ್ಯ:— ನಾನು ಆ ನಾಲ್ಕು ಜನವನ್ನು ಎಷ್ಟು ಸಂತೋಷವಾದ
ಮನದಿಂದ ಬೀಳ್ಕೊಳ್ಳುವೆನೋ ಅಷ್ಟೇ ಸಹೃದಯತೆಯಿಂದ ಈ
ಐದನೆಯವನನ್ನು ಸ್ವಾಗತಿಸಲು ಅವನ ಆಗಮನಕ್ಕೆ
ಸಂತೋಷಗೊಳ್ಳುವೆನು. ಅವನಿಗೆ ಒಬ್ಬ ಯೋಗಿಯ
ಪವಿತ್ರತೆಯು ಒಂದು ಸೈತಾನನ ರೂಪು ಇದ್ದರೆ ಅವನು ನ
ನ್ನನ್ನು ವಿವಾಹವಾಗುವುದರ ಬದಲಾಗಿ ತನ್ನ ಪಾಪವಿ
ಮೋಚನೆಗೆ ಅವನು ನನ್ನನ್ನು ಪ್ರಾರ್ಥಿಸಬೇಕಾಗಿದೆ.
ನೆರಿಸ್ಸಾ, ಬಾ. ಎಲೆ, ನೀನು ಮುಂದೆ ಹೋಗು,
ಒಬ್ಬ ಕನ್ಯಾರ್ಥಿಯನ್ನು ಕಳುಹಿಸಿ ಬಾಗಿಲನ್ನು ಮು
ಚ್ಚಿದರೆ ಮತ್ತೊಬ್ಬನು ಬಾಗಿಲನ್ನು ತಟ್ಟುತ್ತಾನೆ.

(ಹೋಗುವರು.)

ದೃಶ್ಯ 2.— ವೆನ್ನಿಸಿನ ಒಂದು ಬೀದಿ.

(ಬಸ್ಸಾನಿಯೊ ಜೊತೆಗೂಡಿ ಷೈಲಾಕನೊಡನೆ ಪ್ರವೇಶ)

ಷೈಲಾಕ್!— ಮೂರು ಸಾವಿರ ವರಹಗಳು; ಇರಲಿ.
ಬಸ್ಸಾನಿಯೊ!— ಅಯ್ಯಾ, ಮೂರು ತಿಂಗಳಿಗೆ.
ಷೈಲಾಕ್:— ಮೂರು ತಿಂಗಳಿಗೆ; ಅದರನಂತರ?
ಬಸ್ಸಾನಿಯೊ:— ಅದಕ್ಕೆ ನಾನು ನಿನಗೆ ಹೇಳಿದಂತೆ, ಆಂಟೋನಿಯೊ ಜಾಮೀನು ನಿಲ್ಲುವನು.
ಷೈಲಾಕ್:— ಆಂಟೋನಿಯೊ ಜಾಮೀನು ನಿಲ್ಲುವನು, ಆ ಮೇಲೆ?
ಬಸ್ಸಾನಿಯೊ:— ನೀನು ನನಗೆ ಸಹಕರಿಸುವೆಯೊ? ನನಗೆ ಆ ಸಂತೋಷವನ್ನೀಯುವೆಯೊ? ನಿನ್ನ ಉತ್ತರವೇನೆಂದು ನಾನು ತಿಳಿಯಲೇ?
ಷೈಲಾಕ್!— ಮೂರು ಸಾವಿರ ವರಹಗಳು; ಮೂರು ತಿಂಗಳಿಗೆ; ಆಂಟೋನಿಯೋನು ಜಾಮೀನು!
ಬಸ್ಸಾನಿಯೊ:— ಅದಕ್ಕೆ ನಿನ್ನ ಉತ್ತರ?
ಷೈಲಾಕ್:— ಆಂಟೋನಿಯೋನು ಒಳ್ಳೆಯ ವ್ಯಕ್ತಿ.
ಬಸ್ಸಾನಿಯೊ:— ಅದಕ್ಕೆ ವ್ಯತಿರಿಕ್ತವಾಗಿ ಏನಾದರೂ ತಿಳಿದಿರುವೆಯೊ?

ಷೈಲಾಕ್:- ಓಹೋ, ಹಾಗೇನಿಲ್ಲ, ಇಲ್ಲ, ಇಲ್ಲ, ನಾನು ಅವನು ಒಳ್ಳೆಯ ವ್ಯಕ್ತಿಯೆಂದು ಹೇಳಿದ್ದು ಏಕೆಂದರೆ ಅವನು ಆರ್ಥಿಕವಾಗಿ ಚೆನ್ನಾಗಿದ್ದಾನೆ, ಎಂದು ನಿನಗೆ ತಿಳಿಸಲಿಕ್ಕೆ! ಹಾಗಿದ್ದರೂ ಅವನ ಪರಿಸ್ಥಿತಿ ಸಂದೇಹಕರವೆ! ಅವನ ಒಂದು ವ್ಯಾಪಾರ ಹಡಗೊಂದು ಟ್ರಿಪೋಲಿಗೆ, ಇನ್ನೊಂದು ಇಂಡಿಯಾದತ್ತ ಹೋಗಿದೆ, ನನಗೆ ತಿಳಿಯುತ್ತದೆ; ಅಷ್ಟೇ ಅಲ್ಲ, ವೆನ್ನಿಸ್ ಮಾರುಕಟ್ಟೆಯ ವರದಿಯಂತೆ ಅವನ ಮೂರನೇ ಹಡಗೊಂದು ಮೆಕ್ಸಿಕೋಗೆ, ನಾಲ್ಕನೇದು ಇಂಗ್ಲೆಂಡಿಗೆ ಅಲ್ಲದೆ ಅವನ ಬೇರೆ ವ್ಯಾಪಾರವೂ ಇತರ ದೇಶಗಳಲ್ಲಿ ದುಂದುಗಾರಿಕೆಯಲ್ಲಿ ಅಡ್ಡಿಹೋಗಿದೆ, ಆದರೇನು? ಹಡಗುಗಳು ಬರೀ ಹಾಳು ಹಲಗೆಗಳು; ನಾವಿಕರು ಬರೀ ಮನುಷ್ಯರು; ನೆಲದಲ್ಲಿ ಇಲಿಗಳಿರುವಂತೆ ನೀರಿನಲ್ಲೂ ಇವೆ, ಅದರಂತೆಯೇ ನೀರುಗಳ್ಳರು ಮತ್ತು ನೆಲದ ಕಳ್ಳರು, ಎಂದರೆ ನಾನನ್ನುವುದು ಸಮುದ್ರಗಳ್ಳರು ಎಂದು! ಅದಲ್ಲದೆ ನೀರಿನಿಂದ, ಗಾಳಿಯಿಂದ ಮತ್ತು ಬಂಡೆಕಲ್ಲುಗಳಿಂದಾಗುವ ಅಪಾಯ ಬೇರೆ! ಮನುಷ್ಯನು ಇದ್ದು ಇಂತದ್ದೆಲ್ಲ ಆಗುವ ಸಂಭವವಿದೆ, ಸಾಕೇ? ಮೂರು ಸಾವಿರ ವರಹಗಳು? ಅವನಿಂದ ಕರಾರನ್ನು ಬರೆಸಿಕೊಳ್ಳುವುದು ಹಿತವೆಂದು ನನಗೆ ತೋರುತ್ತದೆ,

ಬಸ್ಸಾನಿಯೋ!— ನೀನು ನಿಶ್ಚಯವಾಗಿಯೂ ಬರೆಸಿಕೊಳ್ಳಬಹುದು,

ಷೈಲಾಕ್!— ಹೌದು, ನಿಜವಾಗಿಯೂ ನಾನು ಬರೆಸಿಕೊಳ್ಳಬಹುದು. ಅದು ನಿಶ್ಚಯ; ನಾನು ಜಾಮೀನು ಪಡೆಯಬಹುದು; ಅದನ್ನು ನಾನು ನೆನಪಿಡುವೆನು. ನಾನು ಆಂಟೋನಿಯೋ ಜೊತೆಯಲ್ಲಿ ಮಾತಾಡಬಹುದೆ?

ಬಸ್ಸಾನಿಯೋ:- ನಿನಗೆ ಇಷ್ಟವಿದ್ದರೆ ನಮ್ಮೊಡನೆ ಊಟಮಾಡು,

ಷೈಲಾಕ್:- ಹೌದು, ಹಂದಿ ಮಾಂಸದ ವಾಸನೆ ಬೇರೆ, ನಜರೇತಿನ ನಿಮ್ಮ ಮಹಾಪುರುಷನು ಮಾಟಮಂತ್ರ ಪ್ರಯೋಗದಿಂದ ಸೈತಾನನನ್ನು ತುಂಬಿರುವ ಆ ಮಾಂಸವನ್ನು ತಿನ್ನಲಿಕ್ಕೆ; ನಾನು ನಿಮ್ಮೊಡನೆ ವ್ಯವಹರಿಸುವೆನು; ವ್ಯಾಪಾರ ಮಾಡುವೆನು; ಮಾತಾಡುವೆನು; ನಡೆಯುವೆನು ಇತ್ಯಾದಿ, ಆದರೆ ನಿಮ್ಮೊಡನೆ ಊಟಮಾಡಲಾರೆನು, ಕುಡಿಯಲಾರೆನು, ಒಟ್ಟಿಗೆ ನಿಂತು ಪ್ರಾರ್ಥಿಸಲಾರೆನು. ವೆನ್ನಿಸ್‌ನ ಮಾರುಕಟ್ಟೆಯಲ್ಲಿ ಏನು ಸಮಾಚಾರ? ಅದಾರು ಇಲ್ಲಿ ಬರುತ್ತಿರುವವನು?

(ಆಂಟೋನಿಯೋನ ಪ್ರವೇಶ.)

ಬಸ್ಸಾನಿಯೋ:- ಇವನು ಮಾನ್ಯ ಆಂಟೋನಿಯೋನು.

ಶೈಲಾಕ್ :— (ಸ್ವಗತ) ಊಳಿಗದಂಗಡಿಯವ ಹಾಗೆ ತೋರುವನಂತೆ ಇವನು ಎತ್ತ ದೈನ್ಯದಿಂದ ಕಾಣುತಿರುವನಲ್ಲ! ಇವನೊಬ್ಬ ಕ್ರೈಸ್ತನಾದ ಕಾರಣ ನಾನು ಇವನನ್ನು ನಿಂದಿಸುವೆನು, ಆದರೆ ಅದಕಿಂತಲೂ ಇವನು ಜನರಿಗೆ ಮಿತಿಮೀರಿ ಸಾಲವನು ಕೊಟ್ಟು, ವೆನ್ನಿಸಿನಲಿ ನಮಗೆ ಬಡ್ಡಿಯ ದರವನ್ನು ಇಳಿಸುತ್ತಿರುವನು, ಇವನನು ಒಮ್ಮೆ ನನ್ನ ಹಿಡಿತಕ್ಕೆ ಸಿಕ್ಕಿದರೆ ನನಗೆ ಇವನಲ್ಲಿರುವ ಹಳೆ ಹಗೆಯನ್ನು ತೀರಿಸುತ್ತಲಾ ನನ್ನ ದ್ವೇಷವನು ಬೆಳೆಸಿ ಉಬ್ಬುವೆನು. ನಮ್ಮ ಪವಿತ್ರವಾದ ಜನಾಂಗವನೆ ದ್ವೇಷಿಸುವನು; ಅಲ್ಲದೆ ವ್ಯಾಪಾರಿಗಳು ಒಡಗೂಡುವ ವೆನ್ನಿಸಿನ ಆವರಣಕಟ್ಟೆಗಳಲ್ಲಿ ಜರೆಯುವನು; ನಾನು ಲಾಭವನು ನ್ಯಾಯದಿಂದ ಗಳಿಸಿರಲವನದನು ಬಡ್ಡಿಯೆಂದನ್ನುವನು; ನಾನು ಇವನನು ಕ್ಷಮಿಸಿದರೆ ಈ ನನ್ನ ಕುಲವೇ ನಶಿಸಲಿ!

ಬಸ್ಸಾನಿಯೋ :— ಶೈಲಾಕ್, ನೀನು ಆಲಿಸುವಿಯೆ?

ಶೈಲಾಕ್ :— ನನ್ನ ಇಂದಿನ ಆರ್ಥಿಕ ಸ್ಥಿತಿಯನ್ನು ಕುರಿತಾಗಿ ನನ್ನೊಳಗೆನೇ ನಾನು ವಾದಿಸುತ್ತಿರುವೆನಲ್ಲದೆ ನನ್ನ ಜ್ಞಾಪಕಕೆ ಟಕಿದ ಊಹೆಯಂತೆ ನನಗೆ ಈ ಕ್ಷಣವೆ ಪೂರ್ತಿ ಮೂರುಸಾವಿರ ವರಹಗಳನೊದಗಿಸಲು ಅಸಾಧ್ಯ. ಅದರಿಂದೇನು? ನನ್ನ ಕುಲದ ಧನಿಕ ಯಹೂದ್ಯ ಟ್ಯೂಬಲನು ನನಗೆ ಹಣವನ್ನು ಈಯುವನು. ಅಂತಾದರೂ ತಾಳು! ಎಷ್ಟು ತಿಂಗಳು ಕಾಲಕೆ ಅದು ನಿನಗೆ ಬೇಕಾಗುವುದು?
(ಅಂಟೋನಿಯೋಗೆ) — ಸನ್ಮಾನ್ಯನೆ, ನಿನಗೆ ಶುಭ ಕೋರುವೆನು; ಪೂಜ್ಯನಾದ ನಿನ್ನ ಹೆಸರು ನಮ್ಮ ನಾಲಗೆಗಳಲ್ಲಿ ಕಡೆಗೆಂಬಂತೆ ಉರುಳಿತು!

ಅಂಟೋನಿಯೋ :— ಶೈಲಾಕ್, ಆದೇನಿದ್ದರೂ ಹೇಳುವೆನು, ಕೇಳು. ನಾನು ಹಣವನ್ನು ಪಡೆಯುತ್ತ, ಅಥವಾ ಹೆಚ್ಚಿ ಇರುವುದನು ಬಡ್ಡಿಗೆ ಕೊಡುತ್ತ ಅಲ್ಲವೆ ಸಾಲವಾಗಿ ಹೊಂದುತ್ತ ವ್ಯವಹರಿಸಿದ್ದಿಲ್ಲ. ಆದರೂ ನನ್ನ ಮಿತ್ರನಿಗೆ ಅಗತ್ಯ ಬೇಕಾಗಿ

ಕುಪಿತರಿಂದ ನಾನೀಗ ಆ ನನ್ನ ನಿಯಮವನ್ನ
ನೆ-ರವೇರ ಮಾಡುವೆನು.

(ಬಸ್ಸಾನಿಯೊಗೆ) ಅವನು ಎಷ್ಟು ಹಣವನ್ನು ಕೊಡುವನು ಎಂಬುದಾಗಿ ಅವನಿಗೆ ತಿಳಿದಿದೆಯೆ?

ಶೈಲಾಕ್:- ಹ-ಹ-ಹ, ಮೂರು ಸಾವಿರ ವರಹಗಳು

ಆಂಟೋನಿಯೊ:- ಮೂರು ತಿಂಗಳ ಅವಧಿಗೆ_

ಶೈಲಾಕ್:- ಮೂರು ತಿಂಗಳು! ನಾನು ಮರೆತು ಹೋಗಿದ್ದೆ. ನೀನು ಹೇಳಿದೆ; ಇರಲಿ, ಹಾಗಾದರೆ ನಿನ್ನ ಕರಾರು! ನಾನು ಅದನ್ನು ಒಮ್ಮೆ ನೋಡುವೆ. ಆದರೆ ಕೇಳು: ಹಣವನ್ನು ಬರೀ ಬಡ್ಡಿಗೆ ನೀನು ಕೊಡುತ್ತಿದ್ದುದು ಇಲ್ಲವೆಂದಂದೆಯಷ್ಟೆ. ಇತರರಿಂದ ಸಾಲವನು ನಿನ್ನ ಹಿತಕ್ಕೆ ಪಡೆದುದೂ ಇಲ್ಲ!

ಆಂಟೋನಿಯೊ:- ನಾನು ಎಂದೂ ಹಾಗೆ ಉಪಯೋಗಿಸೆನು,

ಶೈಲಾಕ್:- ಜೇಕಬನು ಅವನ ಚಿಕ್ಕಪ್ಪ ಲಾಬನನ ಕುರಿಗಳನು ಮೇಯಿಸುವಾಗ— ಈ ಜೇಕಬನು ನಮ್ಮ ಪವಿತ್ರ ಏಬ್ರಹಾಮನ (ವಿ)ಜ್ಞಾಳಿಸಿದ ಅವನ ತಾಯಿಯು ಅವನಿಗಾಗಿ ನಿರ್ಮಿಸಿದ) ಮೂರನೇ ತಲೆಮಾರಿನ ಮಾಲೀಕ— ಅಹಾ ಅವನು ಮೂರನೆಯವನು,

ಆಂಟೋನಿಯೊ:- ಅವನೇನು ಮಾಡಿದನು? ಅವನು ಬಡ್ಡಿಯನ್ನು ತೆಗೆದುಕೊಂಡನೆ?

ಶೈಲಾಕ್:- ಇಲ್ಲ, ಹಣಕ್ಕೆ ಬಡ್ಡಿ ತೆಗೆದುಕೊಂಡುದಿಲ್ಲ, ನೀನು ಹೇಳುವ ತೆರನಲ್ಲ, ನಿಯಮಾನುಸಾರ ಪಡೆದ ಬಡ್ಡಿ ಅದು. ಜೇಕಬನೇನು ಮಾಡಿದನೆಂಬುದನು ನೆನಪಿಡು. ಲಾಬನನೂ ಮತ್ತು ಅವನು ಆಗ ತಾನೆ ಹುಟ್ಟಿದ ಮತ್ತು ಮಚ್ಚೆ ಗುರುತುಳ್ಳ ಹಾಕಿದ ಕುರಿಮರಿಗಳು ಜೇಕಬನ ಪಾಲಿಗೆ ಬರಬೇಕೆಂದು ಅವರಿಬ್ಬರು ತಮ್ಮೊಳಗೆ ಒಪ್ಪಿದರು. ಹೆಣ್ಣು ಕುರಿಗಳು ಶರದೃತುವಿನಲ್ಲಿ ಕಾಮವಶವಾಗಿ ಗಂಡುಕುರಿಗಳ ಒಡಗೂಡಲು ಉದ್ರೇಕಗೊಂಡ ಜೀವಿಗಳು ಅವುಗಳ ಉದ್ರೇಕವನು ಕತ್ತರಿಸಿ ಅದನ್ನು ಮಧ್ಯಪಟ್ಟೆಯು ಹೆಣ್ಣು ಕುರಿಗಳಿಗೆ ಅಂಟಿಸುವನು. ಅನಂತರ ಅವು ಗರ್ಭತಳೆದು ವಿವಿಧ ವರ್ಣದ ಮರಿಗಳನು ಹಾಕಲು ಅವು ಜೇಕಬನ ಪಾಲಿಗೆ ಹೋಗುವುವು; ಆ ನೀಚರ ಅಭಿವೃ

ದ್ದಾಗ ಆದೊಂದು ಪಾರಿಯೆತ್ತಿನಿಂದ ಜೇಕಬನು ಅದ
ರಿಂದ ರಕ್ಷಿಸಲ್ಪಟ್ಟನು. ಆದರೆ ಜನರು ಕ
ದಿಯದೆ ಇದ್ದರೆ ವಿತ್ತವ್ಯಯವು ನಿಜವಾಗಿಯೂ
ಶುಭದಾಯಕವು!

ಆಂಟೋನಿಯೋ:— ಅಯ್ಯಾ, ಅದೊಂದು ವೃತ್ತಿ; ಜೇಕಬನು ಕೈಗೊಂ
ಡ ದಿನದುಡಿಮೆ; ಅದು ಆವನ ಸಾಧನದಿಂದ ಇಲ್ಲದ
ಕೆಲಸ. ಅದನು ಮಾಡಿಸುವುದು ರೂಪಿಸುವುದಿಲ್ಲ
ದೈವಿಕ! ಅದಿರಲಿ, ಬಡ್ಡಿಯನು ಪಡೆಯುವುದು ನ್ಯಾ
ಯವೆಂಬುದನು ಸಾಧಿಸಲು ನೀನೀ ಬೈಬಲ್‌ನ ಪ್ರ
ಸಂಗವನು ಹೇಳಿದೆಯೆ? ಅಥವಾ ಇದೀಗ ನಿ
ನಂದ ಆ ಚಿನ್ನ ಮತ್ತು ಬೆಳ್ಳಿಯೇ ಆ ಹೆಣ್ಣು
ಕುರಿ ಮತ್ತು ಗಂಡುಕುರಿಗಳೇ?

ಷೈಲಾಕ್:— ಅದೇನೆಂದು ಹೇಳಲು ನನಗೆ ಸಾಧ್ಯವಿಲ್ಲ. ಆ
ವುಗಳು ಬೇಗನೆ ಹೆಚ್ಚುವಂತೆ ನಾನು ಮಾಡು
ತ್ತೇನೆ. ಆದರೆ ಮಾನ್ಯನೆ, ನನ್ನಲ್ಲಿ ಲಕ್ಷ್ಯವಿಡು,

ಆಂಟೋನಿಯೋ:— (ಸ್ವಗತ) ನೀನಿದನು ಗಮನಿಸಿಕೋ,
ಬಸ್ಸಾನಿಯೋ, ತನ್ನ ಕಾರ್ಯ ಸಾಧನೆಗೆ ಸೈತಾ
ನನೂ ಸ್ಮೃತಿ ವಚನಗಳನುದಾಹರಿಸಬಲ್ಲನು.
ದುರಾತ್ಮನು ಪವಿತ್ರವಾದುದನು ಸಾಕ್ಷ್ಯವನ್ನಾ
ಗಳಿಸಿ ಕೊಡುವುದು ಅಧಮನು ಮುಗುಳ್ನಕ್ಕಂತೆ.
ಹೊರಗೆ ಸೊಗಸಾಗಿ ತೋರಿ ಅಂತರ್ಯದಲಿ ಕೊಳೆ
ತ ಹುಸಿ ಸೇಬು ಹಣ್ಣಿನೋಲು ಹುಸಿಯು ಹೊರಗೆ ಬಹು ನ
ಯವಾಗಿ ಸೊಗಸೆನಿಸುವುದು!

ಷೈಲಾಕ್:— ಮೂರು ಸಾವಿರ ವರಹಗಳು. ಬಹು ಸಮರ್ಪಕವ
ಹಾ ಮೊತ್ತ ಅದು. ಹನ್ನೆರಡು ತಿಂಗಳುಗಳಲ್ಲಿ
ಮೂರು — ಅಂತಿರಲು ಬಡ್ಡಿಯ ದರವು ಎಷ್ಟಾಗು
ವುದೆಂದು ನೋಡುವೆನು.

ಆಂಟೋನಿಯೋ:— ಷೈಲಾಕನೆ, ನಾವೇನು ಈ ನಿನ್ನ ಹಂಗಿನ
ಲ್ಲಿ ಇರಬೇಕೋ ಏನು?

ಷೈಲಾಕ್:— ಮಾನ್ಯ ಆಂಟೋನಿಯೋ, ಹಲವು ಸಲ ಮತ್ತು ಆಗಿಂ
ದಾಗ್ಗೆ ಆ ರಿಯಾಲ್ಟೋ ಮಾರುಕಟ್ಟೆಯಲಿ ನೀನೆ
ನ್ನ ಹಣ ನನ್ನ ಬಡ್ಡಿಯ ದರಗಳನು ಕುರಿತು ಅಪ
ಹಾಸ್ಯ ಮಾಡಿದ್ದೀಯಾದರೂ ನಾನು ಅದನೆಲ್ಲ
ನಿರ್ಲಕ್ಷ್ಯತೆಯ ತಾಳ್ಮೆಯಿಂದ ಸಹಿಸಿದ್ದೇನೆ.
ಏಕೆಂದರೆ ಸಹನೆಯಲಿ ಕ್ಷಮಿಸುವುದೆ ನಮ್ಮ

ಜನಾಂಗದ ಕವಚವೆಂದು ಭಾವಿಸಿದೆ. ನೀನೆನ್ನನ್ನು ಅವಿಶ್ವಾಸಿಯೆಂದು, ದ್ರೋಹಿ, ನಾಯಿಯೆಂದೆಲ್ಲ ಹೇಳಿದೆ. ನನ್ನೀ ಯಹೂದಿ ನಿಲುವಂಗಿಗೆ ಉಗುಳಿದೆ. ಏಕೆ? ನನ್ನ ಹಣಕ್ಕೆ ಬಡ್ಡಿಯನ್ನು ನಾನು ಪಡೆಯುತ್ತಿರುವದರಿಂದ! ಇರಲಿ, ಈಗ ನನ್ನ ಸಹಾಯವು ನಿನಗೆ ಬೇಕಾಯಿತೆಂಬಂತಿದೆ. ಅಂತೆಯೆ ಆಗಲಿ. ಇದೀಗ ನೀನು ನನ್ನ ಬಳಿಗೆ ಬಂದು, "ಷೈಲಾಕನೆ, ನಮಗೆ ಹಣದ ಅವಶ್ಯಕತೆಯಿದೆ," ಎಂದು ಹೇಳುವೆ. ನಿನ್ನ ಮನೆಯ ಹೊಸ್ತಿಲಲಿ ನೀನು ಅಂದೆನ್ನ ಗಡ್ಡಕ್ಕೆ ಉಗುಳಿದೆ. ಅಪರಿಚಿತನನು ನಾನು, ಒಂದು ಬೀದಿಯ ನಾಯಿಯೆಂದೆನ್ನುತ್ತಾ ಕಾಲನ್ನು ನೆಲಕ್ಕೆ ಅಪ್ಪಳಿಸಿ ನನ್ನನು ಅತಿ ತಿರಸ್ಕಾರದಿಂದ ಗದರಿಸಿದೆ. ನಿನಗೀಗ ಹಣವು ಅಗತ್ಯ ಬೇಕಾಗಿದೆ. ನಿನಗೇನನ್ನಲಿ? ಹಣವು ನಾಯಿಯ ಬಳಿ ಇರುವುದೇ? "ಎಂದು ನಾನೆನ್ನಬಾರದೆ? ಅಸಹ್ಯನೆನಿಸಿದ ನನ್ನಲ್ಲಿ ಮೂರು ಸಾವಿರ ವರಹ ಇರಲೆಂತು ಸಾಧ್ಯ? ದಾಸಾನುದಾಸನ ರೀತಿಯಲ್ಲಿ ಮಣಿದು ಉಸಿರು ಬಿಗಿದಿಟ್ಟು ಮೆಲ್ಲನೆಯ ದೈನ್ಯತೆಯಲಿ ನಿನಗನ್ನಲೆ?

"ಸನ್ಮಾನ್ಯನೆ, ಕಳೆದ ಬುಧವಾರ ನನಗೆ ನೀನು ಉಗುಳಿದೆ; ಮಗದೊಂದು ದಿನ ನನ್ನನು ಧಿಕ್ಕರಿಸಿದೆ; ಅಂತೆಯೆ ಒಮ್ಮೆ ನೀನು ನನ್ನನು ನಾಯಿಯೆಂದೂ ಕರೆದೆ — ಈ ನಿನ್ನ ಉಪಕಾರಕ್ಕೆ ಅಷ್ಟು ಹಣವನ್ನಿದೋ ಸಾಲವಾಗಿ ಕೊಡುವೆನು."

ಆಂಟೊನಿಯೋ: — ನಾನು ನಿನ್ನನು ಅದೇ ರೀತಿಯಲಿ ಪುನಃ ಕರೆಯಬಹುದು; ಪುನಃ ನಿನಗೆ ಉಗಿಯಬಹುದು; ಅಂತೆಯೆ ಧಿಕ್ಕರಿಸಲೂ ಬಹುದು; ನೀನು ಈ ಹಣವನ್ನು ಸಾಲವಾಗಿ ಕೊಡುವುದಾದರೆ ನಿನ್ನ ಮಿತ್ರರಿಗೆ ಕೊಡುವಂತೆ ಕೊಡಬೇಡ, ಏಕೆಂದರೆ ಸ್ನೇಹವು ಯಾವಾಗ ಸ್ನೇಹಿತನಿಂದ ಬರೀ ಖಾಲಿ ಉಕ್ಕನ್ನು ಬಡ್ಡಿಯಾಗಿ ಪಡೆದಿದೆ? ಏನಿದ್ದರೂ ಅದನು ನಿನ್ನ ವೈರಿಗೆ ಸಾಲವಾಗಿ ಕೊಡು. ಅವನದನು, ಹಿಂದಿರುಗಿ ಕೊಡಲು ತಪ್ಪಿದರೆ ದಿಟ್ಟತನದಿಂದ ಜುಲ್ಮಾನೆಯನು ಹೇಗೂ ವಸೂಲು ಮಾಡಬಹುದು.

ಷೈಲಾಕ್:— ನೀನು ನೋಡುತ್ತಿರುವಿ, ಏಕೆ? ಸಿಡಿದು ಆರ್ಭಟಿಸುವಿ, ಹೇಗೆ? ನಿಮ್ಮೊಡನೆ ಗೆಳೆಯನಂತೆಯೇ ಇದ್ದು ನಿಮ್ಮ ಅಭಿಮಾನವನ್ನು ನಾನು ಗಳಿಸಬಹುದು, ಅದಲ್ಲದೆಯೇ ನೀನು ನನ್ನಲ್ಲಿ ಹೊರಿಸಿದಾ ಅಪಮಾನವೆಲ್ಲವನ್ನು ಮರೆತುಬಿಡುವೆ. ನಿನಗೆ ಸದ್ಯಕೆ ಬೇಕಿರುವುದನ್ನು ನಾನು ಕೊಡುವೆನು. ನನ್ನ ಹಣಕ್ಕೊಂದು ಕಾಸನ್ನೂ ಸಹ ಬಡ್ಡಿಯಾಗಿ ತೆಗೆದುಕೊಳ್ಳುವುದಿಲ್ಲ. ನಾನೇನನ್ನೂ ಕೇಳಲಾರೆನು. ಸಹೃದಯತೆಯಿಂದಿದನ್ನು ನಾನೀಯುವೆನು!

ಬಸ್ಸಾನಿಯೋ:— ಹೇಳಿದಂತೆಯೇ ಮಾಡಿದರೆ ಅದು ಸಹೃದಯತೆಯಾಗಬಹುದು.

ಷೈಲಾಕ್:— ಆ ಸಹೃದಯತೆಯನ್ನು ನಾನು ತೋರಿಸುವೆನು. ಇರಲಿ, ಈಗ ವಕೀಲನ ಬಳಿಗೆ ಹೋಗುವ. ಅಲ್ಲಿ ನಿನ್ನ ಒಂದೇ ಒಂದು ಕರಾರಿಗೆ ಸಹಿ ಹಾಕಿ ಮುದ್ರೆ ಹಾಕುವ. ಉದಾಸೀನತೆಯ ಸರಸದಲಿ ಅದರಲ್ಲಿ ನಮೂದಿಸಲಾದ ಹಣವನ್ನು ಅಲ್ಲಿ ಹೇಳಿದ ದಿನದಲ್ಲಿ ಅದೇ ಸ್ಥಳದಲ್ಲಿ ಕರಾರಿಗನುವಾಗಿ ಕೊಡಲು ತಪ್ಪಿದರೆ ಅದಕ್ಕೆ ಜುಲ್ಮಾನೆಯಾಗಿ ನೀನೆನಗೆ ನಿನ್ನ ದೇಹದ ನನಗಿಷ್ಟವಾದ ಕಡೆಯಿಂದಲೇ ಒಂದು ಪೌಂಡು ತೂಕದ ಮಾಂಸವನ್ನು ಚೂರಿಯಿಂದ ಕುಯ್ದು ಅದನು ನನಗೆ ಸಲ್ಲಿಸುವುದು.

ಆಂಟೋನಿಯೋ:— ಸಂತೋಷದಿಂದ ಒಪ್ಪುವೆನು. ಆ ಕರಾರಿಗೆ ನಾನು ಸಹಿ ಹಾಕುವೆನು. ಯೆಹೂದ್ಯನೊಬ್ಬನು ತುಂಬಾ ದಯಾಳುವಾಗಿಯೇ ಇರುವನೆಂದೆನ್ನುವೆನು.

ಬಸ್ಸಾನಿಯೋ:— ನೀನು ನನಗಾಗಿ ಅಂಥ ಕರಾರಿಗೆ ಸಹಿ ಹಾಕದಿರು. ನನ್ನ ಅವಶ್ಯಕತೆಯನ್ನು ಕುರಿತು ನಾನು ಬೇರೆ ಆಲೋಚಿಸುವೆನು.

ಆಂಟೋನಿಯೋ:— ಏಕೆ? ಏನೂ ಹೆದರದಿರು. ನಾನು ಅದನ್ನು ಕಳೆದುಕೊಳ್ಳಲಾರೆನು. ಈ ಎರಡು ತಿಂಗಳೊಳಗೆ ಕರಾರಿನಲ್ಲಿ ಸೂಚಿಸಿದುದಕ್ಕಿಂತ ಒಂದು ತಿಂಗಳಿಗೆ ಮುಂಚೆಯೇ ಅದರಲ್ಲಿ ಕಾಣಿಸಿದ ಹಣದ ಮೂರು ಪಾಲಿನ ಮೂರರಷ್ಟು ದೊರಕುವುದೆಂದು ನಾನು ನಿರೀಕ್ಷಿಸುವೆನು.

ಷೈಲಾಕ್:— ಹೋ! ತಂದೆ ಎಬ್ರಹಾಮನೆ,
ಈ ಕ್ರೈಸ್ತರದೆಂಥಾ ಜನ! ಅವರ ಕಠಿಣ ವ್ಯ
ವಹಾರವೇ ಇತರರ ಅಭಿಪ್ರಾಯಗಳನ್ನು ಸಂ
ದೇಹದಿಂದ ಗ್ರಹಿಸಲು ಅವರಿಗೆ ಕಲಿಸುತ್ತವೆ.
ಇದನ್ನೊಮ್ಮೆ ದಯಮಾಡಿ ನನಗೆ ಹೇಳು: ತನ್ನ ಕ
ರತ್ತುಗಳನ್ನು ಇಂದೆಯೆ ಅವನು ಮೀರಿದರೂ ಅ
ವನಿಂದ ಪಡೆಯುವ ದಂಡದಿಂದೆನಗೆ ದೊರೆಯುವು
ದೇನು? ನರನಿಂದ ಕಿತ್ತು ತೆಗೆದೊಂದು ಸೇರು ನ
ರಮಾಂಸವಾವ ರೀತಿಯು ಲೆಕ್ಕಿಸಿದರೂ ಕುರಿ
ದನ ಆಡು ಮಾಂಸದಂತಲದೆ ಹೆಚ್ಚೇನಿದೆ? ಅ
ವನ ಪ್ರೇಮವನ್ನು ಪಡೆಯಲು ಮತ್ತು ಅವನೊಪ್ಪ
ದರೆ ನಮ್ಮ ಗೆಳೆತನವನುಳಿಸಿಕೊಳ್ಳಲು ಯತ್ನ
ಸಿದೆನು. ಅವನಿಗದು ಬೇಕೆಂದಾದರೆ ಹಾಗೆ
ಯೇ ಆಗಲಿ. ಆದರೆ ನನ್ನ ಸದಭಿಮಾನವ
ನು ತಪ್ಪಾಗಿ ಭಾವಿಸದಿರಿಯೆಂದು ಬೇಡುವೆನು,

ಆಂಟೋನಿಯೋ:— ಹೌದು, ಷೈಲಾಕ್, ನಾನು ಈ ಕರಾ
ರಿಗೆ ನನ್ನ ಒಪ್ಪಿಗೆಯ ಮುದ್ರೆಯನು ಹಾಕುವೆನು,

ಷೈಲಾಕ್:— ಹಾಗಾದರೆ ಬೇಗನೆ ನನ್ನನ್ನು
ವಕೀಲನ ಕಚೇರಿಯಲಿ ಕಾಣು. ಅವನಿಗೆ ಈ
ವಿನೋದದ ಮುಚ್ಚಳಿಕೆಯ ಬಗ್ಗೆ ವಿವರಿಸು. ಅ
ಷ್ಟರಲಿ ನಾನು ಹಣವನ್ನು ತರುವೆನು. ಹಾಗೆಯೇ
ನನ್ನ ಮನೆಯತ್ತ ನಡೆದು ಬಹು ಖರ್ಚುಗಾರನ
ಭಯಪೀಡಿತ ಕಾವಲಿಗನನು ನೋಡಿಕೊಂಡೀ
ಕ್ಷಣದಲಿ ನಿನ್ನೊಡನಿರುವೆನು.

ಆಂಟೋನಿಯೋ:— ಹಾ, ಬೇಗನೆ ಹೋಗು, ಮಾನ್ಯ ಯಹೂದ್ಯನೆ!
(ಷೈಲಾಕ್ ಹೋಗುವನು.)
ಯಹೂದಿಯನು ಕ್ರೈಸ್ತನೆನಿಸಿದಾಗ ಅವನು ಸ
ಹೃದಯನೆನಿಸುವನು.

ಬಸ್ಸಾನಿಯೋ:— ಹೊಗಳಿಕೆಯ ಮಾತುಗಳನು ಕೇಡುಗರ ಮನ
ಸ್ಸನ್ನು ನಾನು ಮೆಚ್ಚಲಾರೆನು,

ಆಂಟೋನಿಯೋ:— ಬಾ, ಇದರಲಿ ಸೋಜಿಗವದೇನೂ
ಇಲ್ಲ. ನನ್ನ ಹಡಗುಗಳು ಹಿಂದಕ್ಕೆ ಬರುವುದ
ನದು ಅವಧಿಗಾ ಒಂದು ತಿಂಗಳಿಗೆ ಮುಂಚೆಯೇ
ಬಂದು ತಲುಪುವುವು.
(ಹೋಗುವರು.)

ಅಂಕ — ೨

ದೃಶ್ಯ ೧ — ಪೋರ್ಷ್ಯಳ ಮನೆಯಲ್ಲಿ - ಬೆಲ್ಮಂಟ್.

(ಪ್ರವೇಶ — ಬಿಳಿ ನಿಲುವಂಗಿಗಳಲ್ಲಿ ಕಂದುವರ್ಣದ
ಜನ, ಮೊರೊಕ್ಕೊದ ರಾಜಕುಮಾರ ಮತ್ತು ಅ
ವನ ನಾಲ್ವರು, ಪೋರ್ಷ್ಯ, ನೆರಿಸ್ಸಾ ಮತ್ತು
ಇತರರೊಡನೆ.)

ಮೊರೊಕ್ಕೊ:— ಉದಯಕಾಲದ ಸೂರ್ಯ
ನ ನೆರೆಮನೆಯವನಾಗಿ ಬಳಿಯಲ್ಲಿ ನನ್ನ ರೂ
ಪ ಬೆಳವಣಿಗೆ-ಈ ವರ್ಣದಿಂದ ಒಡಗೊಂಡ ಪೋ
ಷಾಕಿಗೆ ನನ್ನನ್ನು ಮೆಚ್ಚದಿರಬೇಡಿ. ರವಿದೇವ
ಫೀಬಸನು ಉತ್ತರದ ಹಿಮಗಡ್ಡೆಯನ್ನು ಕರಗಿ
ಸಲು ಅಸಾಧ್ಯವಾದಷ್ಟು ತಂಪಾದ ಸ್ಥಳದ
ಲಿ ಜನಿಸಿದ ಚೆಲುವಾಂತ ಜೀವಿಯನ್ನೇ ನನಗೆ ತ
ನ್ನಿರಿ. ನಾವು ಇಬ್ಬರಲ್ಲಿ ಅವನ ರಕ್ತವೋ ನನ್ನ
ದೋ ಅತಿ ಕೆಂಪೆಂಬುದಕ್ಕೆ ಸಾಕ್ಷ್ಯವೆನಿಸಲು ಈ
ನಿನ್ನ ಎದೆ ಒಲವ ಕೋರಿದನು ನೋಡುವೆವು. ಸಖ್ಯಳು
ಹ ಕನ್ಯೆಯೆ, ಇದೋ ಕೇಳಿನನು, ನನ್ನೀ ಗೆಲುವು ಶೂ
ರರನೆ ಹೆಚ್ಚಿಸಿದೆ. ನನ್ನ ನಲವಿಗೆ ಸಾಕ್ಷ್ಯ
ವೆನಿಸುಯಿದನನ್ನುವೆನು, ಮಾನ್ಯೆಯರು ಎನಿಸಿದಾ
ನಮ್ಮ ದೇಶದ ಕನ್ಯೆಯರು ಈ ನಿಲುವನ್ನೊಲಿದು
ಒಪ್ಪಿರುವರು. ಹರಸಿಯು ಹ ನನ್ನರಸಿಯೆ, ನಿನ್ನ
ಮನದೊಲವನ್ನೊಲಿಸಲಿಕ್ಕೆ ಅಲ್ಲದೆಯೆ ಮತ್ತಾವ
ದಕ್ಕೂ ನನ್ನ ಈ ನಿಲುವನ್ನು ಬದಲಿಸೆನು.

ಪೋರ್ಷ್ಯ:— ಯಾರನ್ನು ಆರಿಸಬೇ
ಕೆಂಬುದನ್ನು ಕುರಿತಾಗಿ ನಾನೊಬ್ಬ ಕನ್ಯೆಯ
ಕಣ್ಣುಗಳ ನಲವಿನಾ ನಿರ್ದೇಶನಕ್ಕೆ ಕಾದು
ದಿಲ್ಲ. ಅಲ್ಲದೆ ನನ್ನ ವಿಧಿಯು ನಾನಾಗಿಯೇ
ವರನನ್ನು ಆರಿಸಿಕೊಳ್ಳದಂತಾಗಿಸಿದೆ. ಆದ
ರೆ ನಾನು ಅರ್ಹತೆಗಳುಳ್ಳವನನ್ನು ತನ್ನ ಮತಸೋಇಚ್ಛೆ
ಹೋಗಿದ್ದರೆ ಮತ್ತು ಅವನು ತನ್ನ ಜಾಣ್ಮೆಯಿಂ
ದಾನು ಆರಿಸಿಕೊಳ್ಳಲು ತಡೆಯೊಡ್ಡದೆ ಹೋಗಿ
ದ್ದರೆ ನನ್ನನ್ನು ಹೆಂಡತಿಯಾಗಿ ಪಡೆಯುವವನಿಗೆ,
ನಿನಗೆ, ವಿಖ್ಯಾತ ರಾಜಕುಮಾರನಾದ ನಿನ
ಗೆ, ನನ್ನ ಪ್ರೀತಿಯನ್ನು ಬಯಸಿ ಬರುವ ಯಾರೊ
ಬ್ಬ ಪ್ರಣಯಿಗೂ ಒಪ್ಪುವಂತಿರುವೆನು!

ಮೊರೊಕ್ಕೊ:— ಹಾಗಂದುದಕ್ಕಾದರೂ ನಾನು ನಿನಗೆ ನಮಿಸುವೆನು. ನನ್ನ ವಿಧಿ ಹೇಗಿದೆಯೆಂದು ನೋಡಲಾ ಆ ಸ್ವರ್ಣ ಡಬ್ಬದ ಬಳಿಗೆನ್ನನು ಕರೆದುಕೊಂಡು ಹೋಗೆಂದು ವಿನಂತಿಸುವೆನು, ಸೋಫಿಯನ್ನನ್ನು ಮತ್ತು ಸುಲ್ತಾನ ಸೊಲೊಮನನ ಮೂರು ಜಮೀನುಗಳನ್ನು ಗೆದ್ದ ಆ ಪರ್ಷಿಯಾದ ರಾಜಕುಮಾರನನ್ನೂ ಕೊಂದ ಈ ಖಡ್ಗದಾಣೆಯಿಟ್ಟು ಉದ್ರೇಕಕ್ಕೊಳಗಾದ ಕಣ್ಣುಗಳ ನೋಟವನ್ನು ಮೀರಿ ನಾನು ಅವರತ್ತ ಇನ್ನೂ ತೀಕ್ಷ್ಣದೃಷ್ಟಿಯನ್ನು ಬೀರಬಲ್ಲೆನು, ಭೂಮಿಯ ಮೇಲಿನ ಎದೆಗಾರಿಕೆಯನ್ನು ಎದುರಿಸಬಲ್ಲೆನು. ಮೊಲೆಹಾಲು ಕುಡಿಯುವ ಮರಿಕರಡಿಮರಿಗಳನ್ನು ತಾಯಿಕರಡಿಯಿಂದ ಕಸಿದುಕೊಳ್ಳಬಲ್ಲೆನು, ಹೌದು, ಆಹಾರಕ್ಕೆ ಕಾಯುತ್ತ ಘರ್ಜಿಸುವ ಸಿಂಹವನ್ನು ಎತ್ತಿ ಮಾನಿನಿಯೇ, ನಿನ್ನನು ಪಡೆಯುವ ತವಕದೊಡೆ ಅಣಕಮಾಡಬಲ್ಲೆನು. ಆದರೆ ಆಹಾ, ಆ ಹರ್ಕ್ಯುಲಸ್ ಮತ್ತು ಲಿಚಸನು ಒಟ್ಟುಗೂಡಿ ಪಗಡೆಯನ್ನು ಆಡಿದರೆ ಅವರಲ್ಲಿ ಉತ್ತಮ ಆಟಗಾರ ಯಾರು? ದುರ್ಬಲ ಕೈಗಳೆಸೆಯುವ ಮೆಲ್ಮೆ ವಿಧಿವಶಾತ್ ಜಯವನ್ನು ಹೊಂದಿ ಆಟವಾಡಿದೆಯಲ್ಲೆ! ಅಲ್ಸಿಡಸನು ತನ್ನೊಬ್ಬ ಸೇವಕನಿಂದ ಸೋಲಿಸಲ್ಪಟ್ಟನು.. ಹೀಗೆ ಕುರುಡು ದೈವವು ನನ್ನನ್ನು ನಡೆಸುತ್ತಿರಲು ಜಯವು ಅನರ್ಹನಿಗೆ ಸೇರಲು ನಿರಾಶೆಯಲಿ ನಾನು ಕೊರಗಿ ಸಾಯುವಂತಾಗಲಿ!

ಪೋರ್ಷ್ಯ:— ನಿನ್ನ ಜಾತಕ ಫಲವನ್ನು ನೀನು ಕೈಗೆತ್ತಿ ನೋಡು; ಒಂದೋ ಆರಿಸಲು ಕೇಳಲೂ ಬಾರದು, ಇಲ್ಲದಿದ್ದರೆ ಅದಕ್ಕಿಂತ ಮುಂಚೆಯೇ ಸಂಕಲ್ಪ ಮಾಡಿಕೊಳ್ಳಬೇಕು. ಬಹುಶಃ ನೀನು ತಪ್ಪಾಗಿ ಆರಿಸಿದರೆ ವಿವಾಹವನ್ನು ಕುರಿತು ಬೇರೊಬ್ಬ ಕನ್ಯೆಯೊಡನೆ ಅನಂತರ ಮಾತುಕತೆಯಾಡಬಾರದೆಂಬ ವಿಷಯವು ಈಗಲೇ ನೆನಪಿರಲಿ!

ಮೊರೊಕ್ಕೊ!— ನೆನಪಾಗದಿರಲೂ ಬಹುದು; ಬನ್ನಿ, ನನ್ನ ಹಣೆಬರಹವೆಂತಿದೆಯೆಂದು ನೋಡಿಸಿರಿ.

ಪೋರ್ಷ್ಯ!— ಮೊದಲು ದೇವಸ್ಥಾನಕ್ಕೆ ಹೊರಡುವುದು; ಊಟವು ಮುಗಿದನಂತರ ನಿನ್ನದೆ

ಮೊರೊಕ್ಕೊ:— ಶಿಥಿಲವು ಎಂತೆಂದು ನೋಡುವರು!
ಆಗ ನಾವು ಯೋಗ್ಯವೇ ಸರಿ.
ಆನ್ ಮಾನವರ ಪೈಕಿ ಸುದೈವಿಯೊ ದುರ್ದೈವಿ
ಯೋ ಎಂದು ನಿರ್ಣಯಿಸಲಿಕ್ಕೆ.
(ಹೋಗುವರು.)

—— x ——

ದೃಶ್ಯ — ೨ — ವೆನ್ನಿಸ್‌ನ ಒಂದು ಬೀದಿಯಲ್ಲಿ.
(ಪ್ರವೇಶ — ಲಾನ್ಸೆಲಾಟ್ — ಒಬ್ಬನೆ ವಿದೂಷಕ.)

—— x ——

ಲಾನ್ಸೆಲಾಟ್:— ನನ್ನ ಯಜಮಾನ, ಈ ಯಹೂದಿಯನಿಂದ ಅಗಲಿ ಓಡಿಹೋಗಲು ನನ್ನ ಆತ್ಮವು ನಿಶ್ಚಯವಾಗಿಯೂ ನನಗೆ ಸಹಾಯಕವಾಗುವುದು, ಆದರೆ ಆ ದೆವ್ವವು ನನ್ನ ಮೊಣಕೈಯ ಬಳಿಯಲ್ಲಿ ಇದ್ದು ನನ್ನನ್ನು ಹೀಗನ್ನಲು ಪ್ರೇರೇಪಿಸುತ್ತದೆ: “ಗೊಬ್ಬೊ, ಲಾನ್ಸೆಲಾಟ್ ಗೊಬ್ಬೊ, ಅಥವಾ ಯೋಗ್ಯನೆನಿಸಿದ ಗೊಬ್ಬೊ, ಅಥವಾ ಒಳ್ಳೆಯ ಲಾನ್ಸೆಲಾಟ್ ಗೊಬ್ಬೊ, ನೀನು ಕಾಲ್ತೆಗೆ, ಹೊರಡು, ಓಡು.” ಆದರೆ ನನ್ನ ಮನಸ್ಸಾಕ್ಷಿ ಹೇಳುತ್ತದೆ, “ಬೇಡ, ಹೇಳುವುದನ್ನು ಕೇಳು, ಸತ್ಯವಾದಿ ಲಾನ್ಸೆಲಾಟ್, ಹೇಳುವುದನ್ನು ಗಮನಿಸು; ಸತ್ಯಶೀಲ ಗೊಬ್ಬೊ,” ಅಥವಾ ಹಿಂದೆ ಹೇಳಿದಂತೆ, “ಸತ್ಯವಾದಿ ಲಾನ್ಸೆಲಟ್ ಗೊಬ್ಬೊ, ಓಡಿಹೋಗಬೇಡ. ಹಾಗೆ ಓಡಿಹೋಗುವ ಭಾವನೆಯನ್ನು ತಿರಸ್ಕರಿಸು.” ಆದರೆ ತುಂಬಾ ಧೈರ್ಯಶಾಲಿಯಾದ ದೆವ್ವವು ನನ್ನ ಮೂಟೆಯನ್ನು ಕಟ್ಟಲು ಆಜ್ಞಾಪಿಸುತ್ತದೆ. “ಹೋಗು” ಎಂದು ದೆವ್ವವು ಹೇಳುತ್ತದೆ. “ಹೋಗಿಯೇ ಬಿಡು” ಎಂಬುದಾಗಿ ಹೇಳುತ್ತದೆ. “ದೇವರಾಣೆಗೂ ಧೈರ್ಯವನ್ನು ತಾಳು, ಓಡು,” ಎನ್ನುತ್ತದೆ ದೆವ್ವ. ಸರಿ, ಧೈರ್ಯಹೀನವಾದ ನನ್ನ ಆತ್ಮವು ಸಭ್ಯರೀತಿಯಲ್ಲಿ ನನಗನ್ನುವುದೇನೆಂದರೆ, “ನನ್ನ ಸತ್ಯವಂತನಾದ ಮಿತ್ರ ಲಾನ್ಸೆಲಾಟ್,” ಒಬ್ಬ ಸತ್ಯವಂತನ ಮಗನಾದುದರಿಂದ, ಅಥವಾ ಒಬ್ಬ ಸತ್ಯವಾದಿ ತಾಯಿಯ ಪುತ್ರನಾದುದರಿಂದ, ಏಕೆಂದರೆ ನನ್ನ ತಂದೆಯು ಅದೇನೋ ಅಲ್ಪವನ್ನೆಸಗಿದ್ದರಿಂದ, ಏನೋ ಮನಸ್ಸು ಇನ್ನೂ ಬೆಳೆಯಬೇಕಿತ್ತು; ಅವನಿಗೆ ಬೇರೇನೋ ಬಗೆಯ ಅಭಿರುಚಿ ಇತ್ತು — ಹೇಗೂ ಅದಿರಲಿ; ನನ್ನ ಆತ್ಮವು ಹೇಳುತ್ತದೆ— “ಹೋಗಬೇಡ” ಎಂದು! “ಹೋಗು”, ಎಂದು ದೆವ್ವವು

ಹೇಳುತ್ತದೆ, "ಹೋಗಬೇಡ" ಎಂದು ಆತ್ಮ ಹೇಳುತ್ತದೆ. "ಆತ್ಮವೇ," ನಾನನ್ನುತ್ತೇನೆ. "ನೀನು ಸರಿಯಾಗಿ ಬುದ್ಧಿ ಹೇಳುವೆ." "ದೆವ್ವವೆ," ನಾನು ಹೇಳುತ್ತೇನೆ. "ನೀನೂ ಸರಿಯಾಗಿ ಬುದ್ಧಿ ಹೇಳುವೆ." ನನ್ನ ಆತ್ಮಕ್ಕೆ ಒಪ್ಪುವಂತೆ ಮಾಡಲು ನಾನು ನನ್ನ ಯಹೂದಿ ಧನಿಯ ಬಳಿ ಇರಬೇಕು. (ದೇವರೇ ಆ ಧನಿಯನ್ನು ತೊಲಗಿಸು.) ಅವನು ಒಂದು ಬಗೆಯ ಶನೀಶ್ವರ. ಆ ಯಹೂದ್ಯನಿಂದ ಓಡಿಹೋಗುವುದೆಂದರೆ ಧನಿಯೇ ಆಗಿರುವ ಅವನಿಂದ ನನ್ನನ್ನು ದೆವ್ವವೇ ರಕ್ಷಿಸಬೇಕು. ನಿಜಕ್ಕೂ ಆ ಯಹೂದ್ಯನು ಶನೀಶ್ವರನ ಅವತಾರಿಯೇ ಆಗಿರುವನು, ನನ್ನ ಆತ್ಮವು ನನಗೆ ಕಾಣುವಂತೆ ಒಂದು ರೀತಿಯಲ್ಲಿ ಕಠಿಣವಿರುವುದರಿಂದ ನಾನು ಯಹೂದ್ಯನಲ್ಲಿಯೇ ಇರಬೇಕೆಂದು ಸೂಚಿಸುತ್ತದೆ. ಆದರೆ ದೆವ್ವವು ಇನ್ನಷ್ಟು ಸ್ನೇಹಪೂರ್ವಕವಾಗಿ ಹೇಳುತ್ತದೆ. ಆದುದರಿಂದ ನಾನನ್ನುತ್ತೇನೆ, "ದೆವ್ವವೇ, ನಾನು ಓಡಿಹೋಗುವೆನು, ನನ್ನ ಹಿಮ್ಮಡಿಗಳು ನಿನ್ನ ಆಜ್ಞೆಯನ್ನು ನಡೆಸಲು ಸಿದ್ಧವಾಗಿವೆ, ನಾನು ಓಡುವೆನು.

(ಒಂದು ಕುಕ್ಕೆಯನ್ನು ಹಿಡಿದುಕೊಂಡು ಮುದುಕ ಗೊಬ್ಬೋನ ಪ್ರವೇಶ.)

ಗೊಬ್ಬೊ! — ಎಲಾ ಯುವಕನೆ, ನೀನೆ, ಎಲಾ, ನಿನ್ನನ್ನು ಬೇಡುವೆನು; ಆ ಧನಿ ಯಹೂದಿಯವನ ಮನೆಗೆ ದಾರಿ ಯಾವುದು?

ಲಾನ್ಸಲಾಟ್:— (ಸ್ವಗತ) ಅಯ್ಯೋ ದೇವರೆ, ಇದು ನಿಜಕ್ಕೂ ನನ್ನನ್ನು ಹುಟ್ಟಿಸಿದ ನನ್ನ ತಂದೆ. ತುಂಬಾ ಕುರುಡನಾದುದರಿಂದ ನನ್ನನ್ನು ಸ್ಪಷ್ಟ ಕಾಣುತ್ತಿಲ್ಲ. ನಾನು ಅವನನ್ನು ಮರುಳುಗೊಳಿಸಲು ಪ್ರಯತ್ನಿಸುವೆನು.

ಗೊಬ್ಬೊ:— ಎಳೆಯ ಯುವಕನೆ, ಯಜಮಾನ ಯಹೂದಿಯವನ ಮನೆಗೆ ಹೋಗಲು ದಾರಿ ಯಾವುದು?

ಲಾನ್ಸಲಾಟ್:— ಹಾಗೆ ನಡೆಯುತ್ತಾ ಮುಂದಿನ ತಿರುವಿನಲ್ಲಿ ಬಲಗಡೆ ತಿರುಗು. ಆದರೆ ಮತ್ತೊಂದು ತಿರುವಿನಲ್ಲಿ ಎಡಕ್ಕೆ ನಡೆ. ಅಮ್ಮಾ ಮೇರೀ, ಮನಸ್ಸಿಲ್ಲ? ಮುಂದಕ್ಕೆ ಹೋದಂತೆಯೇ ಆ ತಿರುವಿನಲ್ಲಿ ಯಾವೆಡೆಗೂ ತಿರುಗದೆ ನೆಟ್ಟಗೆ ನಡೆದಾಗ ಅಲ್ಲಿಯೇ ಯಹೂದಿಯವನ ಮನೆ.

ಗೊಬ್ಬೊ:— ದೈವಭಕ್ತಾದಿಗಳ ದಯೆ ಇರಲಿ. ತಲುಪುವುದಕ್ಕೆ ಇದು ಪ್ರಯಾಸದ ದಾರಿ. ಲಾನ್ಸಲಾಟ್ ಎಂಬುವನು ಅವನಲ್ಲಿ ಇದ್ದಾನೆಯೆ? ಅಲ್ಲಿ ವಾಸಿಸುತ್ತಾನೋ ಇಲ್ಲವೋ. ಹೇಳುತ್ತೀಯ ಅಪ್ಪ?

ಲಾನ್ಸ್‌ಲಾಟ್:— ನೀನು ಆ ಯುವಕ ಲಾನ್ಸ್‌ಲಾಟನ ಹೆಸರು ಎತ್ತಿದಿಯಾ? (ಸ್ವಗತ) ಈಗ ನನ್ನನ್ನು ಗುರ್ತಿಸಿಕೊಳ್ಳಿ. ಇದೀಗ ಅವನನ್ನು ಗೋಳಾಡಿಸುತ್ತೇನೆ. (ಪ್ರಕಾಶ) ಆ ಯುವಕ ಲಾನ್ಸ್‌ಲಾಟ್‌ನ ಹೆಸರು ಎತ್ತಿದಿಯಾ?

ಗೊಬ್ಬೊ!— ಇಲ್ಲ, ಅಯ್ಯಾ, ಅವನೊಬ್ಬ ಒಳ್ಳೆಯ ಬಡ ವ್ಯಕ್ತಿಯ ಮಗ. ಅವನ ತಂದೆ, ನಾನು ಹೇಳುವೆನಾದರೂ ಒಪ್ಪ ಪ್ರಾಮಾಣಿಕನು; ತುಂಬಾ ಬಡವನು; ದೇವರ ದಯೆಯಿಂದ ಅವನು ಇನ್ನೂ ಬದುಕಬಹುದು.

ಲಾನ್ಸ್‌ಲಾಟ್:— ಸರಿ, ಅವನ ತಂದೆಯು ಅವನ ಇಚ್ಛೆಯಂತೆ ಬದುಕಲಿ. ಅವನ ಮಗ ಲಾನ್ಸ್‌ಲಾಟ್‌ನ ವಿಷಯವಾಗಿ ~~ಈಗ~~ ಮಾತಾಡುವ.

ಗೊಬ್ಬೊ:— ಓಹೋ ಮಾನ್ಯನೆ, ಆ ಲಾನ್ಸ್‌ಲಾಟನು ನಿನ್ನ ಗೆಳೆಯನೆ? ಹೇಳಪ್ಪ, ಧನಿಯೆ!

ಲಾನ್ಸ್‌ಲಾಟ್:— ನಾನು ಬೇಡುವುದೇನೆಂದರೆ, ಅಪ್ಪ, ಈಗ ಆ ಯುವಕ ಲಾನ್ಸ್‌ಲಾಟನನ್ನು ಕುರಿತಾಗಿ ಮಾತಾಡುವ ಎಂದು ಕೇಳಿಕೊಳ್ಳುತ್ತೇನೆ.

ಗೊಬ್ಬೊ!— ಅಹಾ, ನನ್ನ ಲಾನ್ಸ್‌ಲಾಟ್, ನಿನ್ನಿಂದ ನಿನ್ನ ಯಜಮಾನನಿಗೆ ಸಂತೋಷವಾಗಲಿ.

ಲಾನ್ಸ್‌ಲಾಟ್:— ಯುವಕ ಲಾನ್ಸ್‌ಲಾಟ್, ಅಪ್ಪ, ಆ ಯುವಕ ಲಾನ್ಸ್‌ಲಾಟ್ ಇವನ ವಿಷಯವಾಗಿ ಮಾತಾಡಬೇಡಿರಿ; ಏಕೆಂದರೆ ಅವನು ಹಣೆಬರಹ, ಅದೃಷ್ಟ, ವಿಧಿ ಇತ್ಯಾದಿಗಳಂತೆ ಶಾಸ್ತ್ರಗಳಲ್ಲಿ ಹೇಳುವ ಮೂವರು ಸೋದರಿಯರಿರುವಂತೆ. ಆ ಲಾನ್ಸ್‌ಲಾಟ್ ಇವನು ತನ್ನ ದುರ್ದೈವದಿಂದ ನಿಜಕ್ಕೂ ಕಾಲವಾದನು, ಅಥವಾ ತನ್ನ ಸರಳಭಾಷೆಯಲ್ಲಿ ಹೇಳುವುದಾದರೆ ಅವನು ಸ್ವರ್ಗಕ್ಕೆ ಹೋದನು.

ಗೊಬ್ಬೊ:— ಹಾ ಅಪ್ಪ, ಮೇರಿಯೆ, ಅಂತಾಗದಿರಲಿ. ಆ ಹುಡುಗನು ನನ್ನ ಪ್ರಾಯಕ್ಕೆ ಊರುಗೋಲಾಗಿದ್ದನು, ನನಗೆ ನಿಜಕ್ಕೂ ಆಧಾರಪ್ರಾಯನಾಗಿದ್ದನು.

ಲಾನ್ಸ್‌ಲಾಟ್!— (ಸ್ವಗತ) ನಾನೇನು ಒಂದು ದೊಣ್ಣೆಯಂತೆ, ಗುಡಿಸಲನ್ನಾಧರಿಸುವ ಗಳೆಗಳಂತೆ, ಊರುಗೋಲಿನಂತೆ ಕಾಣುವೆನೇ? (ಪ್ರಕಾಶ) ತಂದೆಯೇ, ನನ್ನನ್ನು ಗೊತ್ತಿದೆಯೇ!

ಗೊಬ್ಬೊ!— ಅಯ್ಯೋ ಧನಿಯೆ, ನಾನು ಪೂರ್ತಿ ಕುರುಡನಾಗಿದ್ದೇನೆ. ನನಗೆ ನಿನ್ನನ್ನು ತಿಳಿಯದು.

ಲಾನ್ಸ್‌ಲಾಟ್:— ಅಯ್ಯೋ, ನಿಜವೆ? ನಿನಗೆ ನನ್ನ ಕಣ್ಣುಗಳು ಇದ್ದಿದ್ದರೆ ನಾನಾರೆಂದು ನೀನು ತಿಳಿಯುತ್ತಿರಲಿಲ್ಲ.

ಜಾಣನಾದ ತಂದೆಗೆ ಮಾತ್ರ ಅವನ ಮಗನನ್ನು ತಿಳಿಯಲು ಸಾಧ್ಯ. ಓಹೋ ಅಜ್ಜ, ನಾನು ನಿನ್ನ ಮಗನ ವಿಷಯವಾಗಿ ವಾರ್ತೆಯನ್ನು ಅರುಹುವೆನು. (ಮೊಣಕಾಲು ಊರುವನು) ನೀನೆನಗೆ ಆಶೀರ್ವದಿಸು. ಸತ್ಯವು ಪ್ರಕಾಶಕ್ಕೆ ಬರಲೇ ಬೇಕಾಗುವುದು. ಕೊಲೆಯು ಬಹುಕಾಲ ಗುಟ್ಟಾಗಿ ಇರದು. ಒಬ್ಬನ ಮಗ ಹಾಗೆ ಇರಬಹುದು; ಎಂತಿದ್ದರೂ ಕೊನೆಗೆ ಸತ್ಯವು ನಿಜಕ್ಕೂ ಹೊರಬರುವುದು.

ಗೊಬ್ಬೊ:— ಅಯ್ಯಾ, ದಯಮಾಡಿ ಹೇಳು, ಬೇಡುತ್ತೇನೆ; ನೀನು ಎದ್ದು ನಿಲ್ಲು. ನೀನು ನಿಜಕ್ಕೂ ನನ್ನ ಲಾನ್ಸೆಲಾಟ್, ನನ್ನ ಮಗ ಅಲ್ಲ.

ಲಾನ್ಸೆಲಾಟ್:— ಕ್ಷಮಿಸು! ನಾವಿನ್ನು ಕಣ್ಣುಮುಚ್ಚಾಲೆ ಆಟವಾಡುವುದು ಬೇಡ. ನೀನು ನನ್ನನ್ನು ಆಶೀರ್ವದಿಸು. ನಾನೇ ಲಾನ್ಸೆಲಾಟ್. ನಿನ್ನ ಹುಡುಗನಾಗಿದ್ದ ಆ ನಿನ್ನ ಮಗ ಮುಂದಕ್ಕೂ ನಿನ್ನ ಮಗು.

ಗೊಬ್ಬೊ:— ನೀನು ನನ್ನ ಮಗನೆಂಬುದನ್ನು ನನಗೆ ಊಹಿಸಲಿಕ್ಕೇನೇ ಅಸಾಧ್ಯವಾಗಿದೆ.

ಲಾನ್ಸೆಲಾಟ್:— ಆ ವಿಷಯದಲ್ಲಿ ನಾನೇನು ಹೇಳಲೋ ತಿಳಿಯೆನು, ಅದೆಂತಿದ್ದರೂ ನಾನೇ ಲಾನ್ಸೆಲಾಟ್. ಆ ಯೆಹೂದಿಯವನ ವ್ಯಕ್ತಿ. ನಿನ್ನ ಹೆಂಡತಿ ಮಾರ್ಗರಿಯೇ ನಿಜವಾಗಿಯೂ ನನ್ನ ತಾಯಿ.

ಗೊಬ್ಬೊ:— ಹೌದು, ಅವಳ ಹೆಸರು ಮಾರ್ಗರಿ. ನೀನು ಲಾನ್ಸಲಾಟನೇ ಆದರೆ ನನ್ನಾಣೆಗೂ ನೀನು ನನ್ನದೇ ಮಾಂಸ ಮತ್ತು ರಕ್ತವಾಗಿದೆ. ಓಹೋ, ಅವನು ದೇವರನ್ನು ಮೊಣಕಾಲೂರಿ ಪ್ರಾರ್ಥಿಸುತ್ತಿರಬಹುದು. ಆಹಾ, ನಿನಗೆಷ್ಟು ಗಡ್ಡವಿದೆ! ಹೇರನ್ನು ಹೊರುವ ನನ್ನ ಕುದುರೆ ಡೊಬ್ಬಿನ್‌ನ ಕುಚ್ಚು ಬಾಲದಲ್ಲಿರುವುದಕ್ಕಿಂತ ಹೆಚ್ಚು ಕೂದಲು ನಿನ್ನ ಗಡ್ಡದಲ್ಲಿ ಇದೆ.

ಲಾನ್ಸೆಲಾಟ್— (ಏಳುವನು) ಹಾಗಾದರೆ ಕುದುರೆ ಡೊಬ್ಬಿನ್‌ನ ಬಾಲವು ಹಿಂದುವರಿದು ಬೆಳೆಯುತ್ತಾ ಹೋಗುವಂತಿದೆ, ನನ್ನ ಮುಖದಲ್ಲಿರುವ ಗಡ್ಡಕ್ಕಿಂತ ಹೆಚ್ಚು ಕೂದಲು ಅದರ ಬಾಲದಲ್ಲಿ ಇದ್ದುದು ಕಳೆದ ಬಾರಿ ನಾನು ನಿಜವಾಗಿಯೂ ನೋಡಿದೆನು.

ಗೊಬ್ಬೊ:— ದೇವಾ, ನೀನೆಷ್ಟು ಬದಲಾಗಿರುವೆ! ನೀನು ಮತ್ತು ನಿನ್ನ ಯಜಮಾನನೂ ಹೇಗೆ ಪರಸ್ಪರ ವ್ಯವಹರಿಸುವಿರಿ? ನಾನು ಅವನಿಗೊಂದು ಬಹುಮಾನವನ್ನು

ತಂದಿರುವೆನು, ಈಗ ನೀನು ಅವನೊಡನೆ ಒಪ್ಪಿಗೆ ನಡೆದುಕೊಂಡು ಚೆನ್ನಾಗಿರುವಿಯೆ?

ಲಾನ್ಸ್‌ಲಾಟ್:— ಅದಿರಲಿ! ನನ್ನ ಸ್ವಂತ ವಿಷಯವನ್ನು ಕುರಿತಾಗಿ ಹೇಳುವುದಾದರೆ ನಾನು ಅವನಿಂದ ಓಡಿ ಹೋಗಲು ನಿರ್ಧರಿಸಿರುವೆನಾದರೂ ನನ್ನ ಜೀವನಕ್ಕೆ ಸ್ವಲ್ಪ ಅನುಕೂಲತೆ ಒದಗಿಸಿಕೊಳ್ಳುವ ವರೆಗೂ ನಾನು ವಿಶ್ರಮಿಸುವೆನು, ನನ್ನ ಯಜಮಾನನು ಒಬ್ಬ ಯೆಹೂದಿಯು. ಅವನಿಗೆ ಒಂದು ಬಹುಮಾನ ಕೊಡುವುದೆ? ಅವನಿಗೆ ನೇಣು ಹಾಕಿಕೊಳ್ಳುವ ಒಂದು ಹಗ್ಗವನ್ನು ಕೊಡು. ಅವನ ಜೀತಮಾಡಿ ನಾನು ಉಪವಾಸ ಬೀಳುತ್ತಿದ್ದೇನೆ, ನನ್ನ ಪಕ್ಕೆಲುಬುಗಳೆಲ್ಲವು ಎಂಬುದನ್ನು ನೀನು ಬೆರಳಿನಿಂದ ಎಣಿಸಬಲ್ಲೆ. ತಂದೆಯೇ, ನೀನು ಬಂದೆಯಲ್ಲಾ ಎಂದು ಸಂತೋಷಿಸುತ್ತೇನೆ, ನನಗೆ ಹೊಸ ವಿಶಿಷ್ಟ ವಸ್ತ್ರಗಳನ್ನು ಈಗಿಂದೀಗಲೇ ಕೊಡುತ್ತಿರುವ ಆ ಧನಿ ಬಸ್ಸಾನ್ಯೋ ಎಂಬುವನಿಗೆ ನಿನ್ನ ಬಹುಮಾನವನ್ನು ಕೊಡು, ನಾನು ಅವನಲ್ಲಿ ದುಡಿಯದೆಯೆ ಇದ್ದ ಪಕ್ಷದಲ್ಲಿ ದೈವ ನಿರ್ಮಿತ ಈ ಭೂಮಿ ಎಲ್ಲಿಯ ವರೆಗೆ ಇದೆಯೋ ಅಲ್ಲಿಯ ವರೆಗೂ ಓಡಿ ಹೋಗುವೆನು, ಅಯ್ಯೋ, ಅಪೂರ್ವ ವಿಧಿಯೆ! ಅದೋ, ಅವನೇ ಇತ್ತ ಬರುತ್ತಿರುವನು, ತಂದೆಯೇ, ನಾನು ಆ ಯೆಹೂದಿಯನ ಸೇವೆಯಲ್ಲಿರುವ ವರೆಗೆ ಇವನಿಗೆ ನಾನೂ ಒಬ್ಬ ಯೆಹೂದಿಯನೇ ಆಗಿರುವೆನೆಂದು ತಿಳಿದುಕೋ.

(ಪ್ರವೇಶ — ಬಸ್ಸಾನಿಯೋ (ಲಿಯೊನಾರ್ಡೊ ಜತೆಯಲ್ಲಿ) ಮತ್ತು ಒಬ್ಬಿಬ್ಬರು ಅನುಯಾಯಿಗಳು.)

ಬಸ್ಸಾನ್ಯೋ:— ನೀನು ಹಾಗೆಯೇ ಮಾಡು, ಆದರೆ ಸಾಯಂಕಾಲ (ಐದು ಘಂಟೆಯು ಒಳಗಾದರೂ ನನಗೆ ಊಟಕ್ಕೆ ಸಿದ್ಧವಾಗುವಂತೆ ನೋಡು. ಈ ಪತ್ರಗಳನ್ನು ಟಪ್ಪಾಲಿಗೆ ಹಾಕಲು ಮರೆಯದಿರು. ನಿನ್ನ ವಸ್ತ್ರವನ್ನು ತೊಳಿಸು ಚೊಕ್ಕಟವಾಗಿಸು, ಮತ್ತು ಗ್ರ್ಯಾಶಿಯಾನೋನನ್ನು ನನ್ನ ಬಿಡಾರದತ್ತ ಬರುವಂತೆ ಸೂಚಿಸು.

(ಅವನ ಒಬ್ಬ ಸೇವಕನು ಹೋಗುವನು.)

ಲಾನ್ಸ್‌ಲಾಟ್:— ಅಪ್ಪಾ, ಅವನಿಗೇನೇ—

ಗೊಬ್ಬೊ— ಮಹನೀಯನೇ, ದೇವರು ನಿನಗೆ ಒಳ್ಳೆಯದು ಮಾಡಲಿ!

ಬಸ್ಸಾನ್ಯೋ:— ದಯಮಾಡಿರು, ನಾನೇನಾದರೂ ತಮಗೆ ಸಹಾಯ

ಏನಾಗಬಹುದೇ?

ಗೊಬ್ಬೊ:— ಸ್ವಾಮೀ, ನನ್ನ ಮಗನು ಇಲ್ಲಿ ಇರುವನು, ಕೇವಲ ಬಡ ಹುಡುಗ.

ಲಾನ್ಸಲಾಟ್:— ಧನಿಯೇ, ಬಡ ಹುಡುಗನಲ್ಲ. ನನ್ನ ತಂದೆಯು ವ್ಯಕ್ತವಾಗಿ ಹೇಳುವನು; ನಾನು ಆ ಧನಿಕ ಯೆಹೂದಿಯನ ಸೇವಕನೆಂದೆನ್ನಬಹುದು.

ಗೊಬ್ಬೊ:— ಸ್ವಾಮೀ, ಒಳ್ಳೆಯ ಕೆಲಸವನ್ನು ಮಾಡುವುದರಲ್ಲಿ ಅವನಿಗೆ ತುಂಬಾ ಆಸಕ್ತಿಯಿದೆ.

ಲಾನ್ಸಲಾಟ್:— ಸಂಕ್ಷೇಪದಲ್ಲಿ ಹೇಳುವುದಾದರೆ ನಾನು ಯೆಹೂದಿಯನ ಸೇವೆಯಲ್ಲಿರುವೆನು. ಆದರೆ ನನ್ನ ಅಭಿಲಾಷೆಯೇನೆಂದರು ನನ್ನ ತಂದೆಯು ವ್ಯಕ್ತವಾಗಿ ಹೇಳುವನು.

ಗೊಬ್ಬೊ:— ಅವನ ಯಜಮಾನ ಮತ್ತು ಅವನು, ಅವರೊಳಗೆ (ಮಾನ್ಯರಾದ ತಮ್ಮಲ್ಲಿ ಇಟ್ಟಿರುವ ಅಭಿಮಾನವನ್ನುಳಿದು) ಯಾವ ಬಗೆಯ ಪ್ರೀತಿ ಬಾಂಧವ್ಯವೇನೂ ಇಲ್ಲ.

ಲಾನ್ಸಲಾಟ್:— ಸಂಕ್ಷೇಪದಲ್ಲಿ ಹೇಳುವೆನು, ನಿಜವಿಚಾರವೆಂದರೆ ಆ ಯೆಹೂದಿಯನು ನನಗೆ ಅನ್ಯಾಯವನ್ನು ಬಗೆದಿರುವನು; ಬಗೆಯುತ್ತಾ ಇರುವನು, ನನ್ನ ಹಳಬ ತಂದೆಯು ಆ ವಿಷಯವಾಗಿ ನಿನಗನ್ನುವನು.

ಗೊಬ್ಬೊ:— ಪಾರಿವಾಳಗಳ ಮಾಂಸದ ಅಡುಗೆ ಈ ಪಾತ್ರೆಯಲ್ಲಿದೆ. ಧನಿಗಳಿಗೆ ಅದನ್ನು ಒಪ್ಪಿಸುವೆನು, ನನ್ನ ಮನವಿ ಏನೆಂದರೆ---

ಲಾನ್ಸಲಾಟ್:— ಬಹು ಸಂಕ್ಷೇಪದಲ್ಲಿ ಹೇಳುವುದಾದರೆ ನನ್ನ ಮಟ್ಟಿಗೆ ಆ ಮನವಿಯು ಅನವಶ್ಯಕವೆಂದು ಈ ಸತ್ಯಸಂಧ ಮುದುಕನಿಂದಲೇ ಧನಿಗಳು ತಿಳಿಯುವಿರಿ. ನಾನು ಹೇಳುವುದೇನೆಂದರೆ ನನ್ನ ತಂದೆ ಮುದುಕನಾಗಿದ್ದರೂ ಅವನು ಬಡವನು ಎಂಬುದಾಗಿ—.

ಬಸ್ಸಾನಿಯೊ:— ನೀವು ಇಬ್ಬರಿಗಾಗಿ ಒಬ್ಬನೇ ಮಾತಾಡಿ. ನೀನೇನು ಮಾಡಲು ಇಚ್ಛಿಸುವಿ?

ಲಾನ್ಸಲಾಟ್:— ತಮ್ಮ ಸೇವೆ, ಯಜಮಾನರೇ!

ಗೊಬ್ಬೊ:— ಮಾನ್ಯರೇ, ಅದೇ ನಮ್ಮ ಪ್ರಸ್ತಾಪದ ಅಂಶ.

ಬಸ್ಸಾನಿಯೊ:— ನನಗೆ ನಿಮ್ಮನ್ನು ಚೆನ್ನಾಗಿ ತಿಳಿದಿದೆ, ನಿಮ್ಮ ಮನವಿಯನ್ನು ಒಪ್ಪಿದೆ.

ನಿನ್ನ ಯಜಮಾನ ಷೈಲಾಕನೀ ದಿನ ನನ್ನೊ
ಡನೆ ವಿಚಾರಿಸುತ್ತಲಿದ್ದು ನಿನ್ನನು ಶಿಫಾರಸು
ಮಾಡಿಹನು. ಧನಿಕನಾ ಯೆಹೂದ್ಯನಲ್ಲಿ ಸೇವೆಯ
ನು ಬಿಡ ನಾಗರಿಕನಾದ ನಿನಗೆ ಒಪ್ಪುವುದೆಯೆಂ
ಬುದನು ನೀನು ಯೋಚಿಸು!

ಲಾನ್ಸ್‌ಲಾಟ್:- ಹಳೆ ನಾಣ್ಣುಡಿಯನ್ನು ನನ್ನ ದಣಿ ಷೈಲಾಕ್ ಮತ್ತು ಮಹಾಶಯರಾದ ತಮ್ಮ ವಿಚಾರಕ್ಕೆ ಹೊಂದುವಂತೆ ವ್ಯಕ್ತಗೊಳಿಸಿದಿರಿ. ಅವನಿಗೆ ಎಲ್ಲಾ ಇದೆಯಾದರೂ ನಿಮಗೆ ದೈವಾನುಗ್ರಹವಂತೂ ಇದೆ!

ಬಸ್ಸಾನಿಯೋ:- ನೀನು ವಿಷಯವನ್ನು ಸರಿ ಹೇಳಿದೆ! ತಂದೆಯೇ, ನಿನ್ನ ಮಗನೊಡನೆ ಹೋಗು. ನಿನ್ನ ಹಳೆ ಯಜಮಾನನ್ನು ನಾನೆಲ್ಲಿ ವಾಸಿಸುವೆನೆಂಬುದನ್ನು ನೀನು ವಿಚಾರಿಸು. (ಸೇವಕರಿಗೆ) —
ಇವನಿಗೆ ಇತರರೆಲ್ಲರದಕ್ಕಿಂತ ಉತ್ತಮವಾಗಿ ಕಾಣುವ ಕಸೂತಿ ಸಮವಸ್ತ್ರವನ್ನು ನೀಡಿಕೊಡು. ಅಂತಾಗುವಂತೆ ಮಾಡು!

ಲಾನ್ಸ್‌ಲಾಟ್:- ತಂದೆಯೇ, ಈಗ ಇನ್ನೊಂದೆಡೆ!
ನನಗೊಂದು ಹುದ್ದೆ ದೊರಕದು; ಇಲ್ಲ! ನನ್ನ ತಲೆಯಲ್ಲೊಂದು ನಾಲಗೆಯೇ ಇಲ್ಲ. ಇರಲಿ. (ಅಂಗೈ ನೋಡಿ) ಯಾರಾದರೊಬ್ಬನಿಗೆ ಇಟಲಿಯಲ್ಲಿ ಉತ್ತಮ ಭವಿಷ್ಯಸೂಚಕ ಅಂಗೈ ಇದ್ದುದಾದರೆ ನನಗೆ ಸುದೈವವಿದೆಯೆಂದ್ಹೇಳುವೆನು. ಈ ನನ್ನ ಗೆರೆ ಆಯುಷ್ಯವನ್ನು ಸೂಚಿಸುತ್ತದೆ. ಇಲ್ಲಿರುವ ಚಿಕ್ಕ ಗೆರೆಗಳು ಹೆಂಡತಿಯರೆಷ್ಟೆಂಬುದನ್ನು ತೋರಿಸುತ್ತವೆ. ಆಹಾ, ಹದಿನೈದು ಜನ ಹೆಂಡತಿಯರೆಂದರೆ ಏನೂ ಹೆಚ್ಚಲ್ಲ. ಹನ್ನೊಂದು ಜನ ವಿಧವೆಯರು ಮತ್ತು ನಾಲ್ಕು ಕನ್ಯೆಯರು. ಒಬ್ಬ ಸಾಮಾನ್ಯ ವ್ಯಕ್ತಿಗೆ ಒಳ್ಳೆಯ ಸಂಪಾದನೆ ಇದು ಸರಿ. ಆದಲ್ಲದೆ ಮೂರು ಬಾರಿ ನೀರಿನಲ್ಲಿ ಮುಳುಗಿ ಸಾಯುವುದರಿಂದ ಪಾರಾಗುವುದು; ಅಷ್ಟೇ ಅಲ್ಲ, ಮದುವೆಯಾಗಿ, ಆ ಸೀಮಾ ಗೆರೆ ತುಪ್ಪಳಗಳು ಹಾಸಿಗೆಯ ಬದಿಯಲ್ಲಿನ್ನರಿಗೆ ಜೀವನದಲ್ಲಿ ಬಹು ಅಪಾಯಕರ ಪರಿಸ್ಥಿತಿಯಲ್ಲಿ ಸಿಕ್ಕಿ ಬೀಳುವುದು. ಸುದೈವವು ಒಂದು ಹೆಂಗಸೆಂದಾದರೆ ನನ್ನ ಭವಿಷ್ಯವು ಉತ್ತಮವೆಂದೇ ಅನ್ನಬೇಕು. ತಂದೆಯೇ, ಬಾ. ಇನ್ನೊಂದು ಕ್ಷಣದಲ್ಲಿ ನಾನು ಯೆಹೂದಿಯನ ಕೆಲಸದಿಂದ ಬಿಟ್ಟು ಹೋಗುವೆನು.

(ಗೊಬ್ಬೊ ಜತೆಯಲ್ಲಿ ಹೋಗುವನು)

ಬಸ್ಸಾನಿಯೋ:- ಲಿಯೊನಾರ್ಡೊನೆ, ನಿನ್ನನು ಕೇಳಿಕೊಳ್ಳುವೆನು; ಇದನ್ನಾಲೋಚಿಸು. ಈ ವಸ್ತುಗಳನ್ನು ಹೊರಕ್ಕೆ ತಂದು ಕ್ರಮಪ್ರಕಾರ ಜನಕ್ಕೆ ದಾನವೀಯಬೇ

ಕು. ನೀನೀಗ ಬೇಗನೆ ಹಿಂದಿರುಗು. ನನ್ನ ಗೌ
ರವಾನ್ವಿತ ಪರಿಚಿತ ವ್ಯಕ್ತಿಯೊಡನೆಂದು ರಾ
ತ್ರಿ ಔತಣ ಕೊಡುವೆನು. ನೀನು ಬೇಗನೆ ಹೋಗು!

ಲೀನಾರ್ಡೊ:— ನನ್ನ ಸರ್ವಪ್ರಯತ್ನದೊಡನೆ ಇದನ್ನು ಸಾಧಿಸುವೆ.

(ಪ್ರವೇಶ – ಗ್ರಾಷ್ಯಾನೊ)

ಗ್ರಾಷ್ಯಾನೊ:— ನಿನ್ನ ಧನಿಯೆಲ್ಲಿ?

ಲೀನಾರ್ಡೊ:— ಸ್ವಾಮಿ, ಆ ಕಡೆ ಅಲ್ಲಿ ತಿರುಗಾಡುತ್ತಿರುವನು.

ಗ್ರಾಷ್ಯಾನೊ:— ಮಾನ್ಯ ಬಸ್ಸಾನಿಯೊ!

ಬಸ್ಸಾನಿಯೊ:— ಆಹಾ, ಗ್ರಾಷ್ಯಾನೊ!

ಗ್ರಾಷ್ಯಾನೊ:— ನಿನಗೊಂದು ಮನವಿ ನನ್ನಲ್ಲಿದೆ.

ಬಸ್ಸಾನಿಯೊ:— ನೀನದನ್ನು ಪಡೆದಿರುವೆ.

ಗ್ರಾಷ್ಯಾನೊ:— ನಿನಗಾಗುವುದಿಲ್ಲವೆನಬೇಡ. ಇದೀಗ ನಿನ್ನೊಡನೆಯೇ ನಾನು ಬೆಲ್ಮಂಟ್‌ಗೆ ಹೋಗಬೇಕು.

ಬಸ್ಸಾನಿಯೊ:— ಏಕೆ? ಸರಿ, ಹಾಗಾದರೆ ನೀನ್ ಹೋಗಲೇ ಬೇಕು. ಆದಾಗ್ಯೂ ಗ್ರಾಷ್ಯಾನೊ, ನಾನನ್ನುವುದನ್ನು ಕೇಳು! ನೀನು ಬಹಳ ಕಠಿಣ; ಬಹಳ ಉಗ್ರ; ನಿರ್ಭೀತ ಕಂಠಸ್ವರವದೆಲ್ಲ ಒಂದಿಷ್ಟು ಒಡಬೆರೆದಾಗ ನಮ್ಮಂಥವರಿಗೆ ಅವು ಸಾಮಾನ್ಯ ಗುಣದೋಷಗಳೆನ್ನಿಸಿ ಸಂತೃಪ್ತವಾಗಿಸುವುದು. ಆದರೆ ನಿನ್ನನ್ನು ತಿಳಿಯದೆಯೇ ಇರುವುದೆಲ್ಲಿ? ಏಕೆ? ಅಂತಾದಾಗ ಆ ನಿನ್ನ ನಡೆನುಡಿಯೇ ತುಂಬಾ ಸರಳತೆಯಂತೆಯೂ ತೋರುವುದು. ದಯಮಾಡಿ ಕೇಳು, ನಿನ್ನೊಳಗೆ ಇರುವ ಗಡಸುತನವನ್ನು ವಿನಯವ ತನಿರಸದೊಡನೆ ಬೆರೆಸಿ ಅದನ್ನು ಶಾಂತಗೊಳಿಸಲೆಳಸು. ಏಕೆಂದರೆ ನಿನ್ನ ಒರಟುತನವನ್ನು ನೋಡಿ ನಾನು ಹೋದೆಡೆಯಲ್ಲಿ ಜನ ನನ್ನಲ್ಲಿ ತಪ್ಪು ತಿಳಿದುಕೊಂಡರೆ ನನ್ನ ಕೆಲಸದಲ್ಲಿ ನಾ ನಿಚ್ಚ ನಂಬಿಕೆಯನ್ನು ಕಳೆದುಕೊಳ್ಳುವಂತಾಗಬಾರದು!

ಗ್ರಾಷ್ಯಾನೊ:— ಮಾನ್ಯ ಬಸ್ಸಾನಿಯೊ, ನಾನು ಹೇಳುವುದನ್ನು ಕೇಳು: ನಾನು ಸೌಮ್ಯತೆಯಿಂದ ತೋರ್ಪಡಿಸಿಕೊಳ್ಳದಿದ್ದರೂ ನಾನು ವಿನಯದಲ್ಲಿ ಪ್ರಮಾಣಪೂರ್ವಕವಾಗಿ ಮಾತಾಡುತ್ತಿರುವೆನು. ನನ್ನ ಜೇಬಿನಲ್ಲಿ ದೇವರ ಜಪದ ಪುಸ್ತಕವನಿಟ್ಟುಕೊಳ್ಳುತ್ತಿರುವೆನು. ನಾನು ಆದರದಲ್ಲಿ ಜನವನ್ನು ಕಾಣುತ್ತಿರು

ಮನಲ್ಲದೆ ದೇವರನ್ನು ಸ್ತುತಿಸುವಾಗ ಕಣ್ಣುಗ
ಳನ್ನು ಮುಚ್ಚುವೆನು. ಅನಂತರ ನಿಟ್ಟುಸಿರು ಬಿಡುತ್ತ
'ತಥಾಸ್ತು' ಎನ್ನುತ್ತ ತನ್ನ ಅಜ್ಜಿಯನ್ನು ಸಂತೋಷ
ಪಡಿಸಿ ತೋರಿಸುವ ನಿಷ್ಠೆಯ ವಿನಯ ಗುಣವನ್ನೆ
ಶ್ರದ್ಧೆಯಿಂದ ಅನುಸರಿಸುತ್ತಿರುವೆನು. ಇದಕ್ಕಿಂತ
ಹೆಚ್ಚಾಗಿ ನನ್ನನ್ನು ನಂಬಿರಿ.

ಬಸ್ಸಾನಿಯೊ:— ಸರಿ, ನಾವು ನಿನ್ನ ವರ್ತನೆಯನ್ನು ನೋಡುವೆವು.

ಗ್ರ್ಯಾಷ್ಯಾನೊ:— ಇಲ್ಲ, ಆದರೆ ಇಂದು ರಾತ್ರಿ ಅಲ್ಲ. ಈ ರಾ
ತ್ರಿ ನಾವೇನು ಮಾಡುತ್ತೇವೆ ಎಂಬುದರಿಂದ
ನೀನು ನನ್ನನ್ನು ಅಳೆಯಬಾರದು.

ಬಸ್ಸಾನಿಯೊ:— ಇಲ್ಲ, ಅಂತಾಗಿದರದು ಶೋಚನೀಯ;
ಅದಕ್ಕೆ ಬದಲಾಗಿ ನೀನು ಆ ಸಂತೋಷದ ಸ
ಮಯಕ್ಕೆ ತಕ್ಕಂಥ ಕೆಚ್ಚಿನ ಉಡುಗೆಯನುಟ್ಟುಕೋ,
ಎಂದು ಬೇಡುವೆನು, ಏಕೆಂದರೆ ಅತಿ ಆನಂ
ದದಿಂದ ನಮಗೆ ವಿಹರಿಸಲು ತಕ್ಕಂಥ ಮಿತ್ರರಿ
ರುವರು. ಈಗ ನಿನಗೆ ಶುಭವಾಗಲಿ. ನನಗೆ ಬೇ
ರೆಡೆ ಸ್ವಲ್ಪ ಕೆಲಸವಿದೆ!

ಗ್ರ್ಯಾಷ್ಯಾನೊ:— ನಾನು ಸಹ ಆ ಲೊರೆನ್ಸೊ ಮತ್ತಿತರರ ಬಳಿಗೆ
ಹೋಗಬೇಕು; ಆದರೆ ನಿನ್ನನ್ನು ನಾವು ರಾ
ತ್ರಿ ಊಟದ ವೇಳೆಗೆ ಕಾಣುವೆವು.

(ಹೋಗುವರು.)

ದೃಶ್ಯ 3 – ಷೈಲಾಕನ ಮನೆ, ವೆನ್ನಿಸ್.

(ಪ್ರವೇಶ – ಜೆಸ್ಸಿಕಾ ಮತ್ತು (ಲಾನ್ಸಲಾಟ್) ವಿದೂಷಕ.)

ಜೆಸ್ಸಿಕಾ:— ನನ್ನ ತಂದೆಯನ್ನು ಬಿಟ್ಟು ನೀನು ಅಗಲುವುದು ವಿ
ಷಾದದ ವಿಷಯ. ನಮ್ಮ ಮನೆಯೊಂದು ನರಕ ಸದೃಶ!
ಆದರೆ ವಿನೋದದ ಪಿಶಾಚಿ ನೀನು ಆ ಬೇ
ಸರದ ಬಹುಪಾಲು ಅಪಹರಿಸಿದ್ದೆ. ಹಾಗಿದ್ದ
ರೂ ನಿನಗೆ ಶುಭವಾಗಲಿ. ನಿನಗಿದೊಂದು ಹೊ
ನ್ನು ಹಣವಿದೆ, ಲಾನ್ಸಲಾಟ್! ಸಂಜೆ ಊಟದ ವೇಳೆ
ಗೆ ನಿನ್ನ ಹೊಸ ಯಜಮಾನನ ಮಿತ್ರ ಲೊರೆನ್ಸೊ
ನನ್ನು ಅವಶ್ಯ ಕಂಡು ಅವನಿಗೆ ಈ ಪತ್ರವನ್ನು
ಕೊಡು. ಯಾರಿಗೂ ಕಾಣದಂತೆ ಕೊಡು.

ಲಾನ್ಸಲಾಟ್:— ನಮಸ್ಕಾರ, ಹೋಗಿ ಬರುವೆನು. ಕಂಬನಿಯೊಂದೆ ನ

ನ್ನ ನಾಲಗೆಯನ್ನು ತಡೆಹಿಡಿಯುವುದು. ಸುಂದರಿ ವಿಧ
ರ್ಮೀಯಳೆ, ನಲವಿನ ಯಹೂದಿ ಕನ್ಯೆಯೆ, ನಿನ್ನನ್ನು
ಒಬ್ಬ ಕ್ರೈಸ್ತನು ಕುತಂತ್ರದಿಂದ ಪಡೆದಿರದೆ
ಯೇ ಇದ್ದರೆ ನಾನು ತುಂಬಾ ನಿರಾಶನಾಗುವೆ
ನು. ಆಗಲಿ, ನಮಸ್ಕಾರ; ಈ ಹುಚ್ಚು ಕಂಬನಿ
ಯು ಅದೇಕೋ ನನ್ನ ಮಾನವತ್ವವನ್ನು ಕುಂದಿಸು
ವುದು! ನಿನಗೆ ಶುಭವಾಗಲಿ, ಬರುವೆನು!

ಜೆಸ್ಸಿಕಾ:— ಶುಭವಾಗಲಿ, ಪ್ರಿಯ ಲಾನ್ಸಲಾಟ್.

(ಲಾನ್ಸಲಾಟ್ ಹೋಗುವನು.)

ಅಯ್ಯೋ, ನನ್ನ ತಂದೆಯ ಮಗಳೆಂದೆನಿಸಲು ನಾಚಿ
ಗೆಯುಂಟಾದ್ದು ಅದೆಂಥ ಅಸಹ್ಯ ಅಪರಾಧವ
ನೆಸಗಿದೆ. ಅವನ ರಕ್ತಸಂಬಂಧವಾಗಿ ಮಗ
ಳಿರುವೆನಾದರೂ ಅವನ ಗುಣಗಳಿಂದೇ
ನೂ ಅಲ್ಲ. ಹೋ ಲೊರೆನ್ಸೋ, ನೀನು ಕೊಟ್ಟ ಮಾ
ತಿನಂತೆ ನಡೆದರೆ ನನ್ನ ಮನೋದುಗುಡವನು ಕೊ
ನೆಗೊಳಿಸಿ ಕ್ರೈಸ್ತಳೇ ಆಗುವೆನು; ಅದರಂತೆ
ಯೆ ನಿನ್ನ ಪ್ರೀತಿಯ ಸತಿಯೆಂದಾನೆನಿಸುವೆನು.

ದೃಶ್ಯ ೪ — ವೆನ್ನಿಸಿನ ಒಂದು ಬೀದಿ.

(ಪ್ರವೇಶ — ಗ್ರಾಷ್ಯಾನೊ, ಲೊರೆನ್ಸೊ, ಸಲೆರಿನ್ಯೊ
ಮತ್ತು ಸೋಲೆನಿಯೊ.)

ಲೊರೆನ್ಸೊ:— ಇಲ್ಲ, ರಾತ್ರಿ ಊಟದ ಹೊತ್ತಿನಲ್ಲಿ ನಾವು ಕ
ದ್ದು ಹೋಗುವ. ನನ್ನ ಬಿಡಾರದಲ್ಲಿ ನಮಗೆ ವೇ
ಷವನ್ನು ತೊಡಿಸಿ ಎಲ್ಲರೂ ಒಂದು ತಾಸಿನೊಳಗಾ
ಗಿ ಹಿಂದಿರುಗಿರಿ.

ಗ್ರಾಷ್ಯಾನೊ:— ನಾವು ಇನ್ನೂ ಅದಕ್ಕೆ ಬೇಕಾದ ಸಿದ್ಧತೆಗ
ಳನ್ನೇನೂ ಮಾಡಿಲ್ಲ.

ಸಲೆರಿನ್ಯೊ:— ದೀವಟಿಗೆಗಳನ್ನು ಹಿಡಿದು ಮುಂದೊಯ್ಯುವ ಜನರೊ
ಡನೆ ಸಹ ಮಾತಾಡಿಲ್ಲ!

ಸೋಲೆನಿಯೊ:— ಬಹು ಜಾಗೃತೆಯಿಂದ ಅದನ್ನು ನಡೆಸದಿದ್ದರದು
ಕೆಟ್ಟಯುಕ್ತಿಯೆ ಸರಿ. ಅದನ್ನು ನಡೆಸದಿರುವುದೇ ಹಿತ
ವೆಂದು ನನಗೆ ತೋರುತ್ತದೆ.

ಲೊರೆನ್ಸೊ:— ಈಗಾಗಲೇ ನಾಲ್ಕು ಗಂಟೆಯಾಯಿತು. ನಾವು
ಹೊರಟು ಸಿದ್ಧರಾಗಲಿರುವ ತಾಸು ಮಾತ್ರವಿದೆ.

(ಲಾನ್ಸ್‌ಲಾಟನು ಒಂದು ಪತ್ರದೊಡನೆ ಬರುವನು.)

ಮಿತ್ರ ಲಾನ್ಸ್‌ಲಾಟನೆ, ಏನು ಸಮಾಚಾರ?

ಲಾನ್ಸ್‌ಲಾಟ್:— ಅದೇನೆಂದು ಇದನ್ನು ತೆರೆದು ಓದಿದರೆ ನೀ(ವು) ಸಂತೋಷಿಸುವಿರೆಂದು ಅದು ಸೂಚಿಸುವುದು,

ಲೊರೆನ್ಸೊ:— ಅದನ್ನು ಬರೆದ ಕೈ ಅದಾವುದೆಂದು ನನಗೆ ತಿಳಿದಿದೆ. ಅದು ಕೋಮಲವಿಹ ಕೈ. ಅದನಾವ ಕಾಗದದಲ್ಲಿ ಬರೆದಿದೆಯೊ ಅದಕ್ಕಿಂತ ಬೆಳ್ಳಗೆ ಇರುವ ಕೈ ಅದು!

ಗ್ರಾಷ್ಯಾನೊ:- ಅದೇನು ಪ್ರಣಯ ವಿಷಯ, ಹೌದೆ?

ಲಾನ್ಸ್‌ಲಾಟ್:- ಸ್ವಾಮಿ, ನಿಮ್ಮ ಚಿತ್ತದಂತೆ.

ಲೊರೆನ್ಸೊ!— ನೀನೆತ್ತ ಹೋಗುವೆ?

ಲಾನ್ಸ್‌ಲಾಟ್:— ಅಯ್ಯಾ, ಹೊಸ ನನ್ನ ಕ್ರೈಸ್ತ ಯಜಮಾನನೊಡನೆ ಈ ದಿನ ರಾತ್ರಿ ಊಟಕ್ಕೆ ಹೋಗಲು ಎಂದು ನನ್ನ ಹಳೆಯ ಯಹೂದಿ ಯಜಮಾನನಿಗೆ ತಿಳಿಸಲು.

ಲೊರೆನ್ಸೊ:— ಸ್ವಲ್ಪ ತಾಳು. ಇದನ್ನು ತೆಗೆದುಕೊ. ಆವಳನ್ನು ನಿರಾಶೆಗೊಳಿಸಲಾರೆನೆನುತ ಮಾನ್ಯೆ ಜೆಸ್ಸಿಕಾಳಿಗೆ ಹೇಳು. ಆವಳೊಡನೆ ಗುಟ್ಟಾಗಿ ಮಾತಾಡು,

(ಲಾನ್ಸ್‌ಲಾಟ್ ಹೋಗುವನು.)

ಮಾನ್ಯರೆ, ಹೋಗಿರಿ.

ಇಂದು ರಾತ್ರಿ ಸಂಗೀತ ಕಾರ್ಯಕ್ರಮವೊಂದ ಏರ್ಪಡಿಸುವಿರೊ? ದೀವಟಿಗೆ ತೋರಿಸುವವನೊಬ್ಬನನು ನನಗೆ ಒದಗಿಸಿದ್ದಾರೆ,

ಸಲೆರಿನೊ:— ಸಂತೋಷ; ನಾನು ನೆಟ್ಟನೆ ಅದಕೆ ಹೋಗುವೆನು.

ಸೊಲನಿಯೊ:— ನಾನೂ ಅಂತೆಸಗುವೆನು.

ಲೊರೆನ್ಸೊ:— ಕೆಲವು ತಾಸುಗಳನಂತರ ನನ್ನನು ಮತ್ತು ಗ್ರಾಷ್ಯಾನೊನನು ಗ್ರಾಷ್ಯಾನೊನ ಬೀಡಿನಲಿ ಭೇಟಿಯಾಗಿರಿ.

ಸಲೆರಿನೊ:— ನಾವು ಅಂತೆಸಗುವುದೆ ಒಳ್ಳೆಯದು.

(ಸಲೆರಿನೊ, ಸೊಲನಿಯೊ— ಹೋಗುವರು.)

ಗ್ರಾಷ್ಯಾನೊ:- ಆ ಪತ್ರವು ಸುಂದರಿ ಜೆಸ್ಸಿಕಾಳದಲ್ಲವೆ?

ಲೊರೆನ್ಸೊ:— ನಾನೀಗ ನಿನಗೆ ಎಲ್ಲಾ ಹೇಳಬೇಕಾಗಿದೆ; ಆವಳನ್ನು ಹೇಗೆ ಆವಳ ತಂದೆಯ ಮನೆಯಿಂದ ನಾನು ಹೊರಸಾಗಿಸಬೇಕೆಂಬುದಾಗಿ ಸೂಚಿಸಿರುವಳು. ಆವಳಿಗೆ ಅದೆಷ್ಟು ಚಿನ್ನ ಬೆಳ್ಳಿಯನೆಲ್ಲ ಕೊಡಲಾಗಿದೆ, ಅದರೊಡನೆಯೆ ಸೇವಕರ

ಉಡುಗೆಗಳನ್ನಿಟ್ಟು ಸಂಗ್ರಹಿಸಿ ಅವಳು ಸಿದ್ಧವಿ
ರಿಸಿಕೊಂಡಿರುವಳೆಂದು ಬರೆದಿರುವಳಲ್ಲದೇ? ಆ
ವಳ ತಂದೆ, ಆ ಯೆಹೂದಿಯುನು ಬಹುಶಃ ಸ್ವರ್ಗ
ಕೇರಿದರೆ ಅದು ಅವನ ಸುಶೀಲೆ ಮಗಳು ಸುದೈ
ವದಿಂದ! ಅವಿಶ್ವಾಸಿ ಯೆಹೂದಿಯನ ಮಗಳೆಂ
ಬ ಕಾರಣವಲ್ಲದೆ ಅವಳ ಕಾಲುಗಳನು ದು
ವಿಪತ್ತು ಎಂದೂ ದಾಟಹೋಗದು. ಇದೀಗನ
ನ್ನೊಡನೆ ಬಾ, ಹೋಗುವ; ಇದನ್ನು ನೀನು ನಡೆಯು
ತ್ತಲೆ ಓದು. ಆ ಚೆಲುವೆ ಜೆಸ್ಸಿಕಾ ನನಗೆ ದೀ
ವಟಿಗೆಯನ್ನು ತೋರಿಸುವವಳಾಗುವಳು,

———x———

ದೃಶ್ಯ ೫ — ಶೈಲಾಕನ ಮನೆ; ವೆನ್ನಿಸಿನಲ್ಲಿ.

(ಪ್ರವೇಶ:— ಯೆಹೂದಿ (ಶೈಲಾಕ್) ಮತ್ತು ಅವನ ಸೇವಕ (ಲಾನ್ಸೆಲಾಟ್) — ವಿದೂಷಕ.)

ಶೈಲಾಕ್:— ಹಳೆಯ ಶೈಲಾಕ್ ಮತ್ತು ಬಸ್ಸಾನ್ಯೋ ಇವರಿಗೆ ಇರುವ ವ್ಯತ್ಯಾಸವನು ನೀನೇ ನೋಡುವೆ. ನಿನ್ನ ಕಣ್ಣುಗಳೇ ನಿನಗೆ ತೀರ್ಪನ್ನೀಯುವ ನ್ಯಾಯಾಧಿಪತಿ! ಏನು ಜೆಸ್ಸಿಕಾ, ನನ್ನನ್ನು ಸಾಕಾಗಿದೆ ಯೆಂಬಂತೆ ನೀನು ಬಹಳ ತಿನ್ನುತಿರುವೆ? ಏನು ಜೆಸ್ಸಿಕಾ? ನೀನು ನಿದ್ರಿಸುವೆ, ಗೊರಕೆ ಹೊಡೆಯುವೆ ಮತ್ತು ಬಟ್ಟೆಯನ್ನೆಲ್ಲ ಹರಿದು ಹಾಕುವೆ, ಏಕೆ? ಜೆಸ್ಸಿಕಾ? ಎಂದೆನ್ನುತಿರುವೆನು.

ಲಾನ್ಸೆಲಾಟ್:— ಏಕೆ, ಜೆಸ್ಸಿಕಾ?

ಶೈಲಾಕ್:— ನಿನ್ನನು ಕರೆದವರಾರು? ನಾನಂತು ನಿನ್ನನು ಕರೆದುದಿಲ್ಲ.

ಲಾನ್ಸೆಲಾಟ್:— ಯಜಮಾನರು ಆಜ್ಞಾಪಿಸದೆ ನಾನು ಏನೂ ಮಾಡಬಾರದು ಎಂದು ನೀವು ಹೇಳುತ್ತಾ ಇರುವಿರಲ್ಲ!

(ಪ್ರವೇಶ — ಜೆಸ್ಸಿಕಾ.)

ಜೆಸ್ಸಿಕಾ:— ಕರೆದಿರಾ? ನಿಮ್ಮ ಅಪ್ಪಣೆಯೇನು?

ಶೈಲಾಕ್:— ರಾತ್ರಿ ಊಟಕ್ಕೆ ನನ್ನನು ಬರಹೇಳಿರುವರಾದುದರಿಂದ, ಜೆಸ್ಸಿಕಾ, ನನ್ನ ಬೀಗದ ಕೈಗಳು ಇಲ್ಲಿವೆ. ಆದರೆ ಏತಕ್ಕೆ ನಾನು ಹೋಗಬೇಕು? ಪ್ರೀತಿಯಿಂದೇನು ಅವರು ನನ್ನನು

ಕರೆದುದಿಲ್ಲ. ನನ್ನನವರು ಹೊಗಳುವರು. ಆದ
ರೂ ದ್ವೇಷಭಾವದಿಂದಲೇ ಆ ದುಂದುಗಾರ
ಕ್ರೈಸ್ತನನ್ನು ಉಣಲೆಂದು ಹೋಗುವೆನು. ನನ್ನ ಮಗ
ಳೇ, ಜೆಸ್ಸಿಕಾ, ನನ್ನ ಮನೆಯನ್ನು ನೋಡಿಕೋ. ಆ
ದರೂ ನಾನು ಹೋಗಲು ಇಚ್ಛಿಸೆನು. ನಾನು ವಿ
ಶ್ರಮಿಸುತಿರುವಾಗ ಏನೊ ಅನಿಷ್ಟಕನಸು ಬರುತ್ತ;
ಹಣದ ಚೀಲಗಳನ್ನು ಈ ರಾತ್ರಿ ಕನಸಿನಲ್ಲಿ
ನಿಶ್ಚಯವಾಗಿಯೂ ಕಂಡೆನು.

ಲಾನ್ಸೆಲಾಟ್:— ದಯವಿಟ್ಟು, ನಾನು ಬೇಡುವೆನು; ಹೋಗಿರಿ. ನನ್ನ ತರು
ಣ ಯಜಮಾನರು ನಿಮ್ಮ ಬರೋಣವನು ನಿಜಕ್ಕೂ
ನಿರೀಕ್ಷಿಸುತ್ತಿರುವರು.

ಶೈಲಾಕ್:— ಹಾಗೆಯೇ ನಾನೂ ಅವನನ್ನು—

ಲಾನ್ಸೆಲಾಟ್:— ಅವರು ಒಟ್ಟಿಗೆ ಪಿತೂರಿ ನಡೆಸಿರುವರು. ನೀನು
ಒಂದು ನಾಟ್ಯನಾಟಕವನ್ನು ನೋಡುವೆ, ಎಂಬುದಾಗಿ ನಾನನ್ನ
ಲಾರೆನು. ನೀನು ಹಾಗೆ ಮಾಡಿದರೆ ಅದೇನೂ ವ್ಯರ್ಥವಾಗ
ದು ಎಂಬುದಕ್ಕೆ ನಾಲ್ಕು ವರ್ಷಗಳಿಗೆ ಹಿಂದಿನ ಆ "ಬೂದಿ
ಬುಧವಾರ" ದಿನದ ಮಧ್ಯಾಹ್ನ ಪ್ರಾರಂಭವಾದ ಅನಂತರದ
"ಕಪ್ಪು ಸೋಮವಾರ", ದಿನ ಬೆಳಿಗ್ಗೆ ಆರು ಘಂಟೆ ವೇಳೆಗೆ
ಮೂಗಿನಿಂದ ರಕ್ತ ಸುರಿಯುವುದೆಂಬ ಅಪಶಕುನವು,
(ಪ್ರತಿಮಾ ಅಂದಿನ ಜ್ಯೋತಿಷ್ಯದ ಹರಟೆಯ ಪ್ರಕಾರ) ನಿಜ
ವೆನಿಸುವುದರಿಂದ ಹೇಳಲಾಗದೆ,

ಶೈಲಾಕ್:— ಅವರಾಡುತ್ತಿರುವ ಹಾಡು ನಾಟಕಗಳುಂಟು ಏನು,
ಜೆಸ್ಸಿಕಾ? ನಾನನ್ನುವೆನು, ಕೇಳು. ನನ್ನ ಬಾ
ಗಿಲುಗಳಿಗೆ ಬೀಗ ಹಾಕು. ದುಡಿ ಬಾರಿಸುವಿಕೆಯೂ
ಮತ್ತು ವಿಕೃತ ಕೊರಳ್ವನಿಯಾ ಅಪಸ್ವರದ ಆ
ರಚಿತವಿಕೆಯನು ಕೇಳಲು ಕಿಟಿಕಿಗಳ ಚೌಕಟ್ಟಿ
ನೆಡೆ ಹತ್ತಬೇಡ. ಮುಖಕೆ ಬಣ್ಣವನು ಹಚ್ಚಿದ
ಆ ಕ್ರೈಸ್ತ ಹೆಡ್ಡರನು ನೋಡಲು ತಲೆಯನಾ ಜ
ನನಿಬಿಡವಹ ಬೀದಿಯ ಕಡೆಗೆ ಚಾಚುವುದು ಬೇ
ಡ; ಕಿಟಿಕಿಗಳನು ಮುಚ್ಚುತಲಿ ನನ್ನ ಮನೆಯ ಕಿವಿ
ಗಳನೆ ಬಂಧಿಸು. ಶಾಂತವಿಹ ನನ್ನ ಮನೆಗೆ ಅತಿ
ಹನಿಯ ಕಿರುಚುವಿಕೆಯಾ ಕೇಳಿಸದಿರಲಿ. ಜೇಕ
ಬನ ಬೆತ್ತರ ಆಣೆಗೂ ಹೇಳುವೆನು. ನನಗಿಂದು
ರಾತ್ರಿ ಊಟೋಪಚಾರಕ್ಕೆಂದು ಹೋಗಲು ಮ
ನಸ್ಸಿಲ್ಲದು. ಆದರೆ ಹೋಗುವೆನು. ಎಲೋ ಹುಡುಗ,

ನೀನು ನನಗಿಂತ ಮುಂದೆ ಹೋಗು; ಅವರಿಗೆ ನಾ
ನು ಬರುವೆನೆಂದು ತಿಳಿಸು,

ಲಾನ್ಸೆಲಾಟ್:— ಧಣಿಯೇ, ನಾನು ಮುಂದೆಯೇ ನಡೆವೆ. ಅಮ್ಮಾವ್ರೇ,
ಇವೆಲ್ಲಕ್ಕೂ ಕಿಟಕಿಯ ಮೂಲಕವಾಗಿ ಹೊರಗೆ ನೋಡಿ.
ಈಗ ಕ್ರೈಸ್ತನದೊಬ್ಬನು ಬರುತಿಹನಂತೆ,
ಯೆಹೂದಿಯ ಕಣ್ಣಳಿಗೊಪ್ಪುವಂತಹನೊ!
(ಹೋಗುವನು.)

ಶೈಲಾಕ್:— ಏನನ್ನುವಳಾ ಹಾಗರನ ಜಾತಿಭ್ರಷ್ಟನವ
ನೀತ್ತ ಹೆಂಗೆ, ಆಹಾ?

ಜೆಸ್ಸಿಕಾ:— ಅವನೆಂದುದು "ಅಮ್ಮಾವ್ರೇ ನಮಸ್ಕಾರ" ಎಂ
ದಲ್ಲದೆ ಬೇರೇನೂ ಅಲ್ಲ.

ಶೈಲಾಕ್:— ಆ ಹೆಡ್ಡನಿಗೆ ಸ್ವಲ್ಪ ದಯೆ ಇದ್ದರೂ ಅವ
ನು ತುಂಬಾ ತಿನ್ನುವನು. ಲಾಭಗಳಿಸುವುದರ
ಲ್ಲಿ ಬಹಳ ನಿಧಾನ, ಮತ್ತು ಬೆಕ್ಕಿಗಿಂತಲು
ಹೆಚ್ಚಾಗಿ ನಿದ್ದೆ ಮಾಡುವನು; ಗಂಡು ಜೇನುನೊ
ಣದ ಗೂಡು ನನ್ನಲ್ಲಿ ಇಲ್ಲ, ಆದುದರಿಂದ
ನಾನು ಅವನಿಂದ ದೂರವಾಗುವೆನು. ಸಾಲ ಪ
ಡೆದ ಹಣವನು ದುರ್ವ್ಯಯ ಮಾಡಲು ಅವನಿಗೆ ಸಹ
ಕರಿಸುತ್ತಲೆ ನಾನು ಅವನಿಂದ ದೂರವಾಗುವೆ.
ಜೆಸ್ಸಿಕಾ, ಒಳಗೆ ಹೋಗು. ನಾನು ಬಹುಶಃ ಬೇ
ಗನೆ ಹಿಂದಿರುಗುವೆ. ನಾನು ಹೇಳಿದ ತೆರನೆ ಮಾ
ಡು, ನಿನ್ನೊಡನೆಯೆ ಬಾಗಿಲನು ಮುಚ್ಚು. "ಗಟ್ಟಿ
ಮುಚ್ಚು - ಬೇಗ ಕಾಣುವೆ" ಎನ್ನುವ ಹಿರಿಯಮಾತು ಮಿ
ತವ್ಯಯದ ಮನಕೆ ಎಂದೂ ಹಳತಲ್ಲ.

ಜೆಸ್ಸಿಕಾ:— ನಮಸ್ಕಾರಗಳು —
ನನ್ನ ವಿಧಿಯು ಅತಂಕವನು ಒಡ್ಡದಿದ್ದರೆ ನ
ನಗೆ ಪಿತನೊಬ್ಬನು, ನಿನಗೆ ಸುತೆಯೊಬ್ಬಳು ಇಲ್ಲದಂ
ತೆಯೇ ಎಂದು ತಿಳಿ! —
(ಹೋಗುವಳು.)

ದೃಶ್ಯ ೬ — ವೆನ್ನಿಸ್‌ನ ಒಂದು ಬೀದಿ.

(ಪ್ರವೇಶ — ನಾಟಕಗಾರರು, ಗ್ರಾಷ್ಯಾನೊ ಮತ್ತು ಸಲೆರಿನ್ಯೊ.)

ಗ್ರಾಷ್ಯಾನೊ:— ಲೋರೆನ್ಸೊನು ನಮ್ಮನ್ನು ನಿಲ್ಲಲೆಂದಾಶಿಸಿದ
ಪಡಸಾಲೆ ಇದೇ ಆಗಿದೆ,

ಸಲೆರಿನೋ:— ಅವನು ಬರುವ ಸಮಯವು ಆಗಲೇ ಆಯಿತು,

ಗ್ರ್ಯಾಷ್ಯಾನೋ:— ತನ್ನ ನಿಯಮಿತ ಸಮಯವನು ಅವನು ಮೀರಿ ಇರುವುದೇ ಆಶ್ಚರ್ಯಕರವಾಗಿದೆ. ಪ್ರೇಮಿಗಳು ತಮ್ಮ ಸಮಯಕ್ಕೆ ಮುಂದೆಯೇ ಯಾವಾಗಲೂ ಬರುವರು.

ಸಲೆರಿನೋ:— ಹೊಸದಾಗಿ ಹುಟ್ಟಿದ ಪ್ರೇಮದ ಬಾಂಧವ್ಯವು ಕಳೆದುಹೋಗದಂತೆ ಮುದ್ರಿಸಿ, ಆ ಸಂಕಲ್ಪವನು ಭದ್ರವಾಗಿಸಲು ಶುಕ್ರಪಕ್ಷಿಯ ಪಾರಿವಗಳು ತಮ್ಮ ನಿತ್ಯದ ವೇಗವನು ಹತ್ತರಷ್ಟು ಹೆಚ್ಚಿಸಿ ಹಾರಿ ಆ ಪ್ರೇಮಿಯ ಹತ್ತಿರಕೆ ತಮ್ಮ ಮಧುಪ್ರಿಯನನು ಸುತ್ತುವವು.

ಗ್ರ್ಯಾಷ್ಯಾನೋ:— ಅದು ಎಲ್ಲ ಕಾಲಕ್ಕೂ ನಿಜ. ತುಂಬ ಹಸಿದು ಹಬ್ಬದೂಟವನುಂಡವನು ಕುಳಿತಲ್ಲಿಂದ ಏಳುವವನಾರು? ಮೊದಲು ಬಹಳ ವೇಗದಲಿ ಕಡಿದಾರು ತುಳಿದ ಹಾದಿಯನ್ನು ಬಹು ನಿಧಾನದಲಿ ಮತ್ತು ಗತ್ತಿನಲಿ ನಡೆಯುವ ಕುದುರೆಯೆಲ್ಲಿ? ಹೆಚ್ಚು ಸ್ಫೂರ್ತಿಯಿಂದ ದೊರಕಿಸಿದುದನ್ನು ಅನುಭೋಗಿಸುವುದಕ್ಕಿಂತ ಅದಕ್ಕೆ ಪ್ರಯತ್ನಿಸುವುದೇ ಹೆಚ್ಚು. ಕೊಲ್ಲಿಯಿಂದ ಹೊರಟು ಬರುವ ಕಂದುವರ್ಣದ ತೆಳ್ಳನೆಯುಳ್ಳ ಮರದೋಣಿಗಳಂತೆ ಹಡಗುಗಳು ಒಳ್ಳೆ ಅಂಗವಸ್ತ್ರದೊಡನೆ ಹಾಯಿಯೊಡನೆ ತೇಲಲು ವೇಶ್ಯೆಯಂತಹ ಗಾಳಿ ಬೀಸುವಲೆಗಳನ್ನು ಬಿಗಿದಪ್ಪಿ ಅತಿವ್ಯಯದ ತರುಣನಂತೆ ತಿರುಗಾಡಿ ಹಿಂದಿರುಗಿದವನಂತೆ ದಡಕೆ ತಂದಾಗ. ಇರುವುದು ಎಂದೊಡನೆ ಹೇಗೆ? ಅದೇ ವೇಶ್ಯೆ ವಾಯುವಿನ ಹೊಡೆತದಿಂದ ಪಕ್ಕೆಲುಬುಗಳು ಸವೆದು ಹಾಯಿಗಳು ಹರಿದು ತೆಳ್ಳಗೆ ಟೊಳ್ಳಾಗಿಯೂ ತಿರುಕನಂತಾಗಿ ಹಿಂತಿರುಗುತ್ತ ಹಿಂದೆ ಕಳೆದಾ ಅತಿವ್ಯಯದ ವ್ಯಕ್ತಿಯಂತೆ ಹಡಗು ದಡವನು ತಲುಪುವುದೆಂದರೆ ಹೇಗೆ!

(ಪ್ರವೇಶ – ಲೊರೆಂಜೋ.)

ಸಲೆರಿನೋ:- ಲೊರೆಂಜೋನನು ಇತ್ತ ಬರುವನು. ಈ ವಿಷಯವಾಗಿ ಹೆಚ್ಚಿನ ವಿವರ ಮುಂದಕ್ಕಾಗಲಿ.

ಲೊರೆಂಜೋ:— ಪ್ರಿಯ ಮಿತ್ರರೆ, ನನ್ನಿಂದಲ್ಲ, ನನ್ನ ಕೆಲಸದ ದೆಸೆಯಿಂದ ಇಷ್ಟು ತಡವಾಗಲದು ನಿಮ್ಮನ್ನು ತಾಳ್ಮೆಯಲಿ ಕಾಯುವಂತಾಗಿಸಿತು. ಬೇಗ ನಾ

ತ್ರವನು ನೀವು ಹೆಣ್ತಿಯರಿಗೆ ನಟಿಸುವಾಗ ನಾ
ನು ನಿಮಗಾಗಿ ಅಷ್ಟೇ ಸಮಯ ಕಾಯುತ್ತಿರುವೆನು.
ಇತ್ತ ಬನ್ನಿ; ನನ್ನ ಯೆಹೂದಿ ತಂದೆ ಇಲ್ಲಿಯೇ
ವಾಸಿಸುವನು. ಓಹೋ, ಒಳಗಾರು?

(ಪ್ರವೇಶ – ಜೆಸ್ಸಿಕಾ, ಹುಡುಗನ ಉಡುಪಿನಲ್ಲಿ)

ಜೆಸ್ಸಿಕಾ:– ನೀನಾರು? ಎಲ್ಲಾ ವಿಚಾರ ನಿಜ ಹೇಳು. ಏ
ನಿದ್ದರೂ ನಾನು ಆಣೆಯಿಟ್ಟನ್ನುವೆನು. ನನ
ಗೆ ನಿನ್ನ ಭಾಷೆ ಗೊತ್ತಿದೆ.

ಲೊರೆನ್ಸೊ:– ನಾನು ಲೊರೆನ್ಸೊ; ನಿನ್ನ ಇನಿಯನು.

ಜೆಸ್ಸಿಕಾ:– ಲೊರೆನ್ಸೊ, ಸರಿ! ನನ್ನ ಇನಿಯನು! ನಿಜವೆ? ನಾನು ಯಾ
ರನ್ನು ಅಷ್ಟು ಪ್ರೀತಿಸಿದೆ? ಲೊರೆನ್ಸೊ, ನಿನಗಲ್ಲ
ದೆ ಬೇರಾರಿಗೆ ನಾನು ನಿನ್ನವಳು ಎಂದು ಗೊತ್ತು?

ಲೊರೆನ್ಸೊ:– ನೀನಾರು ಎಂಬುದಕ್ಕೆ ದೇವರು ಮತ್ತು ನಿ
ನ್ನ ಮನಸ್ಸೇ ಸಾಕ್ಷಿ.

ಜೆಸ್ಸಿಕಾ:– ಇಕೋ ಈ ಡಬ್ಬವನ್ನು ಹಿಡಿ. ಆ ಪ್ರಯತ್ನಕ್ಕೆ
ಅದು ಸಾರ್ಥಕವಿದೆ. ನಾನು ಗಂಡು ಉಡುಗೆಯನ್ನು
ತೊಟ್ಟ ಕಾರಣದಿಂದ ಲಜ್ಜೆಯಾಂತಿರುವೆ. ಈ
ಗ ಕತ್ತಲೆ; ಆದರಿಂದ ನಿನಗೆ ನನ್ನನ್ನು ಚೆ
ನ್ನಾಗಿ ಕಾಣುತ್ತಿಲ್ಲವೆಂದೇ ನನಗೆ ಸಂತೋಷ!
ಆದರೆ ಪ್ರೀತಿಯು ಕುರುಡು! ಪ್ರೇಮಿಗಳು ತ
ಮ್ಮ ಚಿಕ್ಕ ಕೊರತೆಗಳನ್ನು ತಾವೆ ಕಾಣಲಾರರು.
ಅವರು ಕಾಣಬಹುದಾಗಿದ್ದರೆ ಹುಡುಗನಂತೆ
ಉಡುಗೆಯುಟ್ಟ ನಾನು ತೋರ್ಪಡಿಸಿಕೊಂಡುದನು ಕಂ
ಡು ಮನ್ಮಥನೇ ನಾಚುತ್ತಿದ್ದನೋ ಏನೋ!

ಲೊರೆನ್ಸೊ:– ಕೆಳಗೆ ಇಳಿ. ನೀನು ನನಗೆ
ದೀವಟಿಗೆಯನ್ನು ಹಿಡಿಯುವವಳಾಗಬೇಕು.

ಜೆಸ್ಸಿಕಾ:– ಏನು? ನನಗಾದ ಅವಮಾನಗಳನ್ನು ತೋರಿಸ
ಲು ಮೇಣದ ಬತ್ತಿಯನ್ನು ನಾನೆ ಹಿಡಿಯಬೇಕೇ? ಅ
ವಾಗಿಯೇ ಬಹು ಪ್ರಕಾಶಮಾನವಾಗಿವೆ. ಅವ
ನ್ನೆಲ್ಲ ತೋರಿಸುವುದು ಮಾರ್ಗದರ್ಶಕರ ಕೆಲ
ಸವಲ್ಲದೆ ನಾನು ಮರೆಯಲ್ಲಿ ಇರಬೇಕು.

ಲೊರೆನ್ಸೊ:– ನೀನಂತಿರಬೇಕು. ಹುಡುಗನ ಆಕರ್ಷಕ ಉ
ಡುಗೆಯಲ್ಲಿರುವೆಯಾದರೂ ನೀನು ಚೆಲುವೆ. ಆ
ದರೆ ಬೇಗನೆ ಬಾ. ನಾವು ಬಸ್ಸಾನ್ಯೋನ ಜೊತೆ
ಗೆ ಕೂಟಕೆ ಕಾಯುತ್ತಿದ್ದು ಇನ್ನೀಗ ರಾತ್ರಿಯು

ಲಿ ಗಂಟನ್ನಾಗಿ ಪಲಾಯನ ಬೆಳೆಸಬೇಕು.

ಜೆಸ್ಸಿಕಾ :— ನಾನು ಬಾಗಿಲುಗಳನ್ನು ಭದ್ರಗೊಳಿಸಿ ದಾಟುವೆನು. ಇನ್ನಷ್ಟು ಸ್ವಲ್ಪ ಹಣವನ್ನು ಬಂಗಾರ ಗದದಲ್ಲಿ ಸೇಗೆಗಾಗಿ ಸುತ್ತಿ ಹಿಡಿದುಕೊಂಡು ಇದೀಗ ನಿಮ್ಮನ್ನು ಕ್ಷಣದಲ್ಲಿ ಸೇರುವೆನು,

(ಹೋಗುವಳು.)

ಗ್ರಾಷ್ಯಾನೊ :— ಈಗ ನನ್ನ ಪ್ರಕಾರ ಸಹ ಜ್ಯೂ ತಲೆಮಾಡುವವಳು ಮಾತ್ರ. ಇದರಿಂದ ಮಾನ್ಯಳೆನಿಸಿದೆ, ಯಹೂದಿಯಲ್ಲ!

ಲೊರೆನ್ಸೊ :— ನನ್ನನ್ನು ಶಪಿಸಿದರೂ ಸರಿ; ನಾನು ಅವಳನ್ನು ಹೃತ್ಪೂರ್ವಕ ಪ್ರೀತಿಸುವೆ, ನಾನು ಅವಳನ್ನು ತಿಳಿದಂತೆ ಅವಳು ಜಾಣೆಯು. ನನ್ನ ಈ ಕಣ್ಣುಗಳು ನಿಜ ಹೇಳುವುದಾದರೆ ಅವಳು ಚೆಲುವೆಯು ಹೌದು. ಅವಳು ಸತ್ಯವಾದಿಯು ಎಂದು ತೋರ್ಪಡಿಸಿರುವಳಾದರಿಂದ ಜಾಣೆಯು ಚೆಲುವೆಯು ಧ್ರುವವಾಗಿ ಕಾಣಿಸಿದ ಅವಳನ್ನು ಪ್ರೀತಿಸದೆ, ನನ್ನ ಆತ್ಮದಲ್ಲಿ ಅವಳಿಗೆ ಸ್ಥಾನವೀಯುವೆ!

(ಪ್ರವೇಶ - ಜೆಸ್ಸಿಕಾ.)

ಏನು? ನೀನು ಬಂದಿಯಾ? ಇನ್ನು ಹೋಗುವ, ಮಾನ್ಯ ರೀತ್ರ, ಮಳಿರಿ, ಹೋಗಿ. ಸಂಗೀತ ನಾಟಕದ ಜನವೃಂದರಲ್ಲಿ ನಮಗಾಗಿ ಇಲ್ಲಿ ಕಾದಿರುವ!

(ಜೆಸ್ಸಿಕಾ ಮತ್ತು ಸಲೆರಿನ್ಯೊನೊಡನೆ ಹೋಗುವನು.)

ಪ್ರವೇಶ - ಅಂಟೊನಿಯೊ.

ಅಂಟೊನಿಯೊ :— ಯಾರದು, ಅಲ್ಲಿ?

ಗ್ರಾಷ್ಯಾನೊ :— ಮಾನ್ಯ ಅಂಟೊನಿಯೊನೆ?

ಅಂಟೊನಿಯೊ :— ಛೆ, ಛೀ ಗ್ರಾಷ್ಯಾನೊ! ಇತರರೆಲ್ಲ ಎಲ್ಲಿ? ಒಂಬತ್ತು ಘಂಟೆಯಾಯಿತು. ನಮ್ಮ ಮಿತ್ರರೆಲ್ಲ ನಿಮಗೆ ಕಾಯುತ್ತಿದ್ದಾರೆ, ಈ ರಾತ್ರಿ ಬಯಲಾಟವಿಲ್ಲ. ಗಾಳಿ ಸುತ್ತೆಲ್ಲ ಬೀಸುವುದು. ಬಸ್ಸಾನ್ಯೊ, ಈಗಲೆ ನಾವು ಹಡಗಿನಲ್ಲಿ ಹೋಗುವೆ. ನಿನ್ನನ್ನು ನೋಡಿ ಕರೆತರಲೆಂದು ಇಪ್ಪತ್ತು ಜನವನ್ನು ಕಳುಹಿಸಿದ್ದೇನು,

ಗ್ರಾಷ್ಯಾನೊ :— ತುಂಬಾ ಸಂತೋಷವೇ, ಸರಿ! ಹಡಗಿನಲ್ಲಿ ಇಂದು ರಾತ್ರಿ ಪ್ರಯಾಣ ಬೆಳೆಸುವುದಕ್ಕಿಂತ ಆನಂದ ಬೇರೊಂದಿಲ್ಲ.

(ಹೋಗುವರು.)

—x—

ದೃಶ್ಯ ೭ – ಪೋರ್ಶಿಯಳ ಮನೆ – ಬೆಲ್ಮಾಂಟ್‌ನಲ್ಲಿ.

(ವಾದ್ಯಘೋಷವಾಗಿ — ಪೋರ್ಶಿಯ ಮತ್ತು ಮೊರೊಕ್ಕೊ — ತಮ್ಮ ಪರಿವಾರಗಳೊಡನೆ.)

ಪೋರ್ಶಿಯ:— ಹೋಗಿರಿ, ಪರದೆಯನ್ನೆಳೆದು ಅಲ್ಲಿ ಇಡಲಾದ ಆ ಹಲವು ಡಬ್ಬಿಗಳನ್ನು ಈ ಮಾನ್ಯ ರಾಜಕುಮಾರನಿಗೆ ತೋರಿಸಿರಿ. ಈಗ ನೀನು ಮೆಚ್ಚಿನದನ್ನು ಆರಿಸಿಕೊ,

ಮೊರೊಕ್ಕೊ:— ಮೊದಲು ಚಿನ್ನದ ಪೆಟ್ಟಿಗೆ. ಅದರಲ್ಲಿರುವ ಲಿಖಿತವಿಂತಿದೆ: "ನನ್ನನ್ನು ಆರಿಸುವವನು ಹಲವು ಜನ ಇಚ್ಛಿಸುವುದನ್ನು ಪಡೆಯುವನು." ಎರಡನೆಯದು ಬೆಳ್ಳಿ. ಇದರಲ್ಲಿ ಹೀಗೆ ಹೇಳಿದೆ: "ನನ್ನನ್ನು ಆರಿಸುವವನಿಗೆ ಎಷ್ಟು ದೊರಕಲು ಅರ್ಹನೋ ಅಷ್ಟು ಮಾತ್ರ ದೊರಕುವುದು." ಮೂರನೆಯದಾದ ನಿಸ್ತೇಜವಾದ ಸೀಸವದಕ್ಕೆ ತಕ್ಕವೊಲು ಎಚ್ಚರಿಕೆಯನ್ನೇ ತೆರನೆ ಇತ್ತಿದೆ: "ನನ್ನನಾರಿಸುವವನು ತನ್ನಲ್ಲಿರುವುದನು ಪೂರ್ತಿ ನೀಡುವ ಅಪಾಯಕ್ಕೊಳಗಾಗುವನು." ಹೀಗಿರಲಿನಗೆ ಬೇಕಾದ್ದ ಆರಿಸುವೆನು ಎಂಬುದು ನಾನೆಂತು ತಿಳಿದಿರಲಿ?

ಪೋರ್ಶಿಯ:— ಅವುಗಳಲ್ಲೊಂದರಲ್ಲಿ ನನ್ನ ಚಿತ್ರವಿದೆ, ರಾಜಕುಮಾರನೇ, ನೀನು ಅದನ್ನಾರಿಸಿದರೆ ನಾನು ಅದರೊಂದಿಗೆ ನಿನ್ನವಳೆಂದೆನಿಸುವೆನು,

ಮೊರೊಕ್ಕೊ:— ಆ ದೇವರೇ ದೈವ ನನ್ನ ತೀರ್ಪಿಗೆ ಮಾರ್ಗದರ್ಶನ ಮಾಡಬೇಕು. ಇರಲಿ, ನೋಡುವೆನು. ಇನ್ನೊಮ್ಮೆ ಆ ಲಿಖಿತವನ್ನೆಲ್ಲ ನೋಡುವೆನು. "ನನ್ನನ್ನು ಆರಿಸುವವನು ತನ್ನಲ್ಲಿರುವುದನು ಪೂರ್ತಿ ಕೊಡುವ ಅಪಾಯಕ್ಕೊಳಗಾಗಬೇಕು." "ಕೊಡಬೇಕು." ಯಾವುದಕ್ಕೆ? ಸೀಸಕ್ಕೋ? ಸೀಸವನ್ನೀವ ಅಪಾಯಕ್ಕೋ? ಈ ಡಬ್ಬವು ಹೆದರಿಸುವುದು. ತಮ್ಮಲ್ಲಿದ್ದುದೆಲ್ಲವನು ಕೊಡುವಂಥ ಅಪಾಯಕ್ಕೆ ಒಳಗಾಗುವವರು ಅದರಿಂದ ದೊರಕುವ ಲಾಭವನು ಗಮನಿಸುವರು, ಚಿನ್ನದ ಮನಸ್ಸು ಕಸವನ್ನು ಕಂಡಾಗ ಬಗ್ಗುವುದೆ ಇಲ್ಲ. ಸೀಸಕ್ಕದೇನನ್ನೂ ಕೊಡೆನು, ಅದಕ್ಕಾಗಿ ಅಪಾಯಕ್ಕೆ ಬೀಳಲಾರೆನು. ಚಂದ್ರನಂತಿರುವ ಅಚ್ಛ ಬೆಳ್ಳಿಯಾದ ಇವಳು ಏನು

ಸಾರುವಳು ? "ನನ್ನನ್ನು ಆರಿಸುವವನಿಗಿಷ್ಟು
ದೊರಕಲರ್ಹನ್ನೊ ಅಷ್ಟು ಮಾತ್ರ ದೊರಕುವುದು," — "ಎ
ಷ್ಟು ದೊರಕಲು ಅರ್ಹನ್ನೊ!" ಇದೇನು? ತಡೆ ಅಲ್ಲಿ, ಮೊ
ರೆಹೊಕ್ಕು, ನಿನ್ನ ಅರ್ಹತೆಯನ್ನು ನಿಷ್ಪಕ್ಷಪಾ
ತದಲ್ಲಿ ತೂಗು. ನಿನ್ನ ವ್ಯಕ್ತಿಯಂತೆ ಏನೇನಿಷ್ಟು
ನಿನಗೆ ಲಭಿಸಬೇಕೆಂದು ತೋರಿದರೂ ಕನ್ಯೆ
ಯನ್ನು ಪಡೆಯುವಷ್ಟು ಆ ಅರ್ಹತೆಯು ಸಾಲದೆಂ
ಬಂತೆ ಆದರೆ ಆದೆನ್ನನ್ನು ಕಡೆಗಣಿಸಬೇಕು
ಆಗುವುದು. "ನನಗೆ ದೊರೆಯು ಅದೆಷ್ಟು ಅರ್ಹನ್ನೋ,
ಅಷ್ಟು," ಏಕೆ? ಅವಳೇವರ್ಣ ಕನ್ಯೆಯಲು. ನನ್ನ ಜನ
ನ ರಾಜಕುಲದಿಂದಲೆ; ನಾನು ಅವಳಿಗೆ ತಕ್ಕ
ವನಿರುವೆನು. ಸೌಂದರ್ಯ, ವ್ಯಕ್ತಿತ್ವ, ರಾಜತ್ವ
ಗಳಲ್ಲಿ ಅಲ್ಲದೆ ಅವುಗಳನ್ನು ಮೀರಿ ಪ್ರೀತಿಯಲ್ಲಿ
ನಾನು ಅವಳಿಗೆ ತಕ್ಕವನೇ ಆಗಿರುವೆನು. ಇ
ನ್ನೇಕೆ ಮುಂದಕ್ಕೆ ಹೋಗದೆ ಇಲ್ಲಿಯೇ ಆರಿಸ
ಬಾರದೇನು? ಇದೋ ಚಿನ್ನದ ಅಕ್ಷರದಲ್ಲಿ ಬರೆದುದು
ವನೆಂದು ನಾನು ಇನ್ನೊಮ್ಮೆ ನೋಡುವೆನು. ನ
ನ್ನನ್ನು ಆರಿಸುವವನು ಹಲವು ಜನರು ಇಚ್ಛಿಸುವು
ದನ್ನು ಪಡೆಯುವನು." ಏಕೆ? ಅವಳೇವರ್ಣ ಕನ್ಯೆಕೆ;
ಜಗವೆಲ್ಲ ಅವಳನಿಚ್ಛಿಸುವುದರಿಂದ ಈ ಡಬ್ಬಕ್ಕೆ, ಉ
ಸಿರಾಡುವ ಜೀವಂತ ಮೂರ್ತಿಗಳಿಗೊ ಮುತ್ತುಕೊಡ
ಲು ಜಗದ ನಾಲ್ಕೂ ದಿಕ್ಕುಗಳಿಂದ ಜನರು ಬರುವರು.
ಹಿರ್ಕೇನಿಯು ಮರುಭೂಮಿಗಳು, ಅತಿ ವಿಶಾಲ ನಿ
ರ್ಜನ ಭೂಮಿ ಅರೇಬಿಯಾ ಎಲ್ಲ ಬೆಲೆ ಶೋಷಣ್ಯಗಳ
ನು ನೋಡಲು ಬರುವ ರಾಜಕುಮಾರರಿಗೆ ಹೆ
ದ್ದಾರಿಗಳೋಲವೆ, ತನ್ನ ಆಕಾಂಕ್ಷೆಯ ತಲೆಯನ್ನು
ವರಿಸಿ ಸ್ವರ್ಗದತ್ತ ಉಗುಳುತ್ತಿಹ ಸಾಗರ
ಸಾಮ್ರಾಜ್ಯಕ್ಕೆ ಹಾಗೆ ಬರುವ ವಿದೇಶೀಯರನ್ನು
ತಡೆಯಲು ಅಸಾಧ್ಯ. ಹೇಗೂ ಅವರು ತರುಣಿಪ್ರೊ
ಶಾಂಗ್ಯಳೆ ಬೆಲೆವನ್ನು ನೋಡಲು ತೊರೆದನೆ ದಾಟಿ
ಬರುವಂತೆ ಬರುತ್ತಿಹರು. ಈ ಮೂರು ಡಬ್ಬಿಗಳ
ಲೊಂದರಲ್ಲಿ ಅವಳ ಸ್ವರ್ಗೀಯ ಚಿತ್ರವಿದೆ. ಈ
ಸೀಸೆ ಡಬ್ಬದಲ್ಲಿ ಇರುವುದೆ? ಅಷ್ಟು ಹೀನಾ
ಯವನಿಸುವುದು ಖಂಡನೆಯಾದೀತು. ಚಿನ್ನ
ದ ಬೆಲೆಗಿಂತ ಹತ್ತರಷ್ಟು ಕಡಿಮೆ ಬೆಲೆಯ

ಬೆಳ್ಳಿ ಡಬ್ಬದಲ್ಲಿ ಅವಳ ಚಿತ್ರವು ಬಂಧಿಸ
ಲ್ಪಟ್ಟಿರಬಹುದೆಂದು ನೆನೆಯಲೆ? ಓಹ್ ದುರಾ
ಲೋಚನೆಯಿದು, ಅಂಥ ರತ್ನವನು ಚಿನ್ನಕ್ಕಿಂತ
ಎಷ್ಟು ಕಡಿಮೆ ಬೆಲೆಗಿಹ ಬೆಳ್ಳಿ ಡಬ್ಬದೊಳಗಿ
ಟ್ಟಿರಲಾರರು. ಇಂಗ್ಲೆಂಡಿನಲ್ಲಿ ದೇವತೆಯ ಚಿ
ತ್ರದೊಡನೆ ಹೆಸರಿನ ಅಮೂಲ್ಯವಾ ಕ್ರೌನ್ ನಾಣ್ಯ
ವನ್ನು ಕೆತ್ತಿಸಿ ಮುದ್ರಿಸಿರುವರು, ಆದರಂತೆಯೇ
ಒಂದು ದೇವತೆಯ ರೂಪವನೆ ಇದರೊಳಗೆ ಹೊನ್ನ
ತಲ್ಪದಲಿ ಮಲಗಿಸಿರುವರು; ಸರಿ, ನನಗೆ ಇದರ
ಬೀಗದ ಕೈಯನ್ನು ಕೊಡಿರಿ. ಇದನಿಲ್ಲಿ ಆ
ರಿಸುತ್ತಲಾನ್ ಜಯಶೀಲನಾಗಲೂ ಬಹುದು.

ಪೋರ್ಷ್ಯ:— ಆ ಕೀಲಿ ಇಲ್ಲಿ; ತೆಗೆಯಿರಿ; ಎಲೆ ರಾಜಕುಮಾರನೆ,
ನನ್ನ ಚಿತ್ರ ಅದರೊಳಗಿದ್ದ ಪಕ್ಷದಲಿ ಆನ್
ನಿಮ್ಮವಳೆ ಸರಿ.

(ಆತನು ಚಿನ್ನದ ಡಬ್ಬದ ಬೀಗ ತೆರೆಯುವನು.)

ಮೊರೊಕ್ಕೊ:—ಹೋ! ದೆವ್ವವೆ, ನರಕವೆ, ಏನಿದು? ಕೊಳೆಯುತ್ತಿ
ರುವ ಶವ! ಅದರ ಖಾಲಿ ಕಣ್ಣುಗಳಲಿ ಅಲಂಕೃ
ತ ಕಾಗದ ಸುರುಳಿಯನು ಸಿಕ್ಕಿಸಿದೆ.- ಆ ಬರಹ
ವನ್ನು ನಾನು ಓದುವೆನು.

ಮಿನುಗುವುದೆಲ್ಲ ಚಿನ್ನವದಲ್ಲ,
ಎಂದೆನುತಂದುದು ಕೇಳಿಹೆ ಅಲ್ಲ;
ಹಲಜನ ಜೀವವ ತೆತ್ತಿಹರಂತು,
ಹೊಳೆಯುವ ಹೊರಮೆಗೆ ತಾವ್ ಮನಸೋತು.
ಹೊಳಕಿನ ಗೋರಿಯೊಳು ಕ್ರಿಮಿಗಳು ಹುಳುಗೆ-
ಬುದ್ಧಿಯೊಳು ಬಲ್ಮೆಯೊಳು ಸಾಲದು ನಿನಗೆ.
ತನುವಿದು ಎಳೆತಿರೆ ಮನ ಬಲಿದಿಲ್ಲ,
ಉತ್ತರ ನಿನಗೆ ಬರೆದುದೆ ಇಲ್ಲ!
ಹೋಗುತಿ ಕನ್ಯಾರ್ಥಿ ನೀ ಸಾಧನೆಯಲ್ಲಿ
ನಿಷ್ಫಲವಿದುವೈ - ಶುಭ ನಿನಗಿರಲಿ,

× × × ನಿಷ್ಫಲ, ನಿಜ; ಶ್ರಮವು ವ್ಯರ್ಥ!
ವೈವಾಹಿಕ ಜೀವನಕಿದೊ ನಮಸ್ಕಾರ. ಹಿತ
ಸ್ಸಿಗತದ ಬಿಸುಪನೆಯೂ ಹಿಮಗಡ್ಡೆಯೋಲಾಯಿತು.
ಪೋರ್ಷ್ಯ, ನಿನಗೆ ಶುಭವಿನಿರಲಿ; ನನ್ನ ಹೃದಯವು
ವು ತುಂಬಾ ನೊಂದಿದೆ. ಬಹು ಬೇಸರದಿಂದ ಹೋ
ಗುವೆನು. ಸೋತವರಿಂತು ತೆರಳುವರು.

(ತನ್ನ ಜನದೊಡನೆ ಹೋಗುವನು.)

ಪೋರ್ಷ್ಯ:- ವಿನಯದಿಂದ ಬೀಳ್ಕೊಂಡಂತಾಯಿತು. ಆ ಪರ
ದೆಗಳನ್ನೆಳೆಸಿರಿ; ಹೋಗಿರಿ. ಇವನ ಮೈಬಣ್ಣದ ಜ
ನಾಂಗಗಳೆಲ್ಲ ನನ್ನನ್ನು ಇದೇ ರೀತಿ ಆರಿಸಲಿ!
(ಹೋಗುವಳು.)

ದೃಶ್ಯ ೮ — ವೆನ್ನಿಸ್‌ನ ಒಂದು ಬೀದಿಯಲ್ಲಿ

(ಪ್ರವೇಶ - ಸಲೇರಿನ್ಯೊ ಮತ್ತು ಸೊಲಾನಿಯೊ)

ಸಲೇರಿನ್ಯೊ!- ಎಲಾ ಮರೀ! ಬಸ್ಸಾನ್ಯೊ ಹಾಯಿಯೊಂದಿಗೆ ತೇಲುವುದನ್ನು ನಾನು ನೋಡಿದೆನು. ಅವನೊಡನೆ ಗ್ರ್ಯಾಶ್ಯಾನೊನೂ ಹೋದನು. ಲೊರೆನ್ಸೊ ಆ ಹಡಗಿನಲ್ಲಿ ಇರಲಿಲ್ಲವೆಂಬುದು ನಿಶ್ಚಯ!

ಸೊಲಾನ್ಯೊ!— ಆ ಲುಚ್ಚ ಯಹೂದಿಯನು ಗುಲ್ಲೆಬ್ಬಿಸುತ್ತಲಾಗ ದೊರೆಯನೊಡನೆ ಕೂಡಿ ಬಸ್ಸಾನ್ಯೊನ ಹಡಗನ್ನು ಶೋಧಿಸಲೆಂದವರು ಹೋದರು.

ಸಲೇರಿನ್ಯೊ!— ಅವನು ಬಹು ವಿಳಂಬಿಸಿ ಬಂದನು. ಹಡಗಂತೂ ತೇಲುತಿತ್ತು. ಲೊರೆನ್ಸೊ ಮತ್ತು ಅವನ ವಿಲಾಸಿ ಜೆಸ್ಸಿಕಾಳು ಹಗುರವಾದ ದೋಣಿಯಲಿ ಒಡಗೂಡಿ ಹೋದುದನು ಪ್ರಭುವಿಗರುಹಲಾಯಿತು, ಇಷ್ಟೇ ಅಲ್ಲ, ಅವರು ಬಸ್ಸಾನ್ಯೊನೊಡನೆ ಹಡಗಿನಲ್ಲಿ ನಿಜವಾಗಿ ಇರಲಿಲ್ಲವೆಂದು ಅಂಟೊನ್ಯೊನು ಅರಸನಿಗೆ ಹೇಳಿದನು,

ಸೊಲಾನ್ಯೊ:— ಆ ಸೊಣಗ ಯಹೂದಿಯನು ರಂಗೇರಿ, ಬೀದಿಗಳಲಿ ಹರಟಿದ ವಿಚಿತ್ರ ಅನಿಶ್ಚಿತವೆನಿಸಿದ ಮತ್ತ ಅಬದ್ಧವಾದ ಉದ್ರೇಕದ ನುಡಿಗಳನ್ನು ನಾನು ಈ ವರೆಗೆ ಕೇಳಿದ್ದಿಲ್ಲ. "ನನ್ನ ಸುತೆ, ಹೋ ನನ್ನ ಮಗಳು, ನನ್ನ ಹಣಗಳು, ಅವಳು ಕ್ರೈಸ್ತನೊಡನೆ ಪಲಾಯನಗೈದಳು; ಹಾ ನನ್ನ ಕ್ರೈಸ್ತ ವರಹಗಳು, ಅನ್ಯಾಯ, ಕಾನೂನು, ನನ್ನ ಹಣ, ನನ್ನ ಕುಮಾರಿ, ಮುದ್ರೆಯನು ಒತ್ತಿ ಮುಚ್ಚಿದ ಚೀಲ, ಮುದ್ರೆ ಹಾಕಿ ಬಿಗಿದ ಎರಡು ಹಣದ ಚೀಲಗಳು; ಬೆಲೆಯುಳ್ಳ ಎರಡರಷ್ಟು ಇರುವ ನಾಣ್ಯಗಳನೆಲ್ಲ ಆ ನನ್ನ ಮಗಳು ನನ್ನಿಂದ ಕದಿಯುತ್ತ ಸಾಗಿಸಿದಳು. ಇದಿಷ್ಟೇ ಅಲ್ಲ, ಆಭರಣಗಳು, ಎರಡು ರತ್ನದ ಕಲ್ಲುಗಳು, ಎರಡು ಬೆಲೆ

ಬಾಳುವ ಅಮೂಲ್ಯ ರತ್ನಗಳೆಲ್ಲವನ್ನು ನನ್ನ
ಮಗಳು ಕದ್ದು ಸಾಗಿಸಿದಳು. ನ್ಯಾಯಮೂರ್ತಿಗಳೆ,
ಆ ಹುಡುಗಿಯನ್ನು ಹುಡುಕಿಸಿ ತನ್ನಿರಿ. ಅವಳ
ಬಳಿಯಲ್ಲಿ ಆ ಕಲ್ಲುರತ್ನಗಳು ಮತ್ತು ಹಣ
ದ ಚೀಲಗಳು ಇವೆ,

ಸಲೆರಿನ್ಯೊ:- ವೆನ್ನಿಸಿನ ಹುಡುಗರೆಲ್ಲಾ "ಅವನ ರತ್ನಗಳು, ಅವನ ಮಗಳು, ಅವನ ಹಣದ ಗಂಟು" ಎಂದೆನ್ನುತ್ತ ಬೊಬ್ಬೆ ಹೊಡೆಯುತ್ತ ಅವನನ್ನು ಅನುಸರಿಸುವರೇಕೆ?

ಸೊಲಾನ್ಯೊ:- ಮಾನ್ಯ ಅಂಟೊನ್ಯೊನು ಕೊಡಲಿರುವ ಹಣದ ವಾಯಿದೆಯ ದಿನವನ್ನು ಅವನು ಸರಿ ನೆನಪಿಟ್ಟುಕೊಳ್ಳಲಿ. ಅವನು ಎಚ್ಚರದಲ್ಲಿಲ್ಲದಿದ್ದರೆ ದಂಡವನ್ನು ತೆರಲೆ ಬೇಕಾಗಬಹುದು.

ಸೊಲಾನ್ಯೊ:- ಅಹಾ, ಚೆನ್ನಾಗಿ ಜ್ಞಾಪಿಸಿದೆ! ನಿನ್ನೆ ದಿನ ಒಬ್ಬ ಫ್ರೆಂಚನೊಡನೆ ಆ ದೇಶದವನೊಡನೆ ಮಾತಾಡಿದಾಗ ಅವನು ಫ್ರಾನ್ಸ್ ಮತ್ತು ಇಂಗ್ಲೆಂಡ್ ನಡುವೆಯಿರುವ ಸಮುದ್ರದ ಇಕ್ಕಟ್ಟಿನ ಒಂದೆಡೆ ಸರಕುಗಳನ್ನು ತುಂಬಿದ ನಮ್ಮ ದೇಶದ ಒಂದು ಹಡಗು ಮುಳುಗಿಹೋಯಿತು ಎಂದು ನನಗೆ ಹೇಳುತ್ತಿರುವಾಗಲೆ ನನಗೆ ಅಂಟೊನ್ಯೊನ ನೆನಪಾಗಲು ಆ ಹಡಗು ಅವನದಾಗಿರಲಾರದೆಂದು ಮನದಲ್ಲಿ ಆಶಿಸಿದೆನು,

ಸೊಲಾನ್ಯೊ:- ನಿನಗೆ ತಿಳಿದುದನ್ನು ನೀನು ಅಂಟೊನ್ಯೊಗೆ ಹೇಳು. ಮೃದು ಒಳ್ಳೆಯದು. ಆದರೆ ಥಟ್ಟನೆ ಹೇಳುವುದು ಬೇಡ. ಅದು ಅವನನ್ನು ಬೇಸರಕ್ಕೆ ಈಡಾಗಿಸಬಹುದು.

ಸಲೆರಿನ್ಯೊ:- ಅವನಿಗಿಂತ ದಯಾಳು ಎಂದೆನಿಸಿ ಯಾರೊಬ್ಬ ಯೋಗ್ಯನೂ ಈ ಭೂಮಿಯನ್ನು ಮೆಟ್ಟಿಲ್ಲ. ಆ ಬಸ್ಸಾನ್ಯೊ ಮತ್ತು ಅಂಟೊನ್ಯೊ ಇಬ್ಬರು ಬೇರ್ಪಡುವುದನ್ನು ನಾನು ಕಂಡೆನು, ಹಣವನ್ನು ಬೇಗನೆ ಮರುಪಾವತಿಸಲು ಯತ್ನಿಸುವೆನೆನಲು ಅಂಟೊನ್ಯೊನು ಅವನಿಗೆ ಹೀಗೆಂದನು, "ಬಸ್ಸಾನ್ಯೊ, ಹಾಗೆನ್ನದಿರು; ವ್ಯಾಪಾರವನ್ನು ನನ್ನಗಾಗಿ ಕಲುಷಿತಗೊಳಿಸದಿರು. ವಾಯಿದೆ ಮುಗಿಯುವವರೆಗೆ ತಾಳು. ಯೆಹೂದಿಯು ನನ್ನಿಂದ ಬರೆಯಿಸಿಕೊಂಡ ಆ ಕರಾರು ಪ್ರೀತಿಪೂರ್ವಕವಾದ

ನಿನ್ನ ಮನಸಿಗೆ ಹುಗದಿರಲಿ. ಸಂತೋಷದಿಂದಿರು.
ಪ್ರಾಮುಖ್ಯವಾದ ನಿನ್ನ ನೆನಪುಗಳನ್ನು ಸುಮಧುರ
ಮಹ ಪ್ರೇಮದ ಕಾಮುಗಳತ್ತ ಇಡು. ಅವು ಜೀವ
ನ ಸಮಸ್ಯೆಗಳನ್ನು ಹಗುರವಾಗಿಸುವವು." ಹಾಗೆ
ಹೇಳಿದಾಗಲೂ ಅವನ ಕಣ್ಣುಗಳು ಒದ್ದೆಯಾ
ಗಲವನು ಮುಖವನ್ನು ತಿರುಗಿಸಿ ತನ್ನ ಕೈಯಿಂ
ದ ಬಸ್ಸಾನಿಯೋನ ಬೆನ್ನು ತಟ್ಟಿ ತುಂಬಾ ಪ್ರೀತಿ
ಆದರಾಭಿಮಾನಗಳಿಂದವರು ಅತ್ತಿತ್ತ
ಕೈಹಿಡಿದು ಕುಲುಕಿ ಬೀಳ್ಕೊಟ್ಟರು.

ಸೊಲಾನ್ಯೋ!— ಅವನು ತನ್ನ ಮಿತ್ರನಿಗಾಗಿ
ಈ ಲೋಕವನ್ನು ಪ್ರೀತಿಸುವನೆಂದು ನನಗ
ನ್ನಿಸುತ್ತದೆ. ನಾವೀಗ ಹೋಗಲನುವಾಗುವವ
ನನ್ನು ಬೀಡಿಸುವೆನು. ಅವನು ಎಲ್ಲಿರುವನೆಂದು ನೋ
ಡಿ ಮಾನಸದಲಿ ಅವನು ಅನುಭವಿಸುವ ಮನೋಸ್ತಾ
ಪವನ್ನು ಸುಮಧುರ ನುಡಿಗಳಿಂದಿಳಿಸಿ ಅವನನ್ನು
ಸಂತೋಷಗೊಳಿಸುವ!

ಸಲೆರಿನ್ಯೋ!— ನಾವು ಹಾಗೆಯೆ ಮಾಡುವ.

(ಹೋಗುವರು.)

ದೃಶ್ಯ – ೯ ; ಬೆಲ್ಮಂಟ್ – ಪೋರ್ಷ್ಯಾಳ ಮನೆ.

(ಪ್ರವೇಶ – ನೆರಿಸ್ಸಾ ಮತ್ತು, ದಾಸ.)

ನೆರಿಸ್ಸಾ:— ಬೇಗ, ಬೇಗ. ಇದೋ ಕೇಳಿಕೊಳ್ಳುತ್ತಿರುವೆನು, ಪರ
ದೆಯನ್ನು ನೆಟ್ಟನೆ ಎಳೆಯಿರಿ. ಅರಗಾನ್ ರಾಜನ ಮ
ಗನು ಆಣೆಯಿಟ್ಟು ಕನ್ಯೆಯನ್ನು ಆರಿಸಲೆಂದು
ಬರುತ್ತಿರುವನು,

(ಪ್ರವೇಶ – ವಾದ್ಯ ನಿನಾದಗಳ ಸಮೇತವಾಗಿ
ಅರಗಾನ್ ರಾಜಕುಮಾರ, ಅವನ ಪರಿವಾರ, ಮತ್ತು
ಪೋರ್ಷ್ಯ, ಅವಳ ಪರಿವಾರ.)

ಪೋರ್ಷ್ಯ!— ಮಾನ್ಯ ರಾಜಕುಮಾರನೆ, ನೋಡಿಲ್ಲಿ! ಚಿತ್ರಗ
ಳಿರುವ ಪೆಟ್ಟಿಗೆಗಳು ಇವೆ. ನನ್ನ ಚಿತ್ರವಿದಾವು
ದರಲ್ಲಿದೆಯೋ ಅದನ್ನು ನೀನು ತೆರೆದರೆ ನಮ್ಮ
ವಿವಾಹ ವಿಧಿಯನ್ನು ಕೂಡಲೆ ಆಚರಿಸಬಹುದು.
ನೀನು ಬಹುಶಃ ಸೋತರೆ, ರಾಜಕುಮಾರನೆ, ಅ

ನೀನು ಹೆಚ್ಚು ಮಾತಾಡದೆಯೇ ಇಲ್ಲಿಂದ ಕೂಡಲೆ ಹೊರಟುಹೋಗುವುದು.

ಅರಗಾನ್:— ನನ್ನ ಪ್ರಮಾಣವಚನದಂತೆ ನಾನು ಮೂರು ಬೇಕಾದ ವಿಧಿಯನ್ನು ನಿರ್ವಹಿಸಬೇಕು. ಮೊದಲಾಗಿ ನಾನಾವ ಡಬ್ಬವನ್ನು ತೆರೆಯುವೆನೋ ಎಂದು ಯಾರಿಗೂ ಹೇಳಬಾರದು. ಅನಂತರ ಸರಿಯಾದ ಡಬ್ಬವನ್ನು ತೆರೆಯದಿದ್ದರೆ ನಾನು ವಿವಾಹದ ಉದ್ದೇಶದಿಂದ ಮತ್ತೊರ್ವ ಕನ್ಯೆಯನ್ನು ಜೀವಾವಧಿ ವರೆಗೂ ಮೋಹಿಸಬಾರದು. ಕಡೆಗಂತು ನಾನೇ ಆರಿಸುವಿಕೆಯಲ್ಲಿ ಸೋತರೆ ಕೂಡಲೇ ಇಲ್ಲಿಂದ ಅಗಲಬೇಕು!

ಪೋರ್ಷ್ಯಾ!— ನನ್ನ ನಿಷ್ಪ್ರಯೋಜಕ ಇರುಕೆ ಆಸೆಯಿಟ್ಟು ಪ್ರತಿಯೊಬ್ಬನೂ ಈ ನಿಯಮಗಳಿಗೆ ಒಪ್ಪುವುದು ಅಪಾಯವೆಂದೇ ಅನ್ನಬೇಕು,

ಅರಗಾನ್:— ಹಾಗೆಯೇ ನನ್ನ ಪ್ರಕೆನೆ ಹೇಳಿಕೊಂಡಿರುವೆ. ಆ ಪ್ರಣಯ ಪ್ರೋತ್ಸಾಹ ಗೆಲುವೆ ಈಗ ನನ್ನ ಆಕಾಂಕ್ಷೆ. ಚಿನ್ನ ಬೆಳ್ಳಿಯೂ ಕಡೆಗಿಟ್ಟು ಸೀಸ! "ನನ್ನನ್ನು ಆರಿಸುವವನು ತನ್ನಲ್ಲಿರುವುದನ್ನು ಕೊಟ್ಟು ಎಲ್ಲವನ್ನು ಕಳೆದುಕೊಳ್ಳುವ ಅಪಾಯಕ್ಕೊಳಗಾಗುವುದು." ಹಾ, ನಾನು ಕೊಡುವ ಅಥವಾ ಕಳೆದುಕೊಳ್ಳುವ ಅಪಾಯಕ್ಕೆ ಒಳಗಾಗುವ ಮುಂಚೆಯೇ ನೀನು ಇನ್ನಷ್ಟು ಸುಂದರವಾಗಿ ಕಾಣಬೇಕು. ಈ ಚಿನ್ನದ ಡಬ್ಬ ಏನನ್ನುವುದು; ನಾನು ನೋಡುವೆನು. "ನನ್ನನ್ನು ಆರಿಸುವವನು ಹಲವು ಜನರು ಇಚ್ಛಿಸುವುದನ್ನು ಪಡೆಯುವನು." ಹಲವು ಜನರು ಏನನ್ನು ಇಚ್ಛಿಸುವರು? ಆ "ಹಲವು" ಎಂದರೆ ತಿಳಿಗೇಡಿ ಕಣ್ಣುಗಳು ನೋಡಿ ತಿಳಿದುದಕಿಂತ ಹೆಚ್ಚು ತಿಳಿಯದೆ ಒಳಗಿನದನ್ನು ಶೋಧಿಸಿ ನೋಡದೆ ಬಾನಕ್ಕಿಯಂತೆ ಕಾಲಮಾನಕ್ಕನುವಾಗಿ ಹೊರಗೋಡೆಯಲ್ಲಿ ಅಪಘಾತಕ್ಕೀಡಾಗುವ ಸ್ಥಾನದಲ್ಲಿ ಕಾಲ್ದಾರಿ ಸನಿಹದಲ್ಲಿ ಗೂಡುಕಟ್ಟುವಂತೆಯೇ ಈ ಡಬ್ಬಗಳ ಹೊರಗೆ ಮಾತ್ರ ನೋಡುತ್ತ ಆರಿಸುವ ಪೆದ್ದರ ಗುಂಪು ಇರಬಹುದು. ಅದೇನಿದ್ದರೂ ನಾನು ಹಲವು ಜನರು ಇಚ್ಛಿಸುವುದನ್ನು ಆರಿಸಲಾರೆನು. ಏಕೆಂದರೆ ನಾನು ಅನಾಗರಿ

ಕ, ಜನಸಾಮಾನ್ಯರೊಡನೆ ಸೇರಿ ನಾನು ಸಾಮಾನ್ಯನೆಂದೆನಿಸೆನು. ಏಕೆ? ನೋಡು, ಹೋ ರಜತವೇ, ಸಂಪತ್ತಿನಾಗರವೇ, ನನಗೆ ಮತ್ತೊಮ್ಮೆ ಹೇಳು. ಏನ್ ಬರೆದಿರುವನು ಶ್ರೋತ್ರಿಯವೇ? 'ನನ್ನನ್ನು ಆರಿಸುವವನಿಗೆ ಎಷ್ಟು ದೊರಕಲು ಅರ್ಹನೋ ಅಷ್ಟು ಮಾತ್ರ ದೊರಕುವುದು.' ಅದನ್ನು ಚೆನ್ನಾಗಿ ಹೇಳಿದೆ. ಅದೆಂತೆಂದರೆ ಯೋಗ್ಯತೆಯೇ ಇಲ್ಲದೆ ಅದೃಷ್ಟವನ್ನು ಮೋಸಗೊಳಿಸಿ ಮಾನ್ಯರು ಎಂದೆಂದು ಕೊಳ್ಳುತ್ತ ತಿರುಗುವವರಿದ್ದಾರೆ? ನಿಷ್ಕಳಂಕವಾದ ಗೌರವವನ್ನು ಪಡೆದಿರುವವನು ಅದನ್ನು ತನ್ನ ಯೋಗ್ಯತೆಯಿಂದ ಗಳಿಸಬೇಕು. ಹಾಗಲ್ಲದೆಯೇ ಅನಾಚಾರ ಅಕ್ರಮಗಳಿಂದ ಅಸ್ಥಾಯೀ ಪದವಿಯನ್ನು ಅಧಿಕಾರವನ್ನು ಪಡೆದು ಆ ಘನತೆಗೆ ಅನರ್ಹರೆನಿಸದ ಅವರು ಅಹಂಕಾರಿಂಬದಾಗಿ ತಿಳಿದುಕೊಳ್ಳದಿರಲಿ. ಹಾಗಾದರೆ ಅದೆಷ್ಟು ಜನ ತಾವು ತೋರಿಸಿಕೊಳ್ಳುವುದನ್ನು ಮುಚ್ಚಿಕೊಳ್ಳಬೇಕು. ಅದೆಷ್ಟು ಆಜ್ಞಾಪಿಸುವವರು ಇತರರ ಆಜ್ಞಾಪನೆಗೆ ಒಳಗಾಗಬೇಕು? ಸಾಮಾನ್ಯರಿಗೆ ಹುಟ್ಟಿದವರೆಷ್ಟಿರುವ ಜೊಳ್ಳು ಒಕ್ಕಲುಗಳನ್ನೆಷ್ಟು ಹೆಕ್ಕಬೇಕು, ಬರಿ ಹೊಟ್ಟುಗಳಿಂದ ಗತಕಾಲಗರ್ಭದಿಂದಲೂ ಹಿಡಿದು ಹೀನವಾದುದನ್ನು ಎಲ್ಲವನ್ನು ಹೆಕ್ಕಿತೆಗೆದು ಬಣ್ಣವನ್ನು ಅವಕೆ ಹಚ್ಚಬೇಕು. ಅದಿರಲಿ! ಈಗಿನ್ನು ಆಯ್ಕೆ ಇಂತಿರುವುದು: "ನನ್ನನ್ನು ಆರಿಸುವವನಿಗೆ ಎಷ್ಟು ದೊರಕಲು ಅರ್ಹನೋ ಅಷ್ಟೆ ದೊರಕುವುದು," ಇದು ಬರಿ ವ್ಯಾಸ್ಯವೆಂದೆನಿಸುವೆನು. ಇದರ ಬೀಗದ ಕೈ ಕೊಡಿರಿ. ನನ್ನ ವಿಧಿ ಫಲವನ್ನು ಶೀಘ್ರವೇ ತೆರೆದಿರುವೆನು.

(ಬೆಳ್ಳಿ ಡಬ್ಬವನ್ನು ತೆರೆಯುವನು.)

ಪೋರ್ಷಿಯಾ:— (ಸ್ವಗತ) ಅಲ್ಲಿ ಏನು ಕಾಣುವುದೋ ಅದಕ್ಕೆ ಈ ಸುದೀರ್ಘ ಮೌನ!

ಅರಗಾನ್:— ಇಲ್ಲಿ ಏನಿದೆ? ಬಿಂಗು ಗೊಂಬೆ ನೋಡುತ್ತಿರುವ ಹುಚ್ಚು ಹಿಡಿದವನ ಚಿತ್ರ! ಅದರೊಡನೆ ಒಂದು ಚೀಟಿಯಿದೆ. ನಾನದನ್ನು ಓದುವೆನು. ನೀನು ಪೋರ್ಷಿಯಾಳಿಗೆ ಎಷ್ಟು ಸಮನೆನಿಸಿದೆಯೋ ಇರುವಿ? ನನ್ನ ಆ

ತಿ ಆರ್ಹತೆಗಳಿಗಡಿಯಿಟ್ಟರ ಮತ್ತ್ಯಗೆ ಅವಳೇ ನ
ಮಲ್ಲಿಕೆನಿಸದೆ ಇರುವಳೇ? ನಿರ್ಮ "ನಮ್ಮನು ಅರಿಯುವ
ಮನಿಗೆ ಎಷ್ಟು ದೊರಕಲು ಆಹನವೋ ಅಷ್ಟೆ ದೊರ
ಕುತ್ತದೆ." ಹೆಣ್ಣಿನ ತಲೆ! ಇದಕ್ಕಿಂತ ಹೆಚ್ಚಿಯ
ಮಾದಕ್ಕೆ ಅನರ್ಹನಲ್ಲವೆ? ಇದೇ ನಮ್ಮ ಮಹಾ
ಲಕ್ಷ್ಮಿ? ನಮ್ಮ ಬಹುತ್ತರದ ನಿರಾಕೆಗೆ ಹಿತಮನ್ನ
ಯಾಲು ಬೇರೇನೂ ಇಲ್ಲವೆ?

ಪ್ರೊ. ಶಾಸ್ತ್ರಿ:— ಬೀಸುರಿಸುವ ಮಾದಕ ಮತ್ತು ನಿರ್ಣಯಿಸುವುದೇ ಎರ
ಡು ಪ್ರತ್ಯೇಕ ಕಾರ್ಯಾಚರಣೆಗಳು ಮತ್ತು ಒಂ
ದಕ್ಕೊಂದು ವಿರೋಧವಿಹ ಸ್ವಭಾವಗಳು.

ಅರಗಾನ್:— ಇಲ್ಲಿ ಮಸದೆ?—
ಬೆಂಕಿ ಅದು ಮಳರದ್ದುದು ಮಿನುಗಿಸುತ್ತು
ಮಳು ನಿಲ ತೀವ್ರನವದು ಅಂತೆಯೆ ಆಯಿತು.
ಆಯಿತದು ಅರಿಸದೆ ಇರು ತಪ್ಪುಗಳನು
ಇರಬಹುದು ಜಂಬನದ ತಿನ್ನಲು ಹದನು!
ಕಲವರಿಗೆ ಆ ನೆಳಲ ತಂಪು ಅದೆ ಧೈಲಕು
ಮಯೂರಿರಿ ಅದು ನಿಜವು ಅದೆ ಒಂದು ಬದಕು,
ರಜತ ಶರದೆಯ ತೆರೆಯೊಲಂತೆ ಇದು ಆಯಿತು
ಶಿಶಿ ಶಿಸ್ತಿ ಶಯ್ಯೆಗಂತೆಯ್ಯ ಲಂಬಂತು.
ಆನಿಹೆನು ನಿತ್ಯವೂ ನಿನ್ನ ಗೆಳೆಯ ಮಾರಿ,
ತೊಲಗು ಅದರಿಂದ ನೀನ್ ಕ್ಷಣದಲ್ಲಿ ಸಾರಿ!

× × × ×

ತೋರಿಕೆದವೆ ಇಷ್ಟಕ್ಕೆ ಹೆಣ್ಣಿನೊಲು ಎಂತೊ
ಆನ್ ಇಲ್ಲಿ ಅರಿಯುತ್ತಲೆ ಇರ್ದಡದು ನಿಜವೊ!
ಮಂಕಾಗುತಲೆಯೊಡೆ ಬಂದೆ ಒಲಿಸಲೆಂದೆನುತ
ಪೋಗುತಿಹೆ ನಿರಜು ತಲೆತಿಬುರುಡೆಗಳ ಪೊರುತ!
ನಿಲ್ಲಿಸು ಮನಿಸನ್ನಣೆ ಪ್ರೇರಮಣ್ ನಮಿತಿ
ನೀಹನಿಯಲೆ ನಿಹನಿಲ್ಲ್ವ ನಡೆನುಡಿಯ ಕರಿಗೆ!

× × × ×

ಪ್ರೊ. ಶಾಸ್ತ್ರಿ:— ಉರಿಯುತಿಹ ಮೇಣದ ಜೊಲು ಬತ್ತಿಯು ಒಂದು ಹಾ
ತೆಯನು ಈ ರೀತಿ ಉಳಿಸುತ. ಆಹಾ, ಆ ನಿಳು
ವುಮಾದದ ಗಾವಿಲರ ಹೆಕ್ಕಳಿಕೆ ತೊಡಿಗಿದಾ
ಗ ಆದನು ತಮ್ಮ ಮತಿಸ್ಮೋಲ್ಲವಿಂದಲೆ ಕಳೆಸು
ಕೊಳ್ಳುವಂದಾ ಜಾಣ್ಮೆ ಆವರಿಗದೆ!

ಮರಿಶಿಷ್ಯ:— ನೀನೂ ಮತ್ತು ಹೆಣ್ಣು!

ಗಲ್ಲಿಗೇರುವುದು ಮತ್ತು ವಿವಾಹವಾಗುವುದು
ವಿಧಿಪ್ರೇರಕವೆಂಬ ಹಿರಿಯರ ಮಾತು ನಾನ್ಯಥಾ
ವಾದದ್ದೇನೂ ಅಲ್ಲ!

ಪೋರ್ಷ್ಯ:— ನೆರಿಸ್ಸಾ, ಬಾ. ಪರದೆಯನ್ನು ಎಳೆ.

(ಒಬ್ಬ ದೂತನು ಬರುವನು.)

ದೂತ:— ನಿಮ್ಮ ಯಜಮಾನಿ ಎಲ್ಲಿ?

ಪೋರ್ಷ್ಯ:— ನಿನಗೆ ನನ್ನಿಂದೇನು ಆಗಬೇಕಾಗಿದೆ?

ದೂತ:— ಅಮ್ಮಾ, ವೆನ್ನಿಸಿನ ತರುಣನೊಬ್ಬನು ತನ್ನ ಪ್ರಭುವು ಬರುತ್ತಿರುವನೆಂಬುದನ್ನು ಸೂಚಿಸಲೆಂಬೊಲು ನಿಮ್ಮ ಹೆಬ್ಬಾಗಿಲ ಬಳಿ ಬಂದಿಳಿದಿರುವನು. ಬಹು ಬೆಲೆಯ ಗೌರವ, ವಿನಯ, ವಿಶ್ವಾಸಗಳನ್ನು ಸಂಭಾವನೆ ತಂದ ಅವನಂಥ ಮಧುರ ರಾಯಭಾರಿಯನ್ನು ನಾನು ಕಂಡುದೇ ಇಲ್ಲ. ತನ್ನ ಪ್ರಭುವಿನ ಆ ಬರೋಣವನ್ನು ತಿಳಿಸಲು ಬಂದ ಈ ಕುಮಾರನು ಮುಂಬರಲಿಹ ಗ್ರೀಷ್ಮ ಋತುವು ಬಹು ಸುಖಕರವು ಎಂಬುದನ್ನು ಸೂಚಿಸುವ ಏಪ್ರಿಲ್‌ನ ಬೇಸಿಗೆಗೆ ಬಂದ ಈ ದಿನವಿಷ್ಟು ಮೋಹಕವಾಗಿ ತೋರಿದ್ದೇ ಇಲ್ಲ!

ಪೋರ್ಷ್ಯ:— ನಿನ್ನನಿದೋ ಕೇಳಿಕೊಳ್ಳುತ್ತಿರುವೆನು; ಇಷ್ಟು ಸಾಕು! ಅವನನ್ನು ಹೊಗಳುತ್ತ ಹುಮ್ಮಸ್ಸಿನಲ್ಲಿ ಈ ಸಂತೋಷದ ದಿನವನ್ನು ಕಳೆಯುವೆ ನೀನು ಅವನೇನು ನಿನ್ನ ಬಂಧುವು ಎಂದು ದಕ್ಕನೆ ಹೇಳುವಿಯೋ ಎಂದು ನಾನು ಒಂದಷ್ಟು ಹೆದರಿದ್ದೆ! ಬಾ, ನೆರಿಸ್ಸಾ ಬಾ, ಅಷ್ಟು ಸಭ್ಯ ರೀತಿಯಿಂದ ಬರುವ ಆ ಮೋಹನನ ನಿಲುವನ್ನು ನಾನು ನೋಡಲು ತವಕಿಸುವೆನು!

ನೆರಿಸ್ಸಾ:— ಬಸ್ಸಾನಿಯೋ, ಪ್ರೇಮದೇವತೆಯೇ, ನಿನ್ನ ಇಚ್ಛೆಯಂತೆ!

(ಹೋಗುವರು.)

ಅಂಕ ೩.

ದೃಶ್ಯ ೧ — ವೆನ್ನಿಸ್‌ನ ಒಂದು ಬೀದಿ.
(ಪ್ರವೇಶ — ಸೊಲಾನ್ಯೊ ಮತ್ತು ಸಲೆರಿನ್ಯೊ.)

ಸೊಲಾನ್ಯೊ:- ವೆನ್ನಿಸ್‌ನ ವ್ಯಾಪಾರಕಟ್ಟೆಯಲಿ ಏನು ವಾರ್ತೆ?

ಸಲೆರಿನ್ಯೊ!- ಏಕೆ? ನಿಜವೋ ಅಲ್ಲವೋ ಎಂದು ತಿಳಿಯದ ವಾರ್ತೆ ಇದು ಹಾಗೆಯೇ ಇದೆ, ತುಂಬ ಬೆಲೆಬಾಳುವ ಸರಕುಗಳಿಂದ ತುಂಬಿದ ಅಂತೋನ್ಯೊನ ಒಂದು ಹಡಗು ಆಂಗ್ಲ ಜಲಸಂಧಿಯ ಇಕ್ಕಟ್ಟಿನಲ್ಲಿ ಅವಘಡಕ್ಕೀಡಾಗಿದೆ, ಅಪಾಯಕಾರವೆಂದು ಪ್ರಸಿದ್ಧವಾದ ಆ ಸ್ಥಳದಲ್ಲಿ ಹಿಂದೆಯೂ ಎಷ್ಟೋ ದೊಡ್ಡ ಹಡಗುಗಳು ಮುಳುಗಿ ಸಮಾಧಿಯಾಗಿವೆ. ಜನದ ಬಾಯಿಂದ ಹೆಕ್ಕಿದ ಈ ವರದಿಯು ನಿಜವನ್ನು ಹೇಳುವ ಹೆಂಗಸಿನ ನುಡಿಯಂತಾದರೆ ಅದು ಸರಿ.

ಸೊಲಾನ್ಯೊ! — ಶುಂಠಿಯನ್ನು ತಿಂದ ಮನಸ್ಸಿನಿಂದ ಸುಳ್ಳನ್ನು ಹರಟೆ ಹೊಡೆಯುತ್ತ ಅವಳು ಇದ್ದಿದ್ದರೆ, ಅಥವಾ ತನ್ನ ಮೂರನೇ ಗಂಡನು ಸತ್ತಾಗ ಅವಳು ಅತ್ತಳು ಎಂಬುದಾಗಿ ತನ್ನ ನೆರೆಮನೆಯವರಿಗೆ ಹೇಳಿ ಒಪ್ಪಿಸಿದ್ದರೆ ನಾನು ನಂಬುತ್ತಿದ್ದೆನು, ಆದರೆ ಹೆಚ್ಚು ಹರಟುತ್ತ ಇರುವಾಗ ಬಾಯಿಂದ ಜಾರುವ ಸುಳ್ಳಿನಂತೆ ಅಲ್ಲ, ರಾಜಮಾರ್ಗದುದ್ದಕ್ಕೂ ಮಾತಾಡುತ್ತಾ, ಅವನಿಗೆ ಹಾಗಾಯಿತು, ಹೀಗಾಯಿತು, ಎಂದು ಹೇಳಿದರೂ ಅದು ನಿಜವೇ ಆಗಿದೆ. ಯೋಗ್ಯ ಅಂತೋನ್ಯೊ, ಸತ್ಯಶೀಲ ಅಂತೋನ್ಯೊ, ಅಹಾ ನನಗೂ ಅವನ ಹೆಸರಿನೊಡನೆ ಹೇಳಿಕೊಳ್ಳುವ ಅಂತಾ ಬಿರುದುಗಳು ಇದ್ದಿದ್ದರೆ — ಸರಿ, —

ಸಲೆರಿನ್ಯೊ! - ಪೂರ್ತಿ ವಿರಾಮವಾಗಲಿ; ಬಾ!

ಸೊಲಾನ್ಯೊ!- ಅಹಾ, ನೀನು ಏನಂದೆ? ಏಕೆ? ಕಡೆಗಂತೂ ಅವನು ಒಂದು ಹಡಗನ್ನು ಕಳೆದುಕೊಂಡನೆಂದೇ ಮಾತಿನ ಕೊನೆ!

ಸಲೆರಿನ್ಯೊ!- ಅವನಿಗಾದ ನಷ್ಟದ ಕೊನೆಯೇ ಅದು ಎಂದಾದರೆ ನಾನು ನಂಬುವೆನು,

ಸೊಲಾನ್ಯೊ!- 'ಓಂ ಶಾಂತಿ' ಯೆಂದು ತಪ್ಪದೆ ಹೇಳುವೆನು; ಏಕೆಂದರೆ ಸೈತಾನನು ನನ್ನ ಪ್ರಾರ್ಥನೆಯ ಮಧ್ಯೆ ಕಾಣಿಸಿಕೊಳ್ಳಬಹುದು, ಯೆಹೂದಿಯನನ್ನು ಹೋಲುವ ಅವನು ಇಲ್ಲಿ ಬರುತ್ತಿರುವನು,

(ಪ್ರವೇಶ — ಷೈಲಾಕ್)

ಷೈಲಾಕನೆ, ಈಗ ಹೇಗೆ? ವ್ಯಾಪಾರಿಗಳೊಳಗೆ ಏನು ವಿಶೇಷ?

ಷೈಲಾಕ್!- ನೀನು ತಿಳಿದಿರುವೆ; ನನ್ನ ಮಗಳು ಪಲಾಯನ ಗೈದುದು ನೀನು ತಿಳಿದಿರುವಷ್ಟು ಚೆನ್ನಾಗಿ ಬೇರಾರಿಗೂ,

ಬೇರಾರಿಗೂ, ತಿಳಿದಿಲ್ಲ.

ಸಲೇರಿಯೋ:- ಅದು ನಿಜ. ನಾನು ಹೇಳುವುದಾದರೆ ಅವಳಿಗೂ ಹಾರಾಡಲು ರೆಕ್ಕೆಗಳನ್ನು ನಿರ್ಮಿಸಿದ ಆ ದರ್ಜಿಯನ್ನು ನನಗೆ ಗೊತ್ತುತ್ತು.

ಸೊಲಾನಿಯೋ:- ಮತ್ತು ಆ ಪಕ್ಷಿಯು ಬಲಿತಿದೆ, ಅದು ತಂದೆ ತಾಯಿಗಳಿಂದ ಅಗಲುವ ಕಾಲ ಬಂದಿದೆಯೆಂದಿಲ್ಲ ಷೈಲಾಕನು ಅವನ ಮಟ್ಟಿಗೆ ತಿಳಿದಿದ್ದನು,

ಷೈಲಾಕ್:- ಅದರಿಂದ ಅವಳು ತಿರಸ್ಕೃತಳಾದಳು.

ಸಲೇರಿಯೋ:- ಒಬ್ಬ ಸೈತಾನನೆ ಅವಳ ನ್ಯಾಯಾಧೀಶನಾದರೆ ಅದೂ ನಿಜ.

ಷೈಲಾಕ್:- ನನ್ನದೇ ರಕ್ತ ಮತ್ತು ಮಾಂಸವು ನನ್ನನ್ನು ಪ್ರತಿಭಟಿಸುವುದೆಂದರೆ!

ಸೊಲಾನಿಯೋ:- ಆ ಹಳೆ ಶವದ ರಕ್ತ ಮಾಂಸವನ್ನೆಲ್ಲ ಹೊರ ಹಾಕು. ನಿನ್ನ ಈ ಪ್ರಾಯದಲ್ಲಿ ಆ ರಕ್ತಮಾಂಸದ ಕಾಮೋದ್ರೇಕವು ನನ್ನನ್ನು ಪರೀಕ್ಷಿಸುವಂತಿದೆ,

ಷೈಲಾಕ್:- ನಾನರುಹುದೇನೆಂದರೆ ನನ್ನ ಮಗಳು ನನ್ನ ಮಾಂಸ ಮತ್ತು ರಕ್ತದ ಅಂಶವೆಂದು,

ಸಲೇರಿಯೋ:- ನಿನ್ನ ಮಾಂಸಕ್ಕೂ ಅವಳದ್ದಕ್ಕೂ ಕಲ್ಲಿದ್ದಲು ಮತ್ತು ಹಸ್ತಿಹಲ್ಲು, ಅದರ ಕೆಂಪು ದ್ರಾಕ್ಷಾರಸ ಮತ್ತು ರೈನ್ಸನ ತೀರದ ಬಿಳಿ ದ್ರಾಕ್ಷಾರಸ ಇವಕ್ಕೂ ಇರುವ ವ್ಯತ್ಯಾಸಕ್ಕಿಂತಲೂ ಹೆಚ್ಚು ಇದೆ, ಅದಿರಲಿ. ಆಂಟೋನಿಯೋಗೆ ಸಮುದ್ರದಲ್ಲಿ ಏನಾದರೂ ನಷ್ಟ ಸಂಭವಿಸಿತೋ ಇಲ್ಲವೋ ಎಂಬುದರ ಬಗ್ಗೆ ನೀನೇನಾದರೂ ತಿಳಿದಿರುವಿಯಾ, ನಮಗೆ ಹೇಳು!

ಷೈಲಾಕ್:- ಅಲ್ಲಿ ನನಗೆ ಇನ್ನೊಂದು ದುರಂತ ಸಮಸ್ಯೆಯುಂಟು, ಮಾರುಕಟ್ಟೆಯಲ್ಲಿ ತಮ್ಮ ತಲೆಯನ್ನು ತೋರಿಸಿಕೊಳ್ಳದ ಒಬ್ಬ ದಿವಾಳಿಕೋರ ಮತ್ತು ಒಬ್ಬ ದುಂದುಗಾರ! ಮತ್ತು ಚೆನ್ನಾಗಿ ಉಡುಗೆಯನ್ನುಟ್ಟು ಸಂತೆಗೆ ಬರುತ್ತಿದ್ದ ಒಬ್ಬ ಭಿಕಾರಿ - ಇರಲಿ! ಅವನು ತನ್ನ ಕರಾರನ್ನು ನೋಡಲಿ! ಅವನು ನನ್ನನ್ನು ಹೆಚ್ಚು ಬಡ್ಡಿಗೆ ಹಣವನ್ನು ಸಾಲ ಕೊಡುವವನೆಂದನ್ನುತಿದ್ದನು. ಅವನು ತನ್ನ ಕರಾರನ್ನು ನೋಡಲಿ, ಅದೇನೆನೋ ಕ್ರೈಸ್ತ ಉದಾರೋಪಚಾರವನ್ನು ಗಮನಿಸಿ ಅವನು ಅಲ್ಲಿಲ್ಲಿ ಸಾಲ ಕೊಡುತ್ತಿದ್ದನು; ಅವನು ತನ್ನ ಕರಾರನ್ನು ನೋಡಲಿ.

ಸಲೇರಿಯೋ:- ಏಕೆ? ಅವನು ನಷ್ಟ-ಕಷ್ಟಕ್ಕೊಳಗಾಗಿದ್ದರೆ ನೀನು ಅವನ ಮಾಂಸವನ್ನು ನಿಜಕ್ಕೂ ತೆಗೆದುಕೊಳ್ಳಲಾರೆ ಯತಕ್ಕೆ! ಅದರಿಂದೇನು ಪ್ರಯೋಜನ?

ಷೈಲಾಕ್:- ಮೀನಿಗೆ ಬೇಕಾದ ಗಾಳದ ಹುಳುವಂತೆ! ಅದು ಬೇರಾವುದಕ್ಕಲ್ಲವಾದರೂ ನನ್ನ ಸೇಡು ತೀರಿಸಲು ಪ್ರಯೋ

ಜನವಾಗುತ್ತದೆ. ಅವನು ನನ್ನನ್ನು ಅವಮಾನಪಡಿಸಿರುವನು; ನನಗೆ ಅರ್ಧ ಮಿಲಿಯನ್ ಮೊಹರುಗಳು ಬರುವುದನ್ನು ಬಾರದ ಹಾಗೆ ಮಾಡಿದನು. ನಾನು ಗಳಿಸಿದ ಲಾಭದ ಬಗ್ಗೆ ಗೇಲಿಮಾಡಿದನು; ನನ್ನ ಜನಾಂಗವನ್ನು ಹಿಯ್ಯಾಳಿಸಿದನು; ನನ್ನ ವ್ಯಾಪಾರದ ಎಡೆಹಾದಿ ತೊಂದರೆಪಡಿಸಿದನು; ನನ್ನ ಮಿತ್ರರಿಗೆ ನನ್ನಲ್ಲಿ ವಿಶ್ವಾಸವಿಲ್ಲದಂತೆ ಮಾಡಿದನು. ನನ್ನ ವೈರಿಗಳನ್ನು ನನಗೆ ವಿರೋಧವಾಗಿ ಉದ್ರೇಕಗೊಳಿಸಿದನು; ಇದಕ್ಕೆಲ್ಲ ಅವನನ್ನು ವ ಕಾರಣವೇನು, ನಾನೊಬ್ಬ ಯೆಹೂದಿಯನು! ಆದರೇನು? ಒಬ್ಬ ಯೆಹೂದಿಯನಿಗೆ ಕಣ್ಣುಗಳಿಲ್ಲವೆ? ಯೆಹೂದಿಯನಿಗೆ ಕೈಗಳಿವೆ? ಅಂಗಾಂಗಗಳು, ಉದ್ವೇಗಾವೇಶಗಳು, ಇಂದ್ರಿಯಗಳು, ಒಲವು ನಲವುಗಳು, ಮನೋರಾಗಗಳು ಇಲ್ಲವೆ? ಅದೇ ಆಹಾರದಿಂದ ಪೋಷಿಸಲ್ಪಡುವ, ಅದೇ ಅಸ್ತ್ರಗಳಿಂದ ಇರಿಯಲ್ಪಡುವ, ಅದೇ ವ್ಯಾಧಿಗೆ ಒಳಗಾಗುವ, ಅದೇ ರೀತಿಯಲ್ಲಿ ಶುಶ್ರೂಷೆಯನ್ನು ಪಡೆಯುವ ಮತ್ತು ಒಬ್ಬ ಕ್ರೈಸ್ತನಂತೆಯೇ ಅವನು ಹೇಮಂತದ ಚಳಿಯನ್ನು ಗ್ರೀಷ್ಮದ ಬಿಸಿಲನ್ನು-ಆಯಾ ಋತುಗನುಸಾರವಾಗಿ ಅನುಭವಿಸುತ್ತಾನೆ. ನೀವು ನನಗೆ ಚುಚ್ಚಿದರೆ ನಮ್ಮ ರಕ್ತ ಉಕ್ಕಿ ಹರಿಯುವುದಿಲ್ಲವೆ? ನೀವು ನಮಗೆ ಕಚ್ಕಲಗುಳಿ ಮಾಡಿದರೆ ನಾವು ನಗುವುದಿಲ್ಲವೆ? ನೀವು ನಮಗೆ ವಿಷ ತಿನ್ನಿಸಿದರೆ ನಾವು ಸಾಯುವುದಿಲ್ಲವೆ? ಮತ್ತು, ನೀವು ನಮಗೆ ಅನ್ಯಾಯವನ್ನೆಸಗಿದರೆ ನಾವು ಸೇಡು ತೀರಿಸುವುದಿಲ್ಲವೆ? ಬೇರೆ ವಿಧದಲ್ಲಿ ನಾವು ನಿಮ್ಮಂತೆಯೇ ಇದ್ದರೆ ಇದರಲ್ಲೂ ನಾವು ನಿಮ್ಮನ್ನೇ ಹೋಲುತ್ತೇವೆ. ಒಬ್ಬ ಯೆಹೂದಿಯನು ಕ್ರೈಸ್ತನಿಗೆ ಅನ್ಯಾಯವನ್ನೆಸಗಿದರೆ ಆ ಕ್ರೈಸ್ತನು ಏನು ನಮ್ರತೆ ತೋರಿಸುವನು? ಪ್ರತಿಹಿಂಸೆ! ಒಬ್ಬ ಕ್ರೈಸ್ತನು ಯೆಹೂದಿಯನಿಗೆ ಅನ್ಯಾಯವನ್ನೆಸಗಿದರೆ ಆ ಯೆಹೂದಿಯನು ಕ್ರೈಸ್ತನ ಉದಾಹರಣೆಗನುವಾಗಿ ಎಷ್ಟು ದುಃಖವನ್ನನುಭವಿಸಬೇಕು? ಏಕೆ? ಪ್ರತಿಹಿಂಸೆ! ನೀನು ಬೋಧಿಸುವ ಅನಾಚಾರವನ್ನು ನಾನು ನಡೆಸುತ್ತೇನೆ, ಆದರೆ ಅದು ಕಠಿಣವಿದೆಯಾದರೂ ನಾನು ಬೋಧನೆಯನ್ನು ಉತ್ತಮವಾಗಿಸುತ್ತೇನೆ.

(ಅಂತೋನ್ಯೋ ಕಡೆಯಿಂದ ಒಬ್ಬನ ಪ್ರವೇಶ)

ಒಬ್ಬನು:- ಮಾನ್ಯರೆ, ನನ್ನ ಧನಿ ಅಂತೋನ್ಯೋ ಈಗ ಅವನ ಮನೆಯಲ್ಲಿರುವನು. ಅವನು ನಿಮ್ಮಿಬ್ಬರೊಡನೆ ಮಾತಾಡಲು ಇಚ್ಛಿಸುತ್ತಾನೆ.

ಸಲೇರಿಯೋ!– ನಾವು ಅವನನ್ನು ಹುಡುಕುತ್ತ ಅತ್ತಿತ್ತ ನಡೆದೆವು.

(ಪ್ರವೇಶ – ಟ್ಯೂಬಲ್)

ಸೊಲೇನಿಯೋ!– ಇಲ್ಲಿ ಅದೇ ಕುಲಕ್ಕೆ ಸೇರಿದ ಮತ್ತೊಬ್ಬ ಬರುತ್ತಿರುವನು, ಸೈತಾನನೇ ಯೆಹೂದಿಯನಾಗಿ ಪರಿವರ್ತನೆಗೊಳ್ಳದಿದ್ದರೆ ಮೂರನೆಯವನೊಬ್ಬನು ಅವರಿಗೆ ಸರಿಸಮಾನನಾಗಲಾರನು,

(ಸಲೇರಿಯೋ, ಸೊಲೇನಿಯೋ, ಆ ವ್ಯಕ್ತಿ ಹೋಗುವ

ಷೈಲಾಕ್:– ಟ್ಯೂಬಲ್, ಈಗ ಹೇಗಿರುವೆ? ಜಿನೋವಾದಿಂದ ಏನು ವಾರ್ತೆ? ನನ್ನ ಮಗಳು ಕಾಣಸಿಕ್ಕಿದಳೆ?

ಟ್ಯೂಬಲ್!– ಅವಳು ಇದ್ದಲ್ಲಿಂದು ತಿಳಿದು ನಾನು ಹಲವು ಬಾರಿ ನೋಡಿದೆನಾದರೂ ಅವಳನ್ನು ಕಾಣಸಿಗಲಿಲ್ಲ,

ಷೈಲಾಕ್:– ಏಕೆ? ಅಲ್ಲಿ, ಅಲ್ಲಿ, ಅಲ್ಲಿ, ಅಲ್ಲಿ! ಫ್ರಾಂಕ್‌ಫರ್ಟಿನಲ್ಲಿ ನನ್ನಿಂದಲು ಪಡೆದ ವಜ್ರದ ಕಟ್ಟು ಕಾಣೆಯಾಗಲು ನನಗೆ ಅದರಿಂದ ಎರಡು ಸಾವಿರ ವರಹಗಳು ನಷ್ಟವಾಯಿತು, ನಮ್ಮ ಜನಾಂಗಕ್ಕೆ ಇಂಥಾ ಶಾಪ ಈ ವರೆಗೂ ಬಿದ್ದುದಿಲ್ಲ. ನನಗೂ ಈ ವರೆಗೆ ತಟ್ಟಿದ್ದಿಲ್ಲ. ಆ ಎರಡುಸಾವಿರ ವರಹ ಹಾಗೆ ಹೋದುದಲ್ಲದೆ ಇನ್ನೂ ಹಲವು ಬೆಲೆ ಬಾಳುವ ಅಮೂಲ್ಯ ಆಭರಣಗಳು ಕಳೆದುಹೋದವು, ನನ್ನ ಮಗಳು ಆಭರಣಗಳನ್ನು ಅವಳ ಕಿವಿಯಲ್ಲಿ ಹಾಕಿದ್ದು ನನ್ನ ಕಾಲ ಬಳಿ ಸತ್ತು ಬಿದ್ದಿದ್ದರೆ, ಮತ್ತು ಅವಳ ಶವವನ್ನು ನನ್ನ ಕಾಲಿನತ್ತ ಇಟ್ಟು ಆ ಹೊನ್ನ ಹಣವನ್ನು ಅವಳ ಶವದ ಪೆಟ್ಟಿಗೆಯಲ್ಲಿ ಇಟ್ಟಿದ್ದರೆ ಹಿತವಾಗಿತ್ತೆಂದು ಊಹಿಸುವೆನು. ಅವರನ್ನು ಕುರಿತಾಗಿ ಏನೂ ವಾರ್ತೆಯಿಲ್ಲವೆ? ಏಕೆ? ಅವಳನ್ನು ಹುಡುಕಲು ಎಷ್ಟು ಖರ್ಚಾಯಿತೋ ತಿಳಿಯೆನು, ಏಕೆ? ನಷ್ಟದ ಮೇಲೆ ನಷ್ಟ. ಕದ್ದವನು ಅಷ್ಟೆಲ್ಲ ಕದ್ದು ಹೋಗಿದ ಹಣದ ಜೊತೆಗೆ ಕಳ್ಳನನ್ನು ಹುಡುಕುವ ಖರ್ಚು ಬೇರೆ. ಆದರೂ ತೃಪ್ತಿಯಿಲ್ಲ; ಸೇಡು ತೀರಿಸಲೂ ಇಲ್ಲ. ದುರ್ದೈವ ಏನು ಕಳವಳಕ್ಕೀಡಾಗಿಸಿದ್ದರೂ ನನ್ನ ಭುಜಗಳನ್ನು ಹಗುರಗೊಳಿಸುವುದು ಹೇಗೆ? ನನ್ನ ಶ್ವಾಸೋಚ್ಛ್ವಾಸದಲ್ಲಿ ನಿಟ್ಟುಸಿರು ಇಲ್ಲ, ಮಿಡಿಯಲು ಕಂಬನಿಯೂ ಇಲ್ಲ.

ಟ್ಯೂಬಲ್:– ಹೌದು. ಇತರರಿಗೂ ಶನಿಯು ಬಾಧಿಸಿದೆ. ಜಿನೋವಾದಲ್ಲಿ ನಾನು ತಿಳಿದ ಪ್ರಕಾರ ಆಂಟೋನಿಯೋ ---.

ಷೈಲಾಕ್!– ಏನು? ಏನು? ಏನು? ಶನಿಬಾಧೆ, ಶನಿ, ಶನಿ, ಶನಿ?

ಟ್ಯೂಬಲ್:– ಟ್ರಿಪೋಲಿಯಿಂದ ಬರುತ್ತಿದ್ದ ವ್ಯಾಪಾರ ಹಡಗೊಂದು

ಅಪಾಯಕೀಡಾಗಿದೆ,

ಷೈಲಾಕ್:— ನಾನು ದೇವರನ್ನು ವಂದಿಸುತ್ತೇನೆ; ದೇವರಿಗೆ ಆಭಾರಿಯಾಗಿದ್ದೇನೆ! ಅದು ನಿಜವೆ? ನಿಜವೆ?

ಟ್ಯೂಬಲ್:— ಅಪಘಡಕ್ಕೆ ಈಡಾಗಿ ಅದರಿಂದ ಪಾರಾದ ಕೆಲವು ನಾವಿಕರೊಡನೆ ನಾನು ಮಾತಾಡಿದೆನು,

ಷೈಲಾಕ್:— ಮಾನ್ಯ ಟ್ಯೂಬಲ್, ನಾನು ನಿನಗೆ ವಂದಿಸುವೆನು, ಒಳ್ಳೆಯ ವಾರ್ತೆ; ಒಳ್ಳೆಯ ವರ್ತಮಾನ. ಹಹಹಾ, ಜಿನೋವಾದಲ್ಲಿ ಇದನ್ನು ತಿಳಿದೆಯಾ?

ಟ್ಯೂಬಲ್:— ನನಗೆ ತಿಳಿದುಬಂದಂತೆ ನಿನ್ನ ಮಗಳು ಜಿನೋವಾದಲ್ಲಿ ಒಂದು ರಾತ್ರಿ ಕಳೆಯಲು ಎಂಭತ್ತು ವರಹಗಳನ್ನು ವೆಚ್ಚ ಮಾಡಿದಳು.

ಷೈಲಾಕ್:— ನೀನು ನನ್ನ ಎದೆಯನ್ನು ತಿವಿಯುತ್ತಿರುವೆ, ನನ್ನ ಚಿನ್ನವನ್ನು ನಾನು ನೋಡುವಂತೆಯೂ ಇಲ್ಲ. ಒಂದೇ ರಾತ್ರಿಗೆ ಎಂಭತ್ತು ವರಹಗಳು; ಎಂಭತ್ತು ವರಹಗಳು,

ಟ್ಯೂಬಲ್:— ವೆನ್ನಿಸ್‌ನ ನನ್ನ ವ್ಯಾಪಾರ ಸಂಸ್ಥೆಯಲ್ಲಿ ಆಂಟೋನಿಯೋನಿಗೆ ಸಾಲಕೊಟ್ಟವರ ಕಡೆಯವರು ನೇಮಿಸಿದ ಆ ಸಿಪಾಯ ದ್ವದೊಳಗೆ ವಿಫಲತೆಗೆ ಶೋಧಿಸುವ ಜನರು ಬಂದು ಅವನಿಗೆ ಬೇರೆ ಉಪಾಯವಿಲ್ಲ, ಅವನು ಪೂರ್ತ ದಿವಾಳಿಯಾಗಿದ್ದಾನೆ ಎಂಬುದಾಗಿಯೂ ಆಣೆಯಿಟ್ಟು ಹೇಳಿದರು,

ಷೈಲಾಕ್:— ಅದು ನನಗೆ ತುಂಬಾ ಸಂತೋಷವಾಯಿತು. ನಾನು ಅವನನ್ನು ಬೆನ್ನಟ್ಟುವೆನು. ಅವನಿಗೆ ಚಿತ್ರಹಿಂಸೆ ಕೊಡುವೆನು. ಇರಲಿ, ಈ ವಾರ್ತೆಯಿಂದ ಸಂತೋಷಗೊಂಡೆನು.

ಟ್ಯೂಬಲ್:— ಅವರಲ್ಲಿ ಒಬ್ಬನು ನನಗೆ ಒಂದು ಉಂಗುರವನ್ನು ತೋರಿಸಿದನು. ಅದನ್ನು ನಿಮ್ಮ ಮಗಳು ಅವನಿಗೆ ಕೊಟ್ಟು ಅದರ ಬದಲಿಗೆ ಒಂದು ಮಂಗನನ್ನು ಪಡೆದಳಂತೆ.

ಷೈಲಾಕ್:— ಅವಳು ಹಾಳಾಗಲಿ. ಟ್ಯೂಬಲ್, ನೀನು ನನಗೆ ಚಿತ್ರಹಿಂಸೆಯನ್ನು ಕೊಡುತ್ತಿರುವೆ. ಅದು ನನ್ನ ಒಂದು ಆಭರಣ. ನಾನು ಅವಿವಾಹಿತನಾಗಿದ್ದಾಗ ಅದನ್ನು ನನಗೆ ನನ್ನ ಲೀಯಾ ಕೊಟ್ಟಿದ್ದಳು. ನಾನು ಅದನ್ನು ಇಡೀ ಕಾಡಿನಲ್ಲಿರುವ ಮಂಗಗಳಿಗೂ ಬದಲು ಮಾಡುತ್ತಿರಲಿಲ್ಲ,

ಟ್ಯೂಬಲ್:— ಆದರೆ ಆಂಟೋನಿಯೋ ನಿಜಕ್ಕೂ ಹಾಳಾದಂತೆಯೆ!

ಷೈಲಾಕ್:— ಹೌದು, ಅದು ನಿಜ! ಅದು ನಿಶ್ಚಯವಾಗಿಯೂ ನಿಜ. ಟ್ಯೂಬಲ್, ನೀನು ಹೋಗು. ನನಗೊಬ್ಬ ಕಾರ್ಯಕರ್ತನನ್ನು ಗೊತ್ತು ಮಾಡು. ಹದಿನೈದು ದಿನಕ್ಕೆ ಮುಂಚೆಯೇ ಕಂಡುಹಿಡಿದು ನಿರ್ಣಯಿಸು. ಕರಾರಿನ ಶರತ್ತುಗಳನ್ನು ಮೀರಿದರೆ

ನಾನು ಅವನ ಎದೆಗುಂಡಿಗೆಯನ್ನೇ ಕಿತ್ತುಕೊಳ್ಳುವೆನು. ಏಕೆಂದರೆ ಅವನು ಈಗ ವೆನ್ನಿಸನ್ನು ಬಿಟ್ಟು ಬೇರೆಡೆ ಇದ್ದರೆ ನಾನು ನನಗೊಪ್ಪುವಂತೆ ವ್ಯಾಪಾರ ಮಾಡಬಹುದು. ಹೋಗು ಟ್ಯೂಬಲ್, ಹೋಗು, ನಮ್ಮ ದೇವಾಲಯದಲ್ಲಿ ಬಂದು ಭೇಟಿಯಾಗು, ಹೋಗು ಒಳ್ಳೆ ಟ್ಯೂಬಲ್, ನಮ್ಮ ದೇವಾಲಯದಲ್ಲಿ, ಟ್ಯೂಬಲ್!

(ಹೋಗುವರು)

ದೃಶ್ಯ ೨ – ಪೋರ್ಷ್ಯಳ ಮನೆಯಲ್ಲಿ, ಬೆಲ್ಮಾಂಟ್.

(ಪ್ರವೇಶ – ಬಸ್ಸಾನಿಯೋ, ಪೋರ್ಷ್ಯ, ಗ್ರಾಷ್ಯಾನೋ, ನೆರಿಸ್ಸಾ, ಮತ್ತು ಅವರೆಲ್ಲರ ಪರಿವಾರ.)

ಪೋರ್ಷ್ಯ:— ನಾನು ಬೇಡುವೆನು, ಬೇಗನೆ ಹೋಗು, ನೀನು ಈ ಅನಿಶ್ಚಿತ ಕಾರ್ಯಕ್ಕಿಳಿಯುವ ಮುಂಚೆ ಒಂದೆರಡು ದಿನ ತಡೆ. ತಪ್ಪನ್ನು ಆರಿಸಿದರೆ ನಿನ್ನನ್ನು ನಾನು ಕಳೆದುಕೊಳ್ಳುವೆ, ನೀನು ಸ್ವಲ್ಪ ತಡೆ. ನನಗೇನು ಹೊಳೆಯುತ್ತಿದೆಯೆಂದರೆ (ಪ್ರೀತಿಯನ್ನು ಕುರಿತಾಗಿ ಅಲ್ಲ.) ನಿನ್ನನ್ನು ನಾನು ಕಳೆದುಕೊಳ್ಳಲಾರೆನೆಂದು! ಇದರಲ್ಲಿ ದ್ವೇಷವು ಸಲಹೆಯನೀಯದು ಎಂದು ನಿನಗೆ ಗೊತ್ತಿದೆ. ನೀನು ಹೀಗಾಗಿ ನನ್ನನ್ನು ತಿಳಿಯದಿರಬಹುದೆಂದೆನಿಸಿದರೂ ಸಂಕೋಚ ಭಾವವು ಕನ್ಯೆಯರಿಗೆ ಆಲೋಚನಾ ಶಕ್ತಿಯಲ್ಲದೆ ತನಗೆ ತೋರಿದನ್ನು ಹೇಳಲಿಕ್ಕೆ ನಾಲಗೆಯೇ ಇಲ್ಲದಂತಾಗಿಸಿದರೂ ನೀನು ನನ್ನನ್ನು ಕಾಯುದರ್ಥ: ಬಯಸುವ ಮುನ್ನ ನಾನು ನಿನ್ನನ್ನು ಒಂದೆರಡು ತಿಂಗಳುಗಳವರೆಗು ಇಲ್ಲಿ ಇರಿಸಿಕೊಳ್ಳುವೆನು. ಸರಿಯಾದುದನ್ನು ಆರಿಸುವುದೆಂತೆಂದು ನಾನು ಹೇಳಿಕೊಡಲೂ ಬಹುದು, ಆದರೆ ಅದಿನ್ನು ಆಣೆಯನ್ನು ಮೀರಿದ ಮೇಲಾಗುವುದು; ಅಂತಾಗಲಾರೆನು. ನೀನು ಬಹುಶಃ ನನ್ನನ್ನು ಪಡೆಯದಿರಬಹುದು, ಅಂತಾದರೆ ನನ್ನಾಣೆಯನ್ನು ಮೀರಿ ನೀನು ನನ್ನನ್ನು ಕೆಟ್ಟುದನೆ ಬಯಸುವಂತಾಗಿಸುವೆ. ಹಾಗೆ ಆಗಬಾರದು; ನಿನ್ನ ಕಣ್ಣುಗಳನೆ ಅಂತಾದರೆ ಶಪಿಸು! ಅವರು ನನ್ನನ್ನು ಮರುಳುಗೊಳಿಸಿ ಎರಡು ಪಾಲು

ಮಾಡಿರುವರು. ನನ್ನೊಂದು ಅರ್ಧವು ನಿನ್ನದು. ಆ
ದರಂತೆಯೇ ನನ್ನ ಮತ್ತೊಂದು ಅರ್ಧವು ನನ್ನ
ದೆ ಆಗಿದೆ. ಆದರೆ ನನ್ನದಾದದ್ದು ನಿನ್ನದೂ
ಹೌದು. ಆ ರೀತಿಯಂತೆ ಎಲ್ಲ ನಿನ್ನದೆ. ಈಗಿ
ನ ದುಷ್ಟತ್ವದ ಕಾಲವು ಮಾಲೀಕರಿಗೂ ಅವ
ರ ಹಕ್ಕಿಗೂ ಅಂತರವನ್ನು ಕಲ್ಪಿಸಿರುವುದು. ಹಾ
ಗೆ ನಿನ್ನದೆನಿಸಿದರೂ ನಿನ್ನದಲ್ಲವೆಂದು ರು
ಜುವಾತುಪಡಿಸುವರು. ಅದರಂತೆ ವಿಧಿಯು ನರಕ
ಕ್ಕೆ, ದೂಷಣೆಗೊಳಗಾಗಲಿ. ನಾನಲ್ಲ; ನಾನು
ದೀರ್ಘ ಹೊತ್ತು ಮಾತಾಡುತ್ತಿದ್ದೇನೆ; ಆದರೇಕೆಂ
ದರೆ ಸಮಯವನ್ನು ಕಳೆಯಲಿಕ್ಕೆ ಕಾಲವನ್ನು ಮುಂದೂ
ತಳ್ಳಲಿಕ್ಕೆ ಮತ್ತು ಈಗಲೆ ನೀನು ಆರಿಸಲು
ತೊಡಗದಂತೆ!

ಬಸ್ಸಾನ್ಯೋ:— ಗೊಂದಲಕ್ಕೊಳಗಾಗಿ ಬದುಕುತ್ತಿರುವೆನಾದರಿಂ
ದ ನಾನು ಇದೀಗ ಆರಿಸುವೆನು.

ಪೋರ್ಷಿಯಾ:— "ಗೊಂದಲಕ್ಕೊಳಗಾಗಿಹ ಬಸ್ಸಾನ್ಯೋ"? ಹಾಗಿರಲು
ನಿನ್ನ ಪ್ರೀತಿಯಲ್ಲಿ ಬೆರಕೆಯಾಗಿಹ ದ್ರೋಹವು ಏನು
ಎಂಬುದನ್ನು ನೇರವಾಗಿ ಹೇಳು.

ಬಸ್ಸಾನ್ಯೋ:— ಬೇರೇನೂ ಇಲ್ಲ. ಆ ಅವಿಶ್ವಾಸವೆಂಬ ಅ
ಸಹ್ಯವಾದ ದ್ರೋಹ ಭಾವ ನನ್ನ ಒಲವು ಫ
ಲಗಳನ್ನು ಸಂತೋಷದಿಂದ ಅನುಭವಿಸುವೆನೋ
ಎಂಬ ಸಂದೇಹಕ್ಕೀಡಾಗಿಸಿದೆ. ಹಿಮ ಮತ್ತು
ಬೆಂಕಿ ಹೇಗೋ ಅದೇ ರೀತಿ ನನ್ನ ಪ್ರೀತಿ
ಮತ್ತು ದ್ರೋಹದ ಎಡೆಯೆ ಬದುಕು ಮತ್ತು ಸ್ನೇಹ
ಸಿಡಿಗೂಡಲೀ ಬೇಕು.

ಪೋರ್ಷಿಯಾ:— ಅಹಾ, ನೀನು ತುಂಬಾ ನೊಂದವನ ರೀತಿಯಲ್ಲಿ
ಮಾತಾಡುತ್ತಿರುವಿಯೆಂದು ನಾನು ಕಳವಳಪಡುತ್ತೇ
ವೆ. ಗಂಡಸರು ಆ ಸಂದರ್ಭದಲ್ಲಿ ಏನೋ
ಬಲಾತ್ಕಾರದಿಂದಲೋ ಎಂಬಂತೆ ಹರಟುವರು.

ಬಸ್ಸಾನ್ಯೋ:— ನಿನ್ನ ಜೀವದಾನಕ್ಕಾಗಿ ನನಗೆ ಮಾತುಕೊಡು. ನಾ
ನು ನಿಜವಿಚಾರ ಹೇಳುತ್ತೇನೆ.

ಪೋರ್ಷಿಯಾ:— ಅಂತೆಯೇ ಆಗಲಿ. ನನಗೆ ನೀನು ಎಲ್ಲವನ್ನು
ಹೇಳು ಮತ್ತು ಬಾಳು.

ಬಸ್ಸಾನ್ಯೋ:— "ಎಲ್ಲವನು ಹೇಳು ಮತ್ತು ಬಾಳು." ಅದೇ ನನ್ನ
ಹೇಳಿಕೆಯ ಹುರುಳು. ಹಾ, ಸಂತೋಷದ ಯಾತನೆ

ಯೇ?, ನನ್ನ ಹಂಸಕನು ಯಾವಾಗ ನನ್ನ ಬಿಡು
ಗಡೆಗೆ ತಕ್ಕಂಥ ಉತ್ತರವನ್ನು ನನಗೆ ಬೋ
ಧಿಸುವನು? ಇದೀಗ ಈ ದಿಕ್ಕುಗಳೆಲ್ಲ ನನ್ನವೆ
ದಿಯು ಹೋಗದೆಯೋ ನೋಡುವೆನು,

ಪ್ರೇಷಾನ್ಯ:— ಹಾಗಾದರೆ ದೂರ ಸರಿಯಿರಿ.
ಆಪತ್ತುಗಳೆಲ್ಲೊಂದರಲಿ ನಾನು ಧೀರೆಯಾಗಿರುವೆ,
ನೀನು ನನ್ನನ್ನು ಪ್ರೀತಿಸುವೆಯಾದರೆ ಅಲ್ಲಿ
ನನ್ನನ್ನು ನೀನು ಕಾಣುವೆ. ನೆರಿಸ್ಸ ಮತ್ತು
ತೆರರೆಲ್ಲ ಒಂದೆಡೆ ಸರಿಯಿರಿ. ಅವನು ಆರಿಸು
ವಾಗ ಸಂಗೀತವು ಧ್ವನಿಸಲಿ. ಅವನು ಜಯಿಸ
ದೆ ಹೋದರೆ ಸಾಯುವಾಗ ಉಲಿಯುವ ಹಂಸದಂ
ತೆ ಆ ಹಾಡಿನೊಡನೆಯೇ ಅವನು ಅದೃಶ್ಯವಾ
ಗಲಿ. ನನ್ನ ಈ ಹೋಲಿಕೆ ತಕ್ಕುದೆನಿಸಿದರೂ
ನನ್ನ ಕಣ್ಣೀರ ಧಾರೆಯು ಅವನಿಗೆ ಜಲಮಯ
ಮರಣಶಯ್ಯೆಯೆನಿಸುವುದು. ಅವನು ಜಯಿಸಬಹುದು.
ಆಗ ಸಂಗೀತವೇಕೆ? ನಿಷ್ಠೆಯ ಪ್ರಜೆಗಳು
ಪಟ್ಟಾಭಿಷಿಕ್ತನಾದ ಹೊಸ ರಾಜನಿಗೆ ಬ
ಗ್ಗಿ ವಂದಿಸುವಂತೆ ಸಂಗೀತವಾಗ ಬರೆ ದನಿ
ಗೀತ ಮಾತ್ರ! ಸುಮಧುರ ಗಾನವಾದರೂ ಕನಸಿನಲಿ
ವಿಹರಿಸುವ ಮದುಮಗನ ಕಿವಿಯನು ಮುಂಜಾವ
ದ ವೇಳೆಗೆ ಹೊಕ್ಕು ಅವನನ್ನು ಮದುವೆ ಮಂಟಪ
ಕಾಹ್ವಾನಿಸುವುದು, ಆ ಟ್ರಾಯ್ ರಾಜನು ದು
ರಾತ್ಮ ಸಮುದ್ರನಿಗಿತ್ತ ಹಣದ ಸಂಬಂಧವಾ
ಗಿ ಟ್ರಾಯ್ ಕನ್ನಿಕೆಯನು ಬಿಡುಗಡೆ ಮಾಡಿದ ಯು
ವಕ ಅಲ್ಸಿಡಿಸನು ತೋರಿಸಿದ ಕರುಣಾಮಯ
ಪ್ರೀತಿಗೂ ಮೀರಿ ಈಗ (ಬಸ್ಸಾನಿಯೊ) ಯಾರಿ
ಗೂ ಕಾಣಿಸದಂತೆ ಬಹು ಪ್ರೀತಿ ಹುಮ್ಮಸ್ಸಿನ
ಲಿ (ಆರಿಸಲು) ನಡೆದನು. ಸರಿ, ತ್ಯಾಗವೇ ನನ್ನ
ಧ್ಯೇಯ; ಉಳಿದುದು ಕಂಬನಿಯುತ ಮೊಗಗಳ ಗುಂಪಿಗ
ಳುಂಟಿರುವ, ಮತ್ತು ಸಾಹಸಕೆ ನಡೆಸುವ ಹ
ಬ್ಬವನು ನೋಡಲು ಬರುವ ಆ ಟ್ರಾಯ್ ಹೆಣ್ಣುಗಳು.
ಹರ್ಕ್ಯುಲಸ್ ಹೋಗು, ಚೆನ್ನಾಗಿ ಬಾಳು. ನಾನೂ
ಬಾಳುವೆನು. ನೀನು ತೋರಿರುವ ಸಾಹಸವ ಮಾ
ರಿದ ತಳಮಳದೊಡೆಯೇ ನಾನು ಈ ಸ್ಪರ್ಧೆಯ
ವೀಕ್ಷಿಸುವೆನು!

(ಬಸಣ್ಣನವರು ಆ ಚಿನ್ನ, ಬೆಳ್ಳಿ
ಮುತ್ತು ಹೀರದ ಡಬ್ಬಿಗಳನ್ನು ಕುರಿತು ತನ್ನಷ್ಟಕ್ಕೆ
ಹೇಳಿಕೊಳ್ಳುವಾಗ ಹಿಂದೆ ಹಾಡು ಕೇಳಿಸುತ್ತದೆ.)

— x —

ಹೇಳಿನಗೆ ಕಲ್ಪನೆಯ ಸೃಷ್ಟಿಸಹಿ ಎಲ್ಲಿ?
ಸೃಷ್ಟಿಮೂಲದಾಳದಲ್ಲೊ ಮಿಡುಕುವ ತೆರೆಯಲ್ಲೊ?
ಭಾವವನು ಮೊಳೆಸುತಿಹ ಬೆಳೆಸುತಿಹವೆಂತಹೆ?
ಉತ್ತರಿಸು, ಬಿತ್ತರಿಸು ಎಲ್ಲಾ!
ಕಡೆಗಣ್ಣ ಕುಡಿನೋಟದಾ ಜಿಲದೆ ಚಿಮ್ಮಿ
ನೋಟದಲಿ ಬೆಳೆಯು ಬರಿ ಕಲ್ಪನೆಯ ಬಗೆಯು,
ತೊಟ್ಟಿಲಲಿ ಜೋಗುವುದು ಭ್ರಮೆಯಂತೆ ಮನವ
ಬೆರಗುವುದು, ಬೆರಗಲದು ಕೇಳಾ!
ಹಾರಿಸುವ ರೂಪಕುಂಟಾ ನಾದವನೆ ಭಾವಕೆಗೆ
ಶಿವತತ್ವ ಮನೆ ಬೆಡಿಯುವ ಮನು ದುಡಿಯೂಡಿನೆ ಮನದಾ
ವಿಗಾಯಿಯನೆ ಈಸ್ ಬಗೆಮೆ ಧರ್ಮಾರ್ಥಕಾಮನೆ ನಿತ್ಯ—
ಕಿತ್ತೆಸೆವೆ ಕಲ್ಪನೆಯ ಮಿಥ್ಯ!

(ಡಬ್ಬಿಗಳನ್ನು ಎಲ್ಲರು ಬತ್ತಿಗೆ ಹಾಕುವರು.)

ಬಸಣ್ಣ!— ಹೊರಗಣ್ಣಿ ತೋರುತಿಹ ಮಿಂಚುವರೆ
ಕಳೆಗಿರಲಿ! ಹೊರ್ ಹೊಳಪಿನಾ ಬೆಳಕಿಗೇ ಜಗವು
ಕಂಗೆಡುತ್ತ ವಂಚನೆಗೆ ಈಡಾಗಿಹುದು. ವಾದ
ವನ್ನು ಮೋಸ ದ್ರೋಹದಲಿ ತೊಯ್ದಡಿಯು ರವ ನ್ಯಾ
ಯವೆಂದೇ ಕಾನೂನು ಮಲ್ಲನೆಯು ಇಂಬನೊಡ
ಹೇಳಲದು ಅಂತರಂಗದ ಕೊಳಕುಗಳು ಮುಚ್ಚು
ವುದು, ನಿಸ್ಸರಿಸಲಹನವಹ ಭ್ರಷ್ಟತೆಯನ್ನೆ ಗಂ
ಭೀರವಾಗಿ ಕಣ್ಣುಗಳನರಳಿಸುತ್ತ ಹೇಳಿ ಅವು
ಮೇದಿ ಮಾತ್ಯಾವನುತ್ತೊಪ್ಪಸಿ ಮತ್ತವು ಧುಮುಗುರಲಿ
ಇಹ ಹುಳುಕು ಕೊಳಕನ್ನೊಯ್ಯೊಂದಾಂ ಮರೆಮಾಡು
ವರು. ಹೊರಗೆ ಬಂದಿಷ್ಟು ಸೌಜನ್ಯವನು ಮೆರೆಸಿ
ತೋರಿಸುವ ಸರಳತೆಯ ನೀಚ ಕಾಯಕರ ಮೊಗಲ
ನಿಸುರು ದಾಸ್ತವರೂ ಇಲ್ಲ, ದುಷ್ಟತನವನು ಮರ
ಳು ಸೋಣಾನದಂತೆಯು ಬಿಟ್ಟುಬಿಟ್ಟ ಹೃದಯದ
ಎಷ್ಟು ಜನ ಹೇಡಿಗಳು ಹಕ್ಕುಸ್ಥಲಕ್ಕೆ ಮತ್ತು ಹು
ಟ್ಟಿ ಗಂಟಿಕ್ಕದ ಮಂಗಳ ಗೃಹದ ರೀತಿಯಲಿ
ತಮ್ಮ ಗದ್ದುಗೆಗಳಲ್ಲಿ ನೀಳ್ಗಾಲನು ಇಳಿಸಿ
ತಿರುಕುವರು. ಇವರ ಅಂತರಾಳವನು ಶೋಧಿಸಿ

ದರೆ ಬೆಳಗಿ (ಹೇಡಿತನವನ್ನು ಹೊಡೆದೋಡಿಸುವ) ಶಾಲಿನಷ್ಟೇ ಚಳಿ ಹತ್ತಿಕೊಳ್ಳುತ್ತಿರುವುದು. ವೀರತನದ ಮಾಲವನ್ನು ಹೊತ್ತ ಈ ಜನ ತಾವು ವೀರರೆಂದೂ ಹೇಳಿಕೊಳ್ಳುವರು, ಇನ್ನು ಸೌಂದರ್ಯದತ್ತ ನೋಡಿರಿ.. ಬದುಕಿಗೆ ಬೇಕಾದ ಹತ್ತಿ ವಗ್ಗರೆಯನ್ನು ಹುಡುಕಲು ತೊರೆವಾಗ ಬಣ್ಣದಿಂದ ತಮ್ಮ ಜೀವನವನ್ನು ರೂಪಿಸಿಲ್ಲದೆ ಪ್ರಕೃತಿಯು ಒಡವೆ ಚೆಲುವು ವೆಂಬುದನ್ನು ನೋಡುವಿರಿ. ಅದೋ ಹೊಂಬಣ್ಣದ ಗುಂಗುರು ನೀಳ್ಗೂದಲ ಸುರುಳಿಯು ಕೃತ್ರಿಮ ಕಲೆಯಾಯಿತೋಡಿ ಗಾಳಿಯಲಿ ತೇಲಲದು ಗೋರಿಯು ಆ ಸಿಲುಕಿದಿರದಿನಿಯು ತಲೆಯು ಒಡೆಯೆನು ತಾಗಿಂದಾಗಲೇ ವಿದಿತವಾಗಿಹುದು. ಸ್ನೇಹಿತನ ತೊಡಿಗೆಯು ಅಹಾಯಿದ ಶರದಿಯು ಕೃತ್ರಿಮ ಹಡೆದ ರೀತಿ! ಸ್ವಾರತದ ಚೆಲುವೆಯರಾ ಕೆಸ್ನ್ ಮಾಸಿತಿನಂತೆ! ಕೈಹುಗಿ ಮಿಸ್ಸೀಯರನಿ ಸತ್ಯವಾಗಿರುವ ಕಾಲವು ಹಿಮ ವಿವೇಕಿಗಳನ್ನು ಮಾಯವಾಗಲೆಯೊಳಗದ್ದವುದು, ಅದುದರಿಂದ ಮನುಗುತಿಹ ಚಿನ್ನವೆ, ಮಿಹಿಸನಿಗೆ ನೀನು ಗಟ್ಟಿ ಆಹಾರ. ನೀನಿನ
ಗೆ ಹಿಂದಿಷ್ಟು ಬೇಡ. ಹಾಗೆಯೇ ಜನದಿಂದ ಜನಕೆ ಎಂಬಂತೆ ಜೀವಿಸುತಿಹ ನಿಸ್ತೇಜರುಜತಮ್ಮೇ, ನೀನು ಸಹ ಬೇಡ. ಆದರೆ ಜನಕೆ ವಿಶ್ವಾಸವನ್ನು ಹುಟ್ಟಿಸುವುದಕ್ಕಿಂತ ಗಡರಿಸುವ ತೆರನಿಯಾಹ ಬಡ ಸೀಸವೆ! ಈ ಮಾಗ್ಣುರಿಯನು ಮಾಡಿ ನಿನ್ನ ಸರಳತೆ ನನ್ನನ್ನು ಮರುಗ್ಗು ಗೊಳಿಸಿದರಿಂದ ನಿನ್ನನ್ನೆ ಆರಿಸುವೆ. ಸಂತೋಷವೇ
ಅದರ ಪರಿಣಾಮವಾಗಲಿ!

ಪ್ರಿಯ ಪ್ಯಾರ್! — (ಸ್ವಗತ) ಸಂದೇಹದ ಛಾಯೆ,
ದುಡುಕಿ ಆಲಿಂಗಿಸಿದ ಮುಖಭಂಗ, ಕಂಪಿಸದ ಭಯ ಮತ್ತು ಹುಸಿಮತ್ಸರಾದಿ ಅನುರಾಗಗಳನೆಲ್ಲ ಅವನಂತು ಗಾಳಿಯಲಿ ತೇಲಿಸಿದನು. ಆಹಾ ಪ್ರೀಯನೆ, ಸಮಚಿತ್ತನಾಗಿರು, ಆನಂದದುನ್ಮಾದವನ್ನು ಶಮನಗೊಳಿಸು, ಅತಿ ಹುಮ್ಮಸನ್ನು ಸಾಕಷ್ಟು ಕಡಿಮೆ ಮಾಡು, ನಿನ್ನ ಪ್ರೇಮಾನುಗ್ರಹವು ನನ್ನನ್ನು ಸ್ಪರ್ಶಿಸಿದೆ. ಮಿತಿಯನ್ನು ಉದು ಮೀರುವುದು ಎಂಬ ಭಯವು ನನಗಿದೆ. ಅದನ್ನು
ಕಡಿಮೆ ಮಾಡು!

ಬಸಪ್ಪನಿನ್ನ:— (ನೇತಾಡುವ ಹಾಳ್ತಿಗೆಯತನಕ್ಕೆ ತೆರೆದಿದೆ)—
ನಾನಿಲ್ಲಿ ಕಾಣುತ್ತಿರುವುದೇನು? ಚೆಲುವೆ ಸ್ತ್ರೀ
ಸ್ವರ್ಗೀಯ ಪ್ರತಿರೂಪ. ಆದಾವ ದೇವತೆಯು ಜೀ
ವಂತ ಕಾಣುವಂತೆ ದನು ನಿರ್ಮಿಸಿದನೋ! ವಾ,
ಈ ಕಣ್ಣುಗಳು ಚಲಿಸುವುವೆ? ಅವುಗಳು ನನ್ನ
ಕಣ್ಣಾಲಿಗಳಲ್ಲಿರುವ ಅಲುಗುವುದೆ? ನಡು ಲಿನ
ರೂಢಿಯ ತೆರೆದ ತುಟಿಗಳು ಇವು. ಇಷ್ಟು ಮಧುರತೆಯ
ತನಿಸು ಎರಡು ತುಟಿಗಳೊಂದು ಮಿತ್ರರನು ಬೇ
ರ್ಪಡಿಸಬೇಕಾದ್ದೆ! ಇಲ್ಲಿ ಅವಳ ಕೂದಲಿಂಗ
ಳಲ್ಲಿ ಚಿತ್ರಕನು ಜೇಡರ ಹುಳುದ ಪಾತ್ರವನು
ವಹಿಸಿರುವನು. ಜೇಡನು ಬಲೆಯನ್ನು ನೆಯ್ಯುವುದ
ಕಿಂತ ಬೇಗನೆ ಗಂಡಸರ ಹೃದಯವನು ಹಿ
ಡಿದಿಡಿಯಲೋ ಎಂಬಂತೆ ನೀಳ್ಗದಲು ಬಲೆಯನ್ನ
ಹೆಣೆದಿರುವನು. ಆದರೆ ಅವಳ ಕಣ್ಣುಗಳು! ಅವು
ಗಳನು ಚಿತ್ರಿಸಲು ಅವನೆಂತು ನೋಡಬಲ್ಲನು?
ಒಂದನ್ನು ನಿರ್ಮಿಸುತಲದು ಅವನ ಎರಡು ಕ
ಣ್ಣುಗಳನೂ ಕಳಕೊಂಡ ಶಕ್ತಿಯನು ಹೊಂದಿರ
ಬೇಕೆಂದು ಅವನು ಮತ್ತೊಂದನ್ನು ಚಿತ್ರಿಸದೆ
ಬಿಟ್ಟನೆಂದು ನಾನು ನೆನೆಯುವೆ. ಹಾದರೂ ನೋ
ಡು. ನನ್ನ ಹೊಗಳಿಕೆಯು ತಿಳಿದ ಚಿತ್ರದ ಮೌಲ್ಯವ
ನು ಇಳಿಸಿ ಅದಕ್ಕೆ ಹತ್ತು ಕೊರತೆಯನು ತರಬಹುದು!
ಈ ಚಿತ್ರವು ಹೇಗೂ ಜೀವಂತವಿಹ ಮೂಲ
ವಸ್ತುವಿನ ನೆರಳಿಲ್ಲದೆಯೆ ಸತ್ತ್ವಹೀನವಾ
ಗಿದೆ. ನನ್ನ ವಿಧಿವಿಲಾಸವೆಂತಿದೆಯೆಂದು ಸಂ
ಕ್ಷೇಪದಲಿ ಹೇಳಿದ ಕಾಗದದ ಸುರುಳಿಯು ಇಲ್ಲಿದೆ!—

ತಿಳಿಯುತ್ತ ಆರಿಸದಿಲ್ಲವೋ ನೀನು,
ವಿಧಿ ಆದು ವಿಸಿನಿಸು, ಹೇಳ್ಳದೆ ನಿಜವು;
ದೈವವು ಒಲಿದಿರಲಂತುವೋ ನಿನಗೆ,
ತೃಪ್ತಿಯಿಂದಿರು ಸ್ವೀಕರಿಸುತ್ತೊಂದ ಕದೆಳಿಸಿದೆ!
ಮೊದಮಾಂತರೆ ಪೇಳ್ ಇದರಿಂದಿಂತು
ಅಷ್ಟು ಸೌಭಾಗ್ಯನಂದದೆ ಬಾಳು.
ತಿರುಗುತ್ತ ನೀ ಪ್ರೇಯಸಿ ನಿಂತೆಡೆಗೊಲಿದು,
ಪಡೆ ಸಿಹಿ ಮುತ್ತಿನಿಂದ ತವಳಿನು ಮೊದದೆ!

ಹಾದಿಕರವು ಈ ಬರಹ! ಹೋ ಇರಲಿವೆ, ಕೇಳು; ಸ್ಪರ್ಧೆ
ಯಲಿ ಇವರಿರಿಡೆ ಜಯಿಸಿದವನಂತೆ ಬಂದೆ-ಆಗ!

ನಿನ್ನಾಕೆಯನು ಮನು ಈ ಸುರುಳಿಯಾ ಸೂಚನೆಯು
ನನಗರುಹಿತು ಮುತ್ತಿಂದಪ್ಪಿಯಲು ಚುಂಬಿಸುತ ಪಡೆ
ಯಲು ಎಂದು! (ಮುತ್ತಿಡುವನು.)

ಜನದ ಪ್ರಶಂಸೆಯೊಡನೆ ಜಯಕಾರದಾರ್ಭಟವು ಮೊರೆಗೇಳಲು – ಈ ಮನ್ನಣೆ ಹೊಗಳಿಕೆಯು ಸಲ್ಲುವುದೆನ್ನ ವನೆಂಬ ಸಂದೇಹದಲ್ಲಿ ನಿಂತಿರುವನು. ಎಲೆ ತರುಣೆ, ಮುಮ್ಮಡಿ ಚೆಲುವೆ ನೀನ್ ಒಪ್ಪಿಯುಲಿ ರುಜುವಿನೊಡೆ ನಿರ್ಧರಿಸುವರೆಗೆ ಇದು ನಿಜವೆಯೆಂದೆಂಬ ಊಹೆಯಲಿ ಆನ್ ಇಹೆನು.

ಪೋರ್ಶ್ಯ!– ಪ್ರಭುವೆ, ಬಸ್ಸಾನ್ಯೊ, ಆನಾರು ಎಂತೆಂದು ನೀ ನೋಡುತಿಹೆ! ಆ ನಿನ್ನ ಪ್ರೀತಿಯಲಿ ನಿಶ್ಚಿಂತೆ ಯಾಗಿಹೆನು. ಅತಿಯಾಗಿ ಮೆಚ್ಚಲದೇನು ಇಲ್ಲ; ಆದ ರಾದರೂ ನಿನಗೆ ಮೂವತ್ತುಮಡಿಯು ಶ್ರೇಷ್ಠತ್ವಮುಡಿ ಸಹಸ್ರಮಡಿಯಂತೆ ಚೆಲುವೆ ದಶಸಹಸ್ರಾದಿ ಮಡಿ ಸಿರಿತನದಿ ಮೆರೆಯುತಿಹೆನೆಂದು ನಿನ್ನೆಣಿಕೆ ಗದೊ ತೋರ್ಪಡಿಸುತಿಹೆನು. ಸದ್ಗುಣದಿಯಲಿ ಚೆಲುವಿನ ಆ ಆರ್ಥಿಕ ಸ್ಥಿತಿಯಲಿ ಮಿತ್ರರಲಿ ಆನ್ ನಿನ್ನ ದೂರದ ಎತ್ತರಕೆ ಮೆರೆವುದೆ ನನ್ನ ಅತಿ ಆಸೆ! ಒಟ್ಟಿ ಗೆ ಬರಿ ಸಾಮಾನ್ಯಳಿಹೆ ನಾನು. ಕಲಿತುದೇನೂ ಇಲ್ಲ, ಓದು ಬರೆಹದ ವಿದ್ಯೆಯೂ ಇಲ್ಲ; ಲೋಕಾನುಭವವಿಲ್ಲ, ನನಗದೇ ತೃಪ್ತಿ. ಹರಯವೆ ಮೀರದಿರೆ ಕಲಿಯಲಿಹಳಂತು. ಮತ್ತೆಯೊಲು ಬಳಿಕ ದಡ್ಡೆಯು ಮತಿಹೀನೆಯಲ್ಲ. ನಯವಿನಯದಿನವಾ ತಂಗಳೊಡೆ ಅವಳು ನಿನಗೆ ಒಪ್ಪುವಳು. ಅದೆ ಸಂತ ಸದ ಮಾತೇ! ನಿನಗೊಪ್ಪಿ ಮೋಹವಳು ತನ್ನ ಪ್ರ ಭುವಿನ, ತನ್ನ ಧನಿ, ತನ್ನ ಅರಸನ ಆದೇಶ ವನು ನಡೆಸುವಳು. ಹಾಗೆ ನನ್ನ ಸರ್ವಸ್ವವನು ನಿನಗೊಪ್ಪಿಸಿದೆ. ಈ ವರೆಗೆ ಈ ಚೆಲು ಭವನದ ಸೇವಕರ ಯಜಮಾನಿ ನಾನು! ಆ ನನಗೆಯೆ ರಾಣಿ. ಅದೊಡನೆ ಕ್ಷಣದಿ ಈ ಸದನ, ಸೇವಕ ರು ಮತ್ತಾನ್ ನಿನ್ನವರು. ಹೋ ಪ್ರಭುವೆ, ಅವುಗಳ ನು ಈ ಉಂಗುರದೊಡನೆಯೆ ಕೊಡುತಿಹೆನು, ಇದರಿಂದ ನೀನು ಬೇರ್ಪಟ್ಟರೆ, ಕಳೆದು ಕೊಂಡರೆ ಅಥವಾ ಇತರರಿಗೆ ಕೊಟ್ಟರೆ ಅದು ಅಪಶಕುನವೆನಿಪ್ಪುದು; ಭವಿಷ್ಯವನೆ ಕೆಡಿಸುವುದು; ನಿನ್ನ ಪ್ರೀತಿಯನೆ

ಕೊನೆಗಾಣಿಸುದು; ನನಗೆ ನಿನ್ನನು ಪ್ರೀತಿಸಲು
ನಡುಕವುಂಟಾಗುತ್ತದೆ!

ಬಸ್ಸಾನಿಯೊ:— ಮಾನ್ಯಳೆ, ನನಗಿನ್ನೂ ನುಡಿಗಳೇ ಇಲ್ಲದಂತಾಗಿದೆ. ನನ್ನ ರಕ್ತ ಮಾತ್ರ ನನ್ನ ನರನಾಡಿಗಳಲ್ಲಿ ನಿನ್ನೊಡನೆ ಮಾತಾಡುತ್ತದೆ. ಒಬ್ಬ ಪ್ರಿಯ ರಾಜಕುಮಾರನು ತನ್ನ ವಾಕ್ ಶಕ್ತಿಯನ್ನು ಸಾರ್ಥಕವಾಗಿ ತೋರಿಸಿದುದರಿಂದ ಮುದಗೊಂಡ ಜನಸಂದಣಿಯಲ್ಲಿ ಸಂತೋಷಪಡುವುದರ ಬದಲಾಗಿ ಅವನು ಹೇಳಿದ ಮತ್ತು ಹೇಳದೆಯೇ ಇದ್ದ ಪ್ರತಿಯೊಂದು ವಿಷಯವೂ ಬಹು ಮುಖ್ಯದಿಂದೆನಿಸಿ ಬರೀ ಬೊಬ್ಬೆಯನ್ನು ಹಾಕುವ ಸ್ಥಿತಿ ನನ್ನ ಯೋಚನಾ ಶಕ್ತಿಯನ್ನೇ ಕದಡಿಸಿದೆ. ಆದರೆ ಇದೀ ಉಂಗುರವು ಈ ಬೆರಳಿಂದಗಲಿತೆಂದರೆ ಆಗ ಅವನ ಪ್ರಾಣವೂ ಅಗಲುವುದು. ಓಹೋ, ಆ ವೇಳೆಯಲ್ಲಿ ಬಸ್ಸಾನಿಯೊ ಮೃತನಾದನೆಂದೆನ್ನಲು ಧೈರ್ಯವನ್ನು ತಾಳು!

ನೆರಿಸ್ಸಾ:— ನನ್ನ ಪ್ರಭುವೆ, ನನ್ನಮ್ಮಾ, ನಮ್ಮೊಡನೆಯೇ ಇದ್ದು ನಿಮ್ಮ ಅಭಿಲಾಷೆಯು ಫಲಕಾರಿಯಾದುದನ್ನು ನೋಡಿ "ತುಂಬ ಸಂತೋಷವಾಯಿತು" ಎಂದು ಉದ್ಗರಿಸುವ ಕಾಲವಿದು ನಮ್ಮದು, ಸುಮಂಗಳವು ನಿಮಗೆ, ಅಮ್ಮಾ, ಪ್ರಭುವೆ, ಸುಮಂಗಳವಾಗಲಿ; ನಿರಂತರ ಸಂತೋಷವಿರಲಿ!

ಗ್ರಾಶ್ಯಾನೊ:— ಮಾನ್ಯ ಬಸ್ಸಾನಿಯೊ ಮತ್ತು ಸುಮಂಗಲೆಯೇ, ನೀವು ನನ್ನಿಂದ ಶುಭಾಶಯವ ನಿರೀಕ್ಷಿಸಲಾರಿರಿ— ಎಂದೆನ್ನುವೆಯಾದರೂ ನಿಮಗೆ ನೀವು ಬಯಸುವ ಸರ್ವ ಸುಖ ಸಂತೋಷಗಳಿರಲೆಂದು ಆಶಿಸುವೆನು. ನಿಮ್ಮ ವೈವಾಹಿಕ ಶುಭಗಳಿಗೆಯು ಒಪ್ಪಿಡುಗಾಗುವ ಶ್ರೀಮತ್ವಿಧಾನಗಳ ಸುಮುಹೂರ್ತದಲಿ ನನ್ನ ವಿವಾಹವನ್ನೂ ನೀವು ನಡೆಸಿಕೊಡಿರೆಂದು ಬೇಡುವೆನು.

ಬಸ್ಸಾನಿಯೊ:— ನಿನಗೊಂದು ಸತಿಯು ದೊರಕಿತೆಂದಾದೊಡನೆ ಅದನ್ ಹೃತ್ಪೂರ್ವಕವಾಗಿ ನಡೆಸಿಕೊಡುವೆ.

ಗ್ರಾಶ್ಯಾನೊ:— ಮಾನ್ಯ ಪ್ರಭುವಿಗೆ ವಂದನೆಗಳು.— ನೀನು ನನಗೊಂದನ್ನೊದಗಿಸಿರುವೆ. ಸ್ವಾಮಿ, ನನ್ನ ಕಣ್ಣುಗಳು ನಿನ್ನವುಗಳಷ್ಟೇ ಚುರುಕಾಗಿ

ನೋಡುತ್ತವೆ, ನೀನು ಯಜಮಾನಿಯನ್ನು ನೋಡಿರಲು
ಆ ನನ್ನ ಸಖಿಯನ್ನು ನೋಡಿದೆನು, ನೀನು ಪ್ರೀ
ತಿಸಿದ ರೀತಿಯಲ್ಲಿ ನಾನು ಪ್ರೀತಿಸಿದೆನು, ಮಹಾ
ಸ್ವಾಮಿ, ನನಗೆ ಹಾಯಾಗಿ ಕುಳಿತಿರುವುದನ್ನು ಕಲ್ಪಿಸಲು
ನೀನಲ್ಲದೆ ಬೇರಾರೂ ಇಲ್ಲ. ನಿನ್ನ ಹಣೆ
ಬರಹ ಆ ಡಬ್ಬದೊಳಗಿದ್ದಾಗ ನನ್ನದೂ
ನಿನ್ನಂದದ ತೆರನೆ ಸಂಭವಿಸಿತು. ಪುನಃ ದಣಿಯುವವ
ರೆಗೆ ಓಲೈಸುತ್ತಿದ್ದೆ, ಬಾಯಾರುವವರೆಗೆ
ಪ್ರೇಮವನ್ನು ಆಣೆಯಿಡುತ್ತ. ಕಡೆಗಂತೂ ಸಲ್ಲಿಸಿ
ದ ನುಡಿ ನಿಮಗೆ ಸಿದ್ಧಿಸಿದರೆ, ರಮಣೀಯಾದವಳಿತ್ತ ಪ್ರೇ
ಮದ ಪ್ರೇಮದ ನಿಮಾತುಗಳು ನನಗೆ! ಹೇಳುವೆ ನಿನ
ಗನ್ನೆಯನ್ನು ನೀನ್ ಸಾಧ್ಯವಿದ್ದರೆ ಪಡೆದಾಗ ಇದ
ಕ್ಕಿನ್ನು ಕೊಡುವವಳು ನಿಜವು!

ಪೋರ್ಷ್ಯ:— ಇದು ನಿಜವೆ, ನೆರಿಸ್ಸ?

ನೆರಿಸ್ಸ:— ಅಮ್ಮಾ, ಅದೇ ರೀತಿಯಲ್ಲಿ ನೀನೂ ಪ್ರೀತಿಸಿದ
ಪಕ್ಷವಾದರೆ ಮಾತ್ರ!

ಬಸ್ಸಾನಿಯೋ:— ಮತ್ತು ನೀನು, ಗ್ರ್ಯಾಶಿಯಾನೋ, ಪರಸ್ಪರ ಪ್ರೀತಿ
ವಿಶ್ವಾಸದಲ್ಲಿರಲು ಒಪ್ಪಿರುವಿಯಾ?

ಗ್ರ್ಯಾಶಿಯಾನೋ:— ಹೌದು. ಒಪ್ಪಿರುವೆನು, ನನ್ನ ಪ್ರಭುವೆ!

ಬಸ್ಸಾನಿಯೋ:— ನಿನ್ನ ಮದುವೆಯ ಮೇಳೈಸುವ ಹಬ್ಬವನು ತುಂ
ಬಾ ಸಂಭ್ರಮದಿಂದ ನಡೆಸುವೆವು,

ಗ್ರ್ಯಾಶಿಯಾನೋ:— ಒಂದು ಸಾವಿರ ವರಹಗಳಿಗೆ ನಾವು ಇವರೊಡನೆ
ಯಾರಿಗೆ ಮೊದಲ ಗಂಡುಮಗು ಹುಟ್ಟುವುದೆಂದು
ಪಂತ ಕಟ್ಟುವ.

ನೆರಿಸ್ಸ:— ಏನು? ಪಂತ ಕಟ್ಟುವಿರೆ?

ಗ್ರ್ಯಾಶಿಯಾನೋ:— ಇಲ್ಲ. ಈ ಆಟದಲ್ಲಿ ನಾವು ಎಂದೂ ಗೆಲ್ಲು
ವಂತಿಲ್ಲ; ಮತ್ತೆ ಪಂತ ಕಟ್ಟುವ. ಇವರಾರು
ಇಲ್ಲಿ ಬರುತ್ತಿರುವುದು? ಲೊರೆನ್ಜೊ ಮತ್ತವನ ನಾ
ಸ್ತಿಕನೋ ಏನು? ಓಹೋ ವೆನ್ನಿಸ್‌ನ ನನ್ನ ಹಳೆಯ ಮಿ
ತ್ರ ಸಲೇರಿಯೋ?

(ಪ್ರವೇಶ — ಲೊರೆನ್ಜೊ, ಜೆಸ್ಸಿಕಾ ಮತ್ತು ಸಲೇರಿಯೋ
ವೆನ್ನಿಸ್‌ನ ಒಬ್ಬ ದೂತನೊಡಗೂಡಿ.)

x

ಬಸ್ಸಾನಿಯೋ:— ಲೊರೆನ್ಜೊ ಮತ್ತು ಸಲೇರಿಯೋ,
ಸ್ವಾಗತವು ನಿಮಗೆ! ನಾನು ಹೊಸದಾಗಿ ಪಡೆದ

ಸ್ಥಾನಬಲ ನನಗೆ ನಿಮ್ಮನ್ನು ಸ್ವಾಗತಿಸಲನು
ಮತಿಯನಿತ್ತರೆ, ನಿಮ್ಮ ಆಜ್ಞೆಯಂತೆ ನನ್ನ
ಆಪ್ತಗೆಳೆಯರನು ಮತ್ತು ದೇಶೀಯರನು, ಪ್ರಿ
ಯ ಪೋರ್ಷಿಯಾ, ಸ್ವಾಗತಿಸುವೆನು.

ಪೋರ್ಷ್ಯ:– ನನ್ನ ಪ್ರಭುವೆ, ನಾನೂ ಅಂತೆನ್ನುವೆನು. ಅವರಿ
ಗೆ ಹಾರ್ದಿಕ ಸ್ವಾಗತವು!

ಲೊರೆನ್ಸೊ:– ಮಾನ್ಯನೆ, ನಿನಗೆ ನನ್ನ ವಂದನೆಯು.
ನಿನ್ನನ್ನು ಇಲ್ಲಿ ಕಾಣಬೇಕಾದದ್ದೇನೂ ನನ್ನ ಉ
ದ್ದೇಶವಿಲ್ಲ. ಸಲೆರಿಯೊನನು ದಾರಿಯಲಿ ಕಂಡು ಹ
ಳೆ ವಿಚಾರಗಳನು ನಾವು ಮಾತಾಡುತ್ತಿದ್ದಾ
ಗ ಅವನೊಡನೆ ಈ ಕಡೆ ನಾನು ಬರಬೇಕೆಂಬು
ದಾಗಿ ಕೇಳಿಕೊಂಡನು,

ಸಲೆರಿಯೊ:– ಅದರಂತೆ ಬಂದೆ, ನನ್ನ ಪ್ರಭುವೆ.
ಅದಕ್ಕೊಂದು ಕಾರಣವಿದೆ. ಮಾನ್ಯ ಆಂಟೊನಿಯೊ
ನು ಅವನನ್ನು ನಿನ್ನ ಬಳಿಗೆ ಕಳುಹಿಸಿದನು,
(ಬಸ್ಸಾನ್ಯೊನಿಗೆ ಒಂದು ಪತ್ರವನ್ನು ಕೊಡುವನು.)

ಬಸ್ಸಾನ್ಯೊ:– ಈ ಪತ್ರವನು ನಾನು ತೆರೆಯುವ ಮೊದಲು ನನ್ನ
ಮಾನ್ಯ ಮಿತ್ರನು ಹೇಗಿರುವನೆಂಬುದನ್ನು ದಯ
ಮಾಡಿ ಹೇಳು.

ಸಲೆರಿಯೊ:– ಮನೋಸ್ಥಿತಿ ಹೇಗಿದೆಯೊ ಏನೊ, ನನ್ನ ಪ್ರಭುವೆ,
ಅವನ ಆರೋಗ್ಯ ಚೆನ್ನಾಗಿದೆ. ಅದೋ ಆ ಪ
ತ್ರವು ಅವನ ಪರಿಸ್ಥಿತಿಯೆಂತೆಂದು ಹೇಳುವುದು.
(ಬಸ್ಸಾನ್ಯೊನು ಪತ್ರವನು ತೆರೆಯುವನು.)

ಗ್ರಾಷ್ಯಾನೊ:– ನೆರಿಸ್ಸಾ, ಅಕೋ ಅಲ್ಲಿರುವ ಅಪರಿಚಿತಳನ್ನು
ಮಾತಾಡಿಸು. ಅವಳನ್ನು ಸ್ವಾಗತಿಸು. ಸಲೆ
ರಿಯೊ, ಕೈಕೊಡು. ವೆನ್ನಿಸ್‌ನಲ್ಲೇನು ವಿಶೇಷ? ಸ
ನ್ಮಾನ್ಯ ವರ್ತಕನು, ಆಂಟೊನಿಯೊ, ಹೇಗಿರುವನು? ಅ
ವನು ನಮ್ಮ ಜಯಕ್ಕೆ ಸಂತೋಷಿಸುವನೆಂದು ನನ
ಗೆ ಗೊತ್ತಿದೆ. ನಾವು ಜೇಸನರು, ಚಿನ್ನದ 'ಉಣ್ಣೆ'
ಯನು ನಾವು ಗೆದ್ದು ಪಡೆದಿದ್ದೇವೆ.

ಸಲೆರಿಯೊ:– ಅವನು ಕಳೆದುಕೊಂಡಿರುವ 'ಉಣ್ಣೆ'ಯನು ನೀವು ಪ
ಡೆದಿದ್ದರೆ ನಾವು ಜಯಿಸಿದಂತಾಗುತ್ತಿತ್ತೆಂ
ದು ನನಗನ್ನಿಸುವುದು!

ಪೋರ್ಷ್ಯ:– ಅಲ್ಲಿರುವ ಆ ಪತ್ರದಲ್ಲಿ ಬಸ್ಸಾನ್ಯೊನ
ಕೆನ್ನೆಗಳ ವರ್ಣವನೆ ಕಸಿಯುತಿಹ ಬಹುದು:

ಕಾಡಿಸುತ್ತಿರುವ ವಿಷಯಗಳಿವೆ. ಪ್ರಿಯ ಗೆಳೆಯನಾರೋ ಮೃತಿಸಿದನೋ ಏನೋ! ಅಂತಹುದಾದರೆ ಜಗತ್ತಿನಲ್ಲಿ ಯಾವೊಂದು ವಿಷಯವು ಆ ಚಂಚಲ ವ್ಯಕ್ತಿಯ ಪ್ರಕೃತಿಯನ್ನು ಕದಡಿಸದು, ಏನದು ಮತ್ತೂ ಹೆಚ್ಚು ಕಳವಳಗೊಳ್ಳುತ್ತಾ ಇದೆ. ಬಸ್ಸಾನಿಯೋ, ಇದೂ ಬೇಡವೆನ್ನು; ನಾನು ಅರ್ಧಾಂಗಿ. ಈ ಪತ್ರವೇನನ್ನು ವಾರ್ತೆಯನ್ನು ತಂದಿದೆಯೋ ಅವುಗಳಲ್ಲಿ ಅರ್ಧವನ್ನು ನಾನು ಯಾವ ಆತಂಕವಿಲ್ಲದೆ ನಿನ್ನಿಂದ ಈಗ ತಿಳಿಯಬೇಕು!

ಬಸ್ಸಾನಿಯೋ:— ನನ್ನ ಪ್ರಿಯೆ, ಪೋರ್ಷಿಯಾ,
ಓಲೆಯನ್ನು ಎಲ್ಲ ಈವರೆಗೆ ಚಿತ್ರಿಸಿದ ಬಹು ವ್ಯಸನಕರವಾದ ವಿಷಯಗಳು ಇದರಲ್ಲಿವೆ. ಮಾನ್ಯ ಗೆಳತಿಯೇ, ನನ್ನ ಅಂತರಂಗದ ಪ್ರೇಮವನ್ನು ಮೊದಲ ಬಾರಿಗೆ ನಾನು ನಿನಗೆ ತಿಳಿಸುವ ಭರದಲ್ಲಿ ನನ್ನ ಹಣಕಾಸುಗಳ ಬಗೆ ಮುಚ್ಚುಮರೆಯಿಲ್ಲದೆ ತಿಳಿಸಿದೆನು. ಆದ್ದರಿಂದ ಆ ದರ್ಶನಮಾಡಿಯೆಂದೆನಿಸಿ ಆಗ ನಿಜವಿಚಾರವನ್ನು ಹೇಳಿದೆನು, ಆದರೂ ನನ್ನ ಪ್ರೀತಿಯೆ, ಆರ್ಥಿಕ ಪರಿಸ್ಥಿತಿಯು ನನ್ನನ್ನು ಬಡವನಾಗಿ ನಿಸಿದರೂ ನಾನೆಷ್ಟು ಹೊಗಳಿಕೊಂಡೆನು ಎಂದು ನೀನು ತಿಳಿಯುವಿ, ನಿನ್ನೊಡನೆ ನಾನು ನನ್ನ ಬಡತನವನ್ನು ಆಗಲೇ ಸ್ಪಷ್ಟಪಡಿಸಬೇಕಾಗಿತ್ತು, ನನ್ನೊಬ್ಬ ಪ್ರಿಯ ಮಿತ್ರನು ತನ್ನ ಬದ್ಧವೈರಿಯೊಬ್ಬನಿಗೆ ತನ್ನನ್ನೇ ಒತ್ತೆಯಿಟ್ಟದ್ದರಿಂದ ನಾನು ಆ ನನ್ನ ಮಿತ್ರನಿಗಾ ನನ್ನ ಉದ್ಯಮದ ಪ್ರೋತ್ಸಾಹಿಯನ್ನು ಗಮನಿಸಿ ಸಹಾಯಕೆ ನಿಂತಿರುವೆನು. ಮಾನ್ಯಳೆ, ಈ ಒಂದು ಪತ್ರವಿದೆ. ಇದು ನನ್ನ ಆ ಗೆಳೆಯನ ದೇಹವೆನಿಸಿದರೆ ಆ ದಾರುಣವಾದ ಪ್ರತಿಯೊಂದು ಪದವೂ ಅವನ ನೆತ್ತರು ಎಂದೆನ್ನಬೇಕು. ಆದರೆ ಅದು ನಿಜವೋ, ಸುಳ್ಳೋ? ಅವನ ವ್ಯಾಪಾರವೆಲ್ಲವೂ ನೀರುಪಾಲಾಯಿತೇ? ಏನು? ಒಂದಿಷ್ಟಾದರೂ ಇಲ್ಲವೆ? ಟ್ರಿಪೋಲಿಯಿಂದ, ಮೆಕ್ಸಿಕೋದಿಂದ, ಮತ್ತು ಇಂಗ್ಲೆಂಡ್, ಲಿಸ್ಬನ್, ಬರ್ಬೆರಿ ಮತ್ತು ಇಂಡಿಯಾದಿಂದ? ಸರಕುಗಳಿಂದ ತುಂಬಿದಾ

ವ್ಯಾಪಾರ ಹಡಗುಗಳು ಒಂದಾದರೂ ದೊಡ್ಡ
ಕಲ್ಲುಬಂಡೆಗಳ ಮಾರಕಪ್ರಾಯ ಸ್ಪರ್ಶ
ದಿಂದ ಪಾರಾಗಲಿಲ್ಲವೇ ?

ಸಾಲೆರಿನೋ:— ಒಂದು ಸಹ ಇಲ್ಲ, ನನ್ನ ಪ್ರಭುವೇ!
ಅದಷ್ಟೇ ಅಲ್ಲ; ಅವನಲ್ಲಿ ಆ ಯಹೂದಿಯನ
ನಿಗೆ ಕೊಡಲು ಹಣವಿದ್ದರೂ ಅವನು ಅದನ್ನು ತೆ
ಗೆದುಕೊಳ್ಳುತ್ತಿದ್ದಿಲ್ಲವೆಂದು ತೋರುತ್ತದೆ. ಒಬ್ಬ
ನರನ ಪೂರ್ತಿ ನಿರ್ನಾಮವಾಗಿಸಲು ಉತ್ಸಾಹ
ಮತ್ತು ಲೋಭದಿಂದಿಹ ಮನುಷ್ಯನ ರೂಪವನ್ನು
ತೊಟ್ಟಿರುವ ಜಂತುವನ್ನು ನಾನು ಈ ವರೆಗೆ ಕಂ
ಡಿದೇ ಇಲ್ಲ. ಬೆಳಿಗ್ಗೆ ಅವನು ದೊರೆಯ ಬಳಿಗೆಂದು
ಓಡಾಡುವವನು. ಅವನಿಗೆ ನ್ಯಾಯ ದೊರಕಿಸಿಕೊ
ಡಲಿಲ್ಲವೆನ್ನುತ್ತ ರಾತ್ರಿಯೆಲ್ಲ ರಾಜ್ಯಾಡಳಿತ
ವನ್ನೇ ಜರಿಯುವನು. ದೊರೆಯನ್ನು ಸೇರಿ ವೆ
ನ್ನಿಸ್‌ನ ಪ್ರಭಾವಿತರು, ಇಪ್ಪತ್ತು ಜನ ವರ್ತ
ಕರು ಅವನನ್ನೊಪ್ಪಿಸಲು ಯತ್ನಿಸಿದರಾದರೂ
ಅವನು ತನಗೆ ಸಲ್ಲಬೇಕೆಂದು ಆ ದಂಡ,
ಹಣ, ನ್ಯಾಯ ಮತ್ತು ಅವನ ಕರಾರುಯೆಂಬೀ
ಮತ್ಸರದ ವಾದದಿಂದ ಇರಲು ಅವನನ್ನು ಯಾ
ರೊಬ್ಬನಿಗೂ ಕದಲಿಸಲಾಗಲಿಲ್ಲ !

ಜೆಸ್ಸಿಕಾ:— ನಾನು ಅವನೊಡನೆ ಇದ್ದಾಗ ಅವನ ದೇಶೀ
ಯರು, ಟ್ಯೂಬಲನಿಂದ ಚೂಸ್‌ವರೆಗಿನ ಎಲ್ಲರೊ
ಡನೆಯೂ ತನಗೆ ಆಂಟೋನಿಯೋನು ಕೊಡಲಿಕ್ಕಿರುವ
ಹಣದ ಇಪ್ಪತ್ತು ಪಾಲು ಹೆಚ್ಚು ಕೊಡುವುದಾದ
ರೂ ಬೇಡವೆಂದೂ ಅವನ ಮಾಂಸವೇ ಸಾಕು
ಎಂದು ಆಣೆಯಿಡುತ್ತ ಅವನನ್ನುವುದನ್ನು ನಾ
ನು ಕೇಳಿದ್ದೆನು. ನನ್ನ ಧಣಿಯೇ, ಕಾನೂನು, ಅಧಿ
ಕಾರ, ಪ್ರಭುತ್ವಗಳು ಅದನ್ನು ಕೊಡದಿರಲಾ
ಗುವುದಿಲ್ಲವೆಂದರೆ ಬಡ ಆಂಟೋನಿಯೋಗೆ ತುಂಬ
ಕಷ್ಟವಿದೆಯೆಂದು ನನಗೆ ಗೊತ್ತಿದೆ.

ಪೋರ್ಶಿಯಾ:— ಆ ನಿನ್ನ ಪ್ರಿಯ ಮಿತ್ರನೋ ಈಗ ತೊಂದರೆಗೊ
ಳಗಾಗಿರುವವನು ?

ಬಸ್ಸಾನಿಯೋ:— ನನ್ನ ಪರಮ ಮಿತ್ರನು
ತುಂಬಾ ದಯಾಳು; ಸಭ್ಯನು ಮತ್ತು ಆದರೋ
ಪಚಾರಗಳನ್ನೀಯುವುದರಲ್ಲಿ ಎಂದೂ ದಣಿಯದ

ದ ಉದಾತ್ತಗುಣ ಅವನದು; ಇಟಲಿಯಲಿ ಉಸಿರಾ
ಡುತ್ತಿರುವವರ ಪೈಕಿ ಅವನಲ್ಲಿರುವಷ್ಟು ಪ್ರಾಚೀ
ನ ರೋಮನ್ನ ಘನತೆ ಗಾಂಭೀರ್ಯ ವ್ಯಕ್ತವಾಗಿ ಕಾ
ಣುತ್ತದೆ!

ಪೋರ್ಷ್ಯ:— ಆ ಯಹೂದಿಯನಿಗವನು ಎಷ್ಟು ಹಣವನ್ನು ಕೊ
ಡಬೇಕು?

ಬಸ್ಸಾನ್ಯೋ:— ನನಗೆ ಮೂರು ಸಾವಿರ ವರಹ.

ಪೋರ್ಷ್ಯ!— ಏನು? ಹೆಚ್ಚೇನೂ ಇಲ್ಲ?
ಅವನಿಗಾರು ಸಾವಿರ ಕೊಟ್ಟು ಆ ಕರಾರ
ನ್ನು ಅಳಿಸಿರಿ. ಆರು ಸಾವಿರದ ಇಮ್ಮಡಿ, ಅನಂ
ತರ ಅದರ ಮುಮ್ಮಡಿ ಹಣವನು ಬಸ್ಸಾನ್ಯೋನ ಅ-
ವಿವೇಕಕ್ಕೆ ಆ ಬಣ್ಣನೆಯ ಗುಣವುಳ್ಳ ಮಿತ್ರ
ನು ತನ್ನೊಂದು ಕೂದಲನು ಕಳಕೊಳ್ಳುವ ಮುನ್ನ
ವೇ ಕೊಡಿ. ಮೊದಲು ನನ್ನೊಡನೆ ಕ್ರೈಸ್ತ ದೇಗುಲ
ಕ್ಕೆ ಹೋಗುತ್ತ ಅಲ್ಲಿ ನನ್ನನು ಕೈಹಿಡಿದ ಹೆಂಡ
ತಿಯೆಂದೊಪ್ಪು. ಅನಂತರ ವೆನಿಸ್‌ಗೆ ನಿನ್ನ ಗೆ
ಳೆಯನ ಬಳಿಗೆ ಹೋಗು. ಏಕೆಂದರೆ ಅಶಾಂತಿ
ಯಿಂದ ಕೂಡಿ ಪೋರ್ಷ್ಯಳ ಜತೆಯಲಿದ್ದು ಎಂದೂ
ನಿದ್ರಿಸ ಹೋಗದಿರು. ಆ ಅಲ್ಪಸಾಲದ ಹಣದ
ಇಪ್ಪತ್ತರಷ್ಟು ಕೊಡಲು ಚಿನ್ನವು ನಿನ್ನದಾಗು
ವುದು. ಅದನ್ನು ತೀರಿಸಿದ ಬಳಿಕ ನಿನ್ನ
ಆ ನಿಜಗೆಳೆ ಮಿತ್ರನನು ಇಲ್ಲಿಗೆ ಕರೆದುಕೊಂಡು
ಬಾ. ಅಷ್ಟರಲಿ ನನ್ನ ದಾಸಿ ನೆರಿಸ್ಸ ಮತ್ತು
ನಾನು ದಾಸಿಯರ ವಿಧವೆಯರ ರೀತಿಯಲಿ ಜೀ
ವಿಸುವೆವು. ಸರಿ, ಬಾ, ಹೋಗುವ; ನಿನ್ನ ವಿವಾಹದ
ದಿನ ನೀನು ಇಲ್ಲಿ ಇರಬೇಕು; ನಿನ್ನ ಮಿತ್ರರಿ
ಗೆ ಸ್ವಾಗತವನ್ನು ಬಯಸು; ರಸಿಕತೆಯ ನಗು
ವನು ಪ್ರದರ್ಶಿಸು. ನಿನ್ನ ಸುಖದ ಜೀವಕ್ಕೆ ಹಾ
ನಿಯಾಗಬಹುದೋ ಎಂಬ ಊಹೆಯ ಕುರುತ್ತನೋ
ಡಿಯೇ ನಿನ್ನನು ಪಡೆದುದು ಬಹು ವೆಚ್ಚದ ವಿನಿಮ
ಯವೆಂದಾದರೂ ಪ್ರಿಯನೇ, ನಾನು ನಿನ್ನನ್ನು
ಪ್ರೀತಿಸುವೆನು; ಆದರಲಿ, ನಿನ್ನ ಮಿತ್ರನು ಪತ್ರ
ದಲ್ಲಿ ಏನು ಹೇಳಿರುವನೆಂಬುದನು ತಿಳಿಯಲು
ತಿಳಿಯಲಿಚ್ಛಿಸುವೆನು.

(ಬಸ್ಸಾನ್ಯೋ ಪತ್ರವನ್ನು ಓದುವನು.)

"ನನ್ನ ಸುಮಧುರ ಪ್ರಿಯ ಬಸ್ಸಾನಿಯೋ, ನನ್ನ ಹಡಗುಗ
ಳೆಲ್ಲ ಅಪಾಯಕೀಡಾಗಿವೆ, ನನಗೆ ಹಣವನ್ನು ಸಾಲ ಕೊಟ್ಟ
ವರು ಕ್ರೂರಿಗಳಾಗುತ್ತಾ ಇದ್ದಾರೆ. ನನ್ನ ಆಸ್ತಿಯು ಬಹಳ ತುಂ
ಬಾ ಇಳಿದಿದೆ. ನನ್ನ ಕರಾರಿನ ಬಗ್ಗೆ ಯಹೂದಿಯುನು ತನ್ನ
ಸೇಡನ್ನು ತೀರಿಸದೆ ಇರನು, ನಾನು ಅವನಿಗೆ ದಂಡವನು
ತೆರಬೇಕಾದಾಗ ನಾನು ಬದುಕಿರುವುದೇ ಅಸಂಭವವಾಗಿದೆ.
ಆದುದರಿಂದ ನಾನು ಸಾಯುವ ಮೊದಲು ನಿನ್ನನ್ನು ಕಂಡರೆ
ನಮ್ಮೊಳಗಿರುವ ಲೆಕ್ಕಾಚಾರವನ್ನು ಪೂರ್ತಿ ಮುಗಿಸಬೇಕು,
ನಿನಗೆ ನನ್ನಲ್ಲಿರುವ ಪ್ರೀತಿಯು ನನ್ನನ್ನು ಕಾಣುವ ಸಂತೃ
ಪ್ತಿಗೆ ತಡೆಹಾಕುವುದಾದರೆ ಈ ನನ್ನ ಪತ್ರವು ಅಂತಾಗಿಸದು
ಎಂದು ಭಾವಿಸುವೆನು."

ಪೋರ್ಷ್ಯ: — ಹಾ ಪ್ರಿಯನೆ, ನಿನ್ನ ವ್ಯವಹಾರವದೆಲ್ಲವನು
ಬಿಟ್ಟು ಬೇಗನೆ ಹೋಗು.

ಬಸ್ಸಾನಿಯೋ: — ನನಗೆ ಹೋಗಲು ನಿನ್ನ
ಅನುಮತಿಯು ದೊರೆತು ಇರುವುದರಿಂದಿದೋ ನಾನು ಬೇ
ಗನೆ ಹೋಗುವೆ. ಆದರೆ ನಮ್ಮ ಯಾವೊಂದು ಹಾ
ಸುತ್ತಿಪ್ಪವು ಆನ್ ಪುನಃ ಬರುವ ವರೆಗೆ ಅಪರಾ
ಧಿಯೆಂದೆನಿಸದಿರಲಿ, ಅಥವಾ ನಿದ್ದೆಯುಂತೂ
ನಮ್ಮೀರ್ವರ ಎಡೆ ಹುಗದಿರಲಿ!
(ಹೋಗುವರು)

ದೃಶ್ಯ 3 — ವೆನ್ನಿಸ್‌ನಲ್ಲಿ ಶೈಲಾಕನ ಮನೆಯ ಮುಂದೆ.

(ಪ್ರವೇಶ) ಯಹೂದಿಯು ಶೈಲಾಕ್, ಸೊಲಿನಿಯೋ,
ಅಂಟೋನಿಯೋ ಮತ್ತು ಸೆರೆಮನೆ ಅಧಿಕಾರಿ.

ಶೈಲಾಕ್: — ಕಾರಾಗೃಹದ ಮೇಲ್ವಿಚಾರಕನೆ,
ಕರುಣೆಯನ್ನು ಕುರಿತಾಗಿ ನನಗೆ ಹೇಳದಿರು. ಹಣ
ವನ್ನು ಧರ್ಮಕ್ಕೆ ಕೊಟ್ಟ ಹೆಡ್ಡನು ಇವನಲ್ಲ. ಸೆ
ರೆಮನೆಯು ಯಜಮಾನನೆ, ಅವನನ್ನು ಎಚ್ಚರಿಕೆ—!

ಅಂಟೋನಿಯೋ: — ಮಾನ್ಯ ಶೈಲಾಕ್,
ನಾನನ್ನುವುದನು ಕೇಳು.

ಶೈಲಾಕ್: — ನನ್ನ ಮುಚ್ಚಳಿಕೆಯನ್ನು
ನಾನು ತೆಗೆದುಕೊಳ್ಳುವೆನು, ನನ್ನ ಕರಾರಿಗೆ ಪ್ರ
ತಿಯಾಗಿ ನುಡಿಯುತ್ತಿರು. ನೀವಿಲ್ಲದೆ ನೀನು ನ—

ನ್ನನನ್ನು ನಾಯಿಯೆಂದು ಕರೆದೆ. ನಾನು ನಾಯಿಯಾ
ದುದರಿಂದ ನನ್ನ ಮೊನೆಹಲ್ಲುಗಳು ಎಚ್ಚರ.
ಪ್ರಭುವು ನನಗೆ ನ್ಯಾಯವನ್ನು ಕೊಟ್ಟೇಕೊಡುವನು
ದರಿದ್ರ ಈ ಸೆರೆಮನೆಯ ವಿಚಾರಕ, ನೀನು ಇವ
ನ ಕೋರಿಕೆಗೆ ಮಣಿದು ಇವನೊಡನೆ ಹೊರಗಿನ
ಬರುವಷ್ಟು ಮತಿಹೀನನೆನಿಸಿದೆ,

ಆಂಟೋನಿಯೋ :- ನಾನು ಹೇಳುತ್ತಿರುವುದನ್ನು ಆಲಿಸೆಂದೆನು
ತೆ ಬೇಡುವೆನು,

ಷೈಲಾಕ್ !- ನನ್ನ ಆ ಕರಾರಿನ ಶರತ್ತನ್ನು ನಾನು ತೆ
ಗೆದುಕೊಳ್ಳುವೆನು, ನೀನು ಹೇಳುವುದನಾಲಿಸೆನು.
ನನ್ನ ಮುಚ್ಚಳಿಕೆಯನ್ನು ನಾನು ಪಡೆಯುವೆ, ಆ
ದುದರಿಂದ ಹೆಚ್ಚು ಮಾತಾಡಬೇಡ. ಆ ಕ್ರೈ
ಸ್ತ ಮಧ್ಯಸ್ಥಗಾರರು ಎಡೆಹಾದು ಮಾತಾಡಿ
ನನ್ನ ತಲೆ ಕಲುಕಿಸಿ ಕಡೆಗೆ ನಿಟ್ಟುಸಿರು ಬಿಡಿಸಿ
ನನ್ನನ್ನು ಒಪ್ಪಿಸಲು ನಾನು ಮೂಢನ ಕಣ್ಣಿನ
ಹೆಡ್ಡನಾಗಲಾರೆ, ಇದೋ ಹಿಂಬಾಲಿಸದಿರು; ನಿ
ನಗೇನೂ ಮಾತಾಡಬೇಕಿಲ್ಲ, ನನ್ನ ಆ
ಕರಾರನ್ನು ನಾನು ಪಡೆಯುವೆನು!

(ಹೋಗುವನು)

ಸೋಲನಿಯೋ :- ಜನದ ಎಡೆಯಲ್ಲಿ ಎಂದೂ ವಾ
ಸಿಸಿದ್ದ ಅತೀ ದುಷ್ಟ ಹೃದಯದ ನಾಯಿ ಇದು.

ಆಂಟೋನಿಯೋ !- ಅವನನ್ನು ಹಾಗೆಯೇ ಬಿಡು. ನನ್ನ
ಅನವಶ್ಯ ಬೇಡಿಕೆಗಳಿಂದ ಅವನನ್ನು ಹಿಂ
ಬಾಲಿಸೆನು, ಅವನು ನನ್ನ ಜೀವವನ್ನೇ ತೆಗೆಯಬೇ
ಕೆನುವನು, ಅದೇಕೆಂದು ನನಗೆ ವಿಶದವಾಗಿದೆ.
ಹಲವು ಬಾರಿ ನಾನು ಅವನಿಗೆ ಸಾಲ ಕೊಡುತ್ತಿ
ದ್ದವರಿಗೆ ನನ್ನ ಹಣವನ್ನಿತ್ತು ಅವನ ಕಿ
ರುಕುಳದಿಂದ ಅವರನ್ನು ಬಿಡಿಸಲು ಹಲವು ಜನ
ನನ್ನ ವಿಷಯದಲ್ಲಿ ಕನಿಕರಪಟ್ಟರು. ಅದ
ಕ್ಕಾಗಿ ಅವನು ನನ್ನಲ್ಲಿ ದ್ವೇಷವಿಟ್ಟಿಹನು!

ಸೋಲನಿಯೋ !- ಮಹಾಪ್ರಭುವು ಕರಾರಿನ ಶರತ್ತ
ನ್ನು ಎತ್ತಿ ಹಿಡಿಯಲಾರನೆಂದು ನನ್ನ ನಿಶ್ಚಯ
ದ ನಂಬಿಕೆಯಾಗಿದೆ.

ಆಂಟೋನಿಯೋ !- ವಿದೇಶೀಯರು ನಮ್ಮೊಡನೆ ವೆನ್ನಿಸದಲ್ಲಿ ನಡೆ
ಸುವ ವ್ಯಾಪಾರದ ನಿಮಿತ್ತವಾಗಿ ಪ್ರಭುವು

ಖಾನೂನು ಮನ್ನಿಸಿದೆಯೋ ಅದನ್ನು ಮೀರಿ ಹೋಗುವು
ದು ಅಸಾಧ್ಯ. ನಗರದಲ್ಲಿ ನಡೆಯುವ ವ್ಯಾಪಾರ
ಮತ್ತು ದೊರೆಯುವ ಲಾಭವೆಲ್ಲ ಜನ, ಜನಾಂಗ
ಳಿಗೂ ಸಂಬಂಧಿಸಿದ್ದರಿಂದ ಹಾಗೆ ಖಾನೂ
ನನ್ನು ಮೀರಿದರೆ ದೇಶದ ಶಾಸನಕ್ಕೆ ಕುಂದಕ
ವನ್ನುಂಟು ಮಾಡಿದಂತೆ ಆಗುವುದು. ಆದುದ
ರಿಂದ ಹೋಗು. ನನ್ನ ಶೋಕ ಮತ್ತು ನಷ್ಟವ
ಹೆಚ್ಚಿ ನನ್ನನ್ನು ಕುಗ್ಗಿಸಿದೆಯೆಂದರೆ ನಾಳೆಯ
ನನ್ನ ಆ ಕ್ರೂರಿ ಸಾಲಿಗನಿಗೊಂದು ಸೇರು ಹ
ಸಿಮಾಂಸವನ್ನು ಕೊಡುವುದಕ್ಕೆ ಪ್ರಯಾಸವಾಗುತ್ತದೆ.
ಸೆರೆಮನೆಯ ಕಾವಲಿಗನೆ, ದೇವರನ್ನು ಪ್ರಾರ್ಥಿಸು!
ಬಸ್ಸಾನ್ಯೋನು ನನ್ನನ್ನು ಕಾಣಲಿಕ್ಕೆಂದು ಬಂ
ದರೆ- ಅವನಿಗೆ ನನ್ನ ಅತಿ ಆದರದ ನಮ
ಸ್ಕಾರ ಸಲ್ಲಿಸು. ಅದರನಂತರ ನನಗೆ ಆಲೋಚಿ
ಸಲಿಕ್ಕೆ ಏನೂ ಇಲ್ಲ!
(ಹೋಗುವರು.)

ದೃಶ್ಯ ೪ — ಬೆಲ್ಮಂಟ್; ಪೋರ್ಷ್ಯಳ ಮನೆ.

(ಪ್ರವೇಶ — ಪೋರ್ಷ್ಯ, ನೆರಿಸ್ಸ, ಲೊರೆನ್ಸೊ, ಜೆಸ್ಸಿಕಾ
ಮತ್ತು ಪೋರ್ಷ್ಯಳ ಒಬ್ಬ ವ್ಯಕ್ತಿ ಬಾಲ್ತಸ್ಸರ್.)

ಲೊರೆನ್ಸೊ:— ಅಮ್ಮಾ, ನಿನ್ನ ಎದುರಿಗೇನೇ ಹೇಳುತ್ತಿ
ರುವೆನಾದರೂ ನಿನ್ನ ಸುವಿಚಾರವಾದ್ದೂ
ಯು ಸಾಮರ್ಥ್ಯವು ನಿನ್ನಲ್ಲಿ ಸ್ವಾಭಾವಿಕವಾಗಿ ನೆ
ಲೆಸಿದೆಯೆಂದು ನಿನ್ನ ಪತಿಯು ಇಲ್ಲದ ವೇ
ಳೆಯಲ್ಲಿ ತಿಳಿಯುವುದರಿಂದ ಹೇಳುವೆನು, ನಿನ್ನ ಮಾ
ನ್ಯತೆಯನ್ನು ಯಾರಿಗೊಪ್ಪಿಸುವೆ, ಎಂಥ ಆದ
ರ್ಶ ವ್ಯಕ್ತಿಗೆ ಸಹಾಯವಿತ್ತಿರುವೆ, ಆ ನನ್ನ
ಪ್ರಭುವು ನಿನಗೆ ಅದೆಷ್ಟು ನಿಷ್ಠೆಯ ಪತಿಯಾಗಿರು
ವನೆಂಬುದನ್ನು ನೀನು ತಿಳಿದರೆ ನಿತ್ಯವು ನೀನೀ
ಗುವ ಉತ್ತಮ ಸೇವಾಕಾರ್ಯದಿಂದ ಪಡೆಯುವ
ಸಂತೃಪ್ತಿಯನ್ನು ಮೀರಿ ನೀನು ತುಂಬಾ ಹೆಮ್ಮೆ
ಪಡುವಿಯೆಂದು ನನಗೆ ಗೊತ್ತಿದೆ.

ಪೋರ್ಷ್ಯ:— ಸತ್ಕಾರ್ಯವನ್ನು ಮಾಡಿ ನಾನು ಬೇಸರಿಸಿದ್ದೆ

ಇಲ್ಲ; ಈಗಲೂ ಬೇಸರವೆನಿಸುವ ಹಾಗಿಲ್ಲ, ಒಡನಾಡಿಗಳು ಹರಟೆ ಹೊಡೆಯುತ್ತ ಕಾಲವನು ಬಿಟ್ಟಿಗೆ ಕಳೆಯುವರಾದರೂ ಅವರು ತಮ್ಮ ತೈಗಳ ಪ್ರೀತಿಯನು ನಿರಭಿಮಾನವಾಗಿ ಪಡೆದಿರುವರು. ಅದೇ ಪ್ರಮಾಣದಲ್ಲಿ ಮತುಬಿಟೆಯರ್ ನಡೆನುಡಿಯು ಮತ್ತು ಆತ್ಮಶಕ್ತಿಯು ಇರಬೇಕು, ಹಾಗಿರುವುದರಿಂದಲೆ ಆಂಟೋನ್ಯೊನು ನನ್ನ ಪ್ರೀತಿಯ ಆಪ್ತ ಗೆಳೆಯನಾಗಿರುವನು, ಆತ್ಮವಾ ನನ್ನ ಪ್ರಿಯತಮ ರೀತಿಯಲ್ಲಿ ಇರುವನೆಂದಾನ್ ಯೋಚಿಸುವಂತಾಗಿಸಿದೆ, ಹಾಗೆ ಇದ್ದರೆ ಎಷ್ಟು ಅಲ್ಪ ಬೆಲೆಗೆ ನರಕಸದೃಶವಾದ ಕ್ರೂರತನದಿಂದ ನನ್ನ ಆತ್ಮಕ್ಕೆ ಸಮಾನವಿರುವುದನ್ನು ಪಡೆದೆ. ಇದೇನೋ ನಾನು ನನ್ನನ್ನು ಹೊಗಳಿಕೊಳ್ಳುವ ರೀತಿಯಲ್ಲಿ ಹೇಳಿದೆನಾದುದರಿಂದ ಈಗ ಹೆಚ್ಚೇನೂ ಹೇಳಲಾರೆ. ಇತರ ವಿಷಯಗಳನ್ನು ಆಲಿಸು. ಲೊರೆನ್ಸೊ, ನನ್ನ ಪತಿಯು ಹಿಂದಿರುಗುವವರೆಗೆ ನಾನು ಈ ನನ್ನ ಮನೆಯನ್ನು ನೋಡಿಕೊಳ್ಳುವ ಜವಾಬ್ದಾರಿ ನಿನಗೆ ಹೊರಿಸ ಬಯಸುವೆನು. ನಾನಾದರೋ ಈ ನೆರಿಸ್ಸಳೊಡನೆ ಮಾತ್ರ ಕೂಡಿ ಆಕಾಶದತ್ತ ನೋಡುತ್ತ ಧ್ಯಾನದಲ್ಲಿ ಆಸಕ್ತರಾಗಿ ಕಾಲಕಾಲ ಕಳೆಯಲೆಂದು ಸಂಕಲ್ಪಿಸಿದ್ದೇನೆ. ಇಲ್ಲಿಂದ ಎರಡು ಮೈಲು ದೂರದಲ್ಲಿ ಆಶ್ರಮವೊಂದಿದೆ. ನೆರಿಸ್ಸಳು ಮತ್ತು ನನ್ನ ಗಂಡಂದಿರು ಬರುವವರೆಗೆ ನಾವು ಪ್ರಾರ್ಥನೆಯಲ್ಲಿ ನಿರತರಾಗಿರುವೆವು. ನಿನಗೆ ಹೊರಿಸಿದ ಈ ಕೆಲಸಕೊಪ್ಪದಿರಬೇಡವೆಂದು ಕೋರುವೆನು. ನಿನ್ನ ಸಹಾಯಕ್ಕೆ ನಾನು ತುಂಬಾ ಋಣಿಯಾಗಿರುವೆನು!

ಲೊರೆನ್ಸೊ:— ಅಮ್ಮಾ, ಈ ವಿಚಾರದ ಆದೇಶಗಳನ್ನು ಆನ್ ಹೃತ್ಪೂರ್ವಕವಾಗಿ ಪಾಲಿಸುವೆನು.

ಪೋರ್ಶ್ಯ:— ನನ್ನ ಜನಕ್ಕೆ ನನ್ನನು ಚೆನ್ನಾಗಿ ತಿಳಿದಿದೆ. ಅವರೆನ್ನ ಪತಿ ಬಸ್ಸಾನ್ಯೊನ ಮತ್ತು ನನ್ನ ಬದಲಾಗೆ ಜೆಸ್ಸಿಕಾ ಮತ್ತು ನಿನ್ನನ್ನು ಒಪ್ಪುವರು, ಆ ಕಾರಣದಿಂದ ಪುನಃ ನಾವು ಕಾಣುವವರೆಗೆ ನಿಮಗೆ ನಮಸ್ಕಾರ!

ಲೊರೆನ್ಸೊ:— ಸವಿ ನೆನಪುಗಳೊಡನೆ ನಿಮ್ಮ ಸಮಯವು ಧ್ಯಾನಾ ನಂದದಲ್ಲಿ ಕಳೆಯುವಂತಾಗಲಿ.

ಜೆಸ್ಸಿಕಾ:— ಸನ್ಮಾನ್ಯ ಭಗಿನಿಯರೆ, ನನ್ನ ಹೃತ್ಪೂರ್ವಕ ಶುಭಾಶಯಗಳು.

ಪೋರ್ಷ್ಯ:— ನಿಮ್ಮ ಅಭಿವಂದನೆಗೆ ಮೆಚ್ಚಿದೆನು. ನಾನು ನಿಮಗೆ ಹಿಂದಕ್ಕೆ ನನ್ನ ಶುಭಾಶಯವ ನ್ನು ಬಯಸುವೆನು. ಜೆಸ್ಸಿಕಾ, ನಮಸ್ಕಾರ.

(ಜೆಸ್ಸಿಕಾ ಮತ್ತು ಲೊರೆನ್ಸೊ ಹೋಗುವರು.)

ಈಗ ಬಲ್ತಸರ್, ಇದೊ ಈ ವರೆಗೆ ನಿನ್ನನ್ನು ನಿಜವಾಗಿ ಸತ್ಯವಂತನೆಂದೆಣಿಸಿರುವೆಯಾ ದ ಕಾರಣ ಮುಂದಕ್ಕೂ ಅದೇ ರೀತಿ ಕಾಣಲು ಇಚ್ಛಿಸುವೆ, ಒಬ್ಬ ಗಂಡಸು ಎಷ್ಟು ಆತುರಯತ್ನ ದಿಂದ ಸಾಧಿಸುವನೋ ಅಷ್ಟೆ ತ್ವರಿತವಾಗಿ ಈ ಪತ್ರವನ್ನು ನೀನು ಪ್ಯಾಡುವಕ್ಕೆ ತೆಗೆ ದುಕೊಂಡೋಗಲು ಹೋಗು, ನನ್ನ ಸೋದರಮಾವ ನ ಮಗ ಡಾಕ್ಟರ್ ಬೆಲ್ಲರಿಯೋನ ಕೈಗೆ ಕೊಡು, ಅನಂ ತರ ಅವನು ಏನು ಸಂದೇಶವನ್ನು ಉಡಿಗೆಯನ್ನು ಕೊಡುವನೋ ಅದನ್ನು ತೆಗೆದುಕೊಂಡು ವೆನ್ನಿಸ್‌ ಕ ಡೆಗೆ ವ್ಯವಹಾರಾರ್ಥ ಹೋಗುತ್ತಿರುವ ಹರಿಗೋಲ ದೋಣಿ, ಆ ಟ್ರಾಜೆಕ್ಟ್‌ಗೆ, ಬೇಗನೆ ಮನೋವೇ ಗದಿಂದ ಧಾವಿಸಿ ತಂದುಕೊಡುವೆಯೆಂದು ಕೋರುವೆನು. ನಾನು ನಿನಗಿಂತ ಮುಂಚೆಯೇ ಅಲ್ಲಿ ಇರುವೆನು.

ಬಲ್ತಸರ್:— ಅಮ್ಮ, ನನಗೆ ಸಾಧ್ಯ ವಾದಷ್ಟು ಬೇಗನೆ ಹೋಗುವೆನು.

ಪೋರ್ಷ್ಯ:— ನೆರಿಸ್ಸಾ ಬಾ. ನಿನಗೆ ಇನ್ನೂ ತಿಳಿಯದೆಯೇ ಇರುವ ಒಂದು ಕೆಲಸವು ಈಗ ನನ್ನ ಕೈಯಲ್ಲಿ ದೆ. ನಮ್ಮ ಗಂಡಂದಿರು ನಮ್ಮನ್ನು ನೆನೆಯುವ ಮೊದಲೆ ನಾವು ಅವರನ್ನು ನೋಡುವ.

ನೆರಿಸ್ಸಾ:— ಅವರು ನಮ್ಮನ್ನು ಕಾಣುವರೊ?

ಪೋರ್ಷ್ಯ:— ಅವರು ಕಂಡೇ ಕಾಣುವರು, ನೆರಿಸ್ಸಾ. ನಾವು ಯಾವ ವಿಷಯದಲ್ಲಿ ಪ್ರವೀಣರೆಂದು ಅವರು ತಿ ಳಿದುಕೊಳ್ಳುವರೊ ಅಂಥ ಪಟದಲ್ಲಿ ನಾವು ಹಿಂ ದುಳಿದಿರುತ್ತೇವೆ. ನಾವಿಬ್ಬರೂ ಯುವಕರಂ ತೆ ಉಡಿಗೆಯನ್ನು ಉಟ್ಟರೆ ನಮ್ಮ ಪೈಕಿ ನಾನೇ ಸುಂದರನೆನಿಸುವೆನೆಂಬುದಕ್ಕೆ ಎಂತಹ ಕಾದ

ರೂ ಹಂತ ಕಟ್ಟುವೆನು. ಧೈರ್ಯಯುಕ್ತ ಶೈಲಿಯಿಂದಲಂ
ತೆ ತೋರ್ಪಡಿಸಿಕೊಂಡು ನನ್ನ ಕೀರ್ತಿಯನ್ನು ಸ
ಸ್ಥಾಪಿಸಿಕೊಳ್ಳುವೆನು; ಮತ್ತೂ ಒಬ್ಬ ಹುಡುಗನ ಮತ್ತು
ಗಂಡಸಿನ ಕಂಠಸ್ವರದ ಮಧ್ಯೆಯ ಸ್ವರನ
ಳಿಕೆಯ ಧ್ವನಿಯಿಂದ ನುಡಿಯುವೆನು; ಗಂಡಸನಡಿಗೆಯಂ
ತೆ ಠಕ್ಕನೆ ತಿರುಗಿ ಎರಡು ಹೆಜ್ಜೆಯನಿಟ್ಟು ತ
ನ್ನನ್ನು ಹೊಗಳಿಕೊಳ್ಳುವ ಚೆಲುವ ಯುವಕನಂತೆ ಕಲ
ಹ ಕಾದಾಟಗಳ ವಿಷಯವಾಗಿಯೂ ಮಾತಾಡು
ವೆನು, ಹಳ್ಳಿಕ್ರಮದಂತೆ ಸಂಬಲಹರ್ವಿನ್ನಿಸ
ದ ಸುಳ್ಳು ಪ್ರಸಂಗಗಳನ್ನು ಹೇಳುವೆನು. ಹೇಗೆ
ಂದರೆ ನನ್ನನ್ನು ತುಂಬಾ ಮೋಹಿಸಿದರಿಂದಲೂ ಆ
ಮೇಲೆ ನಾನು ಒಪ್ಪದಿರಲು ಅವರು ನಿರಾ
ಶರಾಗಿ ಸೊರಗಿ ಸಾಯುವರೆಂದೂ ಅದಕ್ಕೆ ಆನ್
ಹೊಣೆಯಲ್ಲವೆಂದು ಮೊದಲಾಗಿ ಹೇಳುವೆನು, ಅದ
ರನಂತರ ನಾನು ಬೇಸರಿಸುವಂತೆ ನಟಿಸು
ತ್ತ ಅವರನ್ನು ಮುಖಭಂಗಗೊಳಿಸುತ್ತ ಅಲ್ಲಿಯೇ
ಸಾಯುವಂತಾಗಿಸದೆ ಬಿಟ್ಟೆಯೆಂದಿಲ್ಲ ಇ
ಪ್ಪತ್ತು ಸುಳ್ಳು ಹರಟೆಗಳನ್ನು ಹೊಡೆಯಲು ಜನ
ನನ್ನನ್ನು ನೋಡಿ ನಾನು ವರ್ಷದ ಹಿಂದೆಯೇ ಶಾ
ಲೆಯಲ್ಲಿ ಓದುವುದನ್ನು ಬಿಟ್ಟಿರಬೇಕೆಂದೇ
ನಂಬುವರು. ಹೀಗೆ ನನ್ನ ಮನಸ್ಸಿನಲ್ಲಿ ಜಂ
ಬಾ ಚೋರರಲ್ಲಿರುವ ಒಂದು ಸಾವಿರ ಹಸ
ಮಲ್ಲದ ಹುಸಿ ಹರಟೆಗಳನ್ನು ಹೊಡೆಯಲು ನಾನು
ಅಭ್ಯಾಸಿಸುವೆನು.

ನೆರಿಸ್ಸಾ:— ಏಕೆ? ನಾವು ಗಂಡಸರಾಗಿ ಮಾರ್ಪಡುವುದೆ?

ಪೋರ್ಶಿಯಾ:— ಛೀ, ಅದೆಂಥ ಪ್ರಶ್ನೆ?
ನೀನೊಬ್ಬ ಪಟಿಂಗದ ಭಾಷೆಯ ಜತೆಯಲ್ಲಿರು
ವಂತೆ ಹೇಳುತ್ತೀ. ಇರಲಿ, ಬಾ ನನ್ನ ಎಲ್ಲ ಹಂ
ಚಿಕೆಗಳನ್ನು ಆ ಉದ್ಯಾನದ ಬಾಗಿಲಿನ
ಬಳಿಯಲ್ಲಿ ನಮಗಾಗಿ ಕಾದು ನಿಲ್ಲುವ ಗಾಡಿ
ಯಲ್ಲಿ ಹೋಗುತ್ತ ನಾನು ಹೇಳುವೆನು. ಇದೀಗ
ನಾವು ಬೇಗನೆ ಹೋಗುವ. ಇಪ್ಪತ್ತು ಮೈಲುಗ
ಳಷ್ಟು ದೂರ ಹೋಗಬೇಕಾಗಿದೆ!

(ಹೋಗುವರು.)

ದೃಶ್ಯ-೫. ಬೆಲ್ಮಂಟ್ ಉದ್ಯಾನ.

(ಪ್ರವೇಶ- ವಿದೂಷಕ ಲಾನ್ಸಲಟ್ ಮತ್ತು ಜೆಸ್ಸಿಕಾ.)

ಲಾನ್ಸಲಟ್:— ಹೌದು, ನಿಜವಾಗಿಯೂ! ಏಕೆಂದರೆ ನೋಡು! ತಂದೆಯು ಮಾಡಿದ ಪಾಪಗಳನ್ನೆಲ್ಲ ಮಕ್ಕಳ ಮೇಲೆ ಹೊರಿಸಲ್ಪಡಬೇಕು. ಆದುದರಿಂದ ನಾನು ನಿನಗೆ ಹೆದರುತ್ತಿರುವೆನೆಂದು ಆಣೆಯಿಟ್ಟು ಹೇಳುತ್ತೇನೆ, ನಿನ್ನೊಡನೆ ನಾನು ಯಾವಾಗಲೂ ಮುಚ್ಚುಮರೆಯಿಲ್ಲದೆ ಹೇಳಿದ್ದೇನೆ; ಆದರೆ ಈಗ ಆ ವಿಷಯದಲ್ಲಿ ನನ್ನ ಭಾವನೆಯನ್ನು ವ್ಯಕ್ತಪಡಿಸುತ್ತಿದ್ದೇನೆ. ಆದುದರಿಂದ ನೀನು ಸಂತೋಷದಲ್ಲಿರು, ಏಕೆಂದರೆ ನಿಜವಾಗಿಯೂ ನೀನು ಕೆಟ್ಟವಳೆಂದೇ ಭಾವಿಸುತ್ತೇನೆ. ನಿನಗೇನಾದರೂ ಹಿತವಾಗುವುದೆಂದಿದ್ದರೆ ಅದಕ್ಕೆ ಒಂದು ನಿರೀಕ್ಷೆಯುಂಟು, ಆದರೆ ಅದು ನಿಜಸಹಜವಲ್ಲದ ಒಂದು ಕೃತ್ರಿಮ ನಿರೀಕ್ಷೆ ಮಾತ್ರ!

ಜೆಸ್ಸಿಕಾ:— ಅದಾವ ನಿರೀಕ್ಷೆ? ದಯಮಾಡಿ ಹೇಳು.

ಲಾನ್ಸಲಟ್:— ನೀನು ನಿನ್ನ ತಂದೆಗೆ ಹುಟ್ಟಿದವಳಲ್ಲವೆಂದೂ ನೀನು ಯೆಹೂದಿಯನ ಮಗಳಲ್ಲವೆಂದೂ ಒಂದಿಷ್ಟು ನಂಬಬಹುದು.

ಜೆಸ್ಸಿಕಾ:— ಅದೇನೋ ಬಗೆಯ ಕೃತ್ರಿಮ ನಂಬಿಕೆ, ಏನೆನ್ನಲಿ? ಆದುದರಿಂದ ನನ್ನ ತಾಯಿಯು ಮಾಡಿದ ಪಾಪವು ನನ್ನ ಮೇಲೆ ಬರುವುದೇ?

ಲಾನ್ಸಲಟ್:— ನಿಜವಾಗಿಯೂ! ಹಾಗಾದರೆ ನೀನು ನಿನ್ನ ತಂದೆ ಮತ್ತು ತಾಯಿ ಇವರಿಂದಲೂ ಕೆಟ್ಟೆ, ಹೇಗೆಂದರೆ ನಾನು ಸಿಲ್ಲಾಳೆಂಬ ಅಪಾಯಕರ ಬಂಡೆಯಂತಿರುವ ನಿನ್ನ ತಂದೆಯಿಂದ ತಪ್ಪಿಸಿಕೊಳ್ಳುವಾಗ ನಾನು ಚರಿಬಿಡಿಸ್ ಎಂಬ ಸಮುದ್ರ ನೀರಿನ ಸುಳಿಯ ಹೊಂಡಕ್ಕೆ, ಅಥವಾ ನಿನ್ನ ತಾಯಿಯ ಮಡಿಲಿಗೆ ಬಿದ್ದಂತೆಯೆ. ಹೀಗೆ ಈ ಎರಡು ವಿಧದಲ್ಲೂ ನೀನು ಹಾಳಾಗಿಹೋದಂತೆಯೇ!

ಜೆಸ್ಸಿಕಾ:— ನಾನು ನನ್ನ ಗಂಡನಿಂದ ರಕ್ಷಿಸಲ್ಪಡುವೆನು, ಅವನು ನನ್ನನ್ನು ಕ್ರೈಸ್ತಳನ್ನಾಗಿ ಮಾಡಿರುವನು.

ಲಾನ್ಸಲಟ್:— ನಿಜವಾಗಿಯೂ! ಅವನನ್ನು ಹೆಚ್ಚು ಜರಿಯಬೇಕಾಗಿದೆ. ನಾವು ಹಿಂದೆಯೇ ಒಬ್ಬರಿಗೊಬ್ಬರು ಸಹಕರಿಸುತ್ತಾ ಚೆನ್ನಾಗಿ ಬಾಳುವ ನಿಷ್ಠೆಯ ಕ್ರೈಸ್ತರಾಗಿದ್ದೆವು. ಅದು ಬಿಟ್ಟು ಈ ರೀತಿ ಕ್ರೈಸ್ತರ ಸಂಖ್ಯೆಯನ್ನು ಏರಿಸಿದಾಗ ಹಂದಿಗಳ ಬೆಲೆಯೂ ಏರುತ್ತ

ತ್ತದೆ. ನಾವೆಲ್ಲ ಹಂದಿ ತಿನ್ನುವವರಾಗಿ ಬಿಟ್ಟರೆ ಕಡೆಗೆ ನೀವು ಎಷ್ಟು ಹಣ ತೆತ್ತರೂ ನಿಮಗೆ ಸಮಯಕ್ಕೆ ಹಂದಿ ಮಾಂಸವೇ ದೊರೆಯದಂತಾಗುವುದು,

(ಲೋರೆನ್ಜೊನ ಪ್ರವೇಶ)

ಜೆಸ್ಸಿಕಾ:— ನೀನೆನ್ನುವುದನ್ನು ನಾನು ನನ್ನ ಪತಿಗೆ ಹೇಳುವೆನು, ಲಾನ್ಸೆಲಟ್. ಇಲ್ಲಿ ಅವನು ಬರುತ್ತಿರುವನು,

ಲೋರೆನ್ಜೊ:— ನನ್ನ ಹೆಂಡತಿಯೊಡನೆ ನೀನು ಮಾತುಕತೆ ನಡೆಸಿದರೆ ನನಗೆ ನಿನ್ನಲ್ಲಿ ಮತ್ಸರವುಂಟಾಗುವುದು,

ಜೆಸ್ಸಿಕಾ:— ಏನಿಲ್ಲ, ಲೋರೆನ್ಜೊ, ನೀನು ಹೆದರಬೇಕಾಗಿಲ್ಲ. ಲಾನ್ಸೆಲಟ್ ಮತ್ತು ನಾನು ವಾದಿಸುತ್ತಿದ್ದೆವು, ನಾನೊಬ್ಬ ಯಹೂದಿಯವನ ಮಗಳಾದುದರಿಂದ ನನಗೆ ಸ್ವರ್ಗದಲ್ಲಿ ಸ್ಥಾನ ದೊರೆಯಲಾರದೆಂದು ಅವನು ಖಂಡಿತವಾಗಿ ಹೇಳುತ್ತಾನೆ, ನೀನು ಯಹೂದಿಯರನ್ನು ಕ್ರೈಸ್ತರನ್ನಾಗಿ ಮಾಡಿ, ಹಂದಿಮಾಂಸದ ಬೆಲೆಯನ್ನು ಏರಿಸಲು ಕಾರಣನಾಗಿರುವುದರಿಂದ ನೀನು ಸ್ವತಂತ್ರ ಪ್ರಜಾರಾಜ್ಯದ ಉತ್ತಮ ಪ್ರಜೆಯಲ್ಲವೆಂದು ಅವನೆನ್ನುತ್ತಾನೆ,

ಲೋರೆನ್ಜೊ:— ಇದನ್ನು ಕುರಿತಾಗಿ ಆ ನೀಗ್ರೋ ಹೆಂಗಸನ್ನು ಗರ್ಭಿಣಿಯನ್ನಾಗಿ ಮಾಡುವುದಕ್ಕಿಂತ ವ್ಯಕ್ತವಾಗಿ ಆ ಸ್ವತಂತ್ರ ಪ್ರಜಾರಾಜ್ಯಕ್ಕೆ ನಾನು ಉತ್ತರಿಸಬಲ್ಲೆನು. ಆ ಮೂರ್ (ಮೊಳ್ಳಮಗ) ಹೆಂಗಸು ನಿನ್ನ ಮಗುವನ್ನು ಹೊತ್ತಿದ್ದಾಳೆ, ಲಾನ್ಸೆಲಟ್.

ಲಾನ್ಸೆಲಟ್:— ಆ ಹೆಂಗಸಿನಲ್ಲಿರುವ ನಿಷ್ಕಳಂಕತೆಗಿಂತ ಹೆಚ್ಚಿನ ತಾರತಮ್ಯ ಭಾವವನ್ನು, ಅವಳು ಪಡೆದಿದ್ದಾಳೆ, ಹೇಗೂ ಅವಳು ಸಾಕಷ್ಟು ಸತ್ಯವಾದಿಯಲ್ಲದ ಹೆಂಗಸಾದರೆ ಅವಳಲ್ಲಿ ನಿಜಕ್ಕೂ ನಾನು ಯೋಚಿಸಿದುದಕ್ಕಿಂತ ಹೆಚ್ಚು ಗುಣಾವಗುಣಗಳು ಇವೆಯೆಂದು ತೋರುವುದು,

ಲೋರೆನ್ಜೊ:— ಬರೇ ಒಂದೆರಡು ನುಡಿಗಳಿಗೆ ಪ್ರತಿಯೊಬ್ಬ ಹೆಂಗಸೂ ಮೂರ್ಖಳಾಗಿ ಹೋಗಿ ವರ್ತಿಸಬಹುದು. ಜಾಣ್ಮೆತನದ ಗುಣವು ಬೇಗನೆ ಮೌನದಲ್ಲಿ ವಿಸರ್ಜನವಾದಾಗ ಆ ಮಾತಿನ ಸ್ವಾರಸ್ಯ ಹೆಚ್ಚುವುದೆಂದು ನಂಬುವೆನು, ವಾಗ್ವಾದಗಳು ಹೆಚ್ಚಾದಾಗ ಬೇರಾರಿಗಲ್ಲವಾದರೂ ಗಿಳಿಗಳಿಗೆ ಸ್ವಾರಸ್ಯವಾಗಿ ತೋರುವುವು. ಎಲಾ, ಒಳಗೆ ಹೋಗು, ಊಟಕ್ಕೆ ಸಿದ್ಧ

ಗೊಳಿಸುವಂತೆ ಅವರಿಗೆ ಹೇಳು,

ಲಾನ್ಸೆಲಟ್:— ಅಯ್ಯಾ, ಸಿದ್ಧವಾಗಿದೆ, ಅವರೆಲ್ಲರ ಹೊಟ್ಟೆಯಲ್ಲೂ ಹಸಿವು ಇದೆ,

ಲೊರೆನ್ಸೊ:— ದೇವಾ, ವಸಿಸ್ತುತೆ? ಎಂಥಾ ಹಾಸ್ಯವನ್ನು ಸಿಡಿಸುವಿ! ಇರಲಿ, ಊಟಕ್ಕೆ ಸಿದ್ಧಗೊಳಿಸುವಂತೆ ಹೇಳು,

ಲಾನ್ಸೆಲಟ್:— ಅಯ್ಯಾ, ಅದೂ ಆಗಿದೆ, ಇನ್ನುಳಿದ್ದು ಮೇಜಿನ ಮೇಲೆ ಇಡಬೇಕು, ಅಷ್ಟೆ!

ಲೊರೆನ್ಸೊ:— ಮಾನ್ಯನೆ, ಹಾಗಾದರೆ ನೀನು ಇಡುತ್ತೀಯಾ?

ಲಾನ್ಸೆಲಟ್:— ಹಾಗಲ್ಲ, ಸ್ವಾಮಿ, ಅಲ್ಲ, ನನಗೆ ನನ್ನ ಕರ್ತವ್ಯವೇನೆಂದು ತಿಳಿದಿದೆ,

ಲೊರೆನ್ಸೊ:— ಅಂತೂ ಹೇಳಿದ್ದಕ್ಕೆಲ್ಲ ಮತ್ತು ಸಂದರ್ಭಕ್ಕನುವಾಗಿ ಮಾತಿಗೆ ಪ್ರತಿಮಾತು ಹೇಳುವ ನಿನ್ನ ಚಮತ್ಕಾರದ ನಿಧಿಯನ್ನೆಲ್ಲ ಒಂದೇ ಸಮನೆ ಪ್ರದರ್ಶಿಸುವಿಯಾ? ಆದರೆ ಸಾಮಾನ್ಯನಾದವನನ್ನು, ಸಾಮಾನ್ಯ ಅರ್ಥದಲ್ಲಿಯೇ ನೀನು ತಿಳಿಯುವಂತೆ ಕೇಳಿಕೊಳ್ಳುತ್ತಿದ್ದೇನೆ, ಈಗ ನಿನ್ನ ಜನರತ್ತ ಹೋಗು. ಊಟವನ್ನು ಮೇಜಿನ ಮೇಲೆ ಇಡುವಂತೆ ಹೇಳು, ಮಾಂಸವನ್ನು ತಂದು ಬಡಿಸಿರಿ; ನಾವು ಒಳಗೆ ಬಂದು ಕೂರುವೆವು,

ಲಾನ್ಸೆಲಟ್:— ಅಯ್ಯಾ, ಮೇಜಿಗೆ! ಅದನ್ನು ಬಡಿಸಲಾಗುವುದು; ಆದರೆ ಮಾಂಸ, ಸ್ವಾಮಿ! ಅದನ್ನು ಮುಚ್ಚಲಾಗುವುದು. ಸ್ವಾಮಿ, ಒಳಗೆ ಊಟಕ್ಕೆ ನೀನು ಬರುವಿಯಷ್ಟೆ? ಮತ್ತೆ? ಹಾಸ್ಯ ಮತ್ತು ಹೆಮ್ಮೆ ಒಡಗೂಡಿ ಆಯಾ ಜನಕ್ಕೊಪ್ಪುವಂತೆ ತಮ್ಮ ಪ್ರಭಾವವನ್ನು ತೋರಿಸಲಿ.

(ಹೋಗುವನು.)

ಲೊರೆನ್ಸೊ:— ಹೋ! ಪ್ರಿಯ ವಿವೇಚನಾ ಭಾವವೇ! ಅವನ ಮಾತುಗಳು ಎಷ್ಟು ಯುಕ್ತವಾಗಿವೆ! ಆ ಹೆಡ್ಡನು ತನ್ನ ತಲೆಯಲ್ಲಿ ತಕ್ಕ ನುಡಿಗಳನ್ನು ಶೇಖರಿಸಿ ನಿಟ್ಟಿರುವನು. ಹಲವು ಹೆಂಗರು ಸಮಾಜದಲ್ಲಿ ಅವನಿಗಿಂತ ಅತಿ ಉತ್ತಮವೆನಿಸಿದ ಸ್ಥಾನಗಳಲ್ಲಿರುವರೆಂದೂ ನನಗೆ ಗೊತ್ತಿದೆ. ಅವನಂತೆ ಅಲಂಕಾರಿಕವಾಗಿ ಚಮತ್ಕಾರಿಕವಾದೊಂದು ಶಬ್ದದಿಂದ ವಾದವನ್ನು ಪ್ರತಿಭಟಿಸುವರು. ಇರಲಿ, ಜೆಸ್ಸಿಕಾ, ಇದಕ್ಕೆ ನೀನೊಪ್ಪುವಿಯೊ? ನನ್ನ ಶೀಲ ಮೋಹಿನಿಯೆ, ನಿನ್ನ ಸಲಹೆಯೇನೆಂದು ಹೇಳು. ಪ್ರಭು ಬಸ್ಸಾನಿಯೊನ ಹೆಂಡ

ತಿಯನ್ನು ನೀನೆಷ್ಟು ಮೆಚ್ಚುವೆ?

ಜೆಸ್ಸಿಕಾ:- ಅಭಿಪ್ರಾಯವನ್ನು ಹೇಳುವ ದಿನ ಕಳೆಯಿತು; ಪ್ರಭು ಬಸ್ಸಾನ್ಯೋನ ಪತ್ನಿಯಲ್ಲಿ ಅಪಾರ ಗುಣವು ಶೀಲ ವುಗಳಿರುವುದರಿಂದ ಅವನು ಸ್ವರ್ಗೀಯ ಸುಖ ವನ್ನೀ ಭೂಮಿಯಲ್ಲಿ ಪಡೆಯಲು ದಿಟ್ಟತನದ ಬಾ ಳ್ವೆಯನ್ನು ಸಾಗಿಸುವುದೇ ಯುಕ್ತ. ಅವನು ಅದನ್ನೀ ಭೂಮಿಯಲ್ಲಿ ಅನುಭವಿಸಲನರ್ಹನೆನಿಸಿದರೆ ಅ ವನು ಸ್ವರ್ಗಕ್ಕೆ ನಿಜಕ್ಕೂ ಬರಬಾರದು. ಇಬ್ಬ ರು ದೇವತೆಗಳು ಭೂಮಿಯ ಇಬ್ಬರು ಹೆಂಗಸರಿ ಗಾಗಿ ಸ್ವರ್ಗದಲ್ಲಿ ಸ್ಪರ್ಧಿಸಿದರೆ ಅವರಲ್ಲೊಬ್ಬ ಳು ಪೋರ್ಷಿಯಾಳೆ ಆಗುವಳು. ಆದರೆ ಮತ್ತೊಬ್ಬ ನಿಗೆ ಒಬ್ಬಳು ಮತ್ತು ಸತಿ ಪೋರ್ಷಿಯಾಳಿಗೆ ಸಮಾ ನಳಾದವಳು ಈ ಬಡ ಮತ್ತು ಪಾಮರ ಲೋಕ ದಲ್ಲಿ ಇನ್ನೊಬ್ಬಳಿಲ್ಲ.

ಲೊರೆನ್ಜೊ:- ನನ್ನಂಥ ಒಬ್ಬ ಗಂಡಿಗೂ ಅವಳಂಥ ಹೆಂ ಡತಿ ಸಿಕ್ಕಿ ಇರುವಳು.

ಜೆಸ್ಸಿಕಾ:- ಇಲ್ಲ, ಅದನ್ನು ಕುರಿತಾಗಿಯೂ ನನ್ನ ಅಭಿಪ್ರಾಯವೇನೆಂದು ಕೇಳು.

ಲೊರೆನ್ಜೊ:- ಆಗಲಿ, ಕೇಳುವೆನು. ನಾವು ಮೊದಲು ಊಟಕ್ಕೆ ಹೋಗುವ.

ಜೆಸ್ಸಿಕಾ:- ಇಲ್ಲ, ನನ್ನೀ ಹೊಟ್ಟೆ ಹಸಿಯುತಿದೆಯಾದರೂ ನಾನೀಗ ನಿನ್ನನ್ನು ಹೊಗಳುವೆನು.

ಲೊರೆನ್ಜೊ:- ಹಾಗಲ್ಲ, ನಿನ್ನನ್ನು ಕೇಳಿಕೊಳ್ಳುವೆನು. ಅದು ಊಟದ ವೇಳೆಗೆ ಆಡಬೇಕಾದ ಮಾ ತುಗಳಾಗಿ ಇರಲಿ. ಆಗ ನೀನು ಯಾವ ವಿಷ ಯವನ್ನು ಕುರಿತು ಹೇಳಿಕೊಂಡರೂ ನಾನದ ನ್ನು ಕೇಳಿ ಅರಗಿಸಿಕೊಳ್ಳುವೆನು.

ಜೆಸ್ಸಿಕಾ:- ಆಗಲಿ, ನಿನಗೆ ಅಂತೆಸಗುವೆನು!

(ಹೋಗುವರು.)

ಅಂಕ ೪.

ದೃಶ್ಯ ೧ — ವೆನ್ನಿಸ್‌ನ ನ್ಯಾಯಾಲಯದಲ್ಲಿ

(ಪ್ರವೇಶ — ಮಹಾಪ್ರಭು (ಡ್ಯೂಕ್) ಗಣ್ಯ ಶ್ರೀಜನರು, ಆಂಟೋನಿಯೋ, ಬಸ್ಸಾನಿಯೋ, ಗ್ರಾಶ್ಯಾನೋ, ಸಲೆರಿನೋ ಮತ್ತು ಇತರರು.)

ಮಹಾಪ್ರಭು:— ಏನು? ಆಂಟೋನಿಯೋ ಇಲ್ಲಿರುವನೆ?

ಆಂಟೋನಿಯೋ:— ಇಲ್ಲಿಯೇ ಸಿದ್ಧನಿದ್ದೇನೆ, ಮಹಾಪ್ರಭು.

ಮಹಾಪ್ರಭು:— ನಿನಗೆ ನನ್ನ ಸಂತಾಪವಿದೆ; ಸರಿ, ಬಿಂದಿಷ್ಟು ದಯೆ ದಾಕ್ಷಿಣ್ಯ ಮತ್ತು ಕರುಣೆಗೆ ತನ್ನಲ್ಲಿ ಅವಕಾಶಗೊಡದ ಅಮಾನುಷನೂ ಕ್ರೂರಿಯೂ ಆಗಿರುವ ಆ ಕಲ್ಲೆದೆಯ ವಿರೋಧಿಗೆ ನೀನು ಉತ್ತರಿಸಲೆಂದು ಬಂದಿರುವೆ.

ಆಂಟೋನಿಯೋ:— ಅವನು ಅನುಸರಿಸುತ್ತಿರುವ ವಕ್ರ ದಾರಿಯನ್ನು ನಿಷ್ಫಲಗೊಳಿಸಲು ಮಹಾಪ್ರಭು ತುಂಬಾ ಯತ್ನಿಸಿದಿರೆಂಬುದನ್ನು ತಿಳಿದಿದ್ದೇನೆ. ಆದರೆ ಅವನು ಹಠಾತ್ತಾಗಿ ನಿಂತಿರಲು ಮತ್ತು ಕಾನೂನುಗಳು ನನ್ನನ್ನು ಅವನ ಮತ್ಸರದ ನಿಲುವಿಂದ ಪಾರಾಗಿಸುವಂತಿಲ್ಲದರಿಂದ ಅವನ ಉಗ್ರ ದ್ವೇಷವನ್ನು ನಾನು ಈ ವರೆಗೆ ಸಹಿಸಿರುವ ನನ್ನ ತಾಳ್ಮೆಯನ್ನೇ ಈಗ ನಾನು ಕಳೆದುಕೊಳ್ಳುತ್ತಿರುವೆನು. ಅವನ ಕ್ರೂರತನದ ವೈರವನ್ನು ಮೌನತೆಯ ಸ್ಥೈರ್ಯದೊಡನೆ ಅನುಭವಿಸಲು ಸಿದ್ಧನಾಗಿದ್ದೇನೆ.

ಮಹಾಪ್ರಭು:— ಒಬ್ಬ ಹೋಗಿ ಆ ಯೆಹೂದಿಯನ್ನು ನನ್ನ ನ್ಯಾಯ ಸದನಕ್ಕೆ ಬರುವಂತೆ ಹೇಳಿ.

ಸಲೆರಿನೋ:— ಅವನು ಬರುತ್ತಿದ್ದಾನೆ, ಮಹಾಪ್ರಭು, ಅವನು ಬಾಗಿಲು ಬಳಿ ಸಿದ್ಧನಿದ್ದಾನೆ.

(ಪ್ರವೇಶ — ಷೈಲಾಕ್)

ಮಹಾಪ್ರಭು:— ದಾರಿ ಬಿಡಿ. ಅವನು ನಮಗೆದುರಾಗಿ ಇಲ್ಲಿ ನಿಲ್ಲಲಿ. ಹಾ ಷೈಲಾಕ್ ನೀನು ನಿನ್ನ ಮತ್ಸರದ ಈ ವಿಧಿಯನ್ನು ಕಡೆಯ ಪ್ರಕರಣದ ವರೆಗೂ ಕೊಂಡೊಯ್ಯುತ್ತಿರುವೆಯೆಂದು ಜನತೆಯು ನಂಬಿದೆ. ಅದೇ ತೆರನೆಯೇ ನಾನೂ ಯೋಚಿಸುತ್ತಿರುವೆನು. ಅಂತೆಯೇ ನಿನ್ನ ಈ ಕೃತ್ರಿಮ ಕಾಠಿಣ್ಯವನ್ನು ಮೀರಿ ಅಚ್ಚರಿ

ಗೊಳ್ಳಗಾಗಿರುವ ನಿನ್ನ ಸಹೃದಯತೆ ಮತ್ತು ಕ
ರುಣೆಯನ್ನು ಪ್ರಕಟಿಸುವಿಯೆಂದಿದ್ದೆನು; ಆದ-
ರೇನು! ನೀನು ಬಹಿರಂಗಪಡಿಸುವ ದೌರ್ಜನ್ಯ;
ನಿನಗೆ ಆ ಬಡ ವರ್ತಕನ ಒಂದು ಸೇರು ಮಾಂ
ಸವನ್ನು ಈಗಲೇ ದಂಡವಾಗಿ ಪಡೆಯುವ ಕಾತ
ರತೆ. ಕರಾರಿನಲ್ಲಿ ಸೂಚಿಸಿದ ದಂಡವದು ಬೇ
ಡವೆಂದೆನಿಸುತ್ತ ಮಾನವ ಸಹೃದಯತೆಯು ಪ್ರೀ
ಮವನ್ನು ಗಮನಿಸು. ಆ ಸಾಲದ ಹಣದ ಅರ್ಧ
ವನ್ನು ಬಿಡು. ಅವನ ಬೆನ್ನ ಮೇಲೆರಗಿದ ಕಷ್ಟ
ನಷ್ಟಗಳು ಒಬ್ಬ ರಾಜನ ತುಂಬು ಕಪ್ಪಲನ್ನೇ
ಮುಳುಗಿಸುವ ತೆರನಿಂದು ಗ್ರಹಿಸು. ತುರುಕರು ಟಾರ್ಟ
ರರಿಗಿಯದ ಮರುಕವನ್ನು ವಿನಯವನ್ನು ಮತ್ತು ಇ
ವನ ದುರವಸ್ಥೆಗೆ ಸಮವಾದ ಅನುತಾಪವನ್ನು ತೋರಿ
ಸುವ ದಯಾಪೂರ್ಣ ಮರುಕ ನಡೆಯನ್ನು; ಯಹೂದಿಯ
ನೇ, ನಾವು ನಿರೀಕ್ಷಿಸುತ್ತಿರುವೆವು.

ಶೈಲಾಕ್!— ಪ್ರಭುಗಳೆ, ಮುಖ್ಯ ದರ್ಶನದ ನಮ್ಮ ಆದಿ ದೈವದಾ
ಣೆಯೊಡನೆ ನನಗಾ ಕರಾರಿನಲ್ಲಿ ಹೇಳಿದ ದಂಡ
ವದೀ ಅವನಿಂದ ಬೇಕೆಂದು ಅರಿಕೆ ಮಾಡಿರು
ವೆನು, ನೀವು ಅದನ್ನು ಕೊಡಲೊಪ್ಪದಿದ್ದರೆ ನಿಮ್ಮ
ಶಾಸನಕ್ಕೆ ನಿಮ್ಮ ನಗರದ ಸ್ವಾತಂತ್ರ್ಯಕ್ಕೆ ಅ
ಪಾಯವುಂಟಾಗಲಿ. ಅದೇನೋ ಮೂರು ಸಾವಿರ
ವರಹಕ್ಕೊಂದು ಸೇರು ಕೊಳೆತ ಮಾಂಸವೇಕೆಂದು
ಕೇಳುವಿರಿ. ನಾನದಕ್ಕೆ ಉತ್ತರಿಸಲಾರೆನು,
ನನ್ನ ಮನ ಹಾಗನ್ನುವುದೆಂದು ಹೇಳುವೆನು,
ಸಾಕೇ? ನನ್ನ ಮನೆಯನ್ನು ಒಂದು ಇಲಿ ಕಾಡಿದಾ
ಗ ಅದನ್ನು ಓಡಿಸಲು ಹತ್ತು ಸಾವಿರ ವರಹ
ವನ್ನು ಕೊಡುವುದು ನನ್ನಿಷ್ಟ! ಮನಸ್ಸಾಯಿತೇ? ನಿ
ಮ್ಮ ಪ್ರಶ್ನೆಗೆ ಉತ್ತರಿಸಿದೆನೇ? ಇನ್ನೂ ಹೇಳು
ಬೇಕೇ? ಕೆಲವು ಜನವಿದ್ದಾರೆ. ಅವರಿಗೆ ಬೆನ್ನ
ಆರುವ ಆ ಸತ್ತ ಹಂದಿಯು ಬಾಯ್ದೆರೆದುದು ಕಂಡ
ರೆ ಆಗದು, ಕೆಲವರು ಒಂದು ಸಾಕಿದ ಬೆಕ್ಕು
ಕಂಡಾಗ ಹುಚ್ಚಾಗುವರು. ಇನ್ನು ಕೆಲವರಾ
ನಯವಾದ ತಿದಿಗೊಳಲ ಹಾಡಿಗೆ ಅಸಹ್ಯತೆಯ
ನು ಬಲಾತ್ಕಾರಕವಾಗಿ ತೋರಿಸುವರು. ಅದೆಲ್ಲ
ಅವರವರ ಮನೋಗುಣಕ್ಕೆ ಅನುಸಾರವಾಗಿದು

ದಿಂದ ನಡೆಸಬಹುದು. ನೀವು ಕೇಳಿದುದಕ್ಕೆ ಉತ್ತರವು
ಇಷ್ಟೆ. ಬಾಯ್ತೆರೆದ ಹಂದಿ, ಹಾದಿದ ಬೆಕ್ಕು, ಧನಿ
ಗೈಯುವ ಮೊತ್ತನಿಹ ಮೊಳಗುವುದ ಸಹಿಸರದೇಕೆ?
ಅದಕ್ಕೆಲ್ಲ ನಿಶ್ಚಿತ ಹೇತುವಿದೆಯೆ? ವೈರಿಯು
ನು ಸಹಿಸದಿಹ ನಿಂದೆಯೊಂದ ಜುವದು ಅನಿವಾರ್ಯ! ನಿ
ಮ್ಮ ಪ್ರಶ್ನೆಗೆ ಉತ್ತರಿಸಲಾಗುವುದಿಲ್ಲ. ನಾನು
ಉತ್ತರಿಸುವುದೂ ಇಲ್ಲ. ಆಂಟೋನಿಯೋನಲ್ಲಿ ನ
ನಗೆ ನಿಶ್ಚಲ ದ್ವೇಷವೆಂದಲ್ಲದೆ ಬೇರೆ
ನು ಹೇಳಲಿ? ನಾನು ಕಳೆದುಕೊಳ್ಳಬಹುದಾದ ಈ
ವ್ಯಾಜ್ಯ ಹೇಗೆ ಕೊನೆಗೊಳ್ಳುವುದೋ ನೋಡುವೆ. ನಿಮ್ಮ
ಕೇಳಿಕೆಗೆ ಉತ್ತರಿಸಿದಂತಾಯಿತೆ?

ಬಸ್ಸಾನಿಯೋ:— ಇದು ಉತ್ತರವಲ್ಲ, ಎಲಾ ನಿಷ್ಕರುಣಿ ವ್ಯ
ಕ್ತಿಯೆ, ನಿನ್ನೀ ಕ್ರೂರತನಕ್ಕೆ ಏಕೆ ತಡೆಯೆ ಇ
ಲ್ಲವೆಂಬಂತೆ ನೀನಿರುವೆ.

ಶೈಲಾಕ್:— ನನ್ನ ಪ್ರತ್ಯುತ್ತರದಿಂದ
ನಾನು ನಿನ್ನನ್ನು ತೃಪ್ತಿಪಡಿಸಬೇಕಾಗಿಲ್ಲ.

ಬಸ್ಸಾನಿಯೋ:— ಜನ ತಾವು ಮೆಚ್ಚದಿಹುದನ್ನೆಲ್ಲ ಕೊಲ್ಲುವರೆ?

ಶೈಲಾಕ್:— ತಾನು ಕೊಲ್ಲದಿರುವುದರ ಮೇಲೆ
ದ್ವೇಷವನ್ನು ಯಾರೊಬ್ಬನಾದರೂ ಇಡುವನೆ?

ಬಸ್ಸಾನಿಯೋ:— ಅಸಂತೋಷಕ್ಕೆಡೆಗೊಡುವ ವಿಚಾರವಲ್ಲ ಮೊದ
ಲ್ಲೆ ವೈರಕ್ಕೆಡೆಗೊಡುವ.

ಶೈಲಾಕ್:— ಏನು? ಎರಡು ಸಲ ನೀನು ಸರ್ಪದ ಕೊಂಡಿಯಿಂ
ದ ಕಚ್ಚಿಸಿಕೊಳ್ಳುತ್ತೀಯಾ?

ಆಂಟೋನಿಯೋ:— ಆಸ್ ಇದೊ ಬೇಡುವೆನು!
ಆ ಯೆಹೂದಿಯನ್ನೊಡನೆ ವಾದವೇಕೆ? ಸಮುದ್ರ
ದಡದಲ್ಲಿ ಬೋರ್ಗರೆವ ಅಲೆಗೆ ಮೇಲೇರದಿರು
ಎಂದು ಹೋಗಿ ಹೇಳಿರಿ. ಅಷ್ಟೇಕೆ? ತಾಯ್ ಕುರಿಯು
ಅದರ ಮರಿಗಾಗಿ ಮೊರೆಯಿಡುವಂತೆ ಮಾಡಿದ್ದೇ
ಕೆಂದು ತೋಳನನ್ನು ಕೇಳಿರಿ. ಬೆಟ್ಟದೆತ್ತರಕ್ಕೆ
ತಲೆಯೆತ್ತಿದಾ ದೇವದಾರು ವೃಕ್ಷಗಳು ಗಾ
ಳಿಯು ಬಡಿತಕ್ಕೆ ಅತ್ತಿತ್ತ ಬಾಗುತ್ತ ಆಕಾಶ
ದುದ್ದಕ್ಕೂ ಬೀಸಿ ಕೇಳಿರಲು ಅವು ತಮ್ಮೆಲೆ
ಕೊಂಬೆಗಳನ್ನು ಓಲೆಯದಿರಿ ಎಂದೆನ್ನುತ್ತಿರುವುದೆ
ಯಿರಿ. ಹೀಗೆ ಅವುಗಳನ್ನು ತಣಿಸಲಿಕ್ಕೆ ಅಸಾಧ್ಯವಿ
ರುವುದನ್ನೆಲ್ಲ ನೀವ್ ಮಾಡಬಹುದಾದರೂ ಆ ಯೆ

ಹೂದಿಯನ ಎದೆಯನ್ನು ಮೆದುವಾಗಿಸುವುದಕಿಂ
ತ ಕಷ್ಟವು ಬೇರೇನಿದೆ ? ಹಾಗಿದ್ದರೂ ಅದ
ಕ್ಕೆ ಕೇಳುವಿರಿ ಎಂದು ಬೇಡುವೆನು. ಅವನಿಗೆ ಇನ್ನು
ಹೆಚ್ಚು ಹಣವನ್ನು ಕೊಡುವೆವೆಂದೆನುವುದು ಬೇ
ಡ. ಹಂಚಿಕೆಯನ್ನೇನೂ ಬೇರೆ ಮಾಡಬೇಡಿರಿ. ಬ
ದಲಾಗಿ ಇದರ ಬಗ್ಗೆ ತೀರ್ಪನ್ನು ನನಗಾಗಲಿ; ಯೆ
ಹೂದಿಯನಿಗವನ ಇಚ್ಛಾಪೂರ್ವವನು ಸಲ್ಲಿಸಿರಿ.

ಬಸ್ಸಾನಿಯೋ:- ನಿನ್ನ ಮೂರು ಸಾವಿರ
ವರಹಕ್ಕಿದೊ ಇಲ್ಲಿದೆ ಆರು ಸಾವಿರ!

ಶೈಲಾಕ್:- ಆರು ಸಾವಿರದ ಆ ಒಂದೊಂದು ವರಹವೂ
ಆರು ಪಾಲಾಗಿ ಆ ಒಂದೊಂದು ಪಾಲು ಒಂ
ದೊಂದು ವರಹವೆನಿಸಿದರೂ ನಾನು ಅವುಗಳನ್ನು
ತೆಗೆದುಕೊಳ್ಳಲಾರೆ, ನನಗೆ ನನ್ನ ಕರಾರಿನ
ಶರತ್ತುಗಳು ಬೇಕು!

ಮಹಾಪ್ರಭು:- ಇಲ್ಲದಿಹ ಆ ಕರುಣೆಯನ್ನು ನೀವು ಅದೆಂತು
ನಿರೀಕ್ಷಿಸುವಿರಿ ?

ಶೈಲಾಕ್:- ತಪ್ಪನೆಸಗದಿಹ ನಾನು ಅದಾವ ತೀರ್ಪಿಗೆ ಹೆ
ದರಲಿ? ನಿಮ್ಮಲ್ಲಿ ಹಲವರಿಗೆ ಬೆಲೆಕೊಟ್ಟು ಕೊಂ
ಡ ಸೇವಕರು ಇರುವರು. ಹಾಗೆ ಕೊಂಡ ಅವರ
ನ್ನು ಕತ್ತೆಗಳು, ನಾಯಿಗಳು, ಹೇಸರಗತ್ತೆಗಳಂತೆ ಬ
ಹು ಕೀಳೆನಿಸಿದ ಊಳಿಗಕ್ಕೆ ಇರಿಸುವಿರಿ, ಅಂಥ
ಕೆಲಸದಿಂದ ಅವರನ್ನು ಬಿಡಿಸಿ ಸ್ವತಂತ್ರರು
ಎಂದಾಗಿಸಿ ಅವರನ್ನು ನಿಮ್ಮ ಕುವರ ಕುವರಿಯ
ರಿಗೆ ವಿವಾಹವಾಗಿಸಿರಿ ಯೆಂದೆನಲೆ? ಹೊರೆಗಳ
ನು ಹೊರುತಲವರು ಬೆವರಿಳಿಸಲೇಕೆ? ಮೆತ್ತನೆ
ಹಾಸಿ ನಿಮ್ಮ ಶಯ್ಯೆಯೊಲು ಅವರದು ಇರಲಿ. ನಿ
ಮ್ಮ ರಸಭೋಜನಗಳಂತೆಯೆ ಅವರೂ ಮೃ
ಷ್ಟಾನ್ನವನು ಉಣ್ಣಲಿ. ಇನಿತನ್ನಲು "ದಾಸರವ
ರು ನಮ್ಮ"ಯೆಂದು ಮರುನುಡಿಯುವಿರಿ; ಅದಕ್ಕೆ ಇಂ
ತೆನುವೆ. ಅವನಿಂದ ಒತ್ತಾಯಿಸಿ ಪಡೆಯಲಿಚ್ಛಿಸು
ವ ಒಂದು ಪೌಂಡು ಮಾಂಸಕ್ಕೆ ಬೆಲೆಯ ಕೊಡದು. ಅದು
ನನ್ನದು; ಅದನ್ನು ನಾನು ಪಡೆಯುವೆ. ಅಂತಾಗ
ದಿಂದು ನೀವು ಅಂದರೆ ನಿಮ್ಮ ನ್ಯಾಯಕ್ಕೆ ಧಿ
ಕ್ಕಾರವಿರಲಿ. ವೆನ್ನಿಸ್‌ನ ಶಾಸನಕ್ಕೆ ಬಲವ
ತ್ತರವಾಗಿ ಇಲ್ಲ. ಹೇಗೂ ನಾನು ನಿಮ್ಮ ತೀ

ಹೀಗೆ ಕಾದು ನಿಂತಿಹೆನು. ಅದನ್ನು ಕೊಡುವಿರೋ ಇಲ್ಲ
ವೋ? ಉತ್ತರಿಸಿ!

ಮಹಾಪ್ರಭು:— ಈ ವ್ಯಾಜ್ಯವನ್ನು ತೀರಿಸಲು ಪ್ರೌಢ ವಿದ್ವಾಂ
ಸ ಬೆಲ್ಲರಿಯೋನನ್ನು ಬರುವಂತೆ ಹೇಳಿ ಕಳು
ಹಿಸಿರುವೆನು. ಆವನು ಇದಿನ ಬಾರದಿದ್ದರೆ ಈ ವಿ
ಚಾರಣೆಯನ್ನು ನನ್ನ ಅಧಿಕಾರವನ್ನು ಉಪಯೋ
ಗಿಸಿ ಇಲ್ಲಿಗೆ ನಿಲ್ಲಿಸುವೆನು.

ಸಲೇರಿಯೋ:— ಮಹಾಪ್ರಭು, ಒಬ್ಬ ದೂತನು ಪ್ಯಾಡುವದ ಆ
ತಜ್ಞರ ಬರೆಹದೋಲೆಯೊಡನೆ ಬಂದು ಹೊರಗೆ ಕಾ
ದು ನಿಂತಿಹನು.

ಮಹಾಪ್ರಭು!— ಆ ಓಲೆಗಳನ್ನು ತನ್ನಿರಿ. ದೂತನನ್ನು ಒ
ಳಗೆ ಕರೆಯಿರಿ.

ಬಸ್ಸಾನಿಯೋ:— ಸಂತೋಷ! ಆಂಟೋನಿಯೋ, ಸೋದರನೇ, ಎದೆಗುಂದ
ದಿರು, ನೀನು ನನಗಾಗಿ ಒಂದು ಹನಿ ರಕ್ತವನ್ನು
ಸುರಿಸುವುದಕ್ಕೆ ಮುನ್ನವೆ ಆ ಯವನಿಗೆನ್ನ ಮಾಂ
ಸ ನೆತ್ತರು ಮೂಳೆಯನ್ನೆಲ್ಲವನ್ನು ಕೊಡುವೆ.

ಆಂಟೋನಿಯೋ!— ನಾನು ಹಿಂಡಿನಲ್ಲಿ ಉಣ್ಣೆಯಿಲ್ಲದ
ಬರಿದೊಗಲ ಟಗರಿನಂತೆ. ಎಲ್ಲರಿಗೂ ಮುನ್ನವೆ
ಸಾಯುತಿಹೆ. ಬಹು ಬಾಡಿಯಿಹ ಹಣ್ಣೆ ಬೇಗನೆ ನೆ
ಲಕ್ಕುದುರುವುದು; ಬಿಡಿ, ಅಂತೆಯೇ ಕಾಲ್‌ಬೀಳುವೆನು.
ಬಸ್ಸಾನಿಯೋ, ನೀನು ಬಹುಕಾಲವಿದ್ದು ನ
ನ್ನ ಗೋರಿಯ ಮೇಲೆ ನನ್ನ ಸ್ಮಾರಕ ಲೇಖಗಳ
ನ್ನು ಬರೆಯುವುದಕ್ಕಿಂತ ಉಚಿತವಹ ಕೆಲಸ ಬೇ
ರೆ ಇಲ್ಲ.

(ಪ್ರವೇಶ — ನೆರಿಸ್ಸ — ವಕೀಲನ ಗುಮಾಸ್ತ
ನಂತೆ ಉಡುಗೆ ಉಟ್ಟು —.)

ಮಹಾಪ್ರಭು!— ಪ್ಯಾಡುವಾದಿಂದ ಬೆಲ್ಲರಿಯೋ ಇವರು ನಿಮ್ಮ
ನ್ನು ಇತ್ತ ಕಳುಹಿಸಿ ಬಂದಿರಾ?

ನೆರಿಸ್ಸ!— ಹೌದು, ಎರಡೂ ಕಡೆಯಿಂದ! ಪ್ಯಾಡುವಾ ಮತ್ತು
ಬೆಲ್ಲರಿಯೋ ಕಡೆಯಿಂದ. ಅವರು ತಮ್ಮ ಶುಭಾಶ
ಯವನ್ನು ತಮಗರುಹಲು ಹೇಳಿದರು.
(ಒಂದು ಪತ್ರ ಕೊಡುವಳು.)

ಬಸ್ಸಾನಿಯೋ:— ನೀನೇಕೆ ಇಷ್ಟು ಶ್ರದ್ಧೆಯಿಂದ ನಿನ್ನ ಚೂರಿಯ
ನ್ನು ಮಸೆಯುತ್ತಿರುವೆ?

ಷೈಲಾಕ್:- ಆ ದಿವಾಳಿ! ಅವನಿಂದ ಆ ದಂಡವನು ಕೊ
ಯ್ದು ತೆಗೆಯುವುದಕ್ಕಾಗಿ.

ಗ್ರ್ಯಾಷ್ಯಾನೊ:- ಹಾ, ಕ್ರೂರಿ ಯಹೂದಿಯನೆ,
ಆ ನಿನ್ನ ಚೂರಿಯನು ನಿನ್ನ ಅಂಗಾಲಿನಲಿ
ಅಲ್ಲ, ಆತ್ಮದೊಳಗಿಲ್ಲಿಗೆ ಮಸೆಯುತ್ತಿರುವೆ. ಆ
ದರಿದ್ರನು? ಅದಾವುದೇ ಲೋಹ, ವಧೆ- ಗಲ್ಲಿಗೆ
ಏರಿಸುವ ಕಟುಕನ ಕೊಡಲಿಯಲ್ಲಿ ನಿಜ ನಿನ್ನ
ವೈರ ಮತ್ತು ಮತ್ಸರದ ಹರಿತದ ತೀಕ್ಷ್ಣತೆಯ
ಅರ್ಧದಷ್ಟು ಕಾಣಿಸದು. ಯಾವ ಬೇಡಿಕೆಯು
ನಿನ್ನ ಹೃದಯವನ್ನು ಹೊಕ್ಕು ಕರಗಿಸದೆ?

ಷೈಲಾಕ್:- ಇಲ್ಲ, ನಿನ್ನಲ್ಲಿರುವ ಜ್ಞಾನವಾವುದೂ
ನಿನ್ನಲ್ಲಿ ಕ್ಷಿತಿಸದು,

ಗ್ರ್ಯಾಷ್ಯಾನೊ:- ಎಲಾ ಕಲ್ಲೆದೆಯ ಶ್ವಾನ!
ನೀನು ಹಾಳಾಗು. ನಿನ್ನ ಬದುಕು ಧರ್ಮವನೆ
ದೂಷಿಸುವುದು. ನಾನು ಈ ವರೆಗೆ ತಾಳಿದ್ದ ನಂ-
ಬಿಕೆಯನ್ನು ಬಿಟ್ಟು ವೇದಾಂತಿ ಆ ಪೈಥಾಗೋ-
ರೈಯನೊಡನೆ ಹೊಂದಿಕೊಳ್ಳುವಂತಾಗಿಸಿದೆ.
ಪ್ರಾಣಿಗಳ ಆತ್ಮವು ಮನುಜರೊಳು ಹೊಗುವುದೆಂ
ಬುದನು ನಿಜವೆಂದು ಕಾಣಿಸುವೆ, ಜನವ ಕೊಂ
ದುದಕಾಗಿ ನೇಣುಹಾಕಲ್ಪಟ್ಟೊಯ್ದ ತೋಳ
ನಲಿ ಇದ್ದಿತದೆ ನಿನ್ನ ನಾಯಿ ಹೋಲಿ ಜೀವ! ಅದು
ನೇಣುತೊಲೆಯಿಂದೊದರಿ ಹಾಯುತಲಿ ಕಡೆಗಂತು
ತೊನ್ನೆನಿಸಿದಾ ನಿನ್ನ ತಾಯ ಬಸಿರ ಹೊಗಲು ನೀನ್
ಉದಿಸಿದೆ. ಅದೆ ನಿನ್ನಲಿಹ ಕಾಗೆ ತೋಳಗಳ
ಹಸಿವು! ಕಾದು ಪೈಶಾಚ್ಯದ ಅಮಾನುಷತೆ- ಅದೆ
ರಕ್ತ ಪಿಪಾಸೆ!

ಷೈಲಾಕ್:- ಮತ್ತಿಷ್ಟು ಒರಲಿಕೆಯು ಹೊದಿನ್ನ! ಆ ಮುದ್ರೆಯನೆ ಕರಗಿಸು
ವಿಯೋ ಎಂಬವೊಲು ಅರಚುತಿಹೆ ಬಲ್ಲನಿಯುಂಟೆಂ
ತು. ಅದು ನಿನ್ನ ಶ್ವಾಸಕೋಶವನೆ ನೋಯಿಸುವುದು.
ಗುಣಶಾಲಿ ಯುವಕ ನಿನ್ನ ಬುದ್ಧಿಯನು ತಿದ್ದಿ ನಿಲ
ನಿಲಿಸದಿರೆ ಮುಂದಕದ ಸರಿಪಡಿಸಲಾರೆ. ಅಂ
ತಾದೊಡದೆ ಹಾನಿ! ಆನಿಲ್ಲಿ ನಿಂದಿರುವುದು ಬರೆ
ನ್ಯಾಯಕ್ಕೆ!

ಮಹಾಪ್ರಭು:- ಬೆಲ್ಲರಿಯೊ ಬರೆದ ಈ ಪತ್ರದಲಿ ಆತ ತರು
ತರುಣ ವಿದ್ವಾಂಸನನು ಶಿಫಾರಸು ಮಾಡಿ ಈ
ಈ ನ್ಯಾಯಾಲಕೆ ಕಳುಹಿಸಿದೆ. ಅವನೆಲ್ಲಿ?

ನೆರಿಸ್ಸ! — ಅವನನ್ನಿಲ್ಲಿಗೆ ಬರಮಾಡಲು ತಾವು ಒಪ್ಪುವಿರೋ ಎಂದು ತಮ್ಮ ಉತ್ತರಕ್ಕೆ ಅವನಿಲ್ಲಿಯೇ ಕಾದು ನಿಂತಿಹನು,

ಮಹಾಪ್ರಭು! — ಬಹು ಹಾರ್ದಿಕವಾಗಿ ಬರಮಾಡುವೆನು, ನೀವೀಗ ಮೂವರೋ ನಾಲ್ವರೋ ಅವನ ಬಳಿಗೆ ಹೋಗಿ ಆದರಪೂರ್ವಕವಾಗಿ ಅವನನ್ನು ಕರೆದುಕೊಂಡು ಬನ್ನಿ. ಅಷ್ಟರಲ್ಲಿ ಬೆಲ್ಲರಿಯೋನ ಪತ್ರವನ್ನು ನ್ಯಾಯಾಲಯವು ಆಲಿಸಲಿ!

ಕಾರಕೂನ :— (ಓದುವನು) "ತಮ್ಮ ನ್ಯಾಯಮೂರ್ತಿಗಳಿಗೆ ಅರಿಕೆ ಮಾಡಿಕೊಳ್ಳುವುದೇನೆಂದರೆ ತಮ್ಮ ನಿರೂಪವು ತಲುಪುವ ಈ ಸಮಯದಲ್ಲಿ ನಾನು ತುಂಬ ಅಸ್ವಸ್ಥನಾಗಿರುವೆನು. ಆದರೆ ನಿಮ್ಮ ದೂತನು ಬಂದಾಗಲೇ ರೋಮಿನಿಂದ ತರುಣ ವಿದ್ವಾಂಸನೊಬ್ಬನು ಅಭಿಮಾನಪೂರ್ವಕವಾಗಿ ನನ್ನನ್ನು ಕಾಣಲೆಂದು ಬಂದಿದ್ದನು, ಅವನ ಹೆಸರು ಬಲ್ತಾಸರ್ ಎಂದು! ಆ ಯೆಹೂದಿಯನ ಮತ್ತು ವರ್ತಕ ಆಂಟೋನಿಯೋ ಇವರೊಳಗಿರುವ ವ್ಯಾಜ್ಯವನ್ನು ಸಂಬಂಧವಾಗಿ ನಾನು ಅವನಿಗೆ ತಿಳಿಸಿದೆನು, ನಾವು ಕೂಡಿ ಹಲವು ದಾಖಲಾತಿಗಳನ್ನು ತಿರುವಿ ನೋಡಿದೆವು. ಆ ವಿಷಯದಲ್ಲಿ ನನ್ನ ಅಭಿಪ್ರಾಯವೇನೆಂದು ಅವನಿಗೆ ಗೊತ್ತಿದೆ, ಅವನು ತನ್ನದೇ ವಿದ್ವತ್ತಿನಿಂದ ಸಮರ್ಥನಾಗಿರುವನು. ಅದರ ಬಗ್ಗೆ ವಾದವಿವಾದಗಳು ಎಂತಾಗಬೇಕೆಂದು ಅವನಿಗೆ ಹೇಳಿರುವೆನು, ಹೀಗಾಗಿ ತಮ್ಮ ನ್ಯಾಯಾಸ್ಥಾನದ ಕೋರಿಕೆಯನ್ನು ಮನ್ನಿಸಿ ನನ್ನ ಬದಲಾಗಿ ಅವನು ಬರುವನು. ಅವನ ಜ್ಞಾನ ವೈಖರಿಯನ್ನು ಎಷ್ಟು ಹೇಳಿದರೂ ಸಾಲದು, ಅವನು ಬಾಲ್ಯವಯಸ್ಕನೆಂಬ ಕಾರಣದಿಂದ ಅವನಿಗೆ ಗೌರವಾದರಗಳನ್ನು ತೋರುವುದು ಕಡಿಮೆಯಾಗದಿರಲಿ, ಎಂದು ನ್ಯಾಯಮೂರ್ತಿಗಳನ್ನು ಬೇಡುತ್ತಿದ್ದೇನೆ; ಏಕೆಂದರೆ ಅಷ್ಟು ಎಳೆ ದೇಹದಲ್ಲಿ ಆ ಪ್ರಮಾಣದ ಮೇಧಾಶಕ್ತಿಯನ್ನು ಹೊತ್ತ ತಲೆಯನ್ನು ನಾನು ಕಂಡುದೇ ಇಲ್ಲ, ತಮ್ಮ ನ್ಯಾಯಾಲಯದ ಸ್ವೀಕಾರಕ್ಕೆ ನಾನು ಒಪ್ಪಿಸುವ ಅವನನ್ನು ಪರೀಕ್ಷೆ ಹಾಗೂ ಅವನ ಕೀರ್ತಿಯು ಇನ್ನೂ ವಿಖ್ಯಾತವಾಗುವುದು."

ಡಾಕ್ಟರ್ ಬೆಲ್ಲರಿಯೋ ಬರೆ

ಮಹಾಪ್ರಭು :— ಬರೆದುದನ್ನು ನೀವು ಕೇಳಿದಿರಿ. ಓಹೋ, ಇಲ್ಲಿ ಬರುವವರೇ ತರುಣ ಡಾಕ್ಟರೇ ಇರಬೇಕು.

(ಪೋರ್ಷಿಯಾಳು ವಕೀಲ ಉಡುಗೆಯಿಂದ ಪ್ರವೇಶಿಸುವಳು.) 108

ತಮ್ಮ ಕೈನೀಡಿ!
ಹಳೆಯ ಬೆಲ್ಲಾರಿಯೋ. ಇವರಲ್ಲಿಂದ ಬಂದಿರೋ?
ಪೋರ್ಷ್ಯ!- ಹೌದು, ಪ್ರಭುಗಳೇ.
ಮಹಾಪ್ರಭು!- ತಮಗೆ ಸ್ವಾಗತವಿದೆ,
ಪೀಠದಲಿ ಕುಳಿತುಕೊಳ್ಳಿರಿ. ಇದೀಗ ಈ ನ್ಯಾ
ಯಸ್ಥಾನದಲ್ಲಿ ಚರ್ಚೆಗೆ ಬಂದಿರುವ ವ್ಯಾ
ಜ್ಯವೇನೆಂದು ನಿಮಗೆ ತಿಳಿದಿದೆ,
ಪೋರ್ಷ್ಯ:- ಆ ವಿಷಯವಾಗಿ ನಾನು ಪೂರ್ತಿ ತಿಳಿದಿರುವೆನು,
ಇಲ್ಲಿ ವ್ಯಾಪಾರಿ ಯಾರು, ಯಹೂದಿಯನಾರು?
ಮಹಾಪ್ರಭು!- ಆಂಟೋನಿಯೋ, ಷೈಲಾಕ್- ಇಬ್ಬರೂ ಮುಂದೆ ನಿಲ್ಲಿ.
ಪೋರ್ಷ್ಯ:- ನಿಮ್ಮ ಹೆಸರು ಷೈಲಾಕ್ ಎಂದೋ?
ಷೈಲಾಕ್:- ಹೌದು, ಅದು ನನ್ನ ಹೆಸರು,
ಪೋರ್ಷ್ಯ:- ನೀವು ಅನುಸರಿಸುವ ವ್ಯಾಜ್ಯವಿದರ ರೀತಿಯು
ಬಹು ವಿಚಿತ್ರ. ಹಾಗಿದ್ದರೂ ವೆನ್ನಿಸ್‌ನ ಶಾ
ಸನಕ್ಕೆ ಅನುಸಾರವಾಗಿಯೇ ಇದು ಇರಲು ಕಾ
ನೂನು ನಿಮಗೆ ಅಹಿತವೆನಿಸಲ್ಲ.
(ಆಂಟೋನಿಯೋಗೆ) ನೀವು ಇವರ ಅಪಾಯದೊಳಗಡೆಗೆ
ಇರುವಿರಿ, ಅಲ್ಲವೇ?
ಆಂಟೋನಿಯೋ:- ಹೌದು, ಅವನು ಹಾಗನ್ನುತ್ತಾನೆ,
ಪೋರ್ಷ್ಯ:- ಆ ಕರಾರಿಗೆ ನೀವು ಒಪ್ಪುವಿರೋ?
ಆಂಟೋನಿಯೋ:- ಒಪ್ಪುತ್ತೇನೆ,
ಪೋರ್ಷ್ಯ:- ಹಾಗಾದರೆ ಯಹೂದಿಯನು ಬಹು ದಯಾಳು
ಆಯಲೇ ಆಗಬೇಕು.
ಷೈಲಾಕ್:- ನಾನು ದಯೆ ತೋರಿಸಲೇಬೇಕೆಂಬ ಕಾನೂನು
ಇದೆಯೆ? ನನಗದನ್ನು ಹೇಳಿ.
ಪೋರ್ಷ್ಯ:- ಕರುಣೆ- ಅದರ ಗುಣವು ಬಲವಂತವಲ್ಲ. ಕೆಳ
ಗಿರುವ ನೆಲಕ್ಕೆ ತನಿವುಳ್ಳಿಯೊಲದು ಬೀಸುಗುವುದು.
ಬಾನಿಂದ! ಅದು ಎರಡು ಬಗೆಯಲ್ಲಿ ಧನ್ಯ. ಕೊಡು
ವವನಿಗು ಕೃತಜ್ಞತೆಯಿಂ ಕೊಂಬುವನಿ
ಗೂ ಹಿತವು. ಶೂರತನಕ್ಕೂ ಮೀರಿದಾ ಶೂರ
ತನವು ಅದು. ಸಿಂಹಾಸನದಲಿರುವ ಅರಸರಿಗ
ಳಿಗೆ ಮುಕುಟವನ್ನೂ ಇದು ಮೀರಿಹುದು, ರಾಜದಂ
ಡಗಳು ಬರೀ ಕ್ಷಣಿಕವಹ ಅಧಿಕಾರ ಸಂಕೇತ;
ಭೀಷಣತೆ ವೈಭವಾದಿಗಳ ಕುರುಹು. ಅವುಗಳ

ಲಿ ಇವೆ. ರಾಜರನು ಕುರಿತಾಯುಹ ಭಯಭೀತಿಗಳು
ಅವುಗಳಲ್ಲಿವೆ. ಆದರೆ ಕರುಣೆಯು ರಾಜದಂ
ಡದ ಪ್ರಾಬಲ್ಯವನೆ ಮೀರಿಸುತ್ತದು, ರಾಜವರ
ರ ಹೃಸ್ಸನಗಳಲಿ ಮಿಡಿಯುವುದಾ ಘರ್ಜನೆಯು.
ದೈವವೊಂದೊಡೆದ ಕರುಣೆ, ದಯೆ; ಯಾವ ರಾ
ಜನೀತಿಯಲ್ಲಿ ಕೃಪೆಯು ಬಲಿಷ್ಠವಹುದು. ಇದನೆ
ಅದು ತಾಂಡವವಾಡುವ ಅನಿದ್ದಿವ ಶಕ್ತಿಯೊಳು
ಕೊಳ್ಳುವುದು, ಆ ಕಾರಣದಿಂದ ಯಹೂದಿಯನೆ,
ನೀನು ಖಾನೂನಿಗೆಯೆ ಹಾತೊರೆಯುವಿಯೆ. ಆದ
ರೂ ಗಮನಿಸು, ಖಾನೂನನೆ ನಿತ್ಯವೂ ನೆಚ್ಚಿ
ದರೆ ನಾವು ಯಾರೂ ಸದ್ಗತಿಯನ್ನು ಪಡೆಯೆವು, ದ
ಯಾಗುತ್ತಾವೆ ಎಂಲು, ಅದನೆ ಬೇಡುವೆವು. ಆ ಬೇ
ಡಿಕೆಯೆ ನಾವೆಲ್ಲರಿಗು ಕರುಣೆಯಲಿ ಕಾರ್ಯವನು
ಕೈಗೊಳ್ಳಲು ಕಲಿಸುವುದು. ಸರಿ, ನ್ಯಾಯವನೆ ಇ
ಚ್ಛಿಸುವ ನಿನ್ನ ವಾದವನು ಮೃದುವಾಗಿಸಲೆಂದು
ಇಷ್ಟು ಹೇಳಿದೆನಾದರೂ ನೀನದೇ ವಾದ
ವನ್ನು ಮುಂದೊತ್ತಿದರೆ ಅಕೋ ಅಲ್ಲಿ ನಿಂತಿರುವ
ವರ್ತಕನಿಗೆ ವಿರುದ್ಧ ತೀರ್ಪನ್ನು ಕೊಡಲೇಬೇ
ಕಾಗುವುದು,

ಷೈಲಾಕ್:- ನಾನು ಮಾಡಿದ ಪಾಪ ನನ್ನ ತಲೆಮೇಲಿರಲಿ.
ನಾನೀಗ ಬೇಡುವುದು ಆ ನ್ಯಾಯವನ್ನು; ದಂ
ಡವದ ಸಲ್ಲಿಸಲಿ ಎಂದು!

ಪೋರ್ಷ್ಯ:- ಸಾಲ ಮರುಪಾವತಿಸಲು ಅವನಿಂದ ಆಗದೇ?

ಬಸ್ಸಾನ್ಯೋ:- ಆಗುವುದು ಅದನೆ ಆನ್
ನ್ಯಾಯಾಲಯದಲ್ಲಿಯೆ ಒಪ್ಪಿಸುವೆ. ಅದರ ಮೂ
ರರಷ್ಟು, ಅದು ಸಾಲದೆಯೆಂದಾದರೆ, ಹೌದು, ಅ
ದರ ಹತ್ತರಷ್ಟು, ಸಲ್ಲಿಸಲು ನಾನು ಹೊಣೆಯಾ
ಗುವೆನು. ದಂಡವದರೆನ್ನ ಕೈಗಳೊಡೆ ನನ್ನ ತ
ಲೆ ನನ್ನ ಎದೆ ಕೇಳ್ ಅದುವು ಸಾಲದಿರೆ ಮತ್ಸರ
ದಿಂದ ಸತ್ಯದ ಪದರಿಯು ಆಗುವಂತಾಗುವುದ
ನೋಡಬೇಕಷ್ಟೆ. ನಿಮ್ಮ ಸಲುವಾಗಿ ಶಾಸನವ ಬೇಡು
ತ್ತಿಹೆನು. ನಿಮ್ಮ ಅಧಿಕಾರದೊಡನೆ ಬಳಸಿಕೊಳ್ಳುತ್ತ
ಲಾ ಅಲ್ಪ ತಪ್ಪನೆಸಗಿ ಧರ್ಮವನು ನೆಲೆಗೊಳಿಸಿ
ಪೈಶಾಚ್ಯದೀ ಕ್ರೂರ ನೀತಿ ಸಂಕಲ್ಪವದ
ಕತ್ತರಿಸಿರಿ!

ಪೋರ್ಷಿಯ :- ಆದಾಗದು. ನಿರ್ದಿಷ್ಟ ಶಾಸನವನ್ನು ಮಾರ್ಪಡಿ
ಸಲಧಿಕಾರ ವೆನ್ನಿಸ್ಸಿನ ಶಾಸನದಲ್ಲಿಲ್ಲ.
ಅಂತೇನಾದರೆ ಅದೊಂದು ಪೂರ್ವಾಚಾರವೆಂ
ಬ ದಾಖಲೆಗೆ ಒಳಗಾಗುತ್ತದೆ. ಅಂತಾದರೆ
ರಾಜ್ಯನೀತಿಯಲ್ಲಿ ದೋಷಗಳುಂಟಾಗುವುವು. ಆ
ದುದರಿಂದ ಆದಾಗದು!

ಷೈಲಾಕ್ :- ಆಹಾ, ನ್ಯಾಯಮೂರ್ತಿ ಡ್ಯಾನಿಯಲ್, ನಿಷ್ಪಕ್ಷ
ಪಾತಿಯಾದ ನ್ಯಾಯಸಾಧಕನು, ಹೋ ಡ್ಯಾನಿಯಲ್,
ಪ್ರಾಜ್ಞ ತರುಣನಾದ ನ್ಯಾಯವಾದಿಯೆ, ಆಹಾ ನಿ
ನ್ನನ್ನೆಂತು ಗೌರವಿಸಲಿ!

ಪೋರ್ಷಿಯ :- ಆ ಕರಾರನ್ನು ದಯಮಾಡಿ ಕೊಡಿ. ಅದನ್ನೊ
ಮ್ಮೆ ನೋಡುವೆನು,

ಷೈಲಾಕ್ :- ಅತಿ ಪೂಜ್ಯ ವಿದ್ವಾಂಸನೆ, ಇದೋ ಕರಾರು ಇ
ಲ್ಲಿದೆ, ಇಲ್ಲಿ!

ಪೋರ್ಷಿಯ :- ಷೈಲಾಕನೆ, ನಿನಗೆ ಮೂರರಷ್ಟು ಹಣದ ಮೊಬಲಗು
ಪಾಲಿಷ್ಟು ಕೊಟ್ಟು ನಿನಗೆ ಕೊಡುವರು,

ಷೈಲಾಕ್ :- ಆಣೆ ಆಣೆ, ನನ್ನಾಣೆ, ದೇವರಿಗೆ ಆಣೆಮಾ
ಡಿರುವೆ, ನನ್ನ ಪ್ರತಿಜ್ಞೆಯನ್ನು ನಡೆಸದ ಪಾಪ
ವನ್ನು ನಾನೇ ನನ್ನ ಆತ್ಮದಲ್ಲಿ ಹೇರಲೇ?
ಇಲ್ಲ, ವೆನ್ನಿಸ್ ನಗರದ ಗೌರವಕ್ಕಾದರೂ
ನಾನು ಅಂತೇನಾಗೆನು,

ಪೋರ್ಷಿಯ :- ವಃ, ಸರಿ ಈ ಕರಾರನ್ನು ಪಾಲಿಸಲೇ ಇಲ್ಲ. ಶಾ
ಸನದ ಪ್ರಕಾರ ಈ ಯಹೂದಿಯನಿಗೆ ವ
ರ್ತಕನ ಎದೆ ಸಮೀಪದ ಒಂದು ಸೇರು ಮಾಂಸವ
ನ್ನು ಕೊಯ್ದು ತೆಗೆದುಕೊಳ್ಳುವ ಹಕ್ಕಿದೆ. ಹೋಗಲಿ, ಅ
ವನಲ್ಲಿ ಕರುಣೆಯಿಡು, ತೆಗೆದುಕೊ ನೀನಿತ್ತ ಹಣ
ದ ಮೂರರಷ್ಟು. ಈ ದಾಖಲಾತಿಯನ್ನು ಹರಿಯಲು
ನನಗೆ ಅನುಮತಿ ಕೊಡು.

ಷೈಲಾಕ್ :- ಹಣವನ್ನು ನಮ್ಮ ಒಪ್ಪಂದದನುಸಾರವಾಗಿ ಕೊ
ಟ್ಟಾಗ ನೀವು ಹಾಗೆಯೇ ಮಾಡಬಹುದು. ನೀವು ಒ
ಳ್ಳೆ ಸಮರ್ಥರಾದ ನ್ಯಾಯಾಧೀಶರು ಎಂದು ನಮಗೆ ತಿಳಿ
ದಿದೆ. ನೀವು ಶಾಸನವನ್ನು ಬಲ್ಲವರು, ನಿಮ್ಮ ವಿವ
ರಣೆಯಂತೂ ಸಮರ್ಪಕವಿದೆ. ನ್ಯಾಯ ಶಾಸ್ತ್ರಕ್ಕೆ
ನೀವು ನಿಜವಾಗಿಯೂ ಆಧಾರವಾದ ಸ್ತಂಭ
ವೆಂದೆನ್ನುವೆನು, ಈಗ ತೀರ್ಪನ್ನು ಕೊಡಿ. ನನ್ನ

ಆತ್ಮದೊಡೆಯನ ಆಣೆಯನ್ನಿಡುವೆ. ಮಾನವನ
ಜಿಹ್ವೆಯಲಿ ನನ್ನೀ ನಿರ್ಧಾರವನ್ನು ಬದ
ಲಿಸಲು ಸಾಧ್ಯವಿಲ್ಲ. ಕರಾರು ಇದನಪ್ಪುತಲಿ
ಆನಿಲ್ಲಿ ನಿಂತಿಹೆನು.

ಅಂಟೋನಿಯೋ:— ತೀರ್ಪನು ನೀಡಿರಿಯೆಂದು ಈ ನ್ಯಾಯಮೂರ್ತಿಯನು
ಹೃತ್ಪೂರ್ವಕವಾಗಿಯೆ ಕೇಳಿಕೊಳ್ಳುತಿರುವೆನು,

ಪೋರ್ಶಿಯ:— ಹಾಗಾದರೆ ಮತ್ತೇನು? ಅದು ಇಂತಿದೆ. ನೀನು
ನಿನ್ನ ಎದೆಯನ್ನು ಆವನ ಚೂರಿಗೆ ಕೊಡಬೇಕು.

ಶೈಲಾಕ್:— ಆಹಾ ಶ್ರೇಷ್ಠ ನ್ಯಾಯಮೂರ್ತಿಯೆ,
ಅತಿ ಜ್ಞಾನಿ ತರುಣಾ!

ಪೋರ್ಶಿಯ:— ಏಕೆಂದರೆ ಇಲ್ಲಿ ನಮೂದಿಸಿದ
ರೀತಿಯಲಿ ದಂಡವನು ಆವನು ತೆರಲೇಬೇಕು.
ಒಪ್ಪಂದದ ಉದ್ದೇಶವೇ ಅದು; ನ್ಯಾಯಕೆ ಸ
ಮ್ಮತವಾಗಿಯೂ ಇದೆ.

ಶೈಲಾಕ್:— ಅದು ಖಂಡಿತ ನಿಜ. ಎಲೈ ಪ್ರಾಜ್ಞನೆ,
ಬಹು ಚಿಕ್ಕತನದ ಶಾಸಕನೆ, ನಿಮ್ಮ ತಾರು
ಣ್ಯದ ಹೊರಮೈಗಿಂತಲು ನೀವು ಬಹಳಷ್ಟು ಹಿರಿ
ಯರಿರುವಿರೋ ಮಗನೇ!

ಪೋರ್ಶಿಯ:— ನಿನ್ನ ಎದೆಯನ್ನು ಅದರಂತೆ ತೆರೆದಿಡು,

ಶೈಲಾಕ್:— ಹೌದು, ಆವನ ಎದೆ. ದಿಟ, ಕರಾರಿನಲಿ ಅದನ್ನೇ
ಹೇಳಿರುವುದು, ಅಲ್ಲವೆ? ಸನ್ಮಾನ್ಯನಾದ ನ್ಯಾ
ಯಮೂರ್ತಿಯೆ, ಎದೆಗುಂಡಿಗೆಯ ಸಮೀಪವೆಂದೇ
ಬರೆದಿರುವುದು; ಅಕ್ಷರಶಃ ಅದೇ ಶಬ್ದಗಳು.

ಪೋರ್ಶಿಯ:— ಅದಂತೂ ಸರಿ. ಮಾಂಸವನು ತೂಗಲು ತ್ರಾಸು
ಇದೆಯೇ ಇಲ್ಲಿ?

ಶೈಲಾಕ್:— ಅದು ನನ್ನಲ್ಲಿ ಸಿದ್ಧವಿದೆ.

ಪೋರ್ಶಿಯ:— ಎಲೈ ಶೈಲಾಕ್, ನಿನ್ನ ವೆಚ್ಚದಲಿ ಒಬ್ಬ ಶ
ಸ್ತ್ರವೈದ್ಯನಾ ಗಾಯವನು ತಡೆಯುವಂತೆ ಇರಿ
ಸಿಕೊ. ಇಲ್ಲದೊಡೆ ರಕ್ತಸ್ರಾವವತಿಯಾಗಿ
ಆವನು ಸಾಯಲೂಬಹುದು,

ಶೈಲಾಕ್:— ಕರಾರಿನಲ್ಲಿ ಹಾಗೆ ಹೇಳಿದೆಯೇ?

ಪೋರ್ಶಿಯ:— ವಿಶದವಾಗಿ ಹಾಗನ್ನಲಿಲ್ಲ ಅದರಿಂದೇ
ನು. ಔದಾರ್ಯಕ್ಕೆಂದಾದರೂ ನೀನು ಅಂತೆಸ
ಗುವುದು ಒಳ್ಳೆಯದು,

ಶೈಲಾಕ್:— ಹಾಗೆ ಇಲ್ಲಿ ಕಾಣುವುದಿಲ್ಲ; ಆ ರೀತಿ ನ
ಮ್ಮ ಒಪ್ಪಂದವಿಲ್ಲ.

ಪೋರ್ಷಿಯ:— ಅಯ್ಯಾ, ಬಣಜಿಗನೆ, ನಿನಗೇನಾದರೂ ಹೇಳಲಿಕ್ಕಿದೆಯೇ?

ಅಂತೋನಿಯೋ:— ಹೆಚ್ಚೇನೂ ಇಲ್ಲ. ನಾನು ಅಗಲಲು ನಿರ್ಧರಿಸಿ ಸಿದ್ಧನಿರುವೆ. ಬಸ್ಸಾನಿಯೋ, ನಿನ್ನ ಕೈ ನೀಡು. ನಿನಗೆ ಶುಭವಾಗಲಿ. ನಿನಗಾಗಿ ಗತಿಯುಂಟಾಯಿತು ನನಗೆಂದು ಬೇಸರಿಸಬೇಡ. ಭಾಗ್ಯಲಕ್ಷ್ಮಿಯು ಇಂತಿರಲು ಎಲ್ಲರಿಂದಿಗಿಂತ ಮಿಗಿಲಾಗಿ ಕರುಣೆಯನ್ನು ತೋರಿಸುವವಳು, ತನ್ನ ಧನಕನಕಗಳನ್ನು ಕಳೆದು ದುರ್ದೈವಿ ಮಾನವನನ್ನು ಕುಳಿಗಣ್ಣಿನಿಂದ ಸುಕ್ಕುಮೊಗದೊಡನೆಯೇ ದಾರಿದ್ರ್ಯದ ಮುದಿತನವ ಕಳೆಯುವಂತೆ ವಿಧಿಸುವವಳು. ಈ ದುರಂತದ ಜೀವನದಿಂದವಳು ನನ್ನನು ಪಾರಾಗಿಸುವವಳು. ಸನ್ಮಾನ್ಯಳೆನಿಸಿದ ನಿನ್ನ ಪತ್ನಿಗೆ ನನ್ನ ಆದರವನ್ನರುಹು; ಮತ್ತೆ ಅಂತೋನಿಯೋನ ಕಡೆದಿನದ ವಿವರವನು ಅವಳಿಗೆ ಹೇಳು. ಆ ನಿಷ್ಠೆ ಅಭಿಮಾನದಲಿ ನಿನ್ನನ್ನು ಕಂಡಿದ್ದೆನೆಂಬುದನು ತಿಳಿಸು. ವೃತ್ತಾಂತ ನಾದನ್ನು ತೀರ್ಪುಗಾರ್ತಿಯಾಗಿ ಕುಳ್ಳಿದ್ದನೆ ಹೇಳು. ಅದೆಲ್ಲವನ್ನು ಕೇಳಿದನಂತರ ಒಲವಿನ ಮಿತ್ರನು ಬಸ್ಸಾನಿಯೋಗೆ ಒರ್ವನು ಇದ್ದನೆಂದೂ ಹೇಳು. ನನ್ನ ಪ್ರೀತಿಯು ಎಷ್ಟಿತ್ತೆಂಬುದನ್ನು ಅವಳೇ ಒಬ್ಬ ನ್ಯಾಯಮೂರ್ತಿಯಂತೆ ತೀರ್ಪನ್ನು ಕೊಡಲು ಹೇಳು. ಗೆಳೆಯನನು ಕಳೆದುಕೊಳ್ಳುವೆನೆಂದು ದುಃಖಿಸದಿರು. ನಿನ್ನ ಸಾಲದ ಬಗ್ಗೆ ಅವನು ದುಃಖಿಸುತ್ತಿಲ್ಲ. ಬಹುಶಃ ಯಹೂದಿಯನು ನನ್ನನಿರಿಯಲು ಆ ಚೂರಿಯನ್ನು ಬಹು ಆಳ ಹೋಗುವವರೆಗೂ ಇರಿದೊಡೆಯು ಆ ನನ್ನ ಋಣವ ತೀರ್ವುದರಲಿ ಹೃತ್ಪೂರ್ವಕವಾಗಿಯೇ ಸಲ್ಲಿಸುವೆ!

ಬಸ್ಸಾನಿಯೋ:— ಅಂತೋನಿಯೋ, ನನ್ನ ಬದುಕು ನನಗೆ ಎಷ್ಟು ಪ್ರಿಯವೋ ಅಷ್ಟೇ ಪ್ರಿಯಳೆನಿಸಿದ ಸತಿಗೆ ಆನ್ ಮದುವೆಯಾಗಿಹೆನು. ಆದರೆ ನನ್ನ ಈ ಜೀವ, ನನ್ನ ಹೆಂಡತಿ, ಈ ಜಗತ್ತು, ಸರ್ವವೂ ನನಗೆ ನಿನ್ನ ಜೀವಕಿಂತ ಗಣ್ಯವಾದುದೇನಲ್ಲ! ಅವುಗಳನೆಲ್ಲ ಮತ್ತು ಸರ್ವವನು ನಿನ್ನನ್ನು ಬಿಡಿಸಿಕೊಳ್ಳಲೆಂದೇ ಇಲ್ಲಿರುವ ಈ ದೆವ್ವಕ್ಕೆ ಬಲಿಯಾಗಿ ಒಪ್ಪಿಸಿಯೇನು.

ಪೋರ್ಷಿಯ:— ನಿನ್ನ ಹೆಂಡತಿಯು ಇಲ್ಲಿ ಇದ್ದಿದ್ದರೆ ನೀನು
ಹೇಳುತ್ತಿರುವುದಕ್ಕೆ ಅವಳು ನಿನಗೆ ಅಷ್ಟೇನೂ ಕೃ
ತಜ್ಞಳಾಗಿರಳು.

ಗ್ರ್ಯಾಷಿಯಾನೊ:— ನನಗೊಬ್ಬ ಹೆಂಡತಿಯು ಇರುವಳು. ಅದೇನೆಂದ
ರೂ ಆಕೆಯನ್ನು ಪ್ರೀತಿಸುವೆನು. ಅವಳು ಸ್ವ
ರ್ಗದಲ್ಲಿ ಇದ್ದಿದ್ದರೆ ಹಿತವಿತ್ತೆನ್ನುವೆನು! ಏ
ಕೆಂದರೆ ಅವಳು ಅಲ್ಲಿ ಅದೇನಾದರೂ ಒಂ
ದು ಶಕ್ತಿಯನ್ನು ಬೇಡಿ ಈ ಕ್ರೂರನಾದ ಯಹೂದಿ
ಯನ್ನು ಬದಲಿಸಬಹುದೆಂದು ಹಿತವೆಂದೆನುವೆ.

ನೆರಿಸ್ಸ:— ಅವಳಿಲ್ಲಿ ಇಲ್ಲದಿರಲು ನಿನ್ನ
ಇಷ್ಟವನ್ನು ಹೇಳಿದುದು ಹಿತವೆ! ಅಂತಿಲ್ಲದಿರೆ
ಕಲಹದಾಗರವಾಗುತ್ತಿತ್ತು ನಿನ್ನ ಆ ಬೀಡು.

ಷೈಲಾಕ್:— (ಸ್ವಗತ) ಕ್ರೈಸ್ತ ಗಂಡಂದಿರಿವರೆ!
ನನಗೊಬ್ಬ ಮಗಳಿರುವಳು. ಅವಳಿಗೊಬ್ಬ ಕ್ರೈಸ್ತ
ನನ್ನು ಬದಲು ಬಾರಬ್ಬಸನ ಜಾತಿಯು ಒಬ್ಬನನ್ನು
ಮದುವೆಯಾಗಿದ್ದರೂ ಒಳ್ಳೆಯದಿತ್ತು. ವ್ಯರ್ಥ
ಕಾಲಹರಣವಿದು. ತೀರ್ಪನ್ನು ತೀವ್ರದಿ ಹೇ
ಳಿರೆಂದು ಬೇಡುವೆನು.

ಪೋರ್ಷಿಯ:— ಅಲ್ಲಿರುವ, ಆ ವ್ಯಾಪಾರಿಯ ಒಂದು ಸೇ
ರು ಮಾಂಸವು ನಿನ್ನದು, ನ್ಯಾಯಾಲಯವು ನಿನಗೆ
ಅದನ್ನು ಸಲ್ಲಿಸಿರುವುದು, ಕಾನೂನು ಅದನ್ನಿ
ತ್ತಿಹುದು!

ಷೈಲಾಕ್:— ಬಹು ಸತ್ಯನಿಷ್ಠನಾದ ನ್ಯಾಯಮೂರ್ತಿಯೆ!

ಪೋರ್ಷಿಯ:— ನೀನು ಅವನ ಎದೆಯ ಸಮೀಪದಿಂದದನ್ನು ಇರಿ
ದು ತೆಗೆದುಕೋ. ಕಾನೂನು ಅದನೊಪ್ಪಿದೆ. ನ್ಯಾಯ
ಸ್ಥಾನವು ಅದನ್ನು ನೀಡುತ್ತಿದೆ.

ಷೈಲಾಕ್:— ಅತಿ ಪ್ರಾಜ್ಞನಾದ ನ್ಯಾಯಮೂರ್ತಿಯೆ!
ಇದು ತೀರ್ಪು! ಇತ್ತ ಬಾ! ಸಿದ್ಧನಾಗು!

ಪೋರ್ಷಿಯ:— ಸ್ವಲ್ಪ ತಡೆ; ಮತ್ತೊಂದು ವಿಷಯವಿದೆ. ಈ ಕರಾ
ರು ನಿನಗೊಂದೇ ಒಂದು ಹನಿ ನೆತ್ತರನ್ನು ಕೊ
ಟ್ಟಿಲ್ಲ. ಇದರಲ್ಲಿ "ಒಂದು ಸೇರು ಅಡಗು" ಎಂದು
ಮಾತ್ರ ವ್ಯಕ್ತಗೊಳಿಸಿದೆ. ಹಾಗಿರಲು ಅದಕ್ಕೆ ತ
ಕ್ಕಂತೆ ತೆಗೆಕೋ. ನಿನ್ನ ಆ ಒಂದು ಸೇರು ಅಡಗ
ನ್ನು ಕೊಯ್ದು ತೆಗೆಯುವಾಗ ನೀನು ಆ ಕ್ರೈಸ್ತರ
ಕ್ತದ ಒಂದೇ ಒಂದು ಹನಿಯನ್ನು ಸುರಿಸಿದರೆ ನಿ

ನ್ನ ಭೂಮಿಯೂ ಸರ್ವ ಸಂಪತ್ತು ಆಸ್ತಿಗಳೂ ವೆನ್ನಿಸ್‌
ನ ಶಾಸನದ ಪ್ರಕಾರ ರಾಜ್ಯವಶವಾಗುವುವು.

ಗ್ರಾಷ್ಯಾನೊ! — ಓ! ದಿಟ್ಟತನದ ನ್ಯಾಯಾಧಿಕಾರಿಯೆ, —
ಎಲೆ ಪ್ರಾಜ್ಞ ನ್ಯಾಯಮೂರ್ತಿ! ಯೆಹೂದಿಯೆ ಕೇಳು.

ಷೈಲಾಕ್! — ಶಾಸನವು ಹಾಗಿದೆಯೆ?

ಪೋರ್ಷ್ಯ! — ಶಾಸನವ ನಿಂತಿರುವುದನ್ನು ನೀನೆ ನೋಡುತ್ತ. ಬಾ
ನೂನೆ ಒತ್ತಾಯದಿಂದ ಕೇಳುವ ನಿನಗೆ ಅದು ನಿಶ್ಚ
ಯವಾಗಿ ದೊರಕುವುದು, ನ್ಯಾಯ ನೀನಿಚ್ಛಿಸುವು
ದಕ್ಕಿಂತ ಹೆಚ್ಚಾಗಿ ದೊರೆಯುವುದು.

ಗ್ರಾಷ್ಯಾನೊ! — ಆ, ಪ್ರಾಜ್ಞನಾದ ನ್ಯಾಯಾಧೀಶನೆ!
ಯೆಹೂದಿಯನ್ನೆ — ಗಮನಿಸು! ಮೇಧಾವಿ ನ್ಯಾಯ
ಮೂರ್ತಿ ಇವನು!!

ಷೈಲಾಕ್! — ನೀವು ಒಪ್ಪಿದುದನ್ನು, ಆ ಸಾಲದ ಮೂರರಷ್ಟು
ಹಣವನ್ನು ಕೊಡಿ, ತೆಗೆದುಕೊಳ್ಳುವೆನು. ಆ ಕ್ರೈ
ಸ್ತನು ಹೋಗಲಿ, ಬಿಡಿ!

ಬಸ್ಸಾನ್ಯೊ! — ಹಣ ಇಲ್ಲಿಯೇ ಇದೆ.

ಪೋರ್ಷ್ಯ! — ತಡೆಯಿರಿ!
ಯೆಹೂದಿಯನಿಗೆ ನ್ಯಾಯವು ಪೂರ್ತಿ ಸಲ್ಲಲಿ! ತ
ಡೆಯಿರಿ! ದುಡುಕದಿರಿ! ಅವನ ದಂಡವಲ್ಲದೆ
ಬೇರೇನೂ ಅವನಿಗೆ ದೊರಕದು.

ಗ್ರಾಷ್ಯಾನೊ: — ಯೆಹೂದಿಯನೆ, ದಿಟ್ಟತನದ ನ್ಯಾಯಮೂರ್ತಿ! ಆ
ಹಾ, ಶ್ರೇಷ್ಠ ಮೇಧಾವಿ ನ್ಯಾಯವಾದಿ!

ಪೋರ್ಷ್ಯ! — ಖಾನೂನು ಅಂತಿರಲು ಅದಿಗವನು ಕತ್ತರಿಸುವು
ದಕ್ಕೆ ಸಿದ್ಧನಾಗು. ರಕ್ತವನು ಸುರಿಸದಿರು. ಸರಿ,
ಒಂದು ಸೇರು ಮಾಂಸವನೆ ತೆಗೆ. ಒಂದಿಷ್ಟು ಕಡಿ
ಮೆ ಅಥವಾ ಒಂದು ಕೂದಲಿಷ್ಟು ಹೆಚ್ಚಾಗಿ ಬಾ
ರದು. ಸರಿ ಒಂದು ಸೇರು ಮಾಂಸವದು ಮಾತ್ರವೆ!
ತೂಕದಲ್ಲಿ ಕಿರಿ ತೊಲದ ಒಂದರಿಪ್ಪತ್ತರಲ್ಲಿ
ಒಂದು ಪಾಲು ಹೆಚ್ಚು ಅಥವಾ ಹಗುರವಾದರೆ,
ತ್ರಾಸವದು ಕೂದಲಿನ ಒಂದು ಎಳೆಯಷ್ಟು ತ
ಪ್ಪಿದರೆ ನೀನ್ ಸಾಯುವುದಲ್ಲದೆ ನಿನ್ನ ಆಸ್ತಿ ಸ
ರ್ವವೂ ರಾಜವಶವಾಗುವುದು.

ಗ್ರಾಷ್ಯಾನೊ! — ಒಬ್ಬ ಎರಡನೇ ದಾನಿಯೇಲನು; ಯೆಹೂದಿಯನೆ,
ಇವನು ದಾನಿಯೇಲನು. ಎಲಾ ವಿಧರ್ಮಿ, ನೀನು
ಈಗ ನನ್ನ ಕೈಸೆರೆಯಾದೆ!

ಪೋರ್ಷ್ಯ!- ಯೆಹೂದಿಯನೇಕೆ ಮೌನವಾದನು? ನಿನ್ನ ದಂಡವನ್ನು ತೆಗೆದುಕೋ.

ಷೈಲಾಕ್!- ನನ್ನ ಮೂಲ ಧನ ಕೊಡಿಸಿ. ನನ್ನನು ಇಲ್ಲಿಂದ ಹೋಗಲು ಬಿಡಿ.

ಬಸ್ಸಾನಿಯೋ!- ಅದು ಇಲ್ಲಿ ಇದೆ, ಇಕೋ ನಿನಗಾಗಿ ಅದನ್ನು ಸಿದ್ಧವಾಗಿಟ್ಟಿದ್ದೇನೆ. ಅದು ಇಲ್ಲಿದೆ.

ಪೋರ್ಷ್ಯ!- ನ್ಯಾಯಾಲಯದಲ್ಲಿ ಅವನು ಎಲ್ಲರ ಮುಂದೆ ಅದನ್ನು ಬೇಡವೆಂದು ತಿರಸ್ಕರಿಸಿರುವನು. ಅವನು ನ್ಯಾಯವನ್ನು ಮತ್ತು ಅವನ ಕರಾರಿನ ಪ್ರಕಾರ ದಂಡವನ್ನು ಮಾತ್ರ ಪಡೆಯಬಹುದು,

ಗ್ರಾಷ್ಯಾನೋ!- ಇವನು ಡ್ಯಾನಿಯೆಲನೆಂದೆ ಇನ್ನೂ ಹೇಳುವೆನು, ಇವನು ಎರಡನೆ ಡ್ಯಾನಿಯೆಲನು. ಯೆಹೂದಿಯನೆ, ಈ ಪದವನ್ನು ನನಗರುಹಿದಕೆ ನಿನಗೆ ವಂದಿಸುವೆ.

ಷೈಲಾಕ್:- ನನ್ನ ಮೂಲಧನ ಮಾತ್ರವೇ ನನಗೆ ದೊರೆಯದೆ?

ಪೋರ್ಷ್ಯ:- ಯೆಹೂದಿಯನೆ, ನಿನಗೇನೂ ದೊರೆಯದು. ನೀನು ಪ್ರಾಣಾಪಾಯವನ್ನರಿಯದೆ ವಿಧಿಸಿಕೊಂಡ ಆ ದಂಡವದು ಮಾತ್ರ!

ಷೈಲಾಕ್!- ಏಕೆ? ಅಂತಾದರೆ ಸೈತಾನನು ಅವನಿಗದರ ಹಿತವನ್ನೀಯಲಿ. ಇದೋ ಇನ್ನಿಲ್ಲಿ ಇನ್ನು ಪ್ರಶ್ನೋತ್ತರಗಳಿಗೊಳಗಾಗಲಾರೆ!

ಪೋರ್ಷ್ಯ!- ಯೆಹೂದಿಯನೆ ನಿಲ್ಲು!
ಕಾನೂನು ನಿನ್ನ ಮೇಲೆ ಇನ್ನೂ ಒಂದು ತಡೆಯನ್ನಿತ್ತಿದೆ. ವೆನ್ನಿಸಿನ ಶಾಸನಗಳೇನೆನುತವೆಯೆಂದರೆ ಒಬ್ಬ ವಿದೇಶೀಯನು ಪ್ರತ್ಯಕ್ಷವಾಗಲಿ ಪರೋಕ್ಷವೇ ಇರಲಿ, ಯಾವುದೇ ದೇಶೀಯನ ಜೀವವನ್ನು ತೆಗೆಯಲು ಯತ್ನಿಸಿದುದು ಸಾಕ್ಷ್ಯಪ್ರಮಾಣವಾಗಿ ನ್ಯಾಯಾಲಯದಲ್ಲಿ ರುಜುವಾತುಪಡಿಸಿದರೆ ಆಪಾಯಕೀಡಾದ ಧಯಾರ್ಥದಿ ತನ್ನ ಪ್ರತಿವಾದಿಯು ಆಸ್ತಿಯಲ್ಲಿ ಅರ್ಧವನ್ನು ತನಗೆ ಇನ್ನೊಂದು ಅರ್ಧವನ್ನು ರಾಜ್ಯದ ಬೊಕ್ಕಸಕ್ಕೂ ಕೊಡುವುದು. ಅಲ್ಲದೆ ಅಪರಾಧಿಯ ಜೀವವು ಇತರ ಎಲ್ಲ ವಾದಪ್ರತಿವಾದಗಳನಂತರ ಮಹಾಪ್ರಭುವಿನ ಕೈಯಲ್ಲಿ ಇರುವುದು. ನೀನು ಈಗ ಅಂಥ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿರುವೆಯೆಂದು ಅನ್ನುವೆನು. ಈ ವರೆಗೆ

ಇಲ್ಲಿ ವರದಿಯಾದಂತೆ ಪರೋಕ್ಷವಾಗಿ ಮತ್ತು ಪ್ರತ್ಯಕ್ಷವಾಗಿ ಸಹ ನೀನು ಪ್ರತಿವಾದಿಯ ಪ್ರಾಣವನ್ನೆ ತೆಗೆಯಲು ಹಂಚಿಕೆಯನ್ನು ಹೂಡಿದೆ. ಹಾಗಾಗಿ ಹಿಂದೆಯೇ ನಾನು ಪ್ರತಿಪಾದಿಸಿದ ರೀತಿಯಲಿ ನೀನೀಗ ಅಪಾಯಕ್ಕೊಳಗಾದೆ. ಆದುದರಿಂದ ಮೆತ್ತಗಾಗಿ ಮಹಾಪ್ರಭುವಿನ ಕ್ಷಮೆಯನ್ನು ಯಾಚಿಸು.

ಗ್ರಾಷ್ಯಾನೊ! — ನೀನು ನಿನಗೆ ನೇಣು ಹಾಕಿಕೊಳ್ಳಲು ಅನುಮತಿಯನ್ನು ಬೇಡು, ನಿನ್ನ ಆಸ್ತಿಯೆಲ್ಲ ಸರಕಾರದ ವಶವಾಗಲದೊ ನಿನ್ನನ್ನು ತೂಗುವುದಕ್ಕೆ ಒಂದು ಹಗ್ಗದ ಬೆಲೆಯನ್ನು ಸಹ ನೀನು ಉಳಿಸದಾದೆ. ಹಾಗಾದುದರಿಂದ ನಿನ್ನನ್ನು ಸರಕಾರದ ಖರ್ಚಿನಲ್ಲೇ ತೂಗಹಾಕಬೇಕಾಗಿದೆ.

ಮಹಾಪ್ರಭು! — ಈ ವಿಷಯದಲ್ಲಿ ನಮ್ಮ ಭಾವನೆಗಳು ಎಷ್ಟು ಭಿನ್ನವಾಗಿವೆಯೆಂದು ನೀನೆ ನೋಡುವೆ. ನೀನು ನನ್ನನ್ನು ಬೇಡುವ ಮೊದಲೆ ನಾನು ನಿನ್ನನ್ನು ಮನ್ನಿಸುವೆನು. ಹೇಗೂ ನಿನ್ನ ಸಂಪತ್ತಿನರ್ಧ ಭಾಗವು ಆಂಟೊನಿಯೊಗೂ ಮತ್ತುಳಿದರ್ಧ ಪಾಲು ಸರಕಾರಕ್ಕೂ ಬರುವುದರಿಂದ ನಿರುಪಾಯನಾಗಿರುವ ನಿನ್ನ ದೈನ್ಯತೆಗೆ ಒಂದಿಷ್ಟು ಜುಲ್ಮಾನೆಯನ್ನು ಮಾತ್ರ ನಿನಗೆ ವಿಧಿಸುವಂತಾಗಿರುವುದು.

ಪೋರ್ಷಿಯ! — ಹೌದು, ಅದು ಸರ್ಕಾರಕ್ಕೆ, ಆಂಟೊನಿಯೊಗೆ ಅಲ್ಲ!

ಶೈಲಾಕ್! — ಇಲ್ಲ, ನನ್ನ ಜೀವವನ್ನು, ಸರ್ವಸ್ವವನ್ನು ತೆಗೆಯಿರಿ. ಅವನ್ನು ಕ್ಷಮಿಸುವುದು ಬೇಡ. ನನ್ನ ಆಸ್ತಿಯನ್ನೆ ತೆಗೆಯುತ್ತಿರಲದರೊಡನಿರುವ ನನ್ನ ಮನೆಯನ್ನು ತೆಗೆದುಕೊಳ್ಳಿರಿ. ಬದುಕಿಗೆ ಬೇಕಿರುವುದನ್ನೆಲ್ಲವನ್ನು ನೀವು ಹೀಗೆ ತೆಗೆದುಕೊಂಡ ನಂತರ ನನ್ನ ಪ್ರಾಣವನ್ನು ತೆಗೆಯಿರಿ.

ಪೋರ್ಷಿಯ! — ನೀನಾವ ರೀತಿಯಲ್ಲಿ ಅವನಿಗೆ ದಯೆಯನ್ನು ತೋರಿಸುವೆ, ಆಂಟೊನಿಯೊ?

ಗ್ರಾಷ್ಯಾನೊ! — ತೂಗಹಾಕಿಕೊಳ್ಳಲು ಅವನಿಗೊಂದು ಹಗ್ಗವನ್ನು ಉತ್ಕಟ ಕೊಡಬಹುದು ಮಾತ್ರವಲ್ಲದೆ ದೇವರ ದಯೆಯಿಂದ ಬೇರೇನೂ ಅಲ್ಲ.

ಆಂಟೋನಿಯೊ:— ಮಹಾಪ್ರಭುಗಳಿಗೆ ಮತ್ತು ಈ ನ್ಯಾಯಾಸ್ಥಾನದಲ್ಲಿರುವವರಿಗೆ ಸಂತೋಷವಾದರೆ ನಾನು ಇಂತು ಸನ್ನುವೆನು, ನನಗೆ ಸಲ್ಲುವ ಅವನ ಆಸ್ತಿ ಅರ್ಧವನು ನಾನು ಬಿಡುತ್ತಿನ್ನೊಳು ಅರ್ಧವನು ಅವನ ಜೀವನಕಾಲದ ಸಂತೋಷದಲ್ಲಿ ಬಳಸಿಕೊಡುವೆನು, ಅವನ ಮರಣದನಂತರದು ಅವನ ಮಗಳನ್ನು ಕದ್ದು ತನ್ನೊಡನೆ ಕರೆದುಕೊಂಡು ಹೋದ ಮಾನವನಿಗೆ ಕೊಡುವಂತಾಗಲಿ. ಇವೆರಡು ಅವನಿಗೆ ಸಲ್ಲಿಸಿದ ರಿಯಾಯಿತಿಯಾದರೆ ಇನ್ನೀಗ ಅವನನ್ನು ಉಳಿಸಿದ ಕಾರಣ ಅವನು ಈಗಲೇ ಕ್ರೈಸ್ತನಾಗಬೇಕು. ಇನ್ನೊಂದು ಶರತ್ತು ಅವನು ಸಾಯುವಾಗ ಅವನಲ್ಲಿರುವ ಆಸ್ತಿ ಹಣವೆಲ್ಲ ಅವನ ಮಗಳಿಗೂ ಅಳಿಯ ಲೊರೆನ್ಸೋನಿಗೂ ಉಡುಗೊರೆಯಾಗುವಂತೆ ಅವನು ಇಲ್ಲಿಯೇ ಈ ನ್ಯಾಯಮಂಡಲದಲಿ ತನ್ನ ಮರಣಶಾಸನವನ್ನು ಬರೆದು ಹಾಕಲು ಮಾಡಬೇಕೆಂದು ವಿನಂತಿಸುವೆನು.

ಮಹಾಪ್ರಭು:— ಅವನು ಅಂತೆಸಗಬೇಕು. ಹಾಗಲ್ಲದಿದ್ದರೆ ನಾನಿಲ್ಲಿ ಅವನಿಗಿತ್ತ ಕ್ಷಮೆಯನ್ನು ವಾಪಸು ತೆಗೆದುಕೊಳ್ಳುವೆನು,

ಪೋರ್ಷಿಯ:— ಯೆಹೂದಿಯನೆ, ನಿನಗೆ ತೃಪ್ತಿಯಾಯಿತೆ? ನೀನೇನು ಹೇಳುವೆ?

ಶೈಲಾಕ್:— ನಾನು ಸಂತೃಪ್ತನಾದೆ.

ಪೋರ್ಷಿಯ:— ಕಾರಕೂನನೆ, ಈ ಕೊಡುಗೆಯ ಬಗ್ಗೆ ಕರಾರು ಪತ್ರವೊಂದನ್ನು ಬರೆ!

ಶೈಲಾಕ್:— ನನ್ನನ್ನು ಇಲ್ಲಿಂದ ಹೊರಹೋಗಲು ಬಿಡಬೇಕೆಂದು ನಿಮ್ಮನ್ನು ಬೇಡುತ್ತೇನೆ. ನನಗೆ ಮೈ ಸ್ವಾಸ್ಥ್ಯ ವಿಹಿತವಿಲ್ಲ ಆ ಕರಾರನ್ನು ನನಗೆ ಕಳುಹಿಸಿರಿ. ಅದಕ್ಕೆ ರುಜು ಹಾಕುವೆನು,

ಮಹಾಪ್ರಭು:— ನೀನೀಗ ಹೋಗು; ಆದರೆ ಈ ಕೆಲಸ ಮಾಡುಗಿಸು,

ಗ್ರಾಷ್ಯಾನೊ:— ನಿನಗೆ ಕ್ರೈಸ್ತಮತ ದೀಕ್ಷೆಯನ್ನು ಕೊಡಿಸುವಾಗ ಎರಡು ಜನ ಹೊಣೆಗಾರರು ಬೇಕಿವೆ? ನ್ಯಾಯಮೂರ್ತಿ ನಾನು ಆಗಿದ್ದರೆ ನಿನಗೆ ಪವಿತ್ರ ಜಲದ ಕಮಂಡಲುವಿನ ಬದಲಿಗೆ ನಿನ್ನನ್ನು ತೂಗಹಾಕಲು ಇನ್ನೂ ಹತ್ತು ಜನ, ಒಟ್ಟಾಗಿ ಹನ್ನೆರಡು

ಜನವನ್ನು ನಿನಗೆ ಜಾಮೀನು ನಿಲ್ಲಿಸುತ್ತಿದ್ದೆನು.
(ಷೈಲಾಕ್ ಹೋಗುವನು.)

ಮಹಾಪ್ರಭು! — (ವಕೀಲ ಪೋರ್ಷಾಳಿಗೆ.) ಮಾನ್ಯರೇ, ಮನೆಗೆ ನೀವು ಊಟಕ್ಕೆ ದಯಮಾಡಿಸಬೇಕೆಂದೀಗ ಕೇ ಕೇಳಿಕೊಳ್ಳುತ್ತಿದ್ದೇನೆ.

ಪೋರ್ಷ್ಯ! — ಮಹಾಪ್ರಭುಗಳು ಕ್ಷಮಿಸಬೇಕೆಂದು ನಾನು ಅತಿ ದೈನ್ಯದಲ್ಲಿ ಕೋರುವೆನು. ಈ ರಾತ್ರಿಯೊಳಗಾಗಿ ನನಗೆ ಪ್ಯಾಡುವಾಕ್ಕೆ ತಲಪಬೇಕಾಗಿದೆ. ಆದುದರಿಂದೀಗಲೇ ನನಗೆ ಹೋಗಬೇಕಾಗಿದೆ.

ಮಹಾಪ್ರಭು! — ನಿಮ್ಮ ವಿಶ್ರಾಂತಿಯು ನಿಮಗನುವೀಯದಷ್ಟು ಕೆಲಸ ನಿಮಗಿದೆಯೆಂಬುದಕ್ಕೆ ವಿಷಾದಿಸುತ್ತೇನೆ. ಆಂಟೋನ್ಯೊ, ಈ ಮಾನ್ಯರಿಗೆ ನೀನು ಅತ್ಯ ವನ್ನಿತ್ತು ತೃಪ್ತಿಪಡಿಸು, ನೀನು ಅವರಿಗೆ ಆ ಋಣಿಯಾಗಿರಬೇಕೆಂದು ನನಗನ್ನಿಸಿದೆ!
(ಮಹಾಪ್ರಭು (ಡ್ಯೂಕ್) ಮತ್ತಿತರರು ಹೋಗುವರು)

ಬಸ್ಸಾನ್ಯೊ! — ಸನ್ಮಾನ್ಯನೆ, ಸಭ್ಯ ಮಿತ್ರನೆ, ನಾನು ಮತ್ತು ನನ್ನೀ ಮಿತ್ರನೂ ನಿನ್ನ ಬುದ್ಧಿ ಜ್ಞಾನಗಳ ಪರಿಣಾಮವಾಗಿ ಅತಿ ಖೇದಕರವಾದ ಶಿಕ್ಷೆಯಿಂದ ಪಾರಾದೆವು, ಆ ಯೆಹೂದಿಯನಿಗೆ ನಾವು ಕೊಡಬೇಕಿದ್ದ ಆ ಮೂರು ಸಾವಿರ ವರಹಗಳನ್ನು ನಾವು ವಿನಯಪೂರ್ವಕವಾಗಿ ನಿನಗೆ ಒಪ್ಪಿಸುವೆವು.

ಆಂಟೋನ್ಯೊ! — ಅದಕ್ಕೂ ಮೀರಿ ನಾವು ನಮ್ಮ ಪ್ರೀತಿ ವಿಶ್ವಾಸದಲ್ಲಿ ಸೇವೆಯಲ್ಲಿ ನಿನಗೆ ಋಣಿಯಾಗಿಹೆವು.

ಪೋರ್ಷ್ಯ! — ಆತನಿಗೆ ತಕ್ಕ ಬುದ್ಧಿಯನು ಕಲಿಸಿದಂತಾಯಿತು; ತುಂಬ ತೃಪ್ತಿಯೂ ಆಯಿತು. ಅವನಿಂದೀಗ ನಿಮ್ಮನ್ನು ಪಾರಾಗಿಸಿದ ತೃಪ್ತಿಯೇ ನನಗೆ ನಿಮ್ಮ ಕೊಡುಗೆಯಾಗಿದೆ. ನನ್ನ ಮನವು ಆರ್ಥಿಕ ಲಾಭವನು ಪಡೆವ ಉದ್ದೇಶದಿಂದ ಇದ್ದುದೆ ಇಲ್ಲ. ನಾನಾರೆಂದು ನೀವು ಮುಂದಕ್ಕೆ ಕಾಣುವಾಗ ತಿಳಿಯುವಿರಿ. ನಿಮಗೆ ಮಂಗಳವಾಗಲೆಂದು ಆಶಿಸುವೆ, ಈಗ ನಾನು ಹೋಗುವೆನು.

ಬಸ್ಸಾನ್ಯೊ: — ಪ್ರಿಯ ಮಾನ್ಯನೆ, ನಿನ್ನೊಡನೆ ಇನ್ನು ಸಹ ಮಾತುಕತೆಯಾಡಲು ಮನಸ್ಸು ಬಲತ್ಕರಿಸುವುದು. ನ

ಮತ್ತು ಜ್ಞಾನಶಾಲಿನಾದರೂ ಉಡುಗೊರೆಯನ್ನು
ಸ್ವೀಕರಿಸು; ಇದು ಶುಲ್ಕವಂತು ಅಲ್ಲ. ಎರಡು ವಿ
ಷಯಗಳನ್ನು ಕುರಿತಾಗಿ ಬೇಡುವೆನು. ನನ್ನನ್ನು
ಮರೆಯದಿರು, ಮತ್ತು ನನ್ನನ್ನು ಕ್ಷಮಿಸು,

ಪೋರ್ಷ್ಯ!— ನೀನು ನನ್ನನ್ನು ತುಂಬ ಒತ್ತಾಯಪಡಿಸುವೆ. ಆ
ದರಿಂದ ನಾನು ಒಪ್ಪುವೆನು. ನಿನ್ನ ಕೈಗವಸ
ನ್ನು ಕೊಡು. ನಿನಗಾಗಿ ಅದನ್ನು ನಾನು ತೊಟ್ಟುಕೊ
ಳ್ಳುವೆನು. ಮತ್ತು ನಿನ್ನ ಪ್ರೀತಿಯ ಸ್ನೇಹಕ್ಕಾ
ಗಿ ನಿನ್ನಿಂದ ನಾನೀ ಉಂಗುರವನ್ನು ತೆಗೆದುಕೊಳ್ಳು
ವೆನು. ನಿನ್ನ ಕೈಯನ್ನು ಹಿಂದಕ್ಕೆಳೆಯದಿರು. ಇ
ದಕ್ಕೆ ನಿರಾಕರಿಸದಿರುವ ಪ್ರೀತಿಯನ್ನು ನನ್ನಲ್ಲಿಡು.

ಬಸ್ಸಾನ್ಯೊ!— ಮಾನ್ಯ ಮಿತ್ರನೆ, ಈ ಉಂಗುರ!
ಆಹಾ, ಅದು ಅಲ್ಪವಿಷಯವಾದರೂ ಇದನ್ನು ನಿ
ನಗೊಪ್ಪಿಸಲು ನಾನಂತು ನಾಚಿಕೆಪಡಲಾರೆ!

ಪೋರ್ಷ್ಯ!— ನಾನು ಇದನ್ನಲ್ಲದೆಯೆ
ಬೇರೇನೂ ತೆಗೆದುಕೊಳ್ಳಲಾರೆನು. ನನ್ನ ಮನ
ಅದರಲ್ಲಿ ತಗುಲಿದೆಯೆಂದು ಈಗ ಭಾವಿಸುವೆ.

ಬಸ್ಸಾನ್ಯೊ!— ಅದರ ಮೌಲ್ಯವನ್ನು ಮೀರಿಸಿ ಇದೆ ಅದರ ನಿಗೂ
ಢ ವಿಚಾರ. ನಾನು ವೆನ್ನಿಸ್‌ನಲ್ಲಿ ಜಾಹೀರಾ
ತುಪಡಿಸಿ ಅತಿ ಪ್ರಿಯವೆನಿಸಿದ ಉಂಗುರವನ್ನು
ನಿನಗೆ ಕೊಡುವೆನು. ಆದರೆ ಇದಕ್ಕೆ ಮಾತ್ರ ನೀ
ನು ನನ್ನನ್ನು ಕ್ಷಮಿಸಬೇಕೆಂದು ಕೋರುವೆನು.

ಪೋರ್ಷ್ಯ!— ಅಯ್ಯಾ, ಕೊಡುವುದರಲ್ಲಿ ನೀನ್ ಧಾ
ರಾಳಿಯಿರುವೆಯೆಂಬುದು ನನಗೆ ತೋರಿದೆ. ನೀನು
ನನಗೆ ಬೇಡಲಿಕ್ಕೆ ಮೊದಲು ಕಲಿಸಿದೆ. ಈಗ ಬೇ
ಡುವವನಿಗೆ ಉತ್ತರಿಸಬೇಕು ಎಂಬುದನ್ನು
ನೀನು ನನಗೆ ಕಲಿಸುವೆಯೆಂದು ಭಾವಿಸುತ್ತಿಹೆನು.

ಬಸ್ಸಾನ್ಯೊ!— ಸನ್ಮಾನ್ಯನೆ, ಈ ಉಂಗುರವು ನ
ನ್ನ ಹೆಂಡತಿಯಿಂದೆನಗೆ ಕೊಡಲ್ಪಟ್ಟಿದು. ಅವಳು
ನನ್ನ ಬೆರಳಿಗದನ್ನು ಜಾರಿಸುತ್ತಿರುವಾಗ
ಅದನ್ನೆಂದಿಗೂ ವಿಕ್ರಯಿಸಬಾರದು, ಕೊ
ಡಬಾರದು ಅಥವಾ ಕಳೆದುಕೊಳ್ಳಬಾರದೆಂ
ದು ನನ್ನನ್ನು ಆಣೆಯಿಡಿಸಿರುವಳು,

ಪೋರ್ಷ್ಯ!— ತಮ್ಮ ಬಹುಮಾನಗಳ
ನ್ನುಳಿಸಿಕೊಳ್ಳಲು ಹಲವು ಗಂಡಸರಿಗೆ ಆ ಮಾ

ದಿವಸ ಒಂದು ಹೇತುವಾಗಿದೆ. ಇರಲಿ, ನಿನ್ನ ಹೆಂ
ಡತಿ ಹುಚ್ಚುಹಿಡಿದವಳಲ್ಲವಾದರೆ, ನನಗೀ ಉಂ
ಗುರವು ಎಷ್ಟು ಯೋಗ್ಯವಿದೆಯೆಂದವಳು ತಿಳಿದರೆ
ಇದನ್ನು ನನಗಿತ್ತುದಕ್ಕೆ ಅವಳೆಂದಿಗೂ ವೈ
ರವನು ಸಾಧಿಸಲಾರಳು; ಅದಂತಿರಲಿ, ನಿಮ್ಮೊ
ಳಗೆ ಶಾಂತಿಯಿರಲಿ.

(ಪೋರ್ಷ್ಯ ಮತ್ತು ನೆರಿಸ್ಸ ಹೋಗುವರು.)

ಆಂಟೋನಿಯೋ! — ನನ್ನ ಪ್ರಭು ಬಸ್ಸಾನಿಯೋ, ಅವನು ಆ ಉಂಗು
ರವನ್ನು ಇಟ್ಟುಕೊಳ್ಳಲಿ. ಅವನಿಗದು ಸಲ್ಲಲಿ.
ಅರ್ಹತೆಯೊಡನೆಯೇ ನನ್ನ ಪ್ರೀತಿಯೂ ಸೇರ
ಲಿ ನಿನ್ನ ಹೆಂಡತಿಯು ಅದನ್ನು ನಿನಗಿತ್ತಾ
ಗ ಹೇಳಿದ ವಿಧಿನಿಯಮಗಳಿಗೆ ಸಮದಾಗುವುದು.

ಬಸ್ಸಾನಿಯೋ! — ಗ್ರಾಶ್ಯಾನೋ, ನೀನು ಹೋಗು. ಓಡು
ತ್ತಲೇ ಹೋಗಿ ಅವನನ್ನು ಹಿಡಿ. ಉಂಗುರವಿದನ್ನು ಅ
ವನಿಗೆ ಕೊಟ್ಟು ಅವನನ್ನು ಆಂಟೋನಿಯೋನ ಮನೆಗೆ
ಸಾಧ್ಯವಾದರೆ ನೀನು ಕರೆದುಕೊಂಡು ಬಾ, ಹೋ
ಗು, ಬೇಗನೆ ಹೋಗು!

(ಗ್ರಾಶ್ಯಾನೋ ಹೋಗುವನು.)

ಬಾ, ನೀನು ಮತ್ತು ನಾನು ಆ ಕಡೆ ಈಗ ಹೋ
ಗುವ, ಮತ್ತು ನಾಳೆ ಮುಂಜಾವದಲ್ಲಿ ಎದ್ದು ನಾ
ವಿರ್ವರೂ ಬೆಲ್ಮಂಟದತ್ತ ಬಹು ಶೀಘ್ರದಲ್ಲಿ
ಹೋಗುವ! ಆಂಟೋನಿಯೋನೆ ಬಾ!

(ಹೋಗುವರು.)

ದೃಶ್ಯ — ೨ — ವೆನ್ನಿಸಿನ ಒಂದು ಬೀದಿ.

(ಪ್ರವೇಶ — ಪೋರ್ಷ್ಯ ಮತ್ತು ನೆರಿಸ್ಸ.)

ಪೋರ್ಷ್ಯ! — ಆ ಯೆಹೂದಿಯನ ಮನೆ
ಎಲ್ಲಿಯೆಂದು ವಿಚಾರಿಸು. ಈ ದಾಖಲಾತಿಯನ್ನು
ನು ಅವನಿಗೆ ಕೊಡು. ಅವನು ಅದಕ್ಕೆ ರುಜು ಹಾಕಲಿ.
ಈ ರಾತ್ರಿಯಲ್ಲಿ ನಾವು ಹಿಂದಿರುಗಿ ನಮ್ಮ ಗಂ
ಡಂದಿರು ಮನೆ ತಲುಪುವುದರೊಳಗಾಗಿಯೇ ನಾವು
ಅಲ್ಲಿರುವ! ಈ ಕರಾರು ಪತ್ರವು ಲೋರೆನ್ಸೋನಿ
ಗೆ ಬಹು ಸ್ವಾಗತಾರ್ಹವಾಗಿರುವುದು.

(ಗ್ರಾಶ್ಯಾನೋನ ಪ್ರವೇಶ.)

ಗ್ರಾಷ್ಯಾನೊ! — ಶ್ರೇಷ್ಠರಾದ್ರೀಯ ಮಾನ್ಯನೆ,
ನಾನು ನಿನ್ನನ್ನು ಹಿಂಬಾಲಿಸುತ್ತಲಿದ್ದೆ ತಲುಪಿ
ದೆ. ನನ್ನ ಪ್ರಭುವು, ಬಸ್ಸಾನಿಯೋನು ವಿಷಯವ
ನ್ನು ಪರ್ಯಾಲೋಚಿಸಿ ನಿನಗೀ ಉಂಗುರವನ್ನು
ಕಳುಹಿಸಿರುವನಲ್ಲದೆ ಅವನು ನಿನ್ನನ್ನು ಊ
ಟಕ್ಕವರೊಡನೆ ನೀ ಬರಬೇಕೆಂದು ಬೇಡುವನು,

ಪೋರ್ಷ್ಯ! — ಅದಾಗುವುದಿಲ್ಲ. ಅವನ ಉಂಗುರ
ವನ್ನು ನಾನು ಹಾರ್ದಿಕ ವಂದನೆಗಳಿಂದ ಸ್ವೀ
ಕರಿಸುವೆನು. ಹಾಗೆಂದೆ ದಯಮಾಡಿ ಅವನಿಗೆ
ನ್ನು. ಅಷ್ಟೇ ಅಲ್ಲ, ನನ್ನೊಡನೆ ಇರುವ ಈ ಯುವ
ಕನಿಗೆ ಷೈಲಾಕನ ಮನೆಯನ್ನೊಮ್ಮೆ ತೋರಿಸಿ
ಕೊಡುಯೆಂಬುದಾಗಿ ಕೇಳಿಕೊಳ್ಳುತ್ತಿದ್ದೇನೆ!

ಗ್ರಾಷ್ಯಾನೊ: — ಅದನ್ನಂತೆಯೇ ಮಾಡುವೆನು,

ನೆರಿಸ್ಸ! — ಅಯ್ಯಾ, ನಿನ್ನೊಡನಿದೋ ಮಾತಾಡುವೆನು,
(ಪೋರ್ಷ್ಯಳಿಗೆ.) ನನ್ನ ಗಂಡನು ನಿರಂತರವಿಟ್ಟುಕೊಳ್ಳುಬೇ
ಕೆಂದು ಅವನಿಂದ ನಾನು ಪ್ರಮಾಣ ಮಾಡಿಸಿ
ಕೊಟ್ಟಿದ್ದ ಆ ನನ್ನ ಉಂಗುರವು ನನಗೆ ದೊರೆ
ಯುವುದೋ ಎಂದು ನೋಡುವೆನು,

ಪೋರ್ಷ್ಯ: — (ನೆರಿಸ್ಸಳಿಗೆ.) ನೀನು ನೋಡಬಹುದು. ನಿಜ, ಆದರೆ
ಸಿಂದು ನಿಶ್ಚಯ! ಅವರು ನಮಗಿತ್ತ ಆ ಹಳೆ
ಪ್ರಮಾಣಗಳನ್ನವರು ಮೀರಿ ಆ ನಮ್ಮ ಉಂ
ಗುರಗಳನ್ನು ಅವರು ಇತರ ಗಂಡಸರಿಗಿತ್ತರೆ
ನುತ್ತವರ ಮುಖವನ್ನು ಕಿಕ್ಕ್ಯಾಗಿಸುವ. ಅವರು
ಇಟ್ಟ ಆಣೆಯನೆ ಟೊಳ್ಳಾಗಿಸುವ.
(ಪ್ರಕಾಶ.) ಹೋಗಿ, ಬೇಗನೆ ಹೋಗಿ. ನಾನೆಲ್ಲಿ
ಗೆ ಹೋಗುವುದೆಂದು ನಿಮಗೆ ಗೊತ್ತಿದೆಯಷ್ಟೆ!

ನೆರಿಸ್ಸ: — ಬಾ, ಅಯ್ಯಾ, ನನಗೆ ಆ ಮನೆಯತ್ತ
ಹೋಗಲು ದಾರಿ ತೋರಿಸುವೆಯಾ? —
(ಹೋಗುವರು.)

ಅಂಕ ೫.

ದೃಶ್ಯ-೧ - ಬೆಲ್ಮಾಂಟ್ - ಪೋರ್ಷಿಯಳ ಮನೆ ಅಂಗಳದಲ್ಲಿ.

(ಪ್ರವೇಶ - ಲೊರೆನ್ಜೊ ಮತ್ತು ಜೆಸ್ಸಿಕಾ.)

ಲೊರೆನ್ಜೊ:— ಹಾ, ಚಂದ್ರ ಬೆಳಗುತ್ತಿದೆ! ಎಷ್ಟು ರಮ್ಯತಮ! ಇಂಥದ್ದೇ ಆ ರಾತ್ರಿಯಲ್ಲಿ ಮಂದಮಾರುತವು ಮೆದುವಾಗಿ ಮೌನದಲಿ ನೀಳ್ಮರಗಳಿಗೆ ಮುತ್ತಿಡುತಿರುವ ಶುಭ್ರತೆಯ ರಾತ್ರಿ ಇದು! ನನ್ನೆಣಿಕೆಯೂ ಇದುವೇ ಎಂಬಂತೆ ಆ ಟ್ರಾಯಿಲಸನು ಮರುಗೋಡೆಗಳನೇರಿ ತಾನ್ ಪ್ರಿಯೆ ಕ್ರೆಸಿಡಾಳಿರಗಿಯಾದ ಯವನ ಶಿಬಿರಗಳ ನೋಡುತ್ತಲಿ ನಿಟ್ಟುಸಿರುಯ್ಯನದೋ ಬಿಡಿಸಿದಾ ರಾತ್ರಿ ಇದೆ ಚೆಲುವೋ!

ಜೆಸ್ಸಿಕಾ:— ಇದೇ ತೆರನ ಬೆಳ್ದಿಂಗಳ ರಾತ್ರಿಯಲ್ಲಿ ಥಿಸ್ಬಿಯು ಮಂಜುದರಿಯಲ್ಲಿ ನಡುಗುತ್ತಲಿ ಎದೆ ತಡಿದು ನಡೆಯಲು ಸಿಂಹವದರ ನೆರಳನು ನೋಡುತ ಕಾಣುತಲಿ ಬೇಗಾಗಿ ಅವಳದೋ ಓಡಿಯನಿಸ್ಸದ - ಆ ರಾತ್ರಿ ಇದೆ ಚೆಲುವೋ!

ಲೊರೆನ್ಜೊ!— ಇದೇ ತೆರನ ಬೆಳ್ದಿಂಗಳ ರಾತ್ರಿಯಲ್ಲಿ ಕಾರ್ಥೇಜಿನಿಯ ರಾಣಿ ಡೈಡೋಳು ಮಿದುವಾದ ವೃಕ್ಷವದರ ರೆಂಬೆಯನು ಹಿಡಿದು ಇದ ಗಾಳಿಯಲ್ಲಿ ತೇಲಿಸುತ್ತ ತನ್ನ ಮನದಿನಿಯನನು ಹಿಂದಿರುಗಿ ಬಾ ಎನುತ ಕಡಲ ದಂಡೆಯಲಿ ಕರೆದ ಆ ರಾತ್ರಿ ಇದೆ ಚೆಲುವೋ!

ಜೆಸ್ಸಿಕಾ:— ಇದೇ ತೆರನ ಬೆಳ್ದಿಂಗಳ ರಾತ್ರಿಯಲ್ಲಿ ಮೀಡಿಯಾಳು ಮಾಂತ್ರಿಕ ಮರಗಳಿಗಿರುವ ಮೂಲಿಕೆಗಳನು ಸಂಗ್ರಹಿಸುತಲಾ ಮುದುಕ ಈಸನನ ಯುವಕನನ್ನಾಗಿಸಿದ ಆ ರಾತ್ರಿ ಇದೇ ಚೆಲುವೋ!

ಲೊರೆನ್ಜೊ:— ಇದೇ ತೆರನ ಬೆಳ್ದಿಂಗಳ ರಾತ್ರಿಯಲ್ಲಿ ಸಿರಿತನದ ಗೆಲುವನ್ನೇ ಮೆಚ್ಚುದಿಹ ಜೆಸ್ಸಿಕಾಳು ಸಿರಿವಂತ ಯಹೂದಿಯನ ಸಿರಿಯ ತಾನ್ ಕದಿಯುತಲಿ ವೆನಿಸಿನಿಂದ ಬೆಲ್ಮಾಂಟಿನವರೆಗೆ ಎದ್ದೋಡಿದಾ ರಾತ್ರಿ ಇದೆ ಚೆಲುವೋ!

ಜೆಸ್ಸಿಕಾ:— ಇದೇ ತೆರನ ಬೆಳ್ದಿಂಗಳ ರಾತ್ರಿಯಲ್ಲಿ ತರುಣ ಲೊರೆನ್ಜೊ ತಾನ್ ಪ್ರೀತಿಯರ್ಪಣೆಯನು ಒಲಿಸಿ

ನಿಜವಾಗಿಲ್ಲದಿರುವ ಬಹುತರದ ಭರವಸೆಯನ್ನಿತ್ತು
ಆಕೆಯನ್ನು ಇರುವವಳ ಹೃದಯವನ್ನು ಜಯಿಸಿ
ದ ರಾತ್ರಿ ಇದೇ ಆಗಿರಬಹುದು!

ಲೋರೆನ್ಸೊ:— ಇದೇ ತರದ ಒಂದು ರಾತ್ರಿಯಲ್ಲಿ
ಸುಂದರಿಯಾದ ಜೆಸ್ಸಿಕಾಳು (ಪುಟ್ಟ ಗಯ್ಯಾಳಿಯಂತೆ)
ತನ್ನ ಪ್ರೀತಿ ನೀತಿನಿಯಮವನ್ನು ಮೀರಿ ವರ್ತಿಸಿ
ದವಳು ಇನಿಯನವಳನ್ನು ಕ್ಷಮಿಸಿದ ರಾತ್ರಿ ಇದೇ
ಆಗಿರಬಹುದು!

ಜೆಸ್ಸಿಕಾ:— ರಾತ್ರಿಯೆಲ್ಲ ಆನ್ ನಿದ್ದೆಯಿಲ್ಲದೆ ಕಳೆದರೂ ನಿನ
ಗಿಂತಲೂ ಹೆಚ್ಚು ಮಾತಾಡಬಲ್ಲೆನು. ಆದ
ರೂ ಇತ್ತ ಬರುತ್ತಿಲ್ಲವೆ? ಆದರೆ ಅದೋ ಒ
ಬ್ಬ ಗಂಡಸಿನ ಕಾಲಿನ ಸಪ್ಪಳದ ಸದ್ದನ್ನು
ನು ಕೇಳುತ್ತಿದ್ದೇನೆ.

(ದೂತನ ಪ್ರವೇಶ)

ಲೋರೆನ್ಸೊ!— ಈ ರಾತ್ರಿಯ ಮೌನದಲ್ಲಿ ಇಷ್ಟು ಗಡಬಡಿಸಿ ಬರು
ತ್ತಿರುವವರಾರು?

ದೂತ:— ಒಬ್ಬ ಮಿತ್ರ!

ಲೋರೆನ್ಸೊ!— ಒಬ್ಬ ಮಿತ್ರ? ಯಾವ ಮಿತ್ರ? ನಿನ್ನ ಹೆಸರೇ
ನು, ಮಿತ್ರನೆ ದಯಮಾಡಿ ಹೇಳು!

ದೂತ:— ನನ್ನ ಹೆಸರು ಸ್ಟೆಫಾನೋ ಎಂದು. ನನ್ನ ಒಡತಿಯಾ
ನಿ ಬೆಳಗಾಗುವುದರೊಳಗಾಗಿ ಬೆಲ್ಮಾಂಟದ
ಲ್ಲಿರುವಳೆಂದು ಹೇಳಿ ಕಳುಹಿಸಿರುವಳು; ಪವಿತ್ರ
ಶಿಲುಬೆಗಳು ಎಲ್ಲೆಲ್ಲಿ ಇವೆಯೋ ಅಲ್ಲೆಲ್ಲ ಹೋ
ಗಿ ಮೊಣಕಾಲೂರಿ ತನ್ನ ವೈವಾಹಿಕ ಜೀವ
ನವು ಸುಖಮಯವಾಗಲಿ ಎಂದು ಪ್ರಾರ್ಥಿಸುವಳು.

ಲೋರೆನ್ಸೊ:— ಅವಳೊಡನೆ ಇನ್ನಾರು ಬರುವರು?

ದೂತ:— ಆ ಸನ್ಯಾಸಿನಿ ಮತ್ತು ಅವಳ ಸಖಿಯು ಅಲ್ಲದೆ
ಬೇರಾರು ಇಲ್ಲ. ನನ್ನ ಪ್ರಭು ಇನ್ನೂ ಹಿಂದಿ
ರುಗಿಲ್ಲವೆ? ದಯಮಾಡಿ ಹೇಳು,

ಲೋರೆನ್ಸೊ!— ಇಲ್ಲ, ಅವನಿಂದ ನಾವು ವಾರ್ತೆಯನ್ನೇನೂ ತಿ
ಳಿಯಲಿಲ್ಲ. ಇರಲಿ, ಜೆಸ್ಸಿಕಾ, ನಾವು ಒಳಹೋ
ಗುವ. ಮನೆಯ ಯಜಮಾನಿಯು ಬರುವಾಗ ಅವಳ
ನ್ನು ಗೌರವದಿಂದ ಆಹ್ವಾನಿಸಲು ಸಿದ್ಧರಿರುವ!

(ಪ್ರವೇಶ – ವಿದೂಷಕ ಲಾನ್ಸೆಲಟ್)

ಲಾನ್ಸೆಲಟ್— ಹೋಲಾ, ಹೋಲಾ, ಹೋಹಾ, ಹೋ ಹೋಲಾ — — .

ಲೊರೆನ್ಸೊ:- ಅದಾರು ಕರೆಯುವುದು?

ಲಾನ್ಸೆಲಟ್:- ಹೊಲಾ, ಶ್ರೀಮಾನ್ ಲೊರೆನ್ಸೋ ಮತ್ತು ಶ್ರೀಮತಿ ಲೊರೆನ್ಸೊ ಇವರನ್ನು ನೀನು ಕಂಡೆಯಾ? ಹೊಲಾ, ಹೊಲಾ!

ಲೊರೆನ್ಸೊ:- ಎಲಾ, ಗಮನ ಸೆಳೆಯಲಿಕ್ಕೆ ಈ ನಿನ್ನ ಉದ್ಗಾರವನ್ನು ನಿಲ್ಲಿಸೋ, ಇಲ್ಲಿದ್ದೇನೆ.

ಲಾನ್ಸೆಲಟ್:- ಹೊಲಾ! ಎಲ್ಲಿ? ಎಲ್ಲಿ?

ಲೊರೆನ್ಸೊ:- ಇಲ್ಲಿ.

ಲಾನ್ಸೆಲಟ್:- ಅವನಿಗೆ ಹೇಳು, ಒಬ್ಬ ದೂತನು ತನ್ನ ಕೊಂಬು ಕಹಳೆ ತುಂಬಾ ಒಳ್ಳೆಯ ವಾರ್ತೆಗಳನ್ನು ತಂದಿರುವನೆಂಬುದಾಗಿ! ನನ್ನ ಯಜಮಾನನು ಬೆಳಕು ಹರಿಯುವುದರೊಳಗಾಗಿ ಬೆಳಿಗ್ಗೆ ಇಲ್ಲಿರುವನು.

(ಹೋಗುವನು.)

ಲೊರೆನ್ಸೊ:- ನನ್ನ ಪ್ರಿಯೆ, ನಾವು ಒಳಗೆ ಹೋಗುವ. ಅವರು ಬರುವುದನ್ನು ಎದುರು ನೋಡುವ. ಆದರೂ ಬೇಕಾಯಿಲ್ಲ; ನಾವೇಕೆ ಒಳಹೋಗಬೇಕು? ನನ್ನ ಗೆಳೆಯ ಸ್ಟೆಫನೋ, ನಾನು ಬೇಡುವೆನು! ಅದೇನು ವಿಶೇಷವಿದೆಯೋ ಹೇಳು. ನಿನ್ನ ಯಜಮಾನಿತಿಯು ಅಲ್ಲಿ ಒಳಗೆ ಇರುವಳು, ನಿನ್ನ ಹಾಡುಗಳನ್ನು ಈಗ ಗಾಳಿಯಲ್ಲಿ ತೇಲಿಸು.

(ಸ್ಟೆಫನೋ ಹೋಗುವನು.)

ಈ ಕಡಲ ದಂಡೆಯಮೇಲೆ ಬೆಳದಿಂಗಳು ನಿದ್ರಿಸುವುದು ಎಷ್ಟು ಮಾಧುರ್ಯವಿದೆ. ಇಲ್ಲಿಯೇ ನಾವು ಕುಳಿತುಕೊಳ್ಳುವ. ನಮ್ಮ ಕಿವಿಯನ್ನು ಸಂಗೀತದ ಧ್ವನಿಯು ಹೊಗಲಿ. ಮೆತ್ತನೆಯ ಮೌನವು ಮತ್ತು ರಾತ್ರಿಯು ಮನೋಲ್ಲಾಸಕೆ ಮಧುರತೆಯನ್ನೀಯುವುದು. ಜೆಸ್ಸಿಕಾ, ಕುಳಿತುಕೋ. ವೀಕ್ಷಿಸು. ಆಕಾಶದಂಗಳವು ಚಿನ್ನದ ಹಂಚಿನಿಂದ ದಟ್ಟವಾಗಿ ಹಾಸಿದಂತೆ ಶೋಭಾಯಮಾನವಿದೆ. ನೀನೀಕ್ಷಿಸುವ ಯಾವೊಂದು ಸಣ್ಣ ಗ್ರಹವು ಸಹ ಅದರ ಚಲನೆಯಲ್ಲಿ ಆ ದೇವರ ಗಾನದಂತೆ ಧ್ವನಿಸದೆಯೇ ಇಲ್ಲ. ಎಳೆಗಣ್ಣಿಗಳ ಕಾಂತಿಯನ್ನು ಹೊತ್ತ ಕಿನ್ನರರ ತೆರನೆ ಅವು ಇನ್ನೂ ಒಡಗೂಡಿಯೇ ಹಾಡುತ್ತಿವೆ. ಅಂತಹ ವಿಶ್ವ ಮಾಧುರ್ಯವು ಅಮರ ಆತ್ಮಗಳಲ್ಲಿ ಇವೆ. ಆದರೂ ಈ ಮೃಣ್ಮಯ ಶರೀರವು ಅದನ್ನು ಪೂರ್ತಿ ಮುಚ್ಚಿರುವುದರಿಂದ

ನಮಗದನ್ನು ಅರಿಯಲು ಅಸಾಧ್ಯವಾಗಿದೆ!

(ಹಾಡುಗಾರರ ಪ್ರವೇಶ.)

ಬಾರೆಟ್ಟ್ ಹೋಂ ದಿಯಾನಲ್ಲಿ ಕುಳಿಯಿತು, ಎಚ್ಚೆತ್ತು ಹಾಡ್ವ ನಲ್ನುಡಿಯುವ ದ್ವೈವನಾವುವನು, ಮತ್ತೆ ರವಾಹ ನುಡಿದರೆಯು ಅನಿಯುನಿತ್ತು, ಹೋ! ನಿನ್ನ ವಾನಿನಿಯು ಕಿವಿಗೆ! ಇನಿಮಾತಿನೊಡೆ ಕರೆತಾರೆಟ್ಟೆ ಗೃಹಸ್ಯೆಯುನು ಅವಳ ಗೃಹಕೆ.

(ಸಂಗೀತ ಮುಂದುವರಿಯುತ್ತಿರುವುದು.)

ಅರ್ನೆಸ್ಟ್ :— ಮಧುರ ರಾಗಾನುಮನಾಲಿಸುತ್ತಿರಲಾರ್ ಲಘು ಬಗೆಯು ಉಲ್ಲಾಸದಲ್ಲಿ ಕೂಡಿದ್ದೆ ಇಲ್ಲ.

ಗಿಲ್ಬರ್ಟ್ !— ಅದಕೆ ಕಾರಣ ನಿನ್ನ ಅಂತರ್ಭಾವಗಳು ಎಚ್ಚೆತ್ತು ಇರುವುವು. ಅದರೆ ಬಿಸಿ ರಕ್ತದ ಮುದ್ದೆಗಳಿಂದಾ ವಸ್ತು ಮಿಗ ಮುಖ್ಯವಾಗಿವದಿಲ್ಲ ಪುಟ್ಟಿನಿವುವು; ಶಿಲ್ಪಗಿರಿದಲ್ಲಿ ಕುದುರೆಗಳು ಹೇಷಾರವ ಗೈದು ತಮ್ಮ ಬಿಸಿ ನೆತ್ತರಿನ ಶಕ್ತಿಯೊಡೆ ಸುತ್ತಿಲ್ಲ ನೆಗೆವುದನು ಗಮನಿಸು. ಅ ಕಸನ್ನು ತ್ತು ಅವು ಕಾಹಳೆಗಳ ದನಿಯ ಕೇಳಿದರೆ, ಅದೇನೆಂದು ಸಂಗೀತದಿಂ ಜಾರವನಾಲಿಸಿದರೆ ಅವು ಕೆವಿಗಳನು ನಿಮಿರಿಸುತ ಇನಿದನಿಗೆ ಮರುಳಾಗುತ ಚಿತ್ತಗೂಡಿ ನಿಂತು ತಮ್ಮ ಆ ಬಿಲು ಕೇರಳ್ಗ ನಿಲ್ಗಳ ಪ್ರಶಾಂತವಿರಿಸಿ ನೆಟ್ಟನೆ ಅನಿಶ್ಚಿತ ನೋಟದಲಿಯು ಹುದಿನನ್ನು ನೀನು ನೋಡುವೆ, ಅದು ದರಿಂದಾ ಸ್ಪರ್ಧಿಯುನಿಸಾ ವರಗಳನು, ಕೊಳ್ಳಗಳನು ಮತ್ತು ಪ್ರವಾಹಗಳನು ಬಿಡಿಸದನೆಂದು ಹಿಂದಿನ ಕವಿಯೊರ್ವನು ಕಲ್ಪಿಸಿ ಬರೆದನೇ ಕೆಂದರೆ ಕೊರಡಿನೊಲು ಬರಡಿನ್ನಿಸ ಕಾಠಿಣ್ಯ ಮತ್ತು ಶೌರ್ಯದಿಂದ ಸ್ವಭಾವಗತ ಭಾವನೆ ಸರಳವಾಗಿ ಸಲಾಗುವುದಿಲ್ಲ. ಮಧುರ ಗಾನವು ಜೀವನ ಗತ್ಯಾತ್ಮೀಲವನು ಮರುಗುಗೊಳಿಸಬಲ್ಲದು. ಯಾರಿಗೆ ಸಂಗೀತದಲಿ ಆಭಿರುಚಿ ಸ್ವಲ್ಪವೂ ಇಲ್ಲವೋ ಇಂಥಗಾನಕೆ ಯಾರು ಮರುಳಾಗಲಾರನೋ ಅಂಥವನು ಮೋಸಕನು, ಕುಳು ಸಂಚುಗಾರನು ಮತ್ತು ಸುಲಿಗೆ ಮೋಸಗಳನೆಸಗುವುದರಲಿ ನಿಪುಣನೆನಿಸಲರ್ಹನು, ಅವನ ಕರು ಳುನಡ ನಡೆನುಡಿಗಳು ರಾತ್ರಿಯಂತೆ ನಿಶೀ

ಹೌದು ಅವನ ಪ್ರೀತಿ ವಿಶ್ವಾಸಗಳು ಕೂಡಿ
ಬನ್ನ್ ಸುರಂಗದಂತೆ ಬರೀ ಕತ್ತಲೆಯೂ ಆಗಿ
ರುವುದು. ಅಂತವನನ್ನ ನಂಬಿದರೆ. ಸಂಗೀತ
ದಲ್ಲಿ ಲಕ್ಷ್ಯವಿದೆ!

(ಪ್ರವೇಶ – ಪೋರ್ಷ್ಯ ಮತ್ತು ನೆರಿಸ್ಸ)

ಪೋರ್ಷ್ಯ:— ನಾವು ಕಾಣುತ್ತಿರುವ ಆ ಬೆಳಕು ನನ್ನ ಪಡಸಾಲೆಯಲ್ಲಿ ಹೊತ್ತುತ್ತಿರುವುದು. ಆ ಚಿಕ್ಕ ಬತ್ತಿಯು ಅದೆಷ್ಟು ದೂರಕ್ಕೆ ತನ್ನ ಕಾಂತಿಯನ್ನು ಹರಿಸುವುದೋ ಅಷ್ಟೇ ಪ್ರಕಾಶವನ್ನು ಒಂದು ನಿಸ್ವಾರ್ಥ ಸೇವೆ ಈ ದುರ್ದೆಸೆಯಿಹ ಜಗಕ್ಕೆ ಕೊಡಬಲ್ಲದು!

ನೆರಿಸ್ಸ:— ಬೆಳ್ದಿಂಗಳು ಶೋಭಿಸಿದಾಗ ನಾವು ಆ ಮೇಣದ ಕರುಬತ್ತಿ ಉರಿಯುತ್ತಿರುವುದು ಕಾಣಲೇ ಇಲ್ಲ,

ಪೋರ್ಷ್ಯ:— ಅಂತೆಯೇ ಮಹತ್ತ್ವಯುತಗಳು ಅಲ್ಪವಾದವುಗಳನ್ನು ಮಂದರಿಸುವುವು, ಅರಸನು ಜತೆಯಲ್ಲಿರದವರೆಗೆ ಅವನ ಹೆಸರಿನಲ್ಲಿ ಅಧಿಕಾರ ನಡೆಸುವವನು ಅರಸನಂತೆ ಖ್ಯಾತನಾಗುವನು, ಆಮೇಲೆ ಒಳನಾಡ ತೊರೆಯ ನೀರು ಸಮುದ್ರವನ್ನು ಸೇರಿ ಬರಿದಾಗುವಂತೆ ಆ ರಾಜ್ಯದ ಬೊಕ್ಕಸವೂ ಬರಿದಾಗುವುದು. ಆಹಾ, ಅದೋ ಸಂಗೀತ!!

ನೆರಿಸ್ಸ:— ಅದು ನಿನ್ನ, ನಿನ್ನ ಮನೆಯ ಸಂಗೀತ, ಅಮ್ಮಾ!

ಪೋರ್ಷ್ಯ:— ಅಭಿಮಾನವಿಲ್ಲದಿದ್ದರೆ ಯಾವೊಂದು ವಸ್ತುವೂ ಒಳ್ಳೆಯದಲ್ಲವೆಂದು ನನಗನ್ನಿಸುತ್ತದೆ. ಹಗಲು ಹೊತ್ತಿನಲ್ಲಿ ಕೇಳಿಸುವುದಕ್ಕಿಂತ ಇಂಪಾಗಿ ಈಗ ಕೇಳಿಸುವುದರಿಂದ ಯೋಚಿಸುವೆನು.

ನೆರಿಸ್ಸ:— (ರಾತ್ರಿಯುಹ) ಮೌನವು ಅದಕ್ಕೆ, ಅಮ್ಮಾ, ಆ ಗುಣವನ್ನೀಯುತ್ತದೆ,

ಪೋರ್ಷ್ಯ:— ಯಾರೊಬ್ಬನೂ ಇಲ್ಲದಿರುವಾಗ ಟಿಟ್ಟಿಭದ ರೀತಿಯಂತೆ ಕಾಗೆಯೂ ಹಾಡುವುದು. ಹಗಲು ಹೊತ್ತಿನಲ್ಲಿ ಪ್ರತಿಯೊಂದೂ ಬಾತುಕೋಳಿಯೂ ಕ್ವಾ ಕ್ವಾ ಎನಲು ಪಾಶ್ಚಾತ್ಯ ಕುರುಕಳ್ಳಿಯು ಸವಿದ ಹಾಡುಗಾರನುಯೆಂದೆನಿಸಲಾರನೆಂದು ಭಾವಿಸಬಹುದು. ಅಹಹ ಪ್ರಶಂಸೆ ಮತ್ತು ನೈಜ ಪ್ರಾವೀಣ್ಯವನ್ನು ಕಾಲಕ್ಕೆ ತಕ್ಕಂತೆ ಪಡೆಯಲು ಎಷ್ಟು ಕಾಲಮಾನವು ಹರಿಯುತ್ತೋವನೊ, ಆಹಾ,

ಚಿಂಗದಿರನು ಆ ಎಂಡಿಮ್ಯಾನ್ ಜತೆಯಲ್ಲಿಯೆ
ಮಲಗಿರುವುದ ನೋಡು!

(ಸಂಗೀತವು ಮುಗಿಯುವುದು.)

ಲೊರೆನ್ಸೊ:— ಅದೆ ಸ್ವರ! ಅಥವಾ ಅದು ಪೋರ್ಶ್ಯಳ ಕಂಠ ಧ್ವನಿಯಿಂದು ನಾನು ವಂಚಿಸಲ್ಪಟ್ಟೆನೊ ಏನೊ!

ಪೋರ್ಶ್ಯ! — ಹುಟ್ಟು ಕುರುಡನಿಗೆ ಕೋಗಿಲೆಯನ್ನು ಗೊತ್ತಾಗುವಂತೆ ನನ್ನ ಕರ್ಕಶ ಕಂಠದಿಂದ ನಾನಾರೆಂದವನು ತಿಳಿದಿರುವನು,

ಲೊರೆನ್ಸೊ! — ಮಾನ್ಯಳಾದ ಅಮ್ಮಾ! ಮನೆಗೆ ಹಿಂದಿರುಗಿದಿರಿ, ಸುಸ್ವಾಗತವು,

ಪೋರ್ಶ್ಯ! — ನಾವು ನಮ್ಮ ಗಂಡಂದಿರಿಗೆ ಶುಭವಾಗಲೆಂದು ಪ್ರಾರ್ಥಿಸುತ್ತಿದ್ದೆವು. ಅವರ ಏಳಿಗೆ ನಮ್ಮ ಮೊರೆಯನ್ನು ಸಫಲವಾಗಿಸುವುದರಿಂದು ನಾವು ನಂಬುವೆವು. ಅವರು ಹಿಂದಿರುಗಿದರೆ?

ಲೊರೆನ್ಸೊ:— ಅಮ್ಮಾ, ಅವರಿನ್ನೂ ಬರಲಿಲ್ಲ, ಆದರೆ ಅವರ ಬರುವಿಕೆಯನ್ನರುಹಲು ದೂತನೊಬ್ಬನು ಅದಾಗಲೇ ಬಂದಿದ್ದನು,

ಪೋರ್ಶ್ಯ! — ನೆರಿಸ್ಸಾ, ಒಳಗೆ ಹೋಗು. ನಾವು ಮನೆಯಲ್ಲಿ ಇಲ್ಲದಿದ್ದುದನ್ನು ಕುರಿತಾಗಿ ಲಕ್ಷ್ಯಕ್ಕೆ ತಾರದ ರೀತಿಯಲ್ಲಿ ಎಲ್ಲರೂ ವರ್ತಿಸುತ್ತಿರಬೇಕೆಂದು ಮನೆ ಊಳಿಗದವರಿಗೆ ಹೇಳು. ಲೊರೆನ್ಸೊ, ಜೆಸ್ಸಿಕಾ, ನೀವೂ ಅಂತೆಯೆ ವರ್ತಿಸಿರಿ.

(ಕಹಳೆ ಧ್ವನಿ.)

ಲೊರೆನ್ಸೊ:— ನಿನ್ನ ಗಂಡನದೋ ಬರುವನು. ಅವನ ಕಹಳೆಯು ಸದ್ದು ಕೇಳಿಸುವುದು. ಅದಿರಲಿ, ಅಮ್ಮಾ, ನಾವು ಅತ್ತಿತ್ತ ಚಾಡಿ ಹೇಳುವವರಲ್ಲ. ಆ ವಿಷಯದಲ್ಲಿ ನಿನಗೆ ಭಯ ಬೇಡ.

ಪೋರ್ಶ್ಯ! — ಈ ರಾತ್ರಿ ಅದೇಕೋ ದಿನ ಬೆಳಗು ಅಸ್ವಸ್ಥತೆಯಲ್ಲಿರುವಂತೆ ಇದೆ. ಅದೇಕೋ ಸ್ವಲ್ಪ ಬಿಳಿಚಿಕೊಂಡಂತೆ ಇದೆ. ಸೂರ್ಯನು ಅವಿತಿರುವ ದಿನ ಹೇಗೊ ಹಾಗೆಯೆ ಈ ದಿನವು ಇದೆ.

(ಪ್ರವೇಶ — ಬಸ್ಸಾನಿಯೊ, ಆಂಟೋನಿಯೊ,
ಗ್ರೇಶ್ಯಾನೊ ಮತ್ತು ಅವರ ಸಹಚರರು.)

ಬಸ್ಸಾನಿಯೊ! — ಸೂರ್ಯನಿಲ್ಲದ ಹೊತ್ತಿನಲ್ಲಿ ನಡೆದಾಗ ನಾವು ಲೋಕದ ಮತ್ತೊಂದು ಬದಿಯಲ್ಲಿ ಸೂರ್ಯಬೆಳ್ಳ

ರು ಇರುವಲ್ಲಿರುವ ಜನದೊಡನೆ ದಿನಗಳೆದಂತೆ!

ಪೋರ್ಶ್ಯ:— ನಾನು ಬೆಳಕನ್ನೀಯುವೆನು, ಆದರೆ ನಾನೆ ಬೆ ಳಕಾಗದಿರಲಿ. ಕಲಂಕಪ್ರಾಯಳಾದ ಹೆ ಣ್ಣು (ಪತ್ನಿಯರು) ಗಂಡನನ್ನು ದುಃಖಿತನಾಗಿಸುವ ಳು. ಬಸ್ಸಾನ್ಯೊನು ನನಗೆ ಹಾಗಾಗದೆಯೆ ಇರಲಿ. ದೇವನಿಚ್ಛೆಯಲ್ಲಿವನು ನೋಡಿಕೊಳ್ಳುವನು. ಶ್ರೀ ಯುತ ಪ್ರಭು —, ಮನೆಗೆ ಹಿಂದಿರುಗಿದೆ. ಸುಸ್ವಾಗತವು,

ಬಸ್ಸಾನ್ಯೊ:— ಶ್ರೀಮತಿ, ನಿನಗೆ ವಂದನೆಗಳು. ನನ್ನೀ ಮಿತ್ರನಿಗೆ ಸುಸ್ವಾಗತವನ್ನು ಬಯಸು, ಇವನೆ ಆಂಟೋನ್ಯೊ! ನಾನು ತುಂಬ ಆಭಾರಿಯಾಗಿರುವುದು ಇವನಿ ಗೇನೆ ಆಗಿದೆ.

ಪೋರ್ಶ್ಯ:— ಹೌದು, ನೀನು ನಿಜಕ್ಕೂ ಅವನಿಗಾಭಾರಿಯಾ ಗಿರಬೇಕು. ಏಕೆಂದರೆ ಅವನು ನಿನಗೆ ಅತ್ಯಧಿಕ ಸಹಾಯಕನಾಗಿದ್ದನೆಂದು ನಾನು ತಿಳಿದೆನು.

ಆಂಟೋನ್ಯೊ:— ನಾನು ನಿಶ್ಶರ್ತೆಯಿಂದು ಋಣಮುಕ್ತಗೊಳಿಸಿ ಮಾಡಲ್ಪ ಟ್ಟದ್ದಕ್ಕಿಂತ ಹೆಚ್ಚೇನೂ ಮಾಡಿಲ್ಲ.

ಪೋರ್ಶ್ಯ:— ಮಾನ್ಯನೇ, ನಮ್ಮ ಮನೆಯಲ್ಲಿ ನಿನಗೆ ಆದರ ದ ಸ್ವಾಗತವು, ಬರೀ ಬಾಯಲ್ಲಿ ಹೇಳುವುದ ಕ್ಕಿಂತ ಸತ್ಕಾರ ಬೇರೆ ರೀತಿಯಲಾಗಬೇ ಕಿದೆ. ಆದೇನಿದ್ದರೂ ಈ ಅಲ್ಪ ಮನ್ನಣೆಯು ನಿಮ್ಮ ಉಪಚರಿಸಿದೆನು.

ಗ್ರಾಶ್ಯಾನೊ:— (ನೆರಿಸ್ಸಾಳಿಗೆ) — ಆಕಾಶ ದಿಗಂತದಲ್ಲಿ ಕಾಣುವ ಚಂದ್ರನಾಣೆಗೂ ನೀನು ನನ್ನಲ್ಲಿ ತಪ್ಪೆಣಿಸುವೆ. ಪ್ರೀತಿ ವಿ ಶ್ವಾಸವನ್ನು ನನ್ನಿಂದ ನೀನರಿತ್ತು ಪ್ರತ್ಯುಪಕಾರ ಕವಾಗಿ ನಡೆಯುವಿಯೋ ಅಲ್ಲಿ ಆ ನ್ಯಾಯಮೂ ರ್ತಿಯ ಗುಮಾಸ್ತನೂ ಕಸಿವಾಡಿ ಹಡೆಯುವಂತಾ ಗಿಸಿದೆನು.

ಪೋರ್ಶ್ಯ:— ಓಹೋ ಏನದು? ಆಗಲೆ ಕಾದಾಟವೆ? ಏನ ದು ವಿಶೇಷ ವಿಚಾರ?

ಗ್ರಾಶ್ಯಾನೊ:— ಅದೊಂದು ಚಿನ್ನದ ಉಂಗುರ ತುಂಡು. ಚಿಕ್ಕ ಉಂಗುರವದು. ಅದನ್ನು ನನಗವಳು ಕೊ ಟ್ಟಿದ್ದಳು. ಅದರಲ್ಲಿ ಅವಳು ಬರೆದುದು ಕಮ್ಮಾ ರನು ಕಬ್ಬಿಣದ ಮೇಲೆ ಕವನ ಕೆತ್ತಿದಂತೆಯೆ! "ನನ್ನನ್ನು ಪ್ರೀತಿಸುವುದು, ನನ್ನನ್ನು ಬಿಡಬೇ ಡವೆಂಬುದಾಗಿ!

ನೆರಿಸ್ಸ:— ಆ ಉಂಗುರ ಅಥವಾ
ಅದರ ಬೆಲೆಯ ವಿಚಾರ ವನು ಹೇಳುತ್ತಿರುವಿ? ಆನದನ್ನು ನಿನಗೀಯುವಾಗಲೆ ನೀನದನ್ನು ಸಾಯುವ ವರೆಗೂ ಬೆರಳಲ್ಲಿರಿಸಿಕೊಳ್ಳುವೆಯೆಂದು ಆಣೆಯಿಟ್ಟೆ. ಅದು ನಿನ್ನ ಸಮಾಧಿಯೊಳಗೂ ಅದಿರಬೇಕೆಂದು ನೀನೆಂದೆ. ನನಗೆಂದಲ್ಲವಾದರೂ ಆ ನಿನ್ನ ಆವೇಶದ ವಾಕ್ಯವನ್ನು ಮನ್ನಿಸಲಿಕೆಂದಾದರೂ ನೀನದನ್ನು ಇಟ್ಟುಕೊಳ್ಳಬೇಕಿತ್ತು. ಅಂತೆಸಗದೆ ನೀನು ಅದನ್ನೊಬ್ಬ ನ್ಯಾಯವಾದಿಯ ಗುಮಾಸ್ತನಿಗಿತ್ತೆ. ಇಲ್ಲ, ದೇವರೆ ನನ್ನ ನ್ಯಾಯಶಿತ! ಅದನ್ನು ಹಿಡಿದುಕೊಂಡ ಆ ಗುಮಾಸ್ತನು ತನ್ನ ಮುಖದಲ್ಲಿ ಮೀಸೆಯನ್ನು ಎಂದೂ ತೊಡಲಾರನು.

ಗ್ರಾಷ್ಯಾನೊ:— ಅವನೊಬ್ಬ ಗಂಡಸಾಗಿದ್ದರೆ ಅವನದನ್ನು ತೊಟ್ಟೇ ತೊಡುವನು.

ನೆರಿಸ್ಸ!— ಹಾ, ಒಬ್ಬ ಹೆಂಗಸೇ ಗಂಡಿನಂತೆ ಜೀವಿಸಿದರೆ—?

ಗ್ರಾಷ್ಯಾನೊ;— ನನ್ನ ಇದೇ ಕೈಯ್ಯಲ್ಲಿ ಅದನ್ನೊರ್ವ ಯುವಕನಿಗೆ ಕೊಟ್ಟೆ. ಅಚ್ಚುಗಟ್ಟಾಗಿ ಮಡಿದಂತೆ ಸುಕ್ಕಿದ ಮುಖದಿಂದ ಕೂಡಿದ ಅವನು ಬರೇ ತರುಣ; ನ್ಯಾಯಾಧೀಶರ ಗುಮಾಸ್ತ; ನಿನಗಿಂತ ಎತ್ತರವಿಲ್ಲ; ಕೇವಲ ಹುಡುಗರಂತೆ ತನ್ನನೆ ಹೊಗಳಿಕೊಳ್ಳುತ್ತ, ತಲವನಾ ತನ್ನ ಕೆಲಸಕ್ಕೆ ಶುಲ್ಕವನ್ನು ಬೇಡುವಂತಿದ್ದಾಗ ಅವನಿಗದನ್ನು ಕೊಡದೆಯೇ ಇರಲು ನನ್ನ ಮನಸ್ಸು ಒಪ್ಪುತ್ತಿಲ್ಲ.

ಪೋರ್ಶ್ಯ:— ನಾನು ನೇರವಾಗಿಯೇ ಹೇಳುವೆನದೇನೆಂದರೆ ಹೆಂಡತಿಯು ನಿನಗೆ ಮೊದಲ ಬಾರಿಗೆ ಕೊಟ್ಟ ಬಹುಮಾನವದನ್ನು ನಿನ್ನ ಬೆರಳಿಗೆ ಆಣೆಯಿಟ್ಟು ಜಾರಿಸಿದ ಒಂದು ವಸ್ತುವನ್ನು, ಬಹು ವಿಶ್ವಾಸದಿಂದ ಅವಳು ನಿನ್ನ ಮೆದುಬೆರಳ ಮಾಂಸವನ್ನು ಒತ್ತಿ ಬಿಗಿದ ಆ ಉಂಗುರವನ್ನು ಹಾಗೆ ಬೇರೊಬ್ಬನಿಗೆ ಕೊಟ್ಟುದಕ್ಕೆ ನಿನ್ನನ್ನು ದೂಷಿಸಲೆ ಬೇಕಾಗಿದೆ. ನನ್ನ ಪ್ರಿಯನಿಗದೆ ತೆರನೆ ಆನೊಂದು ಉಂಗುರವನ್ನು ಕೊಟ್ಟು ಅದನಿನ್ನೊರ್ವನಿಗಿತ್ತು ಕಳೆದುಕೊಳ್ಳಲಾರೆನೆಂದು ಪ್ರಮಾಣವನೆ ಮಾಡಿಸಿದೆನು. ಅವನಿಲ್ಲಿಯೇ ನಿಂತಿರುವ

ನು. ಅವನು ಅದನ್ನು ಕಳೆದುಕೊಳ್ಳುವುದಾಗಲೀ
ಜಗತ್ತಿನ ಸಕಲ ಸಂಪತ್ತಿಗದನಂತು ಬೆಲೆ
ಕಿಂದೆಗಿದು ಇತರರಿಗೆ ಕೊಡುವುದಾಗಲೀ ಮಾ
ಡಲಾರನು ಎಂದು ಆನವನ ಶಿರವಾಗಿ ಆ
ಣೆಯಿಡುವವನು. ನಾನು ಗ್ರಾಷ್ಯಾನೊನಿಗೆ ಆತ್ಮೀಯ
ವಾಗಿ ಹೇಳುವುದು ಏನೆಂದರೆ ಬರೆ ನಿರ್ದಯ
ದ ನಿಲುವಿಂದ ನೀನ್ ನಿನ್ನ ಹೆಂಡತಿಯನ್ನು ಬೇ
ಸರಪಡಿಸಿದೆ; ನಾನಾಗಿದ್ದರೆ ಬಹಳ ಹುಚ್ಚ
ಗಿ ರೇಗುತ್ತಿದ್ದೆನು!

ಬಸ್ಸಾನ್ಯೊ: — (ಸ್ವಗತ) —ಏಕೆ? ಅಂತಾಗಿದ್ದರೆ ಈನ
ನ್ನ ಎಡಗೈಯನ್ನೆ ಕಡಿದುಕೊಂಡು ಕಡೆಗೆ ನನ್ನ
ಉಂಗುರವನ್ನುಳಿಸಿಕೊಳ್ಳಲು ನಾನು ಕಾದಾಡಿ
ಹಾಗಾಯಿತು ಎಂದು ಪ್ರಮಾಣಮಾಡುತ್ತಿದ್ದೆನು.

ಗ್ರಾಷ್ಯಾನೊ: — ಆ ನ್ಯಾಯಮೂರ್ತಿಯು ತನಗೆ ಶುಲ್ಕದ ರೂಪದಲ್ಲಿ
ನನ್ನ ಪ್ರಭು ಬಸ್ಸಾನ್ಯೊನ ಉಂಗುರವನ್ನೆ ಬೇ
ಡಲು ಅವನದನ್ನು ಬಿಚ್ಚಿ ಕೊಟ್ಟು ಬಿಟ್ಟನು. ಅ
ದು ಆ ನ್ಯಾಯಮೂರ್ತಿಯ ಸೇವೆಗೆ ಬಹಳ ಅರ್ಹವೆ
ಆಗಿತ್ತು. ಅದರನಂತರ ಆ ಕಾರ್ಯಕ್ಕೆ ಹುಡು
ಗ ಸಾಕಷ್ಟು ತೊಂದರೆಪಟ್ಟು ಪತ್ರಗಳನ್ನು
ಬರೆಯುತ್ತಿತ್ತು, ನನ್ನದನ್ನು ಬೇಡಿದನು. ಅವನಾಗ
ಲೀ ಅವನ ಧನಿಯಾಗಲೀ ಆ ಎರಡು ಉಂಗು
ರಗಳನ್ನಲ್ಲದೆ ಬೇರೆ ಯಾವುದನ್ನೂ ಸ್ವೀಕ
ರಿಸುವಂತಿರಲಿಲ್ಲ!

ಪೋರ್ಷಿಯಾ: — ನನ್ನ ಪ್ರಿಯನೆ, ಅದಾವ ಉಂಗುರವನ್ನು ಕೊ
ಟ್ಟೆ? ನನ್ನಿಂದ ಪಡೆದುದು ಆಗಿರಲಿಕ್ಕಿಲ್ಲವಷ್ಟೆ?

ಬಸ್ಸಾನ್ಯೊ: — ನನ್ನ ತಪ್ಪಿಗೆ ಒಂದು ಸುಳ್ಳನ್ನು
ಬೆರೆಸಿ ಅದನ್ನು ಈಗ ನಿರಾಕರಿಸಬಹುದಾ
ದರೂ ಇದೋ ನನ್ನ ಬೆರಳನ್ನು ನೋಡು; ಆ ಉಂ
ಗುರವು ಇಲ್ಲ, ಅದು ಹೋಯಿತು

ಪೋರ್ಷಿಯಾ: — ಠಕ್ಕೆನಿಸದಾ ನಿನ್ನ ಹೃದಯವು ಸತ್ಯಕ್ಕೆಡೆ
ಗೊಡದೆ ಬರಿದಿರುವುದು. ನಾನು ಆ ಉಂಗುರವನ್ನು
ನೋಡದೆಯೆ ದೇವರಾಣೆಗೂ ನಿನ್ನೊಡನೆ ಶಯ
ನಿಸೆನು.

ನೆರಿಸ್ಸಾ: — ನನ್ನದನ್ನು ನಾನು ನೋಡುವ ವರೆಗೆ ನಾನೂ ಸಹ
ನಿನ್ನೊಡನೆ ಅಂತೆಯೆ!

ಬಸ್ಸಾನಿಯೋ:- ನನ್ನ ಪ್ರೀತಿಯ ಪೋರ್ಷಿಯಾ,
ನಾನು ಆ ಉಂಗುರವನ್ನು ಯಾರಿಗೆ ಕೊಟ್ಟೆನೆಂ
ಬುದನ್ನು ನೀನು ತಿಳಿದರೆ, ಆ ಉಂಗುರವನ್ನು ಏತಕ್ಕೆ
ಕೊಟ್ಟೆನೆಂಬುದನ್ನು ನೀನರಿತರೆ, ಅದಾವ ಕಾ
ರ್ಯಸಾಧನೆಗಾಗಿ ಮತ್ತು ಎಷ್ಟು ಅನಿವಾರ್ಯವಾಗಿ
ನಿಸ್ಸಹಾಯದಿಂದ ಆ ಉಂಗುರವನಿತ್ತೆನೆಂ
ಬುದನ್ನು ನೀನು ಊಹಿಸಿದರೆ ನಿನ್ನ ಉಂಗುರವ
ನಲ್ಲದೆಯೇ ನನ್ನ ನಿಸ್ಸಹಾಯಕತೆಯನ್ನು
ನೀನು ಒಪ್ಪದಿರಲಾರೆ!

ಪೋರ್ಷಿಯಾ:- ಆ ಉಂಗುರದ ಮಹತ್ವವನ್ನು ನೀನು ತಿಳಿದಿ
ದ್ದರೆ, ಉಂಗುರವಿದನ್ನು ನಿನಗಿತ್ತವಳ ಯೋಗ್ಯ
ತೆಯು ಅರ್ಧಕಾಲಕ್ಕಾದರೂ ನೀನು ಅರಿ
ತಿದ್ದರೆ, ಅಥವಾ ಆ ಉಂಗುರವನ್ನುಳಿಸಿಕೊ
ಳ್ಳುವ ಗೌರವವು ನಿನಗೆ ಇದ್ದಿದ್ದರೆ ಆ ಉಂ
ಗುರದಿಂದ ನೀನು ಬೇರ್ಪಡುತ್ತಿರಲಿಲ್ಲ. ಶುಭ
ಕಾರ್ಯ ಸಂಕೇತವಾಗಿ ದೊರಕಿದ ಅದನ್ನು
ಪ್ರತಿ ಕ್ಷಣ ನಿತ್ಯವೂ ಉತ್ಸಾಹದಿಂದ ಉಳಿ
ಸಿಕೊಳ್ಳಲು ಇಚ್ಛಿಸಿದ್ದರೆ, ಅದರ ಪಾವಿತ್ರ್ಯ
ವನ್ನುಳಿಸಿ ಅದನ್ನು ಕಸಿಯುವಂಥ ಅವಿವೇಕಿ
ಯಾರಿರುವನು? ಯಾವುದರಲ್ಲಿ ವಿಶ್ವಾಸವನ್ನಿ
ಡಬೇಕೆಂಬುದನ್ನು ನೀರಿಕ್ಷಿಸಲು ನನಗೆ ಹೇ
ಳಿಕೊಡುವಳು. ಆದರೂ ಹೆಂಗಸಿನ ಕೈಗೆ ಆ
ಉಂಗುರವು ಹೋಗಿರುವುದೆಂಬುದಕ್ಕೆ ನಾನು ನ
ನ್ನ ಪ್ರಾಣವನ್ನೇ ಒತ್ತೆಯಿಡುವೆನು.

ಬಸ್ಸಾನಿಯೋ:- ನನ್ನಾಣೆಗೂ ಮಾನ್ಯಳೇ ಇಲ್ಲ.
ನನ್ನ ಆತ್ಮಸಾಕ್ಷಿಯಾಗಿ ಹೇಳುವೆನು. ನನ್ನ
ಪ್ರಿಯ ಮಿತ್ರನ ಪ್ರಾಣವನ್ನು ಉಳಿಸಿದ ತಜ್ಞ
ವಿದ್ವಾಂಸನಿಗೆ ಮೂರು ಸಾವಿರ ವರಹಗಳನ್ನಿತ್ತು
ಕೊಡುವಾಗ ಅದನ್ನು ನಿರಾಕರಿಸಿದ ಅವನು ತ
ನಗಾ ಉಂಗುರವೇ ಬೇಕೆಂದು ಬೇಡಿದನು. ನಾ
ನದನ್ನು ಕೊಡದಿರಲು ಅವನು ಬೇಸರಪಟ್ಟನು,
ಕಡೆಗಂತೂ ಅವನಿಗೆ ಅದನ್ನು ಕೊಟ್ಟೆನು. ಇತರ
ಹೆಂಗಸರಿಗೆ ಅದು ದೊರಕಿದ್ದಿಲ್ಲ. ಸನ್ಮಾನ್ಯೆ
ಹೆಣ್ಣೇ, ಇನ್ನೇನು ಹೇಳಲಿ? ನನ್ನ ಗೌರವವ
ನು ಕೃತಘ್ನತೆಯು ಮಸುಕುಗೊಳಿಸಿದಂತೆ ನಾ

ಚಿಕ್ಕ ಮತ್ತು ವಿನಯದಿಂದ ನೋಡಿದ್ದ ನಾನು ಆ
ದಿನನ್ನು ಅವನ ಕಣ್ಣಿಂದ ಆಗಿದ ದ್ರೋಹನೀತಿ ಅವನ
ಜೀವನ್ನು ಹಿಂದೆ ಜೀವ ತಳ್ಳಿ ಹೋಗುತ್ತೇನು. ಗರ್ಭಿಣಿ
ಎ ಮಾನಿನಿಯಂತೆ, ನನ್ನನ್ನು ಕ್ಷಮಿಸಿ, ಕತ್ತಲೆಯು
ನೋಡಿರುವ ಆ ಮೋಹಿನ ಬುತ್ತಿಗಳೊಳಗಿಂದ
ನಾನು ಹೇಳುವೆನು. ಬಹುಶಃ ನೀನೂ ಅಲ್ಲಿ ಇ
ದ್ದಿದ್ದರೆ ನನ್ನ ಉಂಗುರವನ್ನು ಆ ತಜ್ಞ
ವಿದ್ವಾಂಸನಿಗೀಯಲು ನೀನು ಬೇಡುತ್ತಿರುತ್ತಿ
ದ್ದೀಯೆಂದು ಭಾವಿಸುವೆನು.

ಪೋರ್ಷ್ಯ:- ನಾನು ತುಂಬಾ ಪ್ರೀತಿಸಿದ, ನಿನ್ನದನ್ನು ನನ
ಗಾಗಿ ತೋರುವೆಯೆಂದಾಗೆಯು ನಿಟ್ಟು ಪಡೆದ ಆ
ಆಭರಣವನ್ನು ನಿನ್ನಿಂದ ಕೇಳಿ ಕೊಂಡಿರು
ವ ಆ ನ್ಯಾಯ ಕೌಶಲನು ನನ್ನ ಮನಸಿಗೆ ಬಾರದೆ
ಯೇ ಇರಲಿ. ಇನ್ನೇಗ ನಾನು ನಿನ್ನಂತೆಯೇ ಉ
ದಾರಿಯಾಗಿರುವೆನು. ಇಲ್ಲ, ನನ್ನೀ ಮೈ ಮತ್ತು
ನನ್ನ ಪತಿಯ ಶಯ್ಯೆಯನು ಅಲ್ಲದೆ ನನ್ನಲ್ಲಿ
ಇರುವುದನೆಲ್ಲ ಅವನಿಗೆ ಕೊಡದೆ ಇರಲಾರೆ. ಅವ
ನಾರೆಂಬುದನು ನಾನು ತಿಳಿದೇ ತಿಳಿಯುವೆನೆಂ
ಬೆನಗೆ ನಿಶ್ಚಯವಾಗಿದೆ. ಮನೆಯನ್ನು ಬಿಟ್ಟು ಇ
ರುಳು ಬೇರೆಯಲ್ಲಿಗೂ ಹೋಗದಿರು, ನನ್ನನ್ನು
ನೀನು ಅರ್ಗಸನಂತೆ ಕಾಯುತ್ತ ಇರು.
ಅಂತಿಲ್ಲದೆ ನನ್ನೊಬ್ಬಳನ್ನೇ ಬಿಟ್ಟಿಯಾದರೆ
ಇನ್ನೂ ಸಹ ನನ್ನದೇ ಆದ ಪ್ರತಿಷ್ಠೆ ಆ
ಗಾಗೂ ನಾನು ಆ ತಜ್ಞ ಮೋಹನಾವಿಯನು ನ
ನ್ನ ನಲ್ಲನು ಎಂದೆನಿಸಿ ಅವನೊಡನೆ ಶಯ್ಯೆಯನು
ಹಂಚಿಕೊಳ್ಳುವೆನು.

ನೆರಿಸ್ಸ:- ಸರಿ, ಅವನ ಕರಣಿಕನು ನಾನು. ಆದುದರಿಂದ
ನೀನು ನನ್ನನ್ನು ರಕ್ಷಿಸ ನನ್ನನು ಬಿಟ್ಟು ಹೋ
ಗಿ ಹೋಗುವೆಯೆಂಬುದರ ಬಗ್ಗೆ ಎಚ್ಚರವಿರಲಿ.

ಗ್ರಾಷಿಯಾನೋ:- ಹಾ, ನೀನು ಹಾಗೆಯೇ ಮಾಡು. ಹಾಗಾದರೆ ಆ
ಮನ್ನನನು ಹಿಡಿದನು, ನಾನು ಅಂತಹನಾದರೆ ಈ
ಎಳೆ ಕರಣಿಕನ ಲೇಖನಿಯನ್ನೇ ಕೆಡಿಸುವೆನು!

ಆಂಟೋನಿಯೋ:- ಈ ವಿರಸಕ್ಕೆ ನಾನೊಬ್ಬ ದೌರ್ಭಾಗ್ಯ ವಸ್ತು!

ಪೋರ್ಷ್ಯ:- ಮಹಾಶಯನೆ, ವ್ಯಥೆಪಡದಿರು. ನಿನ್ನ ಸ್ಥಿತಿ ಅಂತಿ
ದ್ದರೂ ನಿನಗೆ ಸುಸ್ವಾಗತವಿದೆ.

ಬಸ್ಸಾನ್ಯೋ:— ಪ್ರೀತಿ ಪೋರ್ಷಿಯ, ನಿರ್ವಾಹವಿಲ್ಲದೆಯೆ ಆದ ತಪ್ಪನ್ನು ಕ್ಷಮಿಸು. ಈ ಹಲವು ಮಿತ್ರರ ಮಾತುಗಳನಾಲಿಸಿ ನಾನು ನಿನಗೆ ಪ್ರಮಾಣ ಮಾಡುವೆ, ಏನೆಂದರೆ ನಿನ್ನ ಚೆಲುವ ಕಣ್ಣುಗಳಲ್ಲಿ ನಾನು ನನ್ನನೆ ನೋಡುವೆನು,

ಪೋರ್ಷಿಯ!— ನೀನದನ್ನು ಲಕ್ಷ್ಯದಲ್ಲಿಟ್ಟಿದ್ದೀಯಾ? ನನ್ನ ಎರಡೂ ಕಣ್ಣುಗಳಲ್ಲಿ ಅವನು ತನ್ನ ಜೋಡಿಯನೆ ಕಾಣುವನು; ಒಂದು ಕಣ್ಣಲ್ಲಿ ಒಂದು ಎಂಬಂತೆ. ಏನಿದ್ದರೂ ನಿನ್ನದೆ ಜೋಡು ಕಣ್ಣುಗಳ ಮೇಲೆ ಆಣೆಯನ್ನಿಡು. ಈಗ ಇದು ನಂಬಲರ್ಹವಾದ ವಾಕ್ಯವೆಂದೆನಿಸುವುದು.

ಬಸ್ಸಾನ್ಯೋ:— ಹಾಗಲ್ಲ. ನಾನನ್ನುವುದನ್ನಾಲಿಸು. ತಪ್ಪುವುದ ಮನ್ನಿಸು; ಮುಂದಕ್ಕೆ ನಾನಿನಗೆ ಆಡಿದ ನುಡಿಯನ್ನು ಮೀರಲಾರೆನು ಎಂದು ನನ್ನಾತ್ಮದಾಣೆಗೂ ಹೇಳುವೆನು,

ಆಂಟೊನ್ಯೋ!— ಅವನ ಆರ್ಥಿಕ ಪರಿಸ್ಥಿತಿಯನ್ನು ಸಮಗಟ್ಟಲೆನುತ್ತೊಮ್ಮೆ ಆ ನನ್ನ ದೇಹವನೆ ಇತ್ತಿದ್ದೆ. ನಿನ್ನ ಪತಿಯು ಉಂಗುರವನ್ನು ತೆಗೆದುಕೊಂಡವ ನಿಲ್ಲದೆಯೆ ಹೋಗಿದ್ದರೆ ಆ ವ್ಯವಹಾರವು ಬಹು ದುರಂತಕರವಾಗಿ ಪರಿಣಮಿಸುತ್ತಿತ್ತು. ಇನ್ನೊಮ್ಮೆ ನನ್ನ ಆತ್ಮವನೆ ದಂಡಿ ಕೊಡಬೇಕಾದರೂ ನಾನು ಅದಕ್ಕೆ ಸಿದ್ಧನಿರುವೆ. ಆದರೆ ನಿನ್ನ ಗಂಡನು ತನಗೆ ತಿಳಿದೂ ತಿಳಿಯದ ರೀತಿಯಲಿ ಮುಂದಕ್ಕೆ ತನ್ನ ವಿಶ್ವಾಸವನೆ ಕಳೆದುಕೊಳ್ಳುವಂತಾಗಲಾರನು.

ಪೋರ್ಷಿಯ!— ಆಗ ನೀನು ಅವನಿಗೆ ಜಾಮೀನು ನಿಲ್ಲುವೆ. ಇದನ್ನು ಅವನಿಗೆ ಕೊಡು. ಕಳೆದುಕೊಂಡುದನು ಇಟ್ಟುಕೊಂಡಿದ್ದಕಿಂತಲೂ ಎಚ್ಚರದಲಿ ಇದನ್ನು ಇಟ್ಟುಕೊಳ್ಳುವಂತೆ ಅವನಿಗೆ ಹೇಳು!

ಆಂಟೊನ್ಯೋ!— ಮಿತ್ರ ಬಸ್ಸಾನಿಯೋ, ಈ ಉಂಗುರವನು ಭದ್ರವಾಗಿಟ್ಟುಕೊಳ್ಳುವೆನೆಂದು ಪ್ರಮಾಣ ಮಾಡು.

ಬಸ್ಸಾನ್ಯೋ:— ಹಾ ದೈವವೆ, ಇದು ನಾನು ಆ ನ್ಯಾಯಮೂರ್ತಿಗೆ ಕೊಟ್ಟುದೇ ಆಗಿದೆ,

ಪೋರ್ಷಿಯ!— ಅವನಿಂದ ನಾನು ಇದನು ಪಡೆದೆನು. ಬಸ್ಸಾನ್ಯೋ,

ನನ್ನನ್ನು ಕ್ಷಮಿಸು. ಆ ನ್ಯಾಯಪಂಡಿತನೊಡನೆ ಇದ್ದುದಕ್ಕೆ ಅವನು ಈ ಉಂಗುರವನ್ನಿತ್ತನು,

ನೆರಿಸ್ಸ:— ನನ್ನ ಸೌಮ್ಯಮೂರ್ತಿ ಗ್ರೇಷ್ಯಾನೊ, ಕ್ಷಮಿಸು. ಆ ತಜ್ಞನ ಕಾರಕೂನನಾಗಿದ್ದ ಆ ಸಣಕಲು ಮೊಗದ ಹುಡುಗನು ಇದಕ್ಕೆ ಬದಲು ಹಿಂದಿನ ರಾತ್ರಿ ನನಗೆ ಸುಖಕೊಟ್ಟಿದ್ದನು.

ಗ್ರೇಷ್ಯಾನೊ:— ಏಕೆ? ರಸ್ತೆಗಳು ಸಾಕಷ್ಟು ಚೆನ್ನಾಗಿದ್ದರೂ ಬೇಸಗೆಯಲ್ಲಿ ರಾಜಮಾರ್ಗವನ್ನು ದುರಸ್ತಿಮಾಡಲು ತೊಡಗಿ ಪ್ರಯಾಣಿಕರನ್ನು ತೊಂದರೆಗೊಳಗಾಗಿಸುವಂತೆ ಈ ಪ್ರಸಂಗವಿದೆ! ಏನಿದು? ಇಂಥ ಸನ್ನಿವೇಶಕ್ಕೆ ಪಾತ್ರರಾಗುವ ಮೊದಲೇ ನಾವೇನು ಜಾರೆಯರ ಗಂಡಂದಿರಾದೆವೆ?

ಪೋರ್ಷ್ಯ:— ಅಷ್ಟು ಕಠಿಣವಾಗಿ ನುಡಿಯಬೇಡಿ. ನೀವೆಲ್ಲ ಆಶ್ಚರ್ಯಗೊಳಗಾಗಿರುವಿರಿ. ಇಲ್ಲೊಂದು ಪತ್ರವಿದೆ. ನಿಮ್ಮ ವಿರಾಮ ಸಮಯದಲ್ಲಿ ಇದನ್ನು ಓದಿ. ಇದು ಪಾದುವಾದಿಂದ ಬೆಲ್ಲಾರಿಯೋನು ಬರೆದುದಾಗಿದೆ. ಪೋರ್ಷ್ಯಳೆ ಆಗಿದ್ದ ವಿದ್ವಾಂಸ ನ್ಯಾಯವಾದಿಯೆಂಬುದನ್ನು ನೀವು ತಿಳಿಯುವಿರಿ. ನೆರಿಸ್ಸಳೆ ಅವಳ ಕಾರಕೂನ. ನೀವು ಇಲ್ಲಿಂದ ಹೊರಟೊಡನೆಯೇ ನಾನು ಹೋದುದಕ್ಕೆ ಮತ್ತು ನೀವು ಇಲ್ಲಿಗೆ ತಲುಪುವ ಮೊದಲೇ ನಾನು ಹಿಂದಿರುಗಿದುದಕ್ಕೆ ಈ ಲೊರೆಂಝೊ ಸಾಕ್ಷಿಯಿರುವನು, ನಾನು ಇನ್ನೂ ನನ್ನ ಮನೆಯೊಳಗೆ ಹೊಕ್ಕಿಲ್ಲ. ಆಂಟೊನಿಯೊನೆ, ನಿನಗೆ ಸ್ವಾಗತವಿದೆ. ಅಲ್ಲದೆ ನಿನಗೊಂದು ಸುವಾರ್ತೆಯು ನನ್ನಲ್ಲಿ ಕಾದಿರಿಸಿದೆ. ಬೇಗನೆ ಈ ಲಕೋಟೆಯನ್ನು ತೆರೆದು ನೋಡು. ಶ್ರೀಮಂತ ಸರಕುಗಳನ್ನು ತುಂಬಿದ ನಿನ್ನ ಹಡಗುಗಳಲ್ಲಿ ಮೂರು ಬಂದರದಲ್ಲಿ ಬಂದಿಳಿದಿವೆಯೆಂದು ಇದರಿಂದ ತಿಳಿಯುವುದು. ನನಗೀ ಆಕಸ್ಮಿಕ ಘಟನೆಯನ್ನರಿಯದ ಪತ್ರವು ಹೇಗೆ ದೊರೆಯಿತೆಂಬುದನ್ನು ನೀನು ತಿಳಿಯಲಾರೆ!

ಆಂಟೊನಿಯೊ!— ನಾನು ಮೂಕನಾಗಿರುವೆನು.

ಬಸ್ಸಾನಿಯೊ!— ನನಗೆ ತಿಳಿಯದೆಯೇ ಇದ್ದ ಆ ವಿದ್ವಾಂಸ ನ್ಯಾಯಶ್ರೇಷ್ಠನು ನೀನೆಯೇ?

ಗ್ರಾಷ್ಯಾನೊ:- ನನ್ನನ್ನು ಓರ್ವ ಜಾರೆಯ ಗಂಡನೆಂದು ಕರೆ
ಯುತ್ತೆಳಸಿದ ಆ ಕರಣಿಕನೆ ನೀನೇಯೇ?

ನೆರಿಸ್ಸ:- ಅವನೊರ್ವ ಗಂಡಸಿನಂತಾಗುವವರೆಗೂ ಆ
ರೀತಿ ಜೀವನವನ್ನು ಎಂದೂ ನಡೆಸಲೊಲ್ಲ
ದ ಕರಣಿಕನವನು,

ಬಸ್ಸಾನ್ಯೊ:- ಹಾ, ಪ್ರೀಮದ ವಿದ್ವನ್ಮಣಿಯೆ,
ನೀನೆನ್ನ ಶಯನಸಂಗಾತಿಯಾಗುವೆ. ನಾನು
ಹಾಜರಿಲ್ಲದ ವೇಳೆಯಲ್ಲಿ ನೀನೆನ್ನ ಹೆಂ
ಡತಿಯೊಡನೊರಗಬಹುದು.

ಆಂಟೋನ್ಯೊ:- ಪ್ರಿಯ ಮಾನಿನಿಯೆ, ನೀನೆನಗೆ ಜೀವವನ್ನೂ
ಜೀವನಾಂಶವನ್ನೂ ಒದಗಿಸಿ ಇತ್ತೆ. ನ
ನ್ನ ಹಡಗುಗಳು ಸುರಕ್ಷಿತವಾಗಿಯೆ ಬಂದರಿಗೆ
ತಲುಪಿವೆಯೆನುತೀ ಪತ್ರದಲಿ ಓದುತ್ತಿರುವೆ.

ಪೋರ್ಷ್ಯ:- ಲೊರೆನ್ಸೊ, ಈಗ ಹೇಗೆ? ನಿನಗೂ ಸುಖಕರವೆ
ನಿಸಿದ ವಾರ್ತೆಗಳು ನನ್ನ ಕರಣಿಕನಲ್ಲಿವೆ.

ನೆರಿಸ್ಸ:- ಅವುಗಳನು ನಾನು ಅವನಿಂದ ಶುಲ್ಕವೇನೂ
ಪಡೆಯದೆಯೆ ಅವನಿಗೆ ಕೊಡುವೆನು. ಆ ಶ್ರೀಮಂತ
ಯೆಹೂದಿಯನ ಮರಣಾನಂತರ ಅವನ ಪಾಲಿ
ರುವ ಆಸ್ತಿಯನೆಲ್ಲ ನಿನಗೂ ಜೆಸ್ಸಿಕಾಳಿಗೂ
ವಿಶೇಷ ಕೊಡುಗೆಯಾಗಿ ಮತ್ತು ಅದಕೆ ಸಂಬಂ
ಧಿಸಿದ ಮುಚ್ಚಳಿಕೆಯೊಡನೆ ಕೊಡುತಿರುವೆನು.

ಲೊರೆನ್ಸೊ:- ಚೆಲುವ ರಮಣಿಯರೆ, ಹಸಿದು ಬಳಲುವ ಜನಕ್ಕೆ ನೀ
ವು ಆಹಾರವನು ಮೇಲಿಂದ ಚೆಲ್ಲುತಲವರ
ನಿರೀಕ್ಷೆ ಪೋಷಿಸುವಿರಿ!

ಪೋರ್ಷ್ಯ:- ಇದೀಗ ಬೆಳಗಾಗುತ್ತಲಿದೆ. ಆ
ದರೂ ಈ ಘಟನೆಗಳನು ಪೂರಿತಾಗಿ ಮಾತಾ
ಡಿದ್ದು ಒಂದಿಷ್ಟು ಕಾಲದಿಂ ಬಂತೆಯೆ ನಿಮಗೆ
ತೀರುತ್ತದೆಯೆಂದು ನನಗೆ ನಿಶ್ಚಯವಾಗಿದೆ.
ನಾವು ಒಳಗೆ ಹೋಗುವ. ಅಲ್ಲಿ ನಿಮ್ಮ ಪ್ರಶ್ನೆ
ಗಳಿಗೆ ನಾವು ನಿಷ್ಠೆಯಿಂದ ಉತ್ತರಿಸುವೆವು,

ಗ್ರಾಷ್ಯಾನೊ:- ಹಾಗೆಯೇ ಆಗಲಿ.
ಈಗ ಮೊದಲ ಪ್ರಶ್ನೆಯೇನೆಂದರೆ ಬೆಳಗಾ
ಗಲು ಎರಡೆ ತಾಸುಗಳಿರುವುದರಿಂದ ನನ್ನ ನೆ
ರಿಸ್ಸಳು ಇನ್ನೊಂದು ರಾತ್ರಿವರೆಗೂ ಕಾತರ
ಎಚ್ಚೆತ್ತಿರುವಳೊ ಅಥವಾ ಮಲಗಿ ನಿದ್ರಿಸುವ

ಳಿತೋ ಎಂಬುದನ್ನು ಅವಳು ಪ್ರಮಾಣಪೂರ್ವಕ
ವಾಗಿ ಹೇಳುವುದು. ಹೇಗೂ ಬೆಳಕು ಹರಿದಾಗ
ನಾನು ನ್ಯಾಯಮೂರ್ತಿಯ ಕರಣಿಕನೊಡಗೂಡಿ ಮ
ಲಗುವ ವರೆಗೆ ಕತ್ತಲೆಯಾಗಿಯೇ ಇರಲಿಯೆಂದು
ಆಶಿಸುವೆನು. ಹರಿ, ನಾನು ಬದುಕಿರುವ ವರೆಗೂ
ನೆರಿಸ್ಸಾಳ ಉಂಗುರವನ್ನು ಜೋಪಾನವಾ
ಗಿಟ್ಟುಕೊಳ್ಳುವುದನ್ನು ಕುರಿತಾಗಿ ಹೆದರುವಷ್ಟು
ಬೇರಾವುದಕ್ಕೂ ಅಲ್ಲ!

(ಹೋಗುವರು.)

ಎಂ. ಎಸ್. [illegible]

28/11/1987.

Vancouver B.C.
Canada.

ವೆನ್ನಿಸಿನ ವರ್ತಕ

(MERCHANT OF VENICE.)

ಷೇಕ್ಸ್‌ಪಿಯರ್ ಭಾಷಾಂತರ.

ಎ. ವಿಸಾ. ವಿಜಾತ್ರಡ್ಡಾ.

1988

(ಎಲ್ಲ ಹಕ್ಕುಗಳೂ ಕಾಯ್ದಿಡಲ್ಪಟ್ಟಿವೆ.)